ಸಂಪುಟ ೫
ಸಂಚಿಕೆ ೧

ಕರ್ನಾಟಕ ಭಾರತಿ

ರಾಜ್ಯೋದಯ ಸಂಚಿಕೆ
೧೯೭೨

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಬಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೫ 		ಸಂಚಿಕೆ : ೧

ಪ್ರಧಾನ ಸಂಪಾದಕರು

ಡಾ || ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು

ಡಾ || ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೫, ಸಂಚಿಕೆ : ೨

ನವೆಂಬರ್ ೧೯೭೨

ರಾಜ್ಯೋದಯ ಸಂಚಿಕೆ


ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ – ೨೦

ಪರಿವಿಡಿ



ಮಹರ್ಷಿ ಶ್ರೀ ಅರವಿಂದರು

ಪಾಂಡಿಚೇರಿ

ಶ್ರೀ ಅರವಿಂದರ ಆಧ್ಯಾತ್ಮ

೧

ಐದು ವರುಷದ ಬಾಲಕ ಮನೆಯನ್ನು ಬಿಟ್ಟು ಪರಸ್ಥಳದಲ್ಲಿ ಕಾನ್ವೆಂಟ್ ಶಾಲೆ ಸೇರಬೇಕಾಯಿತು. ಏಳನೆಯ ವರುಷಕ್ಕೆ ಸ್ವದೇಶವನ್ನೇ ತೊರೆದು ಇಂಗ್ಲಂಡಿಗೆ ಹೋಗಬೇಕಾಯಿತು. ಅಲ್ಲಿ ಹದಿನಾಲ್ಕು ವರುಷಗಳ ವರೆಗೆ ವಾಸ; ವಿದ್ಯಾಭ್ಯಾಸಂಗ. ಹೀಗೆ ಪಾಶ್ಚಾತ್ಯ ಪರಿಸರದಲ್ಲಿ ರೂಪುಗೊಂಡ ವ್ಯಕ್ತಿಗೆ ಭಾರತ ಪರಂಪರೆಯ ಆಧ್ಯಾತ್ಮಿಕ ದೃಷ್ಟಿಯಾಗಲಿ, ಆಸ್ತಿಕ ಮನೋಭಾವವಾಗಲಿ ಬೆಳೆದು ಬರುವುದು ಸಾಧ್ಯವಾಗಿರಲಿಲ್ಲ. ಆದರೆ ಆ ವ್ಯಕ್ತಿ ಮುಂದೆ ಆಧ್ಯಾತ್ಮಿಕ ರಂಗದಲ್ಲಿ ಉಜ್ವಲವಾಗಿ ಬೆಳಗಿದ. ಆ ವ್ಯಕ್ತಿಯೇ ಶ್ರೀ ಅರವಿಂದರು.

ಶ್ರೀ ಅರವಿಂದರಲ್ಲಿ ಮೊದಲು ಆಧ್ಯಾತ್ಮಿಕತೆಯು ಸುಪ್ತವಾಗಿತ್ತೆನ್ನಬಹುದು. ಕಾವ್ಯರಂಗದಿಂದ ರಾಜಕೀಯ ಆಂದೋಲನಕ್ಕೆ, ಅಲ್ಲಿಂದ ಆಧ್ಯಾತ್ಮಿಕ ರಂಗಕ್ಕೆ ಸರಿದ ಅವರ ಜೀವನವಾಹಿನಿ ಅದ್ಭುತ ರಮ್ಯವಾಗಿದೆ.

ಮಗನು ಪಾಶ್ಚಾತ್ಯ ಪದ್ಧತಿಯಲ್ಲಿ ಬೆಳೆದು ಆಯ್.ಸಿ.ಎಸ್. ಅಧಿಕಾರಿಯಾಗ ಬೇಕೆಂದು ಲೆಕ್ಕ ಹಾಕಿದ ತಂದೆ ಕೃಷ್ಣಧನ ಘೋಷರು ಶ್ರೀ ಅರವಿಂದರಿಗೆ ಬಾಲ್ಯದಲ್ಲಿ ಭಾರತದ ಜನತೆ, ಸಂಸ್ಕೃತಿ, ಧರ್ಮ, ಭಾಷೆಗಳ ಸಂಪರ್ಕ ಒದಗದಂತಹ ಏರ್ಪಾಡು ಮಾಡಿದ್ದರು. ೨೧ ನೆಯ ವಯಸ್ಸಿನ ವರೆಗೆ ಸಂಸ್ಕೃತ ಇಲ್ಲವೆ ಭಾರತದ ದೇಶ ಭಾಷೆಗಳನ್ನು ಕಲಿಯುವ ಅವಕಾಶ ಶ್ರೀ ಅರವಿಂದರಿಗೆ ದೊರೆತಿರಲಿಲ್ಲ. ಆದರೂ ಅವರು ಭಾರತ ಸಂಸ್ಕೃತಿಯ, ಆಧ್ಯಾತ್ಮದ ಅಪ್ರತಿಮ ಪ್ರತಿಪಾದಕರಾಗಿ ರೂಪು ಗೊಂಡುದು ಅವರ ಬಾಳಿನ ಹಲವು ಅದ್ಭುತಗಳಲ್ಲಿ ಒಂದಾಗಿದೆ. ಈ ಸಂಗತಿಯು ಮಾನವನ ಲೆಕ್ಕಾಚಾರಕ್ಕಿಂತ ಭಿನ್ನವಾಗಿ ದೈವೀಸಂಕಲ್ಪವು ಫಲಿಸುತ್ತದೆಯೆಂಬ ಮಾತಿಗೆ ಒಂದು ಉದಾಹರಣೆಯಾಗಿದೆ.

ಆಧ್ಯಾತ್ಮಿಕತೆಯತ್ತ ಹೊರಳಿದ ಶ್ರೀ ಅರವಿಂದರು ತಮ್ಮ ಬಾಳಿನ ಎಲ್ಲ ವ್ಯವಹಾರಗಳನ್ನು ದೈವೀಸಂಕಲ್ಪಕ್ಕೆ ಅಧೀನಗೊಳಿಸಿದರು. ಇಡಿಯ ಸೃಷ್ಟಿಯಲ್ಲಿ ಪರ-ಮಾತ್ಮನ ಸಂಕಲ್ಪವು ಪ್ರಕಟವಾಗಬೇಕೆನ್ನುವ ದಿಸೆಯಲ್ಲಿ ಯೋಗಸಾಧನೆ ಕೈಕೊಂಡರು. ಆಧ್ಯಾತ್ಮಿಕ ಸಮಾಜವನ್ನು ನಿರ್ಮಿಸುವ ಆಶ್ರಮ ಸ್ಥಾಪಿಸಿದರು.

ಸಮಸ್ತ ದೃಶ್ಯಪ್ರಪಂಚದ ಹಿಂದೆ ಏಕವಾದ ಸದ್ವಸ್ತು (ಬ್ರಹ್ಮ) ಹುದುಗಿದೆ ಯೆಂಬ ಬೋಧೆ ವೇದಾಂತ ಕಾಲದಷ್ಟು ಹಳೆಯದಾಗಿದೆ. ದೃಶ್ಯಪ್ರಪಂಚವೇ ಐಹಿಕ ಬಾಳು. ಏಕವಾದ ಸದ್ವಸ್ತುವನ್ನು ಕುರಿತ ನಿಷ್ಠೆಯೇ ಆಧ್ಯಾತ್ಮ.

ಐಹಿಕ ಬಾಳಿನ ಸಮೃದ್ಧಿಯನ್ನು ಮಾತ್ರ ಗಮನಿಸುವವರು ಕಣ್ಣಿಗೆ ಕಾಣದ ಭಗವತ್ ಚೇತನವನ್ನು ನಿರಾಕರಿಸುತ್ತಾರೆ. ಭಗವತ್ ಚೇತನದಲ್ಲಿ ಮಾತ್ರ ನಿಷ್ಠೆಯುಳ್ಳ

ವರು ಇಹದ ಬಾಳನ್ನು ನಿರಾಕರಿಸುತ್ತಾರೆ. ಈ ಎರಡೂ ಬಗೆಯ ನಿರಾಕರಣೆಗಳು ನಿಷ್ಪ್ರಯೋಜಕವೆಂದು ಶ್ರೀ ಅರವಿಂದರು ಘೋಷಿಸಿದರು. ಇಹದ ಬಾಳಿನಲ್ಲಿಯೇ ಭಗವತ್ ಚೇತನವು ಪ್ರಕಟವಾಗಬೇಕೆಂಬುದು ಶ್ರೀ ಅರವಿಂದರ ಅಧ್ಯಾತ್ಮದ ಗುರಿಯಾಗಿದೆ. ಇದಕ್ಕನುಗುಣವಾಗುವಂತೆ ಅವರ ವಿಚಾರಧಾರೆ ಹರಿದು ಬಂದಿದೆ.

ಇಹದ ಬಾಳು ಅರ್ಥರಹಿತ ಮಾಯೆಯಲ್ಲ; ಅದು ಆಕಸ್ಮಿಕವೂ ಅಲ್ಲ. ಆ ಬಾಳಿನಲ್ಲಿಯೇ ಪ್ರಕಾಶಮಯ ಪ್ರಕಟನೆ ಹೊರಹೊಮ್ಮಿ ಬರಬೇಕು. ಉತ್ತರೋತ್ತರ ಜಾಗೃತಿ, ಸ್ವ-ವಿಸ್ತರಣೆ, ಪ್ರಜ್ಞಾವಿಕಾಸಗಳತ್ತ ನಾವು ಸಾಗಬೇಕೆಂದೇ ಈ ಸೃಷ್ಟಿಯು ನಿರ್ಮಾಣಗೊಂಡಿದೆ. ಮಾನವೀಯ ಬಾಳಿನ ಪಯಣ ದಿವ್ಯಜೀವನದತ್ತಲೇ ಸಾಗಬೇಕು. ಹಾಗಿಲ್ಲವಾದರೆ ನಮ್ಮ ಬಾಳು ಹುಳುಹುಪ್ಪಡಿಗಳಂತಾದೀತು. ಸ್ವದರ್ಶನ, ಅಂತಃ–ಸ್ಫುರಣ, ಸ್ವ–ಅನುಭವಗಳಿಂದ ಮಾನವನು ಸತ್, ಚಿತ್, ಆನಂದಗಳ ಅನ್ವೇಷಣೆಗೆ ತೊಡಗಬೇಕು.

ಪರಮಾತ್ಮನು ಪ್ರಕೃತಿಯಾಗಿ ಆವಿಷ್ಕಾರ ಪಡೆದಿದ್ದಾನೆ. ಪ್ರಕೃತಿಯು ಪರಮಾತ್ಮನಾಗಿ ಆವಿಷ್ಕಾರ ಪಡೆಯಬೇಕಾಗಿದೆ.

ಭೌತಿಕ ಕ್ರಮವು ಅವ್ಯವಸ್ಥಿತವಾಗಿರುವುದು ನಿಜ. ಮಾನವನ ಹೋರಾಟಕ್ಕೆ ಅರೆ–ಕೊರೆಗಳಿರುವುದೂ ನಿಜ. ಇದಕ್ಕೆ ಕಾರಣವೆಂದರೆ ಮಾನವನ ಅಹಂಕಾರ; ಪ್ರತ್ಯೇಕತಾಭಾವ. ಅಹಂಕಾರವಶನಾದ ಮಾನವನು ಏಕವಾದ ಸದ್ವಸ್ತುವನ್ನು ಕಡೆಗಣಿಸಿ ಛಾಯಾರೂಪಗಳನ್ನು ಗಮನಿಸುತ್ತಾನೆ. ಅದೇ ಬಾಳಿನ ಒಗಟಿಗೆ ಕಾರಣವಾಗಿದೆ.

ಮೇಳ ವಾದ್ಯದ ಸೊಗಸೇ ಸೊಗಸು. ಆದರೆ ಅದರಲ್ಲಿಯ ಆವುದೊಂದು ಧ್ವನಿಯು ಪ್ರತ್ಯೇಕವಾಗಿ ಗಡುಸಾಗಿ ಕೇಳಿಬಂದರೆ ವಾದ್ಯವೃಂದದ ಸೊಗಸಿಗೆ ಬಾಧೆಯೊದಗುತ್ತದೆ. ವಿಶ್ವದ ವಾದ್ಯವೃಂದದಲ್ಲಿ ಮಾನವನ ಪ್ರತ್ಯೇಕತಾ ಭಾವನೆಯು ಬಾಧೆಯನ್ನುಂಟು ಮಾಡುತ್ತದೆ.

ಭಗವತ್ ಚೇತನವು ಅನಂತ, ಅದ್ವಿತೀಯ, ಚಿರಂತನ, ವಿಶ್ವಂಭರ, ಪರಾತ್ಪರ. ಅದು ಸುಪ್ತವೂ ಅಹುದು; ವ್ಯಕ್ತವೂ ಅಹುದು. ವ್ಯಕ್ತವಾದುದೇ ಈ ಸೃಷ್ಟಿಯಾಗಿದೆ. ಸೃಷ್ಟಿಯಲ್ಲಿ ಭಗವತ್ ಚೇತನವು ಸುಪ್ತವಾಗಿದೆ. ಅದು ಪ್ರಕಟವಾಗಬೇಕೆಂಬುದೇ ಪರಮಾತ್ಮನ ಸಂಕಲ್ಪವಾಗಿದೆ. ಆ ದಿಶೆಯಲ್ಲಿ ನಾವು ಪರಮಾತ್ಮನ ಕಾರ್ಯದ ಸಾಧನವಾಗಬೇಕು.

ಪರಾತ್ಪರ ಭಗವತ್ ಚೇತನದಿಂದ ಸೃಷ್ಟಿಯ ನಿರ್ಮಾಣವಾಗಿದೆ. ಆ ಸೃಷ್ಟಿಯಲ್ಲಿ ಭಗವತ್ ಚೇತನವು ವಿಶ್ವಂಭರವಾಗಿದೆ. ಜಡದಲ್ಲಿ ಅದು ಸುಪ್ತವಾಗಿದೆ. ಪ್ರಾಣದಲ್ಲಿ, ಮನದಲ್ಲಿ ಅದು ಕೆಲಮಟ್ಟಿಗೆ ವ್ಯಕ್ತವಾಗಿದೆ. ಅದು ಪೂರ್ತಿಯಾಗಿ ವ್ಯಕ್ತಗೊಳ್ಳುವುದು ವಿಕಾಸದ ಮುಂದಿನ ಹಂತವಾದ ಅತಿಮಾನಸದಲ್ಲಿ. ಆ ಹಂತವನ್ನು ತಲುಪುವ ದಿಸೆಯಲ್ಲಿ ಮಾನವತೆ ಸಾಗಬೇಕಾಗಿದೆ. ಈ ಸೃಷ್ಟಿಯೇ ದೈವೀ ಪ್ರಕಟ-

ನೆಯ ಕ್ಷೇತ್ರವಾಗಬೇಕು. ಆದುದರಿಂದ ಬಾಳಿನಿಂದ ಪಲಾಯನ ಮಾಡುವುದು ಆಧ್ಯಾತ್ಮದ ಗುರಿಯಾಗಲಾರದು. ಅತಿಮಾನಸದ ಹಂತವನ್ನು ತ್ವರಿತಗೊಳಿಸುವ ಸಾಧನ ಕ್ರಮವೇ ಪೂರ್ಣಯೋಗ. ಅದು ಸಕಲವನ್ನೂ ಒಳಗೊಳ್ಳುವ ಸಮನ್ವಯ ಪಥ; ಸಮಗ್ರತೆಯ ಪಥ.

ಏಕ–ಅನೇಕ; ಕಾಲ–ಚಿರಂತನತೆ; ಧ್ಯಾನ–ಕ್ರಿಯೆ; ಜಡ–ಚೇತನ; ಕ್ಷರ–ಅಕ್ಷರ–ಇವೆಲ್ಲವುಗಳ ಸಮನ್ವಯ ಸಾಧನೆ ಪೂರ್ಣಯೋಗದ ಪಥವಾಗಿದೆ. ಇದು ಸಮಾಧಿ ಸ್ಥಿತಿಗೆ ಏರಿ ಜಗತ್ತನ್ನು ಅವರ ಪಾಡಿಗೆ ಬಿಡುವ ಯೋಗವಲ್ಲ. ಧ್ಯಾನದಲ್ಲಿ ತೊಡಗಿ ಕಾರ್ಯವನ್ನು ಮರೆಯುವ ಪಥವಲ್ಲ. ನಾಮ–ರೂಪ–ಕ್ರಿಯೆಗಳಿಂದ ಕೂಡಿದ ಮತ್ತು ನಿಶ್ಚಲ, ನಿರ್ಗುಣ ಪರಮಾತ್ಮರ ಏಕತೆಯನ್ನು ನಾವು ಸಾಧಿಸಬೇಕಾಗಿದೆ. ಇದು ಸಾಧ್ಯವಾಗುವುದು ಎಲ್ಲವನ್ನೂ ಸೃಷ್ಟಿಸುವ, ಆಳುವ ಋತದಿಂದ (ಸತ್ಯ ಪ್ರಜ್ಞೆಯಿಂದ). ಆ ಸತ್ಯಪ್ರಜ್ಞೆಯನ್ನು ಅತಿಮಾನಸವೆಂದು ಕರೆಯಲಾಗಿದೆ.

ಪರಮಾತ್ಮ ಸಾಕ್ಷಾತ್ಕಾರವನ್ನು ಶ್ರೀ ಅರವಿಂದರು ಪರಮ ಗುರಿಯೆಂದು ಭಾವಿಸಲಿಲ್ಲ. ಪರಮಾತ್ಮ ಸಾಕ್ಷಾತ್ಕಾರದಿಂದ ಪಡೆಯುವ ದೈವೀಶಕ್ತಿಯಿಂದ ಇಡಿಯ ಸೃಷ್ಟಿಯಲ್ಲಿ ಮಹಾ ಪರಿವರ್ತನೆಯನ್ನು ತರುವುದೇ ಅವರ ಪರಮ ಗುರಿಯಾಗಿತ್ತು.

೨

ಊರ್ಧ್ವಸ್ತರದಲ್ಲಿ ಸತ್, ಚಿತ್, ಆನಂದ ಸ್ವರೂಪದ ಪರಮಾತ್ಮ, ಕೆಳಗೆ ಪರಮಾತ್ಮನು ಸೃಷ್ಟಿಸಿದ ಹಲವಾರು ಬಗೆಯ ಪ್ರಪಂಚ. ಇವೆರಡನ್ನೂ ಹೊಂದಿಸುವ ರಹಸ್ಯವು ಅತಿಮಾನಸದ್ದಾಗಿದೆ. ಆ ಅತಿಮಾನಸದ ಸಾಧನೆಗಾಗಿ ಪೂರ್ಣಯೋಗವನ್ನು ಬೋಧಿಸಲಾಗಿದೆ. ಪೂರ್ಣಯೋಗದ ಗುರಿಯು ತ್ರಿವಿಧವೆಂದು ಶ್ರೀ ಅರವಿಂದರು ವಿವೇಚಿಸಿದ್ದಾರೆ :

I **ಅತಿಮಾನಸದತ್ತ ಆರೋಹಣ :** ಮಾನವೀಯ ವ್ಯಕ್ತಿಗತ ಪ್ರಜ್ಞೆಯು ವಿಶ್ವಂಭರ ಮತ್ತು ವಿಶ್ವಾತೀತ(ಪರಾತ್ಪರ)ವಾಗುವಂತೆ ವಿಕಾಸಗೊಳ್ಳಬೇಕು. ಆರೋಹಣವೆಂದರೆ ಊರ್ಧ್ವಲೋಕಕ್ಕೆ ಪಯಣವೆಂದಲ್ಲ, ಉನ್ನತೋನ್ನತ ಪ್ರಜ್ಞೆಯ ವಿಕಾಸವೆಂದೂ ಅದರ ಅರ್ಥ. ಈಗಿನ ಮಾನವೀಯ ಸಂಕುಚಿತ ಪ್ರಜ್ಞೆಯ ಸೀಮೆ-ಯನ್ನು ದಾಟಿದ ಪ್ರಜ್ಞಾವಿಕಾಸವು ಅತಿಮಾನಸದವರೆಗೆ ಹಬ್ಬಬೇಕು. ಅನ್ನ, ಪ್ರಾಣ, ಮನ – ಈ ಕೋಶಗಳನ್ನು ದಾಟಿ ವಿಜ್ಞಾನಕೋಶವು ಜಾಗೃತವಾಗುವ ಸ್ಥಿತಿಯದು. ಈ ಬಗೆಯ ಸಾಧನೆ ಕೇವಲ ಮಾನವನ ಪ್ರಯತ್ನದಿಂದ ಫಲಿಸಲಾರದು. ಅದಕ್ಕೆ ದೈವೀಕೃಪೆಯು ಆಸರೆಯಾಗಬೇಕು. ಈಗಿನ ಮಾನವನು ಮಾನಸಸ್ತರದಲ್ಲಿದ್ದಾನೆ. ಈ ಮಾನಸಸ್ತರದಲ್ಲಿ ಅಜ್ಞಾನ, ಅಪೂರ್ಣತೆ, ಸೀಮಿತಶಕ್ತಿ, ಭಿನ್ನತಾಭಾವ ವೈಷಮ್ಯಗಳಿವೆ. ಅವುಗಳಿಗೆ ಪ್ರತಿಯಾಗಿ ನಿಸ್ಸೀಮಜ್ಞಾನ, ಶಕ್ತಿ, ಏಕತಾಭಾವ, ಪರಿಪೂರ್ಣತೆ, ಸಮರಸಗಳು ಅತಿಮಾನಸಸ್ತರದಲ್ಲಿ ಲಭ್ಯವಾಗುವವು.

ಅತಿಮಾನಸದತ್ತ ಸಾಗುವ ಆರೋಹಣದಲ್ಲಿ ಎರಡು ಹಂತಗಳಿವೆ :

1 ಆರಂಭದ ಹಂತ : ಈಗಿನ ಮನದ ಸೀಮೆಯನ್ನು ದಾಟಿ **ಊರ್ಧ್ವಮನ, ಪ್ರಕಾಶಮಯ ಮನ, ಸ್ಫುರಿತಮನ**ಗಳತ್ತ ವಿಕಾಸ ಪಡೆಯಬೇಕು. ಊರ್ಧ್ವ ಮನದಲ್ಲಿ ಏಕತಾಭಾವದ ಜ್ಞಾನವು ಲಭ್ಯವಾಗುವುದು. ಪ್ರದೀಪ್ತ ಮನದಲ್ಲಿ ಆಲೋಚನೆಗೆ ಪ್ರತಿಯಾಗಿ ಕಾಣ್ಕೆ ಒದಗಿ ಬರುವುದು. ಆಗ ಎಲ್ಲವೂ ಜ್ಯೋತಿರ್ಮಯವಾಗುವುದು. ಸ್ಫುರಿತ ಮನದಲ್ಲಿ ಸೃಷ್ಟಿಯ ರಹಸ್ಯವನ್ನು ಭೇದಿಸುವ ಸಾಮರ್ಥ್ಯವುಂಟಾಗುವುದು. ಈ ಮನಗಳ ಆಚೆಗೆ **ಅಧಿಮನ**ವಿದೆ. ಆ ಹಂತಕ್ಕೆ ಏರಿದಾಗ ಸಕಲ ವಿಶ್ವದ ಜ್ಞಾನವು ಕರತಲಾಮಲಕವಾಗುವುದು. ಮಾನವೀಯ ಶಕ್ತಿಗೆ ಲಭ್ಯವಾಗುವ ಅತ್ಯಂತ ಉನ್ನತ ಸ್ತರವಿದು. ಇನ್ನು ಕೊನೆಯದಾದ **ಅತಿಮಾನಸವು** ದೈವೀಕೃಪೆಯಿಂದ ಸಾಧ್ಯವಾಗುವಂತಹದು. **ಅತಿಮಾನಸವು** ಉದಯವಾದಾಗ ಶುದ್ಧೀಕರಣದೊಂದಿಗೆ ಎಲ್ಲ ಬಂಧನಗಳೂ ಕಳಚಿ ಬೀಳುವವು. ಆಗ ಪರಿವರ್ತನೆ, ಸಮಗ್ರತೆ, ಮಹೋನ್ನತೀಕರಣಗಳು ತ್ವರಿತಗತಿಯಲ್ಲಿ ಸಾಗುವವು.

2 ಸಿದ್ಧಿಯ ಹಂತ : ಈ ಹಂತದಲ್ಲಿ ಮಾನವೀಯ ಪ್ರಜ್ಞೆ ಮತ್ತು ಭಗವತ್ ಪ್ರಜ್ಞೆಗಳಲ್ಲಿ ಏಕತೆಯುಂಟಾಗುವುದು. ಶುದ್ಧೀಕರಣ, ಬಂಧ ವಿಮೋಚನೆ, ಪರಿವರ್ತನೆ, ಸಮಗ್ರತೆ, ಮಹೋನ್ನತಿಗಳು ಪೂರ್ಣಗೊಳ್ಳುವವು. ನಿಶ್ಚಲ ಪರಮಾತ್ಮನ ಮತ್ತು ಚಲನಶೀಲ ಬಾಳಿನ ಆನಂದವು ಲಭ್ಯವಾಗುವುದು.

ಈ ಬಗೆಯ ಆರೋಹಣವು ವ್ಯಕ್ತಿಗತವಾಗಿ ಮಾತ್ರವಲ್ಲ, ಸಾಮೂಹಿಕವಾಗಿಯೂ ನಡೆಯಬೇಕು. ಈ ದಿಸೆಯಲ್ಲಿ ನೆರವಾಗಲೆಂದೇ ಶ್ರೀ ಅರವಿಂದಾಶ್ರಮವು ರೂಪುಗೊಂಡಿದೆ.

II ಅತಿಮಾನಸದ ಅವತರಣ : ಸೃಷ್ಟಿಯಲ್ಲಿಯ ಇದುವರೆಗಿನ ವಿಕಾಸಕ್ರಮದಲ್ಲಿ ಜಡ – ಪ್ರಾಣ – ಮನ ಎಂಬ ಸ್ತರಗಳು ಕಂಡು ಬಂದಿವೆ. ವಿಕಾಸಕ್ರಮದ ಇನ್ನು ಮುಂದಿನ ಹಂತವೇ ಅತಿಮಾನಸ ಸ್ತರವಾಗಿದೆ. ಅದರ ಅವತರಣವಾದಾಗ ಅನಂತವು ಸಾಂತವನ್ನು ಆಕ್ರಮಿಸುವುದು. ಜಡದಲ್ಲಿ ಭಗವತ್ ಚೇತನವು ಪ್ರಕಟವಾಗುವ ಪರಿವರ್ತನೆಯ ಕಾರ್ಯವು ಸಾಗುವುದು. ಆಗ ಮಾನವೀಯ ಆಲೋಚನೆ. ಭಾವನೆಗಳೆಲ್ಲ ಭಗವಂತನತ್ತ ತಿರುಗುವವು. ಎಲ್ಲೆಡೆ ದಿವ್ಯಪ್ರೇಮ. ಆನಂದ ಸಮರಸಗಳು ಹೊರಹೊಮ್ಮುವವು. ಆ ಮಟ್ಟದಲ್ಲಿ ಐಹಿಕ ಜೀವನದೊಂದಿಗೆ ಸಂಬಂಧವು ಕಡಿದು ಹೋಗುವುದಿಲ್ಲ. ಆದರೆ ಆ ಸಂಬಂಧವು ದಿವ್ಯತೆಯ ದೃಷ್ಟಿಯಿಂದ ಸಾಗುವುದು. ಈಗಿರುವ ಮಾನಸಸ್ತರದಲ್ಲಿ ಮಾನವೀಯ ಸಂಬಂಧಗಳು ಅಹಂಕಾರಮಯವಾಗಿವೆ ; ಸಂಕುಚಿತವಾಗಿವೆ. ವಿಷಮವೂ ಆಗಿವೆ. ಆದರೆ ಅತಿಮಾನಸದ ಅವತರಣದಿಂದ ಈಗಿನ ಸ್ಥಿತಿಯು ಸಂಪೂರ್ಣವಾಗಿ ಪರಿವರ್ತನೆ ಹೊಂದುವುದು.

ಮಾನವನ ಆಸೆಗಳು ಭಗವತ್ ಸಂಕಲ್ಪಕ್ಕೆ ಅನುಗುಣವಾಗುವವು. ಮಾನವನು ನಿಮ್ನ ಚೇತನದಿಂದ ಬಿಡುಗಡೆ ಪಡೆದು ದಿವ್ಯಚೇತನವನ್ನು ರೂಢಿಸಿಕೊಳ್ಳುವನು.

III **ಜಡದಲ್ಲಿ ದಿವ್ಯಚೇತನದ ಆವಿಷ್ಕಾರ:** ಅತಿಮಾನಸದತ್ತ ಆರೋಹಣ ಪೃಥ್ವಿಯಲ್ಲಿ ಅತಿಮಾನಸದ ಅವರೋಹಣಗಳ ನಂತರ ಜಡದಲ್ಲಿ ದಿವ್ಯಚೇತನದ ಆವಿಷ್ಕಾರವು ನಡೆಯುವುದು. ಮೂರನೆಯದಾದ ಈ ಗುರಿಯೇ ಪ್ರಮುಖವಾದುದು. ಮೊದಲಿನ ಎರಡೂ ಇದಕ್ಕೆ ಪೋಷಕ. ಈ ಮೂರರ ಏಕತೆಯೇ ಪೂರ್ಣಯೋಗದ ಸಿದ್ಧಿ.

ಈ ಬಗೆಯ ಸಿದ್ಧಿಯೇ ಜಗತ್ತಿನ ಒಗಟನ್ನು ಒಡೆಯುವ ಸರಿಯಾದ ಪರಿಣಾಮಕಾರಿಯಾದ ಕ್ರಮವಾಗಿದೆ. ಜನನ–ಮರಣಗಳ ಚಕ್ರದಲ್ಲಿ ಸುಳಿದಾಡಿ ಸಂಸ್ಕಾರ ಪಡೆದ ಆತ್ಮಕ್ಕೆ ಕೊನೆಯ ನಿಲುಗಡೆಯಿದು.

ಮೇಲ್ಕಂಡ ವಿವೇಚನೆಯಿಂದ ಪೂರ್ಣಯೋಗದ ಗುರಿಯು ದೇವನೊಂದಿಗೆ ಸಂಪರ್ಕ, ಐಕ್ಯ ಎಂಬ ಕಲ್ಪನೆಗಳಿಗಿಂತ ಬೇರೆಯಾಗಿರುವುದು ಗೋಚರವಾಗುತ್ತದೆ.

ಪೂರ್ಣಯೋಗಕ್ಕೆ ತ್ರಿವಿಧ ಗುರಿಯಿರುವಂತೆ ತ್ರಿವಿಧವಾದ ತಳಹದಿಯೂ ಆವಶ್ಯಕ. ಅದು ಹೀಗಿದೆ:

1 **ಮಾನವೀಯ ಅಭೀಪ್ಸೆ: ದೈವೀಕೃಪೆ:** ನಮ್ಮ ಇರುವಿಕೆಯು ಸಮಗ್ರವಾಗಿ ದೈವೀಜೀವನದ ಪ್ರಕಟನೆಗಾಗಿ ಉತ್ಕಟವಾದ ಹಂಬಲದಿಂದ ಕೂಡಿರಬೇಕು. ಭಗವತ್ ಸಂಕಲ್ಪವು ಮಾತ್ರ ನಮ್ಮಲ್ಲಿ ಸಿದ್ಧಿಸಬೇಕೆಂಬ ಅಭೀಪ್ಸೆ ನಮ್ಮದಾಗಿರಬೇಕು. ನಮಗೆ ಬೇಕಾದುದು ಪರಮಾತ್ಮನಲ್ಲದೆ ಬೇರೇನೂ ಅಲ್ಲವೆಂಬ ನಿಲುವೆಯದು. ಅಭೀಪ್ಸೆಯು ಸತತವೂ, ಸ್ಥಿರವೂ, ಸದಾಜಾಗೃತವೂ ಆಗಿರಬೇಕು. ಕೆಳಗಿನ ಮಾನವೀಯ ಅಭೀಪ್ಸೆಗೆ ಮೇಲಿನ ದೈವೀಕೃಪೆಯು ಪ್ರತಿಸ್ಪಂದನ ಕೊಡುವಂತಾಗಬೇಕು. ನಮ್ಮಲ್ಲಿ ದೈವೀಚೇತನ ಪ್ರಕಟವಾಗಬೇಕೆಂಬುದು ಪರಮಾತ್ಮನ ಸಂಕಲ್ಪವೂ ಆಗಿದೆ. ಆದುದರಿಂದ ನಮ್ಮ ಕರೆಗೆ ದೈವೀಕೃಪೆಯು ಓ ಕೊಡುವುದು. ನಮ್ಮ ಕರೆಯು ಸಮಗ್ರವಾದ ಕಳಕಳಿಯಿಂದ ಕೂಡಿದ್ದರೆ ಮಾತ್ರ ಹೀಗಾಗುವುದು ಸಾಧ್ಯ.

2 **ಅಚಂಚಲತೆ: ಸಮತಾಭಾವ:** ನಾವು ಸಂಪೂರ್ಣವಾಗಿ, ಸದಾ ಅಚಂಚಲ ಮನಸ್ಕರಾಗಿರುವುದು ಮತ್ತು ಎಲ್ಲ ಸಂದರ್ಭಗಳಲ್ಲಿ ಸಮತಾಭಾವವುಳ್ಳವರಾಗಿರುವುದು ಎರಡನೆಯ ತಳಹದಿಯಾಗಿದೆ. ಮಾನಸಿಕ ಅಚಂಚಲತೆ, ನೀರವತೆ ಸ್ಥಿರತೆಗಳನ್ನು ನಾವು ಕ್ರಮವಾಗಿ ಸಾಧಿಸಬೇಕು ಈ ಬಗೆಯ ಮಾನಸಿಕ ನಿಲುವಿನಲ್ಲಿಯೇ ದೈವೀಶಕ್ತಿಯನ್ನು ಗ್ರಹಿಸಲು ನಾವು ಸಮರ್ಥರಾಗಿರುತ್ತೇವೆ. ಚಂಚಲ ಇಲ್ಲವೆ ಪ್ರಕ್ಷುಬ್ಧಮಾನಸದಲ್ಲಿ ದೈವೀಶಕ್ತಿಯು ಇಳಿದು ಬರಲಾರದು. ನಿಸ್ತರಂಗ ಮನವು ಮಾತ್ರ ದೈವೀಬೆಳಕನ್ನು, ಮಾರ್ಗದರ್ಶನವನ್ನು ಪಡೆಯುತ್ತಿದೆ.

ಅಚಂಚಲ ಮನ ಮತ್ತು ಸಮತಾಭಾವಗಳು ಪರಸ್ಪರ ಪೋಷಕವಾಗಿವೆ. ಎಲ್ಲವೂ ಭಗವಂತನ ಸಂಕಲ್ಪದಂತೆ ನಡೆಯುವುದು, ಎಂಬ ಶ್ರದ್ಧೆಯು ಅವುಗಳಿಗೆ

ಆಧಾರ. ಪ್ರಕೃತಿಯಿಂದ, ಮಾನವನಿಂದ, ಇಲ್ಲವೆ ದೈವೀಸಂಕಲ್ಪದಂತೆ ಒದಗುವ ಯಾವುದೇ ಬಗೆಯ ಸಂಕಟಗಳಲ್ಲಿ ನಾವು ಸಮತಾಭಾವವ ನಿಲ್ಲಿಸಿಟ್ಟುಕೊಳ್ಳಬೇಕು. ವ್ಯಕ್ತಿಗತ ಆಸೆ, ಆಸ್ಥೆ. ಲೆಕ್ಕಾಚಾರಗಳಿಂದ ಕೂಡಿದಾಗ ನಮಗೆ ಸಮತಾಭಾವ ಉಳಿಯು ವದಿಲ್ಲ. ಎಲ್ಲವೂ ಭಗವಂತನ ಸಂಕಲ್ಪವೆಂಬ ನಿಲುವೆಯಿಂದ, ಆತ್ಮಶಕ್ತಿಯು ಆಧಾರ ದಿಂದ ನಾವು ಸಮತಾಭಾವವನ್ನು ರೂಢಿಸಿಕೊಳ್ಳಬಲ್ಲೆವು. ಸಹನೆ. ಉದಾಸೀನತೆ, ದೈವೀಸಂಕಲ್ಪದ ಸ್ವೀಕರಣಗಳಿಂದ ಸಮತಾಭಾವವು ನಮ್ಮಲ್ಲಿ ಬೆಳೆಯುವುದು.

3 **ಸಮಗ್ರವಾದ ಸಮರ್ಪಣೆ :** ಪೂರ್ಣಯೋಗದ ಮೂರನೆಯ ತಳಹದಿ ಯೆಂದರೆ ಭಗವಂತನಿಗೆ ನಮ್ಮನ್ನು ಸಮರ್ಪಿಸಿಕೊಳ್ಳುವುದು. ಪೂರ್ಣಯೋಗ ಪಥದಲ್ಲಿ ದೇಹವನ್ನು, ಮನವನ್ನು ಕೊರಗಿಸುವ ಕಠಿಣ ತಪಸ್ಸಿನ ಇಲ್ಲವೆ ಧಾರ್ಮಿಕ ವ್ರತಾಚಾರ ಗಳ ಆವಶ್ಯಕತೆಯಿಲ್ಲ. ಇಲ್ಲಿ ದೈವೀ ಸಮರ್ಪಣವೇ ಮುಖ್ಯವಾದುದು. ಏಕಾಗ್ರತೆ, ಧ್ಯಾನಗಳು ಈ ದಿಸೆಯಲ್ಲಿ ಸಹಾಯಕಾರಿಯಾಗುತ್ತವೆ. ನಮ್ಮ ಸಮರ್ಪಣೆಯು ಸಮಗ್ರವಾಗಿರಬೇಕು. ಸತತವಾಗಿರಬೇಕು. ನಿರ್ವಂಚನೆಯಿಂದ ಕೂಡಿರಬೇಕು. ಐಹಿಕ ವಾದ ಯಾವ ಆಸೆ, ಅನುಕೂಲತೆಗಳ ದೃಷ್ಟಿಯಿಂದ ಅದು ಪ್ರೇರಿತವಾಗಿರಬಾ- ರದು. ಪೂರ್ಣಯೋಗದ ಹೊಣೆ ಸಾಧಕನದು ಮಾತ್ರವಲ್ಲ, ಪರಮಾತ್ಮನದೇ ಆಗಿದೆ. ಆದರೆ ಸಮಗ್ರ ಸಮರ್ಪಣೆಯ ಹೊಣೆಯು ಮಾತ್ರ ಸಾಧಕನದಾಗಿದೆ.

ಈ ಮೂರು ಬಗೆಯ ತಳಹದಿಯೊಂದಿಗೆ ಮೂರು ಬಗೆ ಗುರಿಯತ್ತ ಸಾಗು ವುದು ಶ್ರೀ ಅರವಿಂದರ ಅಧ್ಯಾತ್ಮದ ಬಗೆಯಾಗಿದೆ.

೩

ಅಧ್ಯಾತ್ಮವನ್ನು ಕುರಿತ ಶ್ರೀ ಅರವಿಂದರ ಕಲ್ಪನೆಯು ಸುಸ್ಪಷ್ಟವಾಗಿದೆ. ಅದ ರಲ್ಲಿ ನವೀನತೆಯಿದೆ, ದಿವ್ಯತೆಯಿದೆ. ಅಖಿಲ ಮಾನವಕೋಟಿಗೆ ಭವ್ಯವಾದ ಆಶ್ವಾಸನ ವಿದೆ. ಆಧುನಿಕ ಜಗತ್ತಿಗೆ ಪ್ರಕೃತವಾಗುವಂತೆ ಅವರು ಅಧ್ಯಾತ್ಮವನ್ನು ವಿವೇಚಿಸಿದ್ದಾರೆ. ಈ ಬಗೆಗೆ ಶ್ರೀ ಅರವಿಂದರ ಕೆಲವು ಉಕ್ತಿಗಳನ್ನು ನಾವು ಗಮನಿಸಬೇಕು:

ಆಧುನಿಕ ಮಾನವನ ನಾಗರಿಕತೆಯ ವ್ಯವಸ್ಥೆಯನ್ನು ಕುರಿತ ಅವರ ಸೂಕ್ಷ್ಮವಾದ ವಿಶ್ಲೇಷಣೆ, ಕಟುವಾದ ವ್ಯಾಖ್ಯಾನಗಳಿಂದ ಕೂಡಿದ ಉಕ್ತಿಗಳು ಹೀಗಿವೆ.

Man has created a system of civilization which has become too big for his limited mental capacity...and his still more limited spiritual and moral capacity to...manage,... a too dangerous servant of his blundering ego and its appetites..

ಮಾನವನು ಈಗ ರೂಪಿಸಿಕೊಂಡ ನಾಗರಿಕತೆಯ ವ್ಯವಸ್ಥೆಯು ಅತಿ ದೊಡ್ಡ ಗಾತ್ರದ್ದಾಗಿದೆ. ಮಾನವನ ಸೀಮಿತ ಮಾನಸಿಕ ಸಾಮರ್ಥ್ಯ ಇನ್ನೂ ಹೆಚ್ಚು ಸೀಮಿತ ವಾಗಿರುವ ಆಧ್ಯಾತ್ಮಿಕ. ನೈತಿಕ ಸಾಮರ್ಥ್ಯಗಳಿಂದ ನಿರ್ವಹಿಸಲು ಸಾಧ್ಯವಾಗದಷ್ಟು

ಅದು ಬೆಳೆದು ನಿಂತಿದೆ. ತಪ್ಪು ಹೆಜ್ಜೆಯನ್ನಿಡುವ ಮಾನವೀಯ ಅಹಂಕಾರ ತುಷ್ಟಿಯ ದಿಸೆಯಲ್ಲಿ ಅದು ವಿಪತ್ಕಾರಿ ಪರಿಚಾರಕನಂತಿದೆ.

This new fullness of the means of life might be an opportunity......for the discovery of a greater and diviner spirit which would.... use life for a higher perfection of the being .. but it is being used instead for the multiplication of new wants and aggressive expansion of collective ego.

ಬಾಳಿನ ಸಾಧನಗಳ ವಿಪುಲತೆಯು ಮಾನವನನ್ನು ಉದಾತ್ತ ಪೂರ್ಣತೆಯತ್ತ ಎತ್ತಬಲ್ಲ ದೈವೀಚೇತನವನ್ನು ಕಂಡುಕೊಳ್ಳುವ ದಿಸೆಯಲ್ಲಿ ಬಾಳನ್ನು ಉಪಯೋಗಿಸುವ ಸದವಕಾಶವಾಗಬಹುದಾಗಿತ್ತು. ಆದರೆ ಮಾನವನ ಬೇಡಿಕೆಗಳನ್ನು, ಆಕ್ರಮಣ ಶೀಲವಾದ ಸಾಮೂಹಿಕ ಅಹಂಕಾರವನ್ನು ವಿಸ್ತರಿಸುವುದಕ್ಕಾಗಿ ಬಾಳಿನ ಸಾಧನಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಶ್ರೀ ಅರವಿಂದರು ವಿಜ್ಞಾನವು ಒದಗಿಸಿದ ನವೀನ ಸೌಕರ್ಯಗಳನ್ನು ಕುರಿತು ಹೀಗೆ ಹೇಳಿದ್ದಾರೆ:

At the same time Science has put at his (man's) disposal many potencies of the universal Force and has made the life materially one; but what uses this is a little human individual or communal ego with.... no inner sense or power which would create.... a true life unity.. or a sense of spiritual oneness.

ಅದೇ ಕಾಲಕ್ಕೆ ವಿಜ್ಞಾನವು ವಿಶ್ವಶಕ್ತಿಯ ನವೀನ ಸಾಧ್ಯತೆಗಳನ್ನು ಮಾನವನಿಗೆ ಒದಗಿಸಿದೆ. ಇದರಿಂದಾಗಿ ಜೀವನದಲ್ಲಿ ಭೌತಿಕವಾಗಿ ಏಕತೆಯು ಗೋಚರವಾಗಿದೆ. ಆದರೆ ಬಾಳಿನ ಇಲ್ಲವೆ ಆಧ್ಯಾತ್ಮಿಕ ಏಕತೆಯನ್ನು ರೂಪಿಸಿಕೊಳ್ಳಲು ಬೇಕಾದ ಆಂತರಿಕ ಅರಿವು, ಶಕ್ತಿಗಳಿಲ್ಲದ ಕುಬ್ಜವ್ಯಕ್ತಿಯು ಇಲ್ಲವೆ ಸಮಷ್ಟಿಯ ಅಹಂಕಾರವು ಅದನ್ನು ಬಳಸಿಕೊಳ್ಳುತ್ತಿದೆ.

ಇದರ ಪರಿಣಾಮ ?

All that is there is a choas of clashing mental ideas, urges of individual and collective physical want and need, vital claims pue desires, impulses of an ignorant life-push, hungers and calls for life satisfaction of individuals, classes, notions, a rich fungus of political and social and economic..--notions, a hustling medleg of slogans and panaceas for which men are ready to oppress and be oppressed, tc kill and be killed.... in the belief that this is his way out to some thing ideal........ .

ನಾವೀಗ ಕಾಣುತ್ತಿರುವುದು ಮಾನವೀಯ ಆಲೋಚನೆಗಳ ಸಂಘರ್ಷಣೆಯ ಅವ್ಯವಸ್ಥೆ; ವ್ಯಕ್ತಿಯ ಇಲ್ಲವೆ ಸಮಷ್ಟಿಯ ಭೌತಿಕ ಆಸೆ, ಆವಶ್ಯಕತೆಗಳ ಪ್ರಚೋದನೆ; ಪ್ರಾಣದ ಬೇಡಿಕೆಗಳು; ಅಜ್ಞಾನಮಯ ಬಾಳಿನ ಒತ್ತಡದ ಉದ್ವೇಗ; ವ್ಯಕ್ತಿಗಳ, ವರ್ಗಗಳ, ರಾಷ್ಟ್ರಗಳ ಪ್ರಾಣಮಯ ದಾಹಪೂರ್ತಿಯ ಕರೆ; ರಾಜಕೀಯ, ಸಾಮಾಜಿಕ, ಆರ್ಥಿಕ ಕಲ್ಪನೆಗಳ ಸಮೃದ್ಧ ನಾಯಿಕೊಡೆ; ಘೋಷಣೆ, ಪರಿಹಾರಮಾರ್ಗಗಳ ಸಮ್ಮಿಶ್ರಣದ ಕರ್ಕಶಕೂಗು. ಇವುಗಳಿಂದಾಗಿ ಮಾನವನು ಮಾನವನನ್ನು ತುಳಿಯಲು, ಕೊಲ್ಲಲು ಸಿದ್ಧನಾಗುತ್ತಾನೆ. ಹೀಗೆ ಮಾಡುವುದು ತನ್ನ ಧ್ಯೇಯವನ್ನು ಪೂರೈಸುವ ಮಾರ್ಗವೆಂದೂ ಭಾವಿಸುತ್ತಾನೆ.

..ego and..dividing mind can only create.. a surge of enormous powers and desires, a chaotie mass of.. mental, vital and phypical material of larger existence which, because it is not taken up by a creative, hormonious light of the spirit, must weller in a universalised confusion and discord out of which it is impossible to build a greater harmonic life.

ಅಹಂಕಾರ, ಭಿನ್ನತಾಭಾವಗಳಿಂದಾಗಿ ವಿಸ್ತೃತ ಬಾಳಿನಲ್ಲಿ ಬೃಹದಾಕಾರದ ಶಕ್ತಿಗಳ, ಆಸೆಗಳ ಅಲ್ಲೋಲ ಕಲ್ಲೋಲ, ಅವ್ಯವಸ್ಥಿತ ರಾಶಿಯಂತಿರುವ ಮಾನಸಿಕ, ಪ್ರಾಣಮಯ, ಭೌತಿಕ ಸಾಮಗ್ರಿ ತಲೆದೋರಿವೆ. ಇವನ್ನು ಸೃಜನಶೀಲವಾದ, ಸಮರಸದ ಪ್ರಕಾಶಮಯ ಆಧ್ಯಾತ್ಮ ಶಕ್ತಿಗೆ ಒಳಪಡಿಸಲಾಗಿಲ್ಲ. ಅಂತೆಯೇ ಇದು ಸಾರ್ವತ್ರಿಕ ಅವ್ಯವಸ್ಥೆ ವೈಷಮ್ಯಗಳ ಗದ್ದಲವುಂಟಾಗಿದೆ. ಇಂತಹ ಗದ್ದಲದಿಂದ ಘನತರವಾದ ಸಮರಸದ ಬಾಳನ್ನು ರೂಪಿಸುವುದು ಸಾಧ್ಯವಿಲ್ಲದಾಗಿದೆ.

ಹಾಗಾದರೆ ಇಂದಿನ ಆವಶ್ಯಕತೆಯೇನು?

A greater whole-being, whole-knowledge, whole powering is needed to weld all into greater unity of whole-life.

ಸಮಗ್ರ ಜೀವನವನ್ನು ಘನವಾದ ಏಕತೆಯಲ್ಲಿ ಬೆಸೆಯಬಲ್ಲ ಘನವೂ ಸಮಗ್ರವೂ ಆದ ಇರುವಿಕೆ, ಅರಿವು, ಬಲಗಳು ನಮಗೀಗ ಆವಶ್ಯಕವಾಗಿವೆ.

A life of unity, mutuality and harmony born of a deeper and wider truth of one being is the only truth of life that can successfully replace the imperfect mental constructions which were ....an accommodation of egos and interests grouped.... to form society.

ಇದುವರೆಗಿನ ಮಾನಸಿಕ ರಚನೆಗಳು ಅಪರಿಪೂರ್ಣವೆನಿಸಿವೆ. ಏಕೆಂದರೆ ಅವು ಅಹಂಕಾರಗಳ, ಹಿತಾಸಕ್ತಿಗಳ ಹೊಂದಾಣಿಕೆ ಮಾಡಿಕೊಳ್ಳುವ ಗುಂಪುಗಳ ಮೂಲಕ

ಸಮಾಜ ರಚನೆಯ ದಿಸೆಯಲ್ಲಿ ಸಾಗಿದವು. ಇಂತಹ ಮಾನಸಿಕ ರಚನೆಗಳಿಗೆ ಪ್ರತಿಯಾಗಿ ಮಾನವೀಯ ಬಾಳಿನ ಏಕಮೇವ ಸತ್ಯವು ನಮಗೆ ಬೇಕಾಗಿದೆ. ಆ ಸತ್ಯವೆಂದರೆ ನಮ್ಮ ಇರುವಿಕೆಯ ಆಳವೂ ವಿಶಾಲವೂ ಆದ ಸತ್ಯದಿಂದ ಹೊರಹೊಮ್ಮುವ ಏಕತೆ, ಪರಸ್ಪರತೆ ಸಮರಸಗಳಿಂದ ಕೂಡಿದ ಜೀವನವೇ ಆಗಿದೆ.

ಇದು ಸಾಂಘಿಕ ಧರ್ಮಗಳಿಂದ ಸಾಧ್ಯವೆ ?

...But organised religion, though it can provide means of inner uplift for the individual....has not changed human life and society; it could not do so because, in governing society, it had to compromise with the lower parts of life and could not insist on the inner change of the whole being;....it (Religion) does not transform the race.

ಸಾಂಘಿಕ ಧರ್ಮವು ವ್ಯಕ್ತಿಯ ಆಂತರಿಕ ಉನ್ನತಿಗೆ ಸಾಧನಗಳನ್ನು ಒದಗಿಸಬಹುದಾದರೂ ಅದು ಮಾನವೀಯ ಬಾಳನ್ನು, ಸಮಾಜವನ್ನು ಬದಲಾಯಿಸಿಲ್ಲ. ಹಾಗಾಗಲು ಕಾರಣವೆಂದರೆ ಸಾಂಘಿಕ ಧರ್ಮವು ಸಮಾಜವನ್ನು ಆಳಬೇಕೆನ್ನುವ ದೃಷ್ಟಿಯಿಂದಾಗಿ ಬಾಳಿನ ನಿಮ್ನತರ ಅಂಶಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಸಮಗ್ರ ಇರುವಿಕೆಯಲ್ಲಿ ಆಂತರಿಕ ವ್ಯತ್ಯಾಸ ತರುವ ದಿಸೆಯಲ್ಲಿ ದೃಢವಾಗಿ ವರ್ತಿಸಲು ಸಮರ್ಥವಾಗುವುದಿಲ್ಲ. ಅದು ಜನಾಂಗವನ್ನು ಪರಿವರ್ತನೆಗೊಳಿಸಿಲ್ಲ.

ಹಾಗಿದ್ದರೆ ಮಾನವತೆಯನ್ನು ಮೇಲಕ್ಕೆ ಎತ್ತುವುದು ಹೇಗೆ ?

A total spiritual direction given to the whole life and the whole nature can alone lift humanity beyond itself....

It is only the full emergence of the soul, the full descent of the nature light and power of the spirit and the consequent.... transformatoin....by a..supremental..that can effect..evolutionary miracle.

An entirely new consciousness in many individuals transforming their whole being..their mental, vital, physical nature-self is needed for the new life to appear..another order of beings who have raised their whole existence from our present mentalised animality to a greater spiritual level (is needed).

ಸಂಪೂರ್ಣವಾದ ಆಧ್ಯಾತ್ಮಿಕ ನಿರ್ದೇಶನವು ಸಮಗ್ರ ಬಾಳಿಗೆ, ಮಾನವನ ಇಡಿಯ ಸ್ವಭಾವಕ್ಕೆ ಒದಗಿ ಬಂದಾಗ ಮಾತ್ರ ಮಾನವತೆಯನ್ನು ಈಗಿನ ಸ್ಥಿತಿಯಿಂದ ಮೇಲಕ್ಕೆತ್ತುವುದು ಸಾಧ್ಯವಾಗುವುದು.

ಆತ್ಮದ ಪೂರ್ತಿಯಾದ ಹೊರಹೊಮ್ಮುವಿಕೆ. ಆಧ್ಯಾತ್ಮಿಕತೆಯ ಸ್ವಾಭಾವಿಕ ಪ್ರಕಾಶ, ಶಕ್ತಿಗಳ ಅವತರಣ, ತನ್ಮೂಲಕ ವಿಕಾಸಗೊಳ್ಳುವ ಅತಿಮಾನಸದಿಂದ ಒದಗಿ ಬರುವ ಪರಿವರ್ತನೆ–ಇವು ಮಾತ್ರ ವಿಕಾಸಕ್ರಮದ ಅದ್ಭುತವನ್ನು ಸಾಧಿಸಬಲ್ಲವು.

ನವಜೀವನವು ತಲೆದೋರಬೇಕಾದರೆ ಅನೇಕ ಮಾನವರು ಸಂಪೂರ್ಣವಾದ ನವೀನ ಪ್ರಜ್ಞೆಯಿಂದ ತಮ್ಮ ಇಡಿಯ ಇರುವಿಕೆಯ, ಭೌತಿಕ, ಪ್ರಾಣಮಯ, ಮನೋಮಯ ಸ್ವಭಾವದ ಪರಿವರ್ತನೆಯನ್ನು ಸಾಧಿಸಬೇಕಾದುದು ಅವಶ್ಯಕವಾಗಿದೆ. ಇಂದಿನ ನಮ್ಮ ಮನೋಮಯಸ್ತರದ ಪಶುತ್ವದಿಂದ ಘನತರವಾದ ಆಧ್ಯಾತ್ಮಿಕ ಮಟ್ಟಕ್ಕೆ ಎತ್ತರಿಸಿಕೊಂಡ ಮಾನವತೆಯು ಜೇರೊಂದು ಶ್ರೇಣಿ ವಿಕಾಸಗೊಳ್ಳಬೇಕಾಗಿದೆ.

ಒಟ್ಟಿನಲ್ಲಿ ಶ್ರೀ ಅರವಿಂದರ ಆಧ್ಯಾತ್ಮವು ಮಾನವೀಯ ಸ್ವಭಾವದ ಸಮಗ್ರ ಪರಿವರ್ತನೆಯತ್ತ, ಹೊಸ ದೇವಮಾನವ ಸಂತತಿಯ ನಿರ್ಮಾಣದತ್ತ ಸಾಗುತ್ತಿದೆ. ಆ ಗುರಿಯ ಸಾಧನೆಯು ವ್ಯವಹಾರ್ಯವಾಗುವ ದಿಸೆಯಲ್ಲಿ ಅವರು ಒಂದು ಆಧ್ಯಾತ್ಮಿಕ ಕೇಂದ್ರ (ಶ್ರೀ ಅರವಿಂದ ಆಶ್ರಮ)ವನ್ನು ರೂಪಿಸಿದ್ದಾರೆ. ಅದು ಈಗ ಪರಿಣಾಮಕಾರಿಯಾಗಿ ಪ್ರಭಾವಶಾಲಿಯಾಗಿ ಕಾರ್ಯನಿರತವಾಗಿದೆ.

ಈ ಲೇಖನದಲ್ಲಿ ಬಳಸಿದ ಕೆಲವು ಪಾರಿಭಾಷಿಕ ಪದಗಳು

ವ್ಯಕ್ತಿಗತ	— *Individual*
ವಿಶ್ವಂಭರ	— *Universal*
ವಿಶ್ವಾತೀತ ಪರಾತ್ಪರ	— *Transeedental*
ಆವಿಷ್ಕಾರ ಪ್ರಕಟನ	— *Manifestation*
ಛಾಯಾರೂಪ	— *Shadow-Form*
ಸೀಮಿತ	— *Limited*
ಹುದುಗಿದ ಸುಪ್ತ	— *Involved*
ಪ್ರಕಟ	— *Evolved*
ಅತಿಮಾನಸ ಋತಚಿತ್ ಸತ್ಯಪ್ರಜ್ಞೆ ವಿಜ್ಞಾನಕೋಶ	— *Supermind*
ಆರೋಹಣ	— *Ascent*
ಅವರೋಹಣ	— *Descent*

ಪ್ರಜ್ಞೆ	— *Consciousness*
ಪರಿವರ್ತನೆ	— *Transformation*
ಏಕತಾಭಾವ	— *Identity*
ಮಾನಸಿಕ ರಚನೆ	— *Mental Construction*
ಹೊಂದಾಣಿಕೆ	— *Compromise*
ಊರ್ಧ್ವಮನ	— *Higher mind*
ಪ್ರದೀಪ್ತಮನ	— *Illumined mind*
ಸ್ಫುರಿತಮನ	— *Intutive Mind*
ಅಧಿಮನ	— *Over mind*
ಅನಂತ	— *Infinite*
ಸಾಂತ	— *Finite*
ಅಚಂಚಲತೆ	— *Quiet*
ನೀರವತೆ	— *Silence*
ಸ್ಥಿರತೆ	— *Calm*
ಸಮತಾಭಾವ	— *Way of Equality*
ಸಹನೆ	— *Endurence*
ಉದಾಸೀನತೆ	— *Indifference*
ಇರುವಿಕೆ	— *Being*
ಏಕತೆ	— *Unity*
ಪರಸ್ಪರತೆ	— *Mutuality*
ಸಮರಸ	— *Hormony*
ಏಕಾಗ್ರತೆ	— *Concentration*
ಧ್ಯಾನ	— *Mediation.*

★ ಸ. ಸ. ಮಾಳವಾಡ

ವಿದಾಯ

ಗೆಳತಿ

ವರುಷ ತುಂಬುವ ಮೊದಲೆ ಇಕೊ ನಿನಗೆ

ಬೀಳ್ಕೊಡುಗೆ.

ನನ್ನ ಚಂದ್ರಿಕೆಯುದಯು ಕೊನೆಯು ಪೂರ್ಣ ವಿರಾಮು.

ಸತ್ಯ ಹಂಬಲ ಆಸೆ ಕಣ್ಣೀರ ಮರಿಗೆಯುಲಿ ಕರಗಿ

ಭೂತಗಡಿಗೆಯುಲಿ ಹುಗಿದುಕೊಂಡಿದ್ದೇನೆ.

ವಸಂತದುನ್ಮತ್ತ ಹುಚ್ಚುಹೊಳೆ ಎದೆಯು ಕೊಳ್ಳವ

ಸಿಗಿದು :

ಯೌವನದ ನೂರಾರು ಕನಸುಗಳ ಹಿಸುಕಿ

ಚೆಲ್ಲಾಪಿಲ್ಲಿ. ಬಯುಲಾಗಿದ್ದೇನೆ

ನಿನ್ನ ನೆನಪಿನ ನೇಣ ಬಿಗಿದು.

★ ಜಿ. ಎಸ್. ಅವಧಾನಿ.

ಭಾಸನ ‘ ದೇವಕುಲ ’

ಸಂಸ್ಕೃತ ಸಾಹಿತ್ಯ ಚರಿತೆಯಲ್ಲಿ ಭಾಸ ಮಹಾಕವಿಗೆ ಮಹೋನ್ನತ ಸ್ಥಾನ ಮೀಸಲು. ಕವಿ ರಾಜಶೇಖರನ (ಸು. ಕ್ರಿ. ಶ. ೧೦೦೦) ಉಕ್ತಿಯಂತೆ ಸರಸತಿಯ ವರಪ್ರಸಾದಕ್ಕೆ ಪಾತ್ರರಾದ ಕವಿಪುತ್ರರ ಪಂಕ್ತಿಯಲ್ಲಿ ಭಾಸನು ಅಗ್ರಗಣ್ಯ. ಮಹಾಕವಿ ಬಾಣನು (ಕ್ರಿ. ಶ. ೬೨೦) ‘ ಹರ್ಷಚರಿತ ’ದ ಪ್ರಾರಂಭದಲ್ಲಿ ಭಾಸಮಹಾಕವಿಯನ್ನು ಶ್ಲೇಷಮಯವಾಗಿ ಹೊಗಳಿರುವನು:

> **ಸೂತ್ರಧಾರಕೃತಾರಂಭೈರ್ನಾಟಕೈರ್ಬಹುಭೂಮಿಕೈಃ ।**
> **ಸಪತಾಕೈರ್ಯಶೋ ಲೇಭೇ ಭಾಸೋ ದೇವಕುಲೈರಿವ ॥[1]**

ಭಾಸನು ಒಬ್ಬ ಬಹು ಚತುರ ನಾಟ್ಯಕಲಾಶಿಲ್ಪಿ. ಆದುದರಿಂದ ಅವನ ನಾಟ್ಯಕಲೆಯನ್ನು ಬಾಣ ಮಹಾಕವಿಯು ಶಿಲ್ಪಸೃಷ್ಟಿಗೆ ಹೋಲಿಸಿರುವುದು ಹೃದ್ಯವಾಗಿದೆ. ಕಲಾನಿಪುಣ ಸೂತ್ರಧಾರಿ[2] ಶಿಲ್ಪಿಯು ಗುಡಿಯನ್ನು ಅನೇಕ ಅಂತಸ್ತು (ಖಂಡ), ತ್ರಿಕೂಟ, ಚತುಷ್ಕ, ಅಷ್ಟಕೋಣಗಳ ರಚನೆಯಲ್ಲಿ ಮನೋಹರವಾಗಿ ನಿರ್ಮಿಸುತ್ತಾನೆ. ಧ್ವಜಗಳಿಂದ ಅದು ಶೋಭಿಸುತ್ತದೆ. ಹಾಗೆ ಭಾಸನ ನಾಟಕಗಳು ಸೂತ್ರಧಾರನಿಂದ ಮೊದಲಾಗುತ್ತವೆ. ಅವುಗಳಲ್ಲಿ ಬರುವ ಅನೇಕ ಪಾತ್ರ (ಭೂಮಿಕೆ)[3]ಗಳು ಮತ್ತು ಕಥಾ ಪ್ರಸಂಗ (ಪತಾಕೆ)[4]ಗಳು ಕುತೂಹಲಕಾರಿ ಹಾಗು ಆನಂದದಾಯಕವಾಗಿವೆ.

ಮೂರು ವೈಶಿಷ್ಟ್ಯಗಳು:

ಭಾಸನ ನಾಟ್ಯಸೃಷ್ಟಿಯಲ್ಲಿ ಮೂರು ವೈಶಿಷ್ಟ್ಯಗಳು ಸ್ಪಷ್ಟವಾಗಿವೆ. ಮೊದಲನೆಯದಾಗಿ, ಅವನ ನಾಟಕಗಳಲ್ಲಿ ಸೂತ್ರಧಾರನು ನೇರವಾಗಿ ರಂಗಮಂಚಕ್ಕೆ ಪ್ರವೇಶಿಸಿ ಅಭಿನಯಕ್ಕೆ ಶ್ರೀಕಾರ ಹಾಕುತ್ತಾನೆ. ಸಾಮಾನ್ಯವಾಗಿ ಸಂಸ್ಕೃತ ನಾಟಕಗಳಲ್ಲಿ ಇರಬೇಕಾದ ನಾಂದಿಯು ಪರದೆಯ ಹಿಂದೆ ಆಗಲೇ ಮುಗಿದು ಹೋಗಿರುತ್ತದೆ.

---

೧. ಹ. ಚ. (ಪ್ರಥಮ ಉಚ್ಛ್ವಾಸ, ಶ್ಲೋಕ ೧೬).

೨. ‘ ಅಭಿಲಷಿತಾರ್ಥ ಚಿಂತಾಮಣಿ ’ಕಾರ ಸೋಮದೇವನು ಚಿತ್ರಕಾರ ಮತ್ತು ಶಿಲ್ಪಿ ಇಬ್ಬರನ್ನೂ ಸೂತ್ರಧಾರರೆಂದು ಪರಿಗಣಿಸಿರುವನು.

ಅ. ಚಿಂ. (ಪ್ರಕರಣ ೧. ಅಧ್ಯಾಯ ೩)

೩. A part or character in a play, ‘ ಅನ್ಯರೂಪೈರ್ಯದನ್ಯಸ್ಯ ಪ್ರವೇಶಃ ಸ ತು ಭೂಮಿಕಾ ’ —ಭರತ, SED P. 724.

೪. ‘ ಪತಾಕಾ ’ ನಾಟ್ಯ ವೃತ್ತಾಂತದ ಒಂದು ಪ್ರಕಾರ. ಪತಾಕಾ ಮತ್ತು ಪ್ರಕರೀ ಇವೆರಡೂ ಪ್ರಾಸಂಗಿಕ ಇತಿವೃತ್ತದ ಪ್ರಭೇದಗಳು. ಅನುಬಂಧ ಸಹಿತವಾಗಿ ಉದ್ದವಾಗಿ ಮುಂದುವರಿಯುವ ನಾಟಕದ ಕತೆಗೆ ‘ ಪತಾಕಾ ’ ಎಂದು ಸಂಕೇತ.

ದ. ರೂ. (ಮೊದಲನೆಯ ಪ್ರಕಾಶ, ೨೧: ೧೩, ಪುಟ ೧೦)

'ನಾಂದ್ಯಂತೇ ಪ್ರತಿಶತಿ ಸೂತ್ರಧಾರಃ'

ಇದು ಭಾಸನ ನಾಟಕಗಳ ಪ್ರಾರಂಭಸೂತ್ರ. ಎರಡನೆಯದಾಗಿ, ಅವನ ನಾಟಕಗಳಲ್ಲಿ ಅಗ್ನಿದಾಹ ಮತ್ತು ಅಗ್ನಿಪ್ರವೇಶದ ಪ್ರಸಂಗಗಳು ಬಹುಲವಾಗಿರುತ್ತವೆ. ಮೂರನೆಯದಾಗಿ, ಪ್ರತಿಮಾಗೃಹಗಳ ಸನ್ನಿವೇಶ ಯೋಜನೆ. ಒಂದಿಲ್ಲೊಂದು ಆಕಸ್ಮಿಕ ಹಾಗು ವಿಸ್ಮಯಕಾರಕ ಘಟನೆಗಳನ್ನು ಕಲ್ಪಿಸಿ ನಾಟಕ ಕಥಾವಸ್ತುವಿಗೆ ಕೌತೂಹಲದ ಮೆರಗು ಕೊಡುವ ಭಾಸನ ಕೌಶಲ ಅನ್ಯಾದೃಶವಾದುದು.

ಜ್ವಲನಮಿತ್ರ ಭಾಸ

'ಸ್ವಪ್ನವಾಸವದತ್ತ'ದ ಕಥೆ ಲಾವಾಣಕ ಗ್ರಾಮದ ಅಗ್ನಿದಾಹದ ವಾರ್ತೆಯಿಂದ ಮೊದಲಾಗುತ್ತದೆ. 'ಪಾಂಚರಾತ್ರ'ವು ಪ್ರಾರಂಭವಾಗುವುದು ದಾವಾಗ್ನಿಯ ವರ್ಣನೆಯಿಂದ. 'ಅಭಿಷೇಕ'ದಲ್ಲಿ ನಾಯಿಕೆ ಸೀತೆಯೂ ಮತ್ತು 'ಅವಿಮಾರಕ'ದಲ್ಲಿ ನಾಯಕ ಅವಿಮಾರಕನೂ (ಸೌವೀರ ರಾಜಪುತ್ರ) ಅಗ್ನಿಪ್ರವೇಶ ಮಾಡುವರು. ಆದರೆ ಅಗ್ನಿಯು ಅವರನ್ನು ದಹಿಸುವುದಿಲ್ಲ. ಈ ಅಗ್ನಿಪ್ರಸಂಗಗಳನ್ನು ಅನುಲಕ್ಷಿಸಿ ಕವಿಗಳು ಭಾಸನ ಬಗೆಗೆ ಹಲವಾರು ಪ್ರವಾದಗಳನ್ನು ಕಟ್ಟಿ ಹೊಗಳಿರುವರು. ಭಾಸನ ನಾಟಕಗಳೂ ಅವನ ಪಾತ್ರಗಳಂತೆ ವಿಮರ್ಶಕರ ಅಗ್ನಿಪರೀಕ್ಷೆಯಲ್ಲಿ ಅಕ್ಷತವಾಗಿ ಉಳಿಯುತ್ತವೆ ಎಂದು ಸೂಕ್ಷ್ಮವಾಗಿ ಕವಿ ರಾಜಶೇಖರನು ಪ್ರಶಂಸಿಸಿರುವುದು ಮನನೀಯವಾಗಿದೆ:

ಭಾಸನಾಟಕ ಚಕ್ರೇಽಪಿ ಛೇಕೈಃ ಕ್ಷಿಪ್ತೇ ಪರೀಕ್ಷಿತುಂ
ಸ್ವಪ್ನವಾಸವದತ್ತಸ್ಯ ದಾಹಕೋಽಭೂನ್ನ ಪಾವಕಃ ॥ ೫

ಜಯಾನಕ (ಜಯನಾಥ) ಕವಿಯೂ (ಸು. ೧೨೦೦) ರಾಜಶೇಖರನ ಉಕ್ತಿಯನ್ನೇ ಸಮರ್ಥಿಸಿದಂತಿದೆ:

ಸತ್ಕಾವ್ಯಸಂಹಾರವಿಧೌ ಖಲಾನಾಂ
ದೀಪ್ತಾನಿ ವಹ್ನೇರಪಿ ಮಾನಸಾನಿ ।
ಭಾಸಸ್ಯ ಕಾವ್ಯಂ ಖಲು ವಿಷ್ಣುಧರ್ಮಾನ್
ಸೋಽಪ್ಯಾನನಾತ್ ಪಾವಕಃ ವನ್ಯಮೋಚ ॥೬

---

೫. ಸೂಕ್ತಿ ಮುಕ್ತಾವಲಿ

೬. ಜಯಾನಕನ 'ಪೃಥ್ವಿರಾಜ ಚರಿತ' ಕಾವ್ಯಕ್ಕೆ ಟೀಕೆ ಬರೆದ ಜೈನ ಪಂಡಿತ ಜೋನರಾಜನು (ಕ್ರಿ.ಶ. ೧೪೫೦) 'ವಿಷ್ಣುಧರ್ಮ' ವನ್ನು ಭಾಸಕವಿಯ ಕೃತಿಯೆಂದು ಪರಿಗಣಿಸಿರುವನು.
ಭಾ. ಮ. ಕ. (ಮೊದಲ ತರಂಗ, ಪುಟ ೫ ಮತ್ತು ಪರಿಶಿಷ್ಟ, ಪು. ೬೯)
ಭಾ. ಕ. (ಟೀಕೆ. ಪು. ೨. ಅಡಿಟಿಪ್ಪಣಿ)

೭. ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಇಲ್ಲಿ 'ಪಾರತ' ಪಾಠವನ್ನು ಬಳಸಿರುವುದು ವೈಶಿಷ್ಟ್ಯಪೂರ್ಣವಾಗಿದೆ. – ಭಾ. ಮ. ಕ. (ತರಂಗ ೧. ಪು. ೪): ಪಾರತ, ಪಾರದ, ಪಾರಜಗಳು ಪಾದರಸದ ಪರ್ಯಾಯವಾಗಿವೆ. ಪಾರಜ ರಸರಾಜ. ಅದು ಬೆಂಕಿಯಲ್ಲಿ ಸುಟ್ಟು ಹೋಗುವುದಿಲ್ಲ.

ಭಾಸನ ನಾಟಕಗಳಲ್ಲಿ ಸಾಮಾನ್ಯವಾಗಿ ಹೋಮಾಗ್ನಿ, ದಾವಾಗ್ನಿ, ಗೃಹದಾಹ ರೂಪ ಅಗ್ನಿವಿಷಯಕ ಘಟನೆಗಳು ಪ್ರಾಸಂಗಿಕವಾಗಿ ಬರುತ್ತವೆ. ಆದಕಾಗಿ ಪ್ರಾಕೃತ ಕವಿ ವಾಕ್ಪತಿರಾಜನೂ (ಸು. ೭೦೦) ಭಾಸನನ್ನು 'ಜ್ವಲನ ಮಿತ್ರ' (ಜಲಣ ಮಿತ್ತ) ನೆಂದು ವಿಶೇಷಿಸಿ ಸ್ಮರಿಸಿರುವನು.[೯]

ವಿನೂತನಸೃಷ್ಟಿ–ಪ್ರತಿಮಾನಾಟಕ

ಕುತೂಹಲಕಾರಿ ಅಗ್ನಿದಾಹದ ಪ್ರಸಂಗಗಳಿರುವ ನಾಟಕಗಳನ್ನು ರೂಪಿಸಿರುವಂತೆ ಪ್ರತಿಮಾಗೃಹಗಳ ಸಂದರ್ಭಗಳಿರುವ ಇನ್ನೂ ಅನೇಕ ರೂಪಕಗಳನ್ನು ಭಾಸನು ರಚಿಸಿರಬಹುದೆಂದು ಊಹಿಸಬಹುದಾಗಿದೆ.[೧೦] ಬಾಣೋಕ್ತಿಯ 'ದೇವಕುಲೈಃ' ಎಂಬ ಬಹು

'...ಚಪಲೋ ರಸಃ ಸೂತಶ್ಚ ಪಾರದೇ.
ಗವಲಂ ಮಾಹಿಷಂ ಶೃಂಗಂ...॥ —ಅಮರಸಿಂಹ

(ಪಾದರಸವನ್ನು ಎಮ್ಮೆಯ ಕೊರೆದ ಕೋಡಿನ ಕೊಳವೆಯಲ್ಲಿ ಇಡುತ್ತಿದ್ದರು)

ರಸೇಂದ್ರಃ ಪಾರದಃ ಪ್ರೋಕ್ತಃ ಪಾರತೋಽಪಿ ನಿಗದ್ಯತೇ —ತಾರಪಾಲ

ಪಾರತಸ್ತು ಮನಾಕ್ ಪಾಂಡುಃ ಸೂತಸ್ತು ರಹಿತೋ ಮಲಾತ್।
ಪಾರದಸ್ತು ಮನಾಕ್ ಪೀತಃ ಸರ್ವೇ ತುಲ್ಯಗುಣಾಃ ಸ್ಮೃತಾಃ ॥ —ರಸಾರ್ಣವ.

ವಿಶೇಷಕ್ಕೆ ಅ. ಕೋ. (ದ್ವಿತೀಯ ಕಾಂಡ, ವೈಶ್ಯವರ್ಗ, ಶ್ಲೋ. ೯೯–೧೦೦).

೮. ಪೃ. ರಾ. ಚ. (ಸರ್ಗ ೧, ಶ್ಲೋಕ ೩)

೯. ಭಾ. ಮ. ಕ. (ತರಂಗ ೧., ಪು. ೪)

೧೦. ತಿರುವಾಂಕೂರ ಗ್ರಂಥಭಂಡಾರದ ಅಧಿಕಾರಿಗಳಾಗಿದ್ದ ಮಹಾಮಹೋಪಾಧ್ಯಾಯ ಡಾ. ಟಿ. ಗಣಪತಿಶಾಸ್ತ್ರಿಗಳವರು ೧೯೧೦ರಲ್ಲಿ ಭಾಸನಾಟಕ ಚಕ್ರದ ೧೩ಕೃತಿಗಳನ್ನು ಶೋಧಿಸಿ ಪ್ರಕಟಿಸಿದರು;

ರಾಮಾಯಣ ಸಂಬಂಧವಾದ ನಾಟಕಗಳು :
೧) ಪ್ರತಿಮಾ, ೨) ಅಭಿಷೇಕ,
ಉದಯನ—
೩) ಪ್ರತಿಜ್ಞಾಯೌಗಂಧರಾಯಣ. ೪) ಸ್ವಪ್ನವಾಸವದತ್ತ,
ಮಹಾಭಾರತ—
೫) ಮಧ್ಯಮ ವ್ಯಾಯೋಗ. ೬) ಪಾಂಚರಾತ್ರ. ೭) ದೂತವಾಕ್ಯ. ೮) ದೂತಘಟೋತ್ಕಚ, ೯) ಕರ್ಣಭಾರ, ೧೦) ಊರುಭಂಗ;
ಭಾಗವತ—
೧೧) ಬಾಲಚರಿತ;
ಐತಿಹಾಸಿಕ ಮತ್ತು ಸಾಮಾಜಿಕ ಕಥಾವಸ್ತು—
೧೨) ಚಾರುದತ್ತ, ೧೩) ಅವಿಮಾರಕ.

ಇವಲ್ಲದೆ ವೀಣಾವಾಸವದತ್ತ, ಕಿರಣಾವಳಿ, ಮುಕುಟತಾಡಿತಕ, ಉನ್ಮತ್ತ ರಾಘವ, ಯಜ್ಞಫಲ ಮುಂತಾಗಿ ಇನ್ನೂ ಅನೇಕ ನಾಟಕಗಳನ್ನು ಭಾಸನು ಬರೆದಂತೆ ಕೆಲವು ವಿದ್ವಾಂಸರ ಅಭಿಮತ. ಅವನು ಸು. ೩೦ ನಾಟಕಗಳನ್ನು ರಚಿಸಿದಂತೆ ಪ್ರತೀತಿ. ಆದರೆ ಅವೆಲ್ಲ ಪ್ರಕಟವಾಗಿಲ್ಲ. ಕೆಲವಂತೂ ಇನ್ನೂ ಲಭ್ಯವಾಗಿಲ್ಲ.

ಭಾ. ಕ. (ಪೀಠಿಕೆ, ಪು. ೧–೨); ಭಾ. ಮ. ಕ. (ತ. ೧–, ಪು. ೯–೧೦);
ಸಂ. ಸಾ. ಇ. (ನಾಟಕ, ಪು. ೭೯೫–೯೬);

ವಚನ ಪ್ರಯೋಗ ನಮ್ಮ ತರ್ಕಕ್ಕೆ ಪ್ರಮಾಣವೆನಿಸುವಂತಿದೆ. ದೇವಕುಲವೆಂದರೆ ಪ್ರತಿಮಾಗೃಹ. ಅದರ ಸನ್ನಿವೇಶವಿರುವ ಈಗ ಲಭ್ಯವಾಗಿರುವ ಭಾಸಕೃತ ರೂಪಕ 'ಪ್ರತಿಮಾ ನಾಟಕ' ಒಂದೇ ಎಂದು ಹೇಳಬೇಕು.[೧೧]

'ಪ್ರತಿಮಾನಾಟಕ' ಭಾಸಮಹಾಕವಿಯ ನಾಟ್ಯರಚನಾ ಕೌಶಲ್ಯದ ಒರೆಗಲ್ಲು. ಮಹಾಕವಿ ಭವಭೂತಿಯ ಬಗೆಗಿನ ಪ್ರಸಿದ್ಧ ಉಕ್ತಿಯನ್ನು ಅನುಕರಿಸಿ,

'ಪ್ರತಿಮಾನಾಟಕೇ ರಮ್ಯೇ ಕವಿರ್ಭಾಸೋ ವಿಶಿಷ್ಯತೇ'

ಎಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಅದರಲ್ಲಿ "ಕವಿಯು ತನ್ನ ಪ್ರತಿಭಾ ಪ್ರವಾಹವನ್ನೆಲ್ಲಾ ಹರಿಸಿಬಿಟ್ಟಿದ್ದಾನೆ; ಅಭಿಷೇಕ ನಾಟಕಕ್ಕೆ ಬರುವ ಹೊತ್ತಿಗೆ ಅದು ಬರುದೊರೆಯಾಗುತ್ತದೆ; ಪ್ರತಿಮಾನಾಟಕವು ವಸ್ತು ಪಾತ್ರ ರಸಾದಿಗಳಲ್ಲಿ ರಾಮಾಯಣಕ್ಕಿಂತ ತೀರ ಭಿನ್ನವಾದ ನೂತನ ಸೃಷ್ಟಿಯಾಗಿದೆ."[೧೨] ಎಂದು ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರು ಅಭಿಪ್ರಾಯ ಪಟ್ಟಿರುವದು ಅಕ್ಷರಶಃ ಸತ್ಯ.

ಆದಿಕವಿ ವಾಲ್ಮೀಕಿಯ ರಾಮಾಯಣ ಮತ್ತು ಮಹಾಕವಿ ಭಾಸನ ಪ್ರತಿಮಾ ನಾಟಕದಲ್ಲಿ ಚಿತ್ರಿತವಾಗಿರುವ ಅನಿರೀಕ್ಷಿತವಾಗಿ ಮಾತುಲ ಗೃಹದಿಂದ ಪ್ರವಾಸ ಮಾಡಿದ ಭರತನ ಮನಸ್ಸಿನ ಉದ್ವೇಗದ ಸನ್ನಿವೇಶಗಳನ್ನು ತುಲನೆ ಮಾಡಿ ನೋಡಬಹುದಾಗಿದೆ.

ರಾಮಾಯಣ ಕಾವ್ಯದಲ್ಲಿ

ಭರತನು ಕೇಕಯ ದೇಶದ ಮಾತುಲ ರಾಜಗೃಹದಲ್ಲಿ ತನ್ನ ತಮ್ಮ ಶತ್ರುಘ್ನನೊಂದಿಗೆ ಸುಖವಾಗಿರುತ್ತಾನೆ.[೧೩] ಶ್ರೀರಾಮನ ವನವಾಸದಿಂದಾಗಿ ದಶರಥರಾಜನು ಮೃತನಾದ ಮೇಲೆ ಅವನನ್ನು ಕರೆತರಲು ಕುಲಪುರೋಹಿತ ವಶಿಷ್ಠನು ಜಯಂತನನ್ನು ಕಳಿಸುತ್ತಾನೆ; ಆದರೆ ರಾಮನ ವನಗಮನ, ಪಿತೃಮರಣ ಮತ್ತು ರಘುಕುಲದ ವಿಪತ್ತಿನ ದುರ್ವಾರ್ತೆಯನ್ನು ಭರತನಿಗೆ ತಿಳಿಸಕೂಡದೆಂದು ಆದೇಶ ನೀಡಿರುತ್ತಾನೆ.[೧೪] ಅಯೋಧ್ಯೆಯ ದೂತರು ಕೇಕಯ ರಾಜಧಾನಿಯನ್ನು ತಲುಪಿದ ರಾತ್ರಿಯೇ ಭರತನಿಗೆ

೧೧. 'ಪ್ರತಿಜ್ಞಾಯೌಗಂಧರಾಯಣ'ದಲ್ಲಿ (ಅಂಕ ೩) 'ದೇವಕುಲ ಪೀಠಿಕೆ'ಯ ಉಲ್ಲೇಖ ಮಾತ್ರವಿದೆ.

೧೨. ಭಾ. ಕ. (ಪ್ರತಿಮಾ ನಾಟಕ. ಪು. ೮೬)

೧೩. ಯುಧಾಜಿತ್ ಮಾತುಲಕುಲೇ ದತ್ತರಾಜ್ಯಃ ಪರಂ ಸುಖೀ ।
ಭರತೋ ವಸತಿ ಭ್ರಾತಾ ಶತ್ರುಘ್ನೇನ ಸಮನ್ವಿತಃ ॥ ೨ ॥
ವಾ. ರಾ. (ಅಯೋಧ್ಯಾ ಕಾಂಡ. ಸರ್ಗ ೬೮.)

೧೪. ಮಾ ಚಾಸ್ಮೈ ಪ್ರೋಷಿತಂ ರಾಮಂ ಮಾ ಚಾಸ್ಮೈ ಪಿತರಂ ಮೃತಂ ।
ಭವಂತಃ ಶಂಸಿಷುರ್ಗತ್ವಾ ರಾಘವಾಣಾಮಿಮಂ ಕ್ಷಯಂ ॥
ವಾ. ರಾ. (ಅಯೋಧ್ಯಾ ಕಾಂಡ. ಸ. ೬೮. ಶ್ಲೋ. ೮)

ದುಃಸ್ವಪ್ನಗಳಾಗುತ್ತವೆ.[೧೫] ಉನ್ಮತ್ತರಂತೆ ಕೊಳಕು ಬಟ್ಟೆಯುಟ್ಟು ತಲೆಗೆದರಿದ ದಶರಥನು ಬೆಟ್ಟದ ಮೇಲಿಂದ ಮಲೆತು ನಾರುವ ಸಗಣಿಯ ಹೊಂಡದಲ್ಲಿ ಬಿದ್ದಂತೆ ಕನಸು ಕಾಣುತ್ತಾನೆ.[೧೬] ಭರತನು ಆತ್ಮೀಯರ ಮರಣವನ್ನು ಶಂಕಿಸಿ ವ್ಯಾಕುಲಗೊಳ್ಳುತ್ತಾನೆ; ದೂತನನ್ನು ಮೊದಲು ತನ್ನ ತಂದೆಯ ಮತ್ತು ಅಣ್ಣನ ಕ್ಷೇಮ ಕುರಿತು ವಿಚಾರಿಸುತ್ತಾನೆ.[೧೭] ಅವರನ್ನು ಕಾಣುವ ಆತುರದಲ್ಲಿ ಮಾತುಲಗೃಹದಿಂದ ಹೊರಟು ಅಯೋಧ್ಯೆಯ ಹತ್ತಿರ ಬರುತ್ತಾನೆ. ಹಗಲಿರುಳು ಜನರ ತುಮುಲದಿಂದ ತುಂಬಿದ ನಗರವಿಂದು ಅವನಿಗೆ ಅರಣ್ಯದಂತೆ ನೀರವವಾಗಿ ಕಾಣುತ್ತದೆ. ಅಮರಾವತಿಯಂತೆ ಸುಖಭೋಗದಿಂದ ನಲಿಯುತ್ತಿದ್ದ ಅಯೋಧ್ಯೆಯಿಂದು ಶೋಕಸಂತಪ್ತವಾಗಿದೆ ಬೀದಿ-ಚೌಕುಗಳೆಲ್ಲ ಜನಶೂನ್ಯವಾಗಿವೆ. ಮನೆಗಳ ಬಾಗಿಲುಗಳು ಮುಚ್ಚಿವೆ.[೧೮] ಇದನ್ನೆಲ್ಲ ಕಂಡು ಖಿನ್ನ ಮನಸ್ಕನಾದ ಭರತನು ನೇರವಾಗಿ ಅರಮನೆಗೆ ಬರುತ್ತಾನೆ.[೧೯]

ವಾಲ್ಮೀಕಿಯು ಇಲ್ಲಿ ಎಲ್ಲಿಯೂ ಭರತನು ದೇವಕುಲದಲ್ಲಿ ತಂಗಿದ ಪ್ರಸಂಗವನ್ನು ತಂದಿಲ್ಲ. ಆದರೆ ಭರತನು ಅಯೋಧ್ಯೆಯನ್ನು ಪ್ರವೇಶಿಸುವಾಗ ದೇವಾಲಯ ಮತ್ತು ಚೈತ್ಯಗಳಲ್ಲಿ ಪಕ್ಷಿಗಳು ದಶರಥರಾಜನ ಮರಣದಿಂದ ವಿಷಣ್ಣವಾಗಿರುವುದನ್ನು ಕಂಡು ಶಂಕಿತನಾದುದನ್ನು ಆದಿ ಕವಿಯು ವರ್ಣಿಸಿರುವನು :

ದೇವಾಯತನ-ಚೈತ್ಯೇಷು ದೀನಾಃ ಪಕ್ಷಿಗಣಾಸ್ತಥಾ[೨೦]

ರಾಮಾಯಣದ ಈ ಕರುಣಾಪೂರ್ಣ ಸನ್ನಿವೇಶವೇ ಭಾಸಕವಿಗೆ ಪ್ರತಿಮಾಗೃಹ ಪ್ರಸಂಗದ ರಚನೆಗೆ ಪ್ರೇರಣೆ ನೀಡಿರಬಹುದು.

---

೧೫. ಯಾಮೇವ ರಾತ್ರಿಂ ತೇ ದೂತಾಃ ಪ್ರವಿಶಂತಿ ಸ್ಮ ತಾಂ ಪುರೀಂ ।
ಭರತೇನಾಪಿ ತಾಂ ರಾತ್ರಿಂ ಸ್ವಪ್ನೋ ದೃಷ್ಟೋಽಯಮಪ್ರಿಯಃ ॥
ಅದೇ. (ಸ. ೬೯, ಶ್ಲೋ. ೧)

೧೬. ಸ್ವಪ್ನೇ ಪಿತರಮದ್ರಾಕ್ಷಂ ಮಲಿನಂ ಮುಕ್ತಮೂರ್ಧಜಂ ।
ಪತಂತಮದ್ರಿಶಿಖರಾತ್ ಕಲುಷೇ ಗೋಮಯ ಹ್ರದೇ ॥
ಅದೇ, (ಶ್ಲೋ. ೮)

೧೭. ಕಚ್ಚಿತ್ ಸ ಕುಶಲೀ ರಾಜಾ ಪಿತಾ ದಶರಥೋ ಮಮ ।
ಅದೇ, (ಅ. ಕಾಂ., ಸ. ೭೦, ಶ್ಲೋ, ೭)

೧೮. ಅಯೋಧ್ಯಾಯಾಂ ಪುರಾ ಶಬ್ದಃ ಶ್ರೂಯತೇ ತುಮುಲೋ ಮಹಾನ್,
ಸಮಂತಾನ್ನರನಾರೀಣಾಂ ತಮದ್ಯ ನ ಶೃಣೋಮ್ಯಹಂ ॥
... ...
ಅರಣ್ಯ ಭೂತೇವ ಪುರೀ ಸಾರಥೇ ಪ್ರತಿಭಾತಿ ಮೇ ।
ಅದೇ (ಸ. ೭೧, ಶ್ಲೋ: ೨೧-೨೪)

೧೯. ವಾ. ರಾ. (ಅರಣ್ಯ ಕಾಂಡ, ಸ. ೭೧, ಶ್ಲೋ. ೪೬); ೨. ಅದೇ. (ಶ್ಲೋ. ೪೩)

೨೦. ಸುಣ್ಣ ಬಣ್ಣ ಕೊಡುವವನು.

ಪ್ರತಿಮಾ ನಾಟಕದಲ್ಲಿ

ಪ್ರತಿಮಾ ನಾಟಕದ ಮೂರನೆಯ ಅಂಕದ ಪ್ರಾರಂಭದಲ್ಲಿ ಸುಧಾಕಾರನು[೨೧] ಭಟನಿಗೆ ತಾನು ಮಾಡಿ ಮುಗಿಸಿದ ಕೆಲಸಗಳ ವಿವರವನ್ನು ಹೇಳುತ್ತಾನೆ. ಪ್ರಿಯಪುತ್ರ ರಾಮನ ವನವಾಸದಿಂದ ದುಃಖಿತನಾಗಿ ಮೃತನಾದ ದಶರಥ ಮಹಾರಾಜನ ರಾಣಿಯರು ದೇವಕುಲದಲ್ಲಿ ನೂತನವಾಗಿ ಪ್ರತಿಷ್ಠಿತವಾಗಿರುವ ದಿವಂಗತ ರಾಜನ ವಿಗ್ರಹದ ದರ್ಶನ ಪಡೆಯಲು ಬರಲಿದ್ದಾರೆ. ಅದಕಾಗಿ ಅವನು ದೇವಕುಲದ ಗರ್ಭಗುಡಿ ಯಲ್ಲಿಯ ಪಾರಿವಾಳಗಳ ಗೂಡುಗಳನ್ನು-ಮಲವನ್ನು ತೆಗೆದು ನಿರ್ಮಳಗೊಳಿಸಿದ್ದಾನೆ: ಗೋಡೆಗಳಿಗೆ ಸುಣ್ಣ ಬಳಿದು ಅವುಗಳ ಮೇಲೆ ಕೆಂಪು ಬಣ್ಣದಲ್ಲಿ ಅಂಗೈ ಮುದ್ರೆಗಳನ್ನು ಒತ್ತಿದ್ದಾನೆ; ಬಾಗಿಲುಗಳಿಗೆ ತೋರಣ ಕಟ್ಟಿ ಅಲಂಕರಿಸಿದ್ದಾನೆ; ಗುಡಿಯ ಮುಂದೆ ಮಳಲು ಚೆಲ್ಲಿದ್ದಾನೆ. ಆಗ ಭಟನು ಅವನಿಗೆ ನಿಶ್ಚಿಂತನಾಗಿ ಹೋಗಲು ಅನುಮತಿ ನೀಡುತ್ತಾನೆ.

ಆ ಮೇಲೆ 'ಪ್ರವೇಶಕ'[೨೨] ಮುಖವಾಗಿ ಕವಿಯು ಸೂತ-ಭರತರ ಸಂವಾದ ರೂಪದಲ್ಲಿ ಕಥೆಯ ಪ್ರಸಂಗವನ್ನು ಸೂಚ್ಯವಾಗಿ ನಿರ್ದೇಶಿಸುತ್ತಾನೆ. ಸೋದರ ಮಾವನ ಮನೆಯಿಂದ ಸೂತನು ಭರತನನ್ನು ಕರೆತರುತ್ತಾನೆ; ವ್ಯಾಕುಲಗೊಂಡ ಭರತನಿಗೆ ತಂದೆಯ ಮರಣದ ಸುದ್ದಿಯನ್ನು ತಿಳಿಸದೆ ಅನಾರೋಗ್ಯವೆಂದು ಮಾತ್ರ ಹೇಳುತ್ತಾನೆ. ಸ್ವಜನರನ್ನು ಕಾಣಲು ಭರತನ ಮನಸ್ಸು ಹಾತೊರೆಯುತ್ತದೆ. ಅವನು ದೂರದಿಂದಲೇ ಮರಗಳ ಗುಂಪಿನಲ್ಲಿ ಅಯೋಧ್ಯೆಯನ್ನು ಕಂಡು ಹರ್ಷಿಸುತ್ತಾನೆ. ಹತ್ತಿರಕ್ಕೆ ಬಂದಂತೆ ಅವನ ಔತ್ಸುಕ್ಯ ಹೆಚ್ಚುತ್ತದೆ. ತಾನು ಶಿರಬಾಗಿ ನಮಸ್ಕರಿಸಿದಾಗ ತಂದೆಯು ಎತ್ತಿ ಹಿಡಿದು ನೇವರಿಸಿದಂತೆ, ತಾಯಂದಿರು ಅಪ್ಪಿ ಕಣ್ಣೀರು ಸುರಿಸಿದಂತೆ, ಸೇವಕರು ಆದರಿಸಿ ಮಾತನಾಡಿಸಿದಂತೆ, ಲಕ್ಷ್ಮಣನು ಕೇಕಯ ನಾಡಿನ ತನ್ನ ನಡೆ-ನುಡಿ- ಉಡುಪು ಗಳನ್ನು ಕಂಡು ಪರಿಹಾಸಮಾಡಿದಂತೆಯೂ ಮನದಲ್ಲಿಯೇ ಮಂಡಿಗೆ ತಿನ್ನುತ್ತಾ, ಪುರ ಪ್ರವೇಶ ಮಾಡಲು ತವಕಪಡುತ್ತಿರುತ್ತಾನೆ. ಆದರೆ ಅತಿಯಾಸೆ ಗತಿಗೆಡಿಸುತ್ತದೆ. ತಂದೆಯ ಮರಣವಾರ್ತೆಯನ್ನು ತಿಳಿಯದೆ ಅಯೋಧ್ಯೆಯಲ್ಲಿ ಪ್ರವೇಶಿಸುತ್ತಿರುವ ಭರತನನ್ನು ಕಂಡು ಸೂತನು ಮರುಕಗೊಳ್ಳುತ್ತಾನೆ. ವಿಷಯ ತನಗೆ ತಿಳಿದಿದ್ದರೂ

---

೨೧. ಸೌಧವರ್ಣಕದತ್ತ ಚಂದನಪಂಚಾಂಗುಲಾ ಭಿತ್ತಯಃ। ಅವಸಕ್ತ ಮಾಲ್ಯದಾಮ ಶೋಭೀನಿ ದ್ವಾರಾಣಿ। ಪ್ರಕೀರ್ಣಾ ವಾಲುಕಾಃ।

ಪ್ರ. ನಾ. (ಅಂಕ-೩)

೨೨. ಎರಡು ಅಂಕಗಳ ಮಧ್ಯೆ ನಡೆದ ಹಾಗು ನಡೆಯಲಿರುವ ಕಥೆಯನ್ನು ಸೂಚ್ಯವಾಗಿ ಹೇಳುವ ಅರ್ಥೋಪಕ್ಷೇಪಗಳ ಒಂದು ಭೇದ. ಇಲ್ಲಿ ನೀಚಪಾತ್ರದ ಯೋಜನೆಯಿರುತ್ತದೆ.

ದ. ರೂ. (ಪ್ರಕಾಶ ೧, ಪು. ೭೧, ೧೧೮ : ೬೦)

ಹೇಳುವಂತಿಲ್ಲ. ತಂದೆಯ ಸಾವು, ತಾಯಿಯ ಐಶ್ವರ್ಯದಾಸೆ, ಅಣ್ಣನ ವನವಾಸ! ಇವನ್ನು ಭರತನಿಗೆ ತಿಳಿಸುವುದಾದರೂ ಹೇಗೆ?[೨೩]

ಭರತನು ತಂದೆಯನ್ನು ಕಾಣುವ ಆತುರದಲ್ಲಿ ಪುರದ ಕೋಟೆಯ ಬಳಿ ಸಾರಿದ್ದಾನೆ. ಅಷ್ಟರಲ್ಲಿ ಭಟನೊಬ್ಬನು ಬಂದು ಪುರಪ್ರವೇಶ ಮಾಡಲು ಒಳ್ಳೆಯ ಗಳಿಗೆಯಿಲ್ಲ; ಕೆಲ ಹೊತ್ತು ವಿಶ್ರಮಿಸಿ ಶುಭಗಳಿಗೆಯಲ್ಲಿ ಪುರದೊಳಗೆ ಬರಬೇಕೆಂಬ ಗುರುಗಳ ಆದೇಶ ತಿಳಿಸುತ್ತಾನೆ. ಅದಕಾಗಿ ಭರತನು ತೋಪಿನಲ್ಲಿರುವ ದೇವಕುಲದಲ್ಲಿ ಕೆಲಕಾಲ ವಿಶ್ರಮಿಸಬಯಸುತ್ತಾನೆ. ಆದರಿಂದ ದೈವತಪೂಜೆ ಮತ್ತು ವಿಶ್ರಾಂತಿ ಎರಡೂ ಸಾಧಿಸಿದಂತಾಗುತ್ತದೆ. ಕ್ಷಣಕಾಲ ವಿಶ್ರಮಿಸಿ ಪುರಪ್ರವೇಶ ಮಾಡಬೇಕೆಂಬ ಲೋಕ ನಡಾವಳಿ ಬೇರೆ.[೨೪] ಆದುದರಿಂದ ಭರತನು ರಥವನ್ನು ನಿಲ್ಲಿಸಿ ದೇವಕುಲದತ್ತ ಬರುತ್ತಾನೆ; ಅಲ್ಲಿ ಪೂಜೆಯ ಅರಳು ಹೂಗಳು ಚೆಲ್ಲವರಿದಿರುವದನ್ನು ಕಂಡು ‘ ಹಬ್ಬ ವೇನಾದರೂ ಇರಬಹುದೇ? ಇದು ಯಾವ ದೇವರ ಗುಡಿಯಾಗಿರಬಹುದು? ’ ಎಂದುಶಂಕಿಸಿ ಸುತ್ತಲೂ ಕಣ್ಣು ಹಾಯಿಸುತ್ತಾನೆ. ಎಲ್ಲಿಯೂ ದೇವತೆಯ ಕುರುಹಿನ ಆಯುಧ, ವಾಹನ, ಧ್ವಜ, ಯಾವುದೂ ಕಂಡುಬರುವದಿಲ್ಲ. ಗುಡಿಯೊಳಗೆ ಹೋಗಿ ಅಲ್ಲಿ ಶಿಲಾವಿಗ್ರಹಗಳಿರುವದನ್ನು ಕಾಣುತ್ತಾನೆ. ಅವುಗಳ ಶಿಲ್ಪಸೌಂದರ್ಯವೇನು? ಮಾಟದ ಸೊಬಗೇನು? ದೇವತೆಗಳ ಮೂರ್ತಿಗಳು ಮಾನವಾಕೃತಿಯಂತೆ ಕಾಣುವು ದೇಕೆ? ಅವು ಚತುರ್ಮೂರ್ತಿಗಳಾಗಿರಬಹುದೇ? ಅವು ಯಾವಾದರೂ ಆಗಲಿ, ಅದ ರಿಂದ ತನಗೇನಾಗಬೇಕಾಗಿದೆ? ಅವನ್ನು ಕಂಡು ತನ್ನ ಮನಸ್ಸು ಪ್ರಫುಲ್ಲಿತವಾಗಿದೆ. ದೇವತಾವಿಗ್ರಹಗಳನ್ನು ಕಂಡ ಮೇಲೆ ಅವುಗಳಿಗೆ ಶಿರಬಾಗಿ ನಮಸ್ಕರಿಸಬೇಕು. ಅದು ಸದಾಚಾರ. ಆದರೆ ದೇವತೆಯ ಮಂತ್ರ ತಿಳಿಯದೆ ಅರ್ಚಿಸಿದರೆ ಶೂದ್ರಾಚರಣೆ[೨೫] ಯಾದೀತೆಂದು ಭರತನು ದುಮ್ಮಾನಗೊಳ್ಳುತ್ತಾನೆ. ಗರ್ಭಗುಡಿಯೊಳಗೆ ಹೋಗಿ ಕೈಮುಗಿಯುವಷ್ಟರಲ್ಲಿ ದೇವಕುಲಿಕನು ಬಂದು ತಡೆಯುತ್ತಾನೆ. ಆಗಂತುಕನು ಬ್ರಾಹ್ಮಣ ನಾಗಿದ್ದರೆ ಕ್ಷತ್ರಿಯರ ಪ್ರತಿಮೆಗಳಿಗೆ ನಮಸ್ಕರಿಸುವದು ಬೇಡವೆಂದು ಅವನು ಹೇಳ-ಬೇಕಾಗಿದೆ. ಅವು ಕ್ಷತ್ರಿಯ ರಾಜರ ವಿಗ್ರಹಗಳೆಂದು ತಿಳಿದಾಗ ಭರತನ ಕೌತೂಹಲ ಇಮ್ಮಡಿಯಾಗುತ್ತದೆ. ಕ್ರಮವಾಗಿ ದಿಲೀಪ, ರಘು, ಅಜ ರಾಜರ ಪ್ರಶಸ್ತಿಗಳನ್ನು ಕೇಳಿದ ಮೇಲೆ ಭರತನ ಮನಸ್ಸಿನಲ್ಲಿ ನಾಲ್ಕನೆಯ ವಿಗ್ರಹದ ಬಗೆಗೆ ಅನುಮಾನ ಸುಳಿ ಯುತ್ತದೆ. ‘ ಜೀವಿಸಿದ್ದವರ ಮೂರ್ತಿಗಳನ್ನು ದೇವಕುಲದಲ್ಲಿ ಸ್ಥಾಪಿಸುವರೇ? ’

---

೨೩. ಪಿತುಃ ಪ್ರಾಣಪರಿತ್ಯಾಗಂ ಮಾತುರೈಶ್ವರ್ಯಲುಬ್ಧತಾಂ ।
ಜ್ಯೇಷ್ಠಭ್ರಾತುಃ ಪ್ರವಾಸಂ ಚ ತ್ರೀನ್ ದೋಷಾನ್ ಕೋಽಭಿಧಾಸ್ಯತಿ ॥ ೪ ॥
ಭಾ. ನಾ. ಚ. (ಪ್ರ. ನಾ., ಅಂಕ ೩)

೨೪. ಅಥಚ ಉಪವಿಶ್ಯ ಪ್ರವೇಷ್ಟವ್ಯಾನಿ ನಗರಾಣೀತಿ ಸತ್ಸಮುದಾಚಾರಃ।

೨೫. ಕಾಮಂ ದೈವತಮಿತ್ಯೇವ ಯುಕ್ತಂ ನಮಯಿತುಂ ಶಿರಃ।
ವಾರ್ಷಲಸ್ತು ಪ್ರಣಾಮಃ ಸ್ಯಾದಮಂತ್ರಾರ್ಚಿತ ದೈವತಃ ॥ ೫ ॥
(ಅದೇ.)

ಎಂದು ಕೇಳುವಲ್ಲಿ ಆತನ ಕಳವಳ ವ್ಯಕ್ತವಾಗುತ್ತದೆ. ನಾಲ್ಕನೆಯ ವಿಗ್ರಹದ ಪರಿಚಯ ಕೇಳಲು ಅವನು ಮನಸ್ಸು ಮಾಡುತ್ತಿಲ್ಲ. "ತನ್ನ ತಂದೆ ದಿವಂಗತನಾಗಿರಬಹುದೇ?" ಎಂದು ಶಂಕಿಸಲೂ ಸಿದ್ಧನಿಲ್ಲ. ಕೊನೆಗೆ ದೇವಕುಲಿಕನಿಂದ ವಸ್ತುಸ್ಥಿತಿಯನ್ನು ತಿಳಿದು ಮೂರ್ಛಿತನಾಗಿ ಬೀಳುತ್ತಾನೆ; ತನ್ನ ಧನಪಿಶಾಚಿ ತಾಯಿಯು ಮಾಡಿದ ಘಾತುಕತನವನ್ನು ನೆನೆದು ಪರಿತಪಿಸುತ್ತಾನೆ.

ವಾಲ್ಮೀಕಿ ರಾಮಾಯಣದ ಅಯೋಧ್ಯಾಕಾಂಡದಲ್ಲಿ ಭರತನ ಈ ಪ್ರಸಂಗ ಮನೋಜ್ಞವಾಗಿದೆ. ಇಲ್ಲಿ ಭಾಸನು ವಾಲ್ಮೀಕಿಯನ್ನು ಸುಮ್ಮನೆ ಅನುಕರಿಸದೆ ಅವನಿಗೂ ಮಿಗಿಲಾಗಿ ಅನೇಕ ಕರುಣಾರ್ದ್ರ ಸನ್ನಿವೇಶಗಳನ್ನು ಸೃಷ್ಟಿಸಿ ತನ್ನ ದೃಶ್ಯಕಾವ್ಯದ ರಸಾತ್ಮಕತೆಯನ್ನು ಅಕ್ಷಯವಾಗಿರಿಸಿದ್ದಾನೆ. ರಾಮಾಯಣದಲ್ಲಿ ಭರತನು ಮಾತುಲಗೃಹದಿಂದ ಶಂಕಿತನಾಗಿಯೇ ಹೊರಡುತ್ತಾನೆ. ತಾನು, ತಂದೆ ಇಲ್ಲವೆ ಯಾರಾದರೂ ಪ್ರಿಯಜನ ಸಾಯಲೇಬೇಕೆಂಬ ಭವಿಷ್ಯದ ಸೂಚನೆಯನ್ನು ಅವನು ದುಃಸ್ವಪ್ನದಿಂದ ಕಂಡುಕೊಂಡಿರುತ್ತಾನೆ.[೨೬] ಅವನ ಮನದ ದುಗುಡ ದೀರ್ಘ ಪ್ರವಾಸದಲ್ಲಿ[೨೭] ಆಗಲೇ ಎಷ್ಟೊ ಕಡಿಮೆಯಾಗಿರುತ್ತದೆ. ಆದರೆ ಭಾಸಕವಿಯ ಭರತ ದಾರಿಯುದ್ದಕ್ಕೂ ತಂದೆಯ ಅನಾರೋಗ್ಯದ ಬಗೆಗೆ ಸಾರಥಿಯನ್ನು ವಿಚಾರಿಸುತ್ತಿರುತ್ತಾನೆ. ಆದರೆ ಸಾವಿನ ವಿಚಾರ ಅವನ ಕನಸು-ಮನಸ್ಸಿನಲ್ಲಿಯೂ ಸುಳಿಯುವಂತಿಲ್ಲ. 'ದಶರಥ ಪ್ರತಿಮಾ' ದರ್ಶನದಿಂದ ಅವನಿಗೆ ಒಮ್ಮೆಲೆ ಸಿಡಿಲು ಬಡಿದಂತಾಗುತ್ತದೆ. ಅವನಿಗೆ ತಂದೆಯ ಸಾವಿಗಿಂತಲೂ ಮಿಗಿಲಾದ ದುಃಖವೆನಿಸುವದು ತಾಯಿಯ ಕಠೋರತೆಯನ್ನು ನೆನೆದು. ಅದಕ್ಕೂ ಮಿಗಿಲಾದ ವ್ಯಥೆಯೆನಿಸುವದು ಅಣ್ಣನ ವನವಾಸದ ವಾರ್ತೆ ಕೇಳಿ. ಭರತನ ಶೋಕದ ಉದ್ರೇಕದಲ್ಲಿ ಕರುಣೆಯೇ ಉಮ್ಮಳಿಸಿ ಉಕ್ಕಿ ಬಂದಂತಿದೆ. ಅದು ಶೋಕರಸದ ಮಹಾಪೂರ. ಭಾಸನ ಪ್ರತಿಮಾನಾಟಕ ಕರುಣರಸಪ್ಲಾವಿತ. ಅದರ "ಕಥಾಭಾಗವು ರಾಮಾಯಣದ್ದೇ ಆದರೂ ಅದರ ವಸ್ತುಕಲ್ಪನೆ, ಸಂವಿಧಾನ ರಚನೆ, ಪಾತ್ರ ಪ್ರದರ್ಶನ ರಸಪರಿಪೋಷಣೆಗಳೆಲ್ಲವೂ ಬೇರೆಯಾಗಿವೆ."[೨೮]

ಭಾಸ ಮತ್ತು ಭವಭೂತಿ :

ಇವರಿಬ್ಬರೂ ಶೋಕವನ್ನೇ ಶ್ಲೋಕವನ್ನಾಗಿಸಿದ ವಾಲ್ಮೀಕಿಯ ಪರಂಪರೆಯ, ಕರುಣರಸಪಾಕಿ ಕವಿಗಳು. ಇಬ್ಬರೂ ಕರುಣರಸದ ಪರಿಪಾಕಕ್ಕೆ ಹೊಸ ಪ್ರಸಂಗ

---

೨೬. ಏವಮೇತನ್ಮಯಾ ದೃಷ್ಟಮಿಮಾಂ ರಾತ್ರಿ ಭಯಾವಹಾಂ ।
ಅಹಂ ರಾಮೋಽಥವಾ ರಾಜಾ ಲಕ್ಷ್ಮಣೋ ವಾ ಮರಿಷ್ಯತಿ ॥

ವಾ. ರಾ. (ಅ. ಕಾಂ., ಸ. ೬೯, ಶ್ಲೋ. ೧೭)

೨೭. ಇಲ್ಲಿ ಕೇಕಯ ದೇಶದಿಂದ ಮಗಧ ಜನಪದದ ವರೆಗಿನ ಸುದೀರ್ಘ ಮಾರ್ಗದಲ್ಲಿ ಬರುವ ನದಿ, ಪರ್ವತ, ನಗರಗಳ ವರ್ಣನೆ ಪ್ರಾಚೀನ ಭಾರತದ ಭೌಗೋಲಿಕ ಸಂಶೋಧನೆಗೊಂದು ಆಹ್ವಾನ.

೨೮. ಭಾ. ಕ. (ಪ್ರತಿಮಾ ನಾಟಕ, ಪು. ೧೧೦)

ಗಳನ್ನು ಸೃಷ್ಟಿಸುವಲ್ಲಿ ನಿಪುಣರು. ಭವಭೂತಿಯು 'ಉತ್ತರರಾಮಚರಿತ ' ನಾಟಕಕ್ಕೆ ರಾಮಾಯಣವೇ ಉಪಜೀವ್ಯಕಾವ್ಯ.[೩೯] ಆದರೆ ಅಲ್ಲಿ ಚಿತ್ರದರ್ಶನದ ಪ್ರಸಂಗವಿಲ್ಲ. ಉತ್ತರರಾಮಚರಿತೆಯ ಸಂದರ್ಭದಲ್ಲಿ ಪೂರ್ವಚರಿತೆಯ ಪ್ರಸಂಗಗಳನ್ನು ಸೂಚ್ಯವಾಗಿ ನಿರೂಪಿಸುವ ಭವಭೂತಿಯ ಚಿತ್ರಪ್ರದರ್ಶನದ ನವೀನ ಸೃಷ್ಟಿ ಅವನ ಕಥನಕೌಶಲದ ದ್ಯೋತಕ. ಇಲ್ಲಿ ಕವಿಯ ಪ್ರಾತಿಭಚಕ್ಷು–ನವೋನ್ಮೇಷದ ಸೌಂದರ್ಯದೃಷ್ಟಿ ವಿಕಸಿತ ವಾಗಿದೆ. ಇಲ್ಲಿಯ ರಸಾತ್ಮಕತೆಗೆ-ಕಾವ್ಯಸೌಂದರ್ಯಕ್ಕೆ ಕವಿಯ ಸಾಮಾಜಿಕ ವಸ್ತು ಸತ್ಯದ ಪ್ರಜ್ಞೆ, ಕಾರಣ. ಅಂತಹ ಸಾಮಯಿಕ ಪ್ರಜ್ಞೆಯ ಪ್ರತಿಫಲವಾಗಿಯೇ ನೀರವ ಪ್ರತಿಮಾಗೃಹ ಭಾಸನ ದೃಶ್ಯಕಾವ್ಯದಲ್ಲಿ ಜೀವಾಳ ತುಂಬಿ ಬಂದಿದೆ. ಸಾಹಿತ್ಯ ಸಮಾಜದ ಪ್ರತಿಬಿಂಬವೆನ್ನುವುದಕ್ಕೆ ಇದೊಂದು ಉತ್ತಮ ನಿದರ್ಶನ. ಭರತನ ಮನೋ ವ್ಯಗ್ರತೆಯನ್ನು ಚಿತ್ರಿಸಲು ಆದಿಕವಿಯು ಮಾತುಲಗೃಹದಲ್ಲಿ ಸ್ವಪ್ನದರ್ಶನ ಕಲ್ಪಿಸಿದರೆ, ಭಾಸನು ದೇವಕುಲದಲ್ಲಿ ಶಿಲಾಪ್ರತಿಮೆಗಳ ದರ್ಶನವನ್ನು ರಸಾತ್ಮಕವಾಗಿ ರೂಪಿ ಸಿದ್ದಾನೆ.

ಪ್ರತಿಮಾಗೃಹಗಳ ಪರಂಪರೆ :

ಭಾಸನ ನಾಟಕದಲ್ಲಿಯ ಈ ಪ್ರತಿಮಾಗ್ರಹ ಪ್ರಸಂಗ ಭಾರತದ ಪ್ರಾಚೀನ ದೇವಕುಲಗಳ ಪರಂಪರೆಯ ಸಂಕೇತವಾಗಿದೆ. ಅಂದಿನ ದೇವಕುಲಗಳು ಗ್ರಾಮ ಇಲ್ಲವೆ ಪಟ್ಟಣಗಳ ಹೊರಗೆ ನಿರ್ಮಿತವಾಗಿ ಉನ್ನತ ಶಿಖರಗಳಿಂದ ಶೋಭಿಸುತ್ತಿ ದ್ದವು.[೪೦] ಅವುಗಳಲ್ಲಿ ಮೃತರಾದ ಅಭಿಷಿಕ್ತ ಕ್ಷತ್ರಿಯ ರಾಜರ ಶಿಲಾವಿಗ್ರಹಗಳ ಪ್ರತಿಷ್ಠೆ ಕಾಲಕ್ರಮವಾಗಿ ನಡೆಯುತ್ತಿತ್ತು. ಅವುಗಳಿಗೆ ಪ್ರತಿನಿತ್ಯ ಪೂಜೆ ಸಲ್ಲುತ್ತಿರಲಿಲ್ಲ. ಬ್ರಾಹ್ಮಣರು ಅವುಗಳಿಗೆ ನಮಸ್ಕರಿಸುತ್ತಿರಲಿಲ್ಲ. ದಿವಂಗತ ರಾಜನ ನವೀನ ಪ್ರತಿ-ಮೆಯ ದರ್ಶನ ಪಡೆಯಲು ಅಂತಃಪುರದ ರಾಣಿಯರು ಸಪರಿವಾರ ಬರುವುದು ವಾಡಿಕೆ ಯಾಗಿದ್ದಿತು. ಆಗಲೇ ಅವು ಸುಣ್ಣ-ಬಣ್ಣದ ಅಲಂಕಾರ[೪೧] ಕಾಣುವುದು. ಉಳಿದ

---

೩೯. 'ಉತ್ತರರಾಮ ಚರಿತ' ನಾಟಕ ಭಾಸನ 'ಪ್ರತಿಮಾ' ನಾಟಕಕ್ಕೆ ತಂತ್ರ ದೃಷ್ಟಿಯಿಂದ ತೀರ ಸಮೀಪದ ರಚನೆ. ಆದರೆ ಪ್ರಥಮಾಂಕದ ಆಲೇಖ್ಯ ದರ್ಶನದಲ್ಲಿ 'ಪ್ರತಿಮಾ' ನಾಟಕದ ಪ್ರಭಾವ ಸ್ಪಷ್ಟವಾಗಿದೆಯೆಂದು ಕೆಲವು ವಿಮರ್ಶಕರ ಅಭಿಮತ.

—ಮ. (ನಾಟಕಾಂಕ : ಡಾ. ಕೀರ್ತಿನಾಥ ಕುರ್ತಕೋಟಿ– ನಾಟಕ ಮತ್ತು ವಂಶಪ್ರಜ್ಞೆ' ಪು. ೧೭)

೪೦. ' ಸಮುಚ್ಛ್ರಯೋ ಯಸ್ಯ ಸ ಹರ್ಮ್ಯ ದುರ್ಲಭಃ'– ಪ್ರ. ನಾ. (ಅಂಕ–೩)

೪೧. ಸುಣ್ಣ ಬಳಿದ ಗೋಡೆಗಳ ಮೇಲೆ ಪಾಚಾಂಗುಲ ಮುದ್ರೆ ವಿಶಿಷ್ಟವಾದ ಅಲಂಕಾರ. ಈಗಲೂ ಹಳ್ಳಿಗಳಲ್ಲಿ ಮನೆಗಳಿಗೆ ಹಬ್ಬ ಉತ್ಸವಗಳಲ್ಲಿ ಸುಣ್ಣ ತುಂಬಿದ ಗೋಡೆಗಳಲ್ಲಿ ಸುತ್ತಲೂ ಕೆಮ್ಮ-ಣ್ಣಿನ ಅಂಗೈ ಮುದ್ರೆಗಳನ್ನು ಒತ್ತುವುದು ಮಂಗಲಸೂಚಕವಾಗಿದೆ ಇದು ವೀರಪೂಜೆಯ ಕುರುಹು. ಹಿಂದಿನ ಕಾಲದಲ್ಲಿ ಕಾದಿ ಮಡಿದ ವೀರನ ಮಡದಿ ಪತಿಯೊಡನೆ ಸಹಗಮನ

[ಮುಂದಿನ ಪುಟಕ್ಕೆ]

ದಿನಗಳಲ್ಲಿ ಸುತ್ತಲೂ ಪೌಳಿಯಿದ್ದ ಚಿದಾರಣ್ಯದಲ್ಲಿಯ ದೇವಕುಲಗಳು ಪಾಂಥರ ಹಾಗು ಆಗಂತುಕರ[೩೨] ಸ್ವಚ್ಛಂದ ವಿಶ್ರಾಮತಾಣವಾಗಿರುತ್ತಿದ್ದವು. ಬೌದ್ಧ ರಾಜರ ಶಾಸನಕಾಲದಲ್ಲಿ ಚೈತ್ಯ ಮತ್ತು ಸ್ತೂಪಗಳ ಮಾದರಿಯಲ್ಲಿ ಈ ಸ್ಮಾರಕಗಳು ನಿರ್ಮಾಣ ಗೊಳ್ಳುತ್ತಿದ್ದವು. ಜೈನರ ಬಸದಿಗಳೂ ಅದೇ ಪರಂಪರೆಯ ಅವಶೇಷಗಳು.

ದೇವಕುಲ ಕ್ಷತ್ರಿಯರ ಸ್ಮಾರಕ

'ದೇವ' ಎಂದರೆ ಹೊಳೆಯುವ, ಪ್ರಕಾಶಿಸುವ ಎಂದರ್ಥ. 'ರಾಜ'ಪದವೂ ಅದೇ ಅರ್ಥ ಕೊಡುತ್ತದೆ. ಕಾಲಕ್ರಮೇಣ ದೇವ ಶಬ್ದಕ್ಕೆ 'ಪೂಜ್ಯ' ಎಂಬರ್ಥ ರೂಢ ವಾಯಿತು. ಮಾತೆ, ಪಿತ, ಆಚಾರ್ಯರನ್ನು ದೇವರೆಂದು ಆದರಿಸಿ ಪೂಜಿಸುವ ಸದಾಚಾರ ಉಪನಿಷತ್ಕಾಲದಲ್ಲಿ[೩೩] ಪ್ರಚುರವಾಗಿದ್ದಿತು. ಆದರೆ ಬರಬರುತ್ತ ಆಚಾರ್ಯನ ಬ್ರಹ್ಮತೇಜ ಐಶ್ವರ್ಯ ಅಧಿಕಾರಗಳ ಕ್ಷಾತ್ರ ವರ್ಚಸ್ಸಿನ ಮುಂದೆ ಕಳೆ ಗುಂದಿತು. ಭಾರತೀಯ ಸಮಾಜದಲ್ಲಿ ವರ್ಣಾಶ್ರಮಧರ್ಮ ಬೇರೂರಿದಂತೆಲ್ಲ ಕ್ಷತ್ರಿಯನು ಪ್ರಬಲನಾಗುತ್ತ ಬಂದ. ಕ್ರಿ. ಪೂ. ೫ನೆಯ ಶತಮಾನದಿಂದ ಕ್ರಿ. ಶ. ೧ನೆಯ ಶತಮಾನದವರೆಗಿನದು ಸಂಕ್ರಾಂತಿಯ ಕಾಲ. ಆಗ ವಿಶೇಷವಾಗಿ ಆರ್ಯಾವರ್ತದಲ್ಲಿ ವೈದಿಕ ಮತ್ತು ನಾಸ್ತಿಕ ಧರ್ಮಗಳಲ್ಲಿ ಪರಸ್ಪರ ಸಂಘರ್ಷ ನಡೆದ ಕ್ರಾಂತಿಯುಗ. ಬೌದ್ಧಾವತಾರವು ಮನ್ವಂತರಗಳ ವೈದಿಕಾಚಾರದ ವರ್ಣಾಶ್ರಮಧರ್ಮದ ಬೇರನ್ನೇ ಸಡಿಲಿಸಿತ್ತು. ಬ್ರಾಹ್ಮಣ ಧರ್ಮದ ಪ್ರತಿಷ್ಠೆ ಕುಂದಿತ್ತು.

ಮೇಲಿಂದ ಮೇಲೆ ಉತ್ತರ ಭಾರತದಲ್ಲಿ ವಿದೇಶೀಯರ ಆಕ್ರಮಣಗಳು ನಡೆಯು ತ್ತಿದ್ದವು. ರಾಷ್ಟ್ರದ ಪ್ರಜೆಗಳನ್ನು ವಿನಾಶದಿಂದ ರಕ್ಷಿಸುವ ವರ್ಗ ಲೋಕಮಾನ್ಯ ವಾಯಿತು.[೩೪] ಹೀಗೆ ಭಾರತೀಯ ಸಮಾಜದಲ್ಲಿ ಕ್ಷತ್ರಿಯರ ಸ್ಥಾನಮಾನ ಹೆಚ್ಚಿದವು.

[ಹಿಂದಿನ ಪುಟದಿಂದ]

ಹೊಂದಲು ಅಲಂಕೃತಳಾಗಿ ಸ್ಮಶಾನಕ್ಕೆ ಹೋಗುವ ಮೊದಲು ಕೋಟೆಯ ಬಾಗಿಲುಗಳ ಮೇಲೆ ತನ್ನ ಅಂಗೈಯ ಅಚ್ಚೊತ್ತಿ ಹೋಗುತ್ತಿದ್ದಳು. ಆ ಮೇಲೆ ಆ ಮುದ್ರೆಯನ್ನು ಅನುಕರಿಸಿ ಮಹಾ ಸತಿಯ ಶಿಲಾವಿಗ್ರಹವನ್ನು ಕೆತ್ತಲಾಗುತ್ತಿತ್ತು. ಅಂತೆಯೆ ಮಾಸತಿಗಲ್ಲುಗಳಲ್ಲಿ ಹಸ್ತ ಸಂಕೇತವಿರುವುದು. ಕರ್ನಾಟಕದಲ್ಲಿ ಹೊಸಪೇಟೆಯ ನಂದಾರಾವ ತೋಪು. ಮಲಂದೂರ (ತಾ. ಸಾಗರ) ಮಾಸ್ತಿಹಕ್ಕಲು, ಕಕ್ಕೇರಿ ಹತ್ತಿರ ಅಂಕನಹಳ್ಳಿಯಲ್ಲಿಯೂ ಇಂತಹ ಮಾಸ್ತಿ ಕಲ್ಲುಗಳನ್ನು ವಿಫುಲವಾಗಿ ಕಾಣಬಹುದಾಗಿದೆ. ರಾಜಸ್ತಾನದಲ್ಲಿಯೂ ಇಂತಹ ಸ್ಮಾರಕಗಳು ಬಹಳವಾಗಿವೆಯೆಂದು ಪಂ. ಚಂದ್ರಧರ ಶರ್ಮಾ ಗುಲೇರಿ ಅವರು ಬರೆಯುತ್ತಾರೆ.

ಗು. ಗ್ರಂ. (ಪಹಲಾ ಖಂಡ, ಪಹಲಾ ಭಾಗ, ಪು ೧೧೭–೧೧೮)

೩೨. ಅಯಂತ್ರಿತೈರಪ್ರತಿಹಾರಕಾಗತೈರ್ವಿನಾ ಪ್ರಣಾಮಂ ಪಥಿಕೈರು ಪಾಸ್ಯತೆ।
(ನಾ. ಪ್ರ. ಅಂಕ–೩)

೩೩. ತೈತ್ತರೀಯ (ಶಿಕ್ಷಾಧ್ಯಾಯ, ಪ್ರಥಮವಲ್ಲಿ, ಅನುವಾಕ ೧೧)

೩೪. ಕ್ಷತಾತ್ ಕಿಲ ತ್ರಾಯತ ಇತ್ಯುದಗ್ರಃ ಕ್ಷತ್ರಸ್ಯ ಶಬ್ದೋ ಭುವನೇಷು ರೂಢಃ ॥
ರ. ವ. (ದ್ವಿ. ಸ. ೫೩)

ಮನುವು ರಾಜನನ್ನು ಪ್ರತ್ಯಕ್ಷ ದೇವತೆಯೆಂದು ಸ್ಮರಿಸಿದನು. ಲೋಕದಲ್ಲಿ ಅರಾಜಕತೆಯುಂಟಾಗಿ ಸಕಲ ಜೀವಿಗಳು ಭಯಭೀತರಾಗಲು ಅವರ ರಕ್ಷಣೆಗಾಗಿ ಜಗದೀಶನು ಎಂಟು ದೇವತೆಗಳ ಅಂಶಗಳಿಂದ ರಾಜನನ್ನು ಸೃಷ್ಟಿಸಿದನಂತೆ.[೨೫] ಆದುದರಿಂದ ಅವನು ಶಕ್ತಿಯಲ್ಲಿ ಎಲ್ಲರಿಗೂ ಮಿಗಿಲಾದವನು.[೨೬] ಅವನನ್ನು ಸಾಮಾನ್ಯ ಮಾನವನಂತೆ ತಿಳಿಯಬಾರದಂತೆ. ಬಾಲಕನಾದರೂ ರಾಜನು ದೇವತೆಯಂತೆ ಸನ್ಮಾನ್ಯನೇ. ದೇವತೆಗಳೇ ಅವನ ರೂಪದಲ್ಲಿ ಅವತರಿಸಿರುತ್ತಾರೆಯಂತೆ.[೨೭] ಪಟ್ಟಾಭಿಷಿಕ್ತನಾದ ರಾಜನಿಗೆ ಸಮಾಜದಲ್ಲಿ ಸರ್ವೋಚ್ಚ ಗೌರವವಿದ್ದಿತು. ಅವನು ರಾಷ್ಟ್ರದ ಐಕ್ಯತೆ ಮತ್ತು ಭದ್ರತೆಯ ಕುರುಹಾಗಿದ್ದನು. ಅವನು ಧರ್ಮಪ್ರತಿಪಾಲಕನು. ರಾಜನು ತನ್ನ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಲೆಂದು ಈಶ್ವರನು ದಂಡವನ್ನು ಸೃಜಿಸಿದನು.[೨೮] ಅದರ ಬಲದಿಂದ ರಾಜನು ತನ್ನ ಕರ್ತವ್ಯವನ್ನು ನಿರ್ವಹಿಸಲು ಶಕ್ತನಾದನು.

ವರ್ಣಧರ್ಮ, ಆಶ್ರಮಧರ್ಮ, ಸತ್ಯ–ಅಹಿಂಸೆ–ಶೌಚ–ಅನಸೂಯ-ಅನೃಶಂಸ್ಯ (ದಯಾರ್ದ್ರಭಾವ) –ಕ್ಷಮೆ ಎಂಬ ಸಾಮಾನ್ಯ ಧರ್ಮ ಈ ಮೂರರ ಸಮಷ್ಟಿಗೆ ಚಾಣಕ್ಯ ವಿಷ್ಣುಗುಪ್ತನು 'ಸ್ವಧರ್ಮ'ವೆಂದು[೨೯] ಸಂಕೇತಿಸಿದನು. ಅದರ ಆಚರಣೆ

---

೨೫. ಅರಾಜಕೇ ಹಿ ಲೋಕೇಽಸ್ಮಿನ್ ಸರ್ವತೋ ವಿದ್ರುತೇ ಭಯಾತ್ ।
ರಕ್ಷಾರ್ಥಮಸ್ಯ ಸರ್ವಸ್ಯ ರಾಜಾನಮಸೃಜತ್ ಪ್ರಭುಃ ॥ ೩ ॥
… … … … …
ಸೋಽಗ್ನಿರ್ಭವತಿ ವಾಯುಶ್ಚ ಸೋಽರ್ಕಃ ಸೋಮಃ ಸ ಧರ್ಮರಾಟ್ ।
ಸ ಕುಬೇರಃ ಸ ವರುಣಃ ಸ ಮಹೇಂದ್ರಃ ಪ್ರಭಾವತಃ ॥ ೭ ॥
ಮ. ಸ್ಮೃ. (ಅಧ್ಯಾಯ ೭)

೨೬. ಯಸ್ಮಾದೇಷಾಂ ಸುರೇಂದ್ರಾಣಾಂ ಮಾತ್ರಾಭ್ಯೋ ನಿರ್ಮಿತೋ ನೃಪಃ।
ತಸ್ಮಾದಭಿಭವತ್ಯೇಷ ಸರ್ವಭೂತಾನಿ ತೇಜಸಾ ॥
ಮ. ಸ್ಮೃ. (ಅ. ೭, ಶ್ಲೋ. ೫)

೨೭. ಬಾಲೋಽಪಿ ನಾವಮಂತವ್ಯೋ ಮನುಷ್ಯ ಇತಿ ಭೂಪತಿಃ ।
ಮಹತೀ ದೇವತಾ ಹ್ಯೇಷಾ ನರರೂಪೇಣ ತಿಷ್ಠತಿ ॥
ಅದೇ, (ಅ. ೭, ಶ್ಲೋ. ೮)

೨೮. ತಸ್ಯಾರ್ಥೇ ಸರ್ವಭೂತಾನಾಂ ಗೋಪ್ತಾರಂ ಧರ್ಮಮಾತ್ಮಜಂ ।
ಧರ್ಮತೇಜೋಮಯಂ ದಂಡಮಸೃಜತ್ ಪೂರ್ವಮೀಶ್ವರಃ ॥
ಅದೇ, (ಅ. ೭, ಶ್ಲೋ. ೧೪)

೨೯. ಸರ್ವೇಷಾಂ ಅಹಿಂಸಾ ಸತ್ಯಂ ಶೌಚಮನಸೂಯಾನೃಶಂಸ್ಯಂ ಕ್ಷಮಾ ಚ
ಸ್ವಧರ್ಮಃ ಸ್ವರ್ಗಾಯ ಆನಂತ್ಯಾಯ ಚ । ತಸ್ಯಾತಿಕ್ರಮೇ ಲೋಕಃ
ಸಂಕರಾದುಚ್ಛಿದ್ಯೇತ । —ಕೌ.ಅ.ಶಾ. (ಅಧಿಕರಣ–೧, ಪ್ರಕರಣ–೧, ಅಧ್ಯಾಯ–೩)
'ಭಗವದ್ಗೀತೆ'ಯಲ್ಲಿಯ 'ಸ್ವಧರ್ಮ'ವು ಈ ವ್ಯಾಪಕ ಅರ್ಥವನ್ನೇ ಸೂಚಿಸುತ್ತದೆ.
—ಭ. ಗೀ. (ಅ. ೨, ಶ್ಲೋ. ೩೧–೩೩ ಮತ್ತು ಅ. ೩, ಶ್ಲೋ. ೩೫)

ಯಿಲ್ಲದೆ ಪ್ರಜೆಗಳು ವಿನಾಶಕ್ಕೆ ಗುರಿಯಾಗುತ್ತಾರೆ. ಆದುದರಿಂದ ಪ್ರಜೆಗಳು ಸ್ವಧರ್ಮದಲ್ಲಿ ತಪ್ಪದೇ ನಡೆಯುವಂತೆ ನೋಡಿಕೊಳ್ಳುವುದು ರಾಜನ ಕರ್ತವ್ಯ. ಆದರಂತೆ ಶಾಸನವನ್ನು ಯೋಜಿಸುವ ರಾಜನು ಇಹಪರಗಳಲ್ಲಿ ಸುಖ ಪಡೆಯುವನು.[೪೦]

ಕ್ಷತ್ರಿಯರು ತಮ್ಮನ್ನು ದೇವತೆಗಳ ಅವತಾರವೆಂದು ಭಾವಿಸಿ ಲೋಕಮನ್ನಣೆ ಪಡೆಯಲು ತಮ್ಮ ಪ್ರತಿಮೆಗಳ ಸ್ಥಾಪನೆಯ ಪರಿಪಾಠ ಹಾಕಿದರು. ಅವರ ಸ್ವಾಭಿಮಾನ ಒಂದೊಂದು ಸಲ ದುರಹಂಕಾರವಾಗಿ ಎಲ್ಲೆ ಮೀರುತ್ತಿದ್ದಿತು.[೪೧] ಜನರು ಅವರಿಗೆ ದಂಡಭಯದಿಂದ ವಿನೀತರಾಗಿರುತ್ತಿದ್ದರಷ್ಟೇ. ಮನುವು ಅದನ್ನೂ ಸ್ಪಷ್ಟವಾಗಿಯೇ ಹೇಳಿದ್ದಾನೆ.[೪೨] ರಾಜನ ಕೋಪಕ್ಕೆ ಗುರಿಯಾಗಿ ಜನ ಸರ್ವನಾಶಕ್ಕೆ ಎರವಾಗುತ್ತಿತ್ತು. ಜನಕನಂತಹ ರಾಜರ್ಷಿಗಳು ಕ್ಷತ್ರಿಯ ಕುಲಕ್ಕೆ ಅಪವಾದವಾಗಿದ್ದರು. ರಾಷ್ಟ್ರದ ರಕ್ಷಣೆ, ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ತ್ಯಾಗ ಮಾಡಿದ ರಾಜರನ್ನೂ ಪ್ರಜೆಗಳು ಎಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತ ಬಂದಿದ್ದಾರೆ. ಅಂತಹ ಜನಮಾನ್ಯ ನಾಯಕರ ಪ್ರತಿಮೆಗಳೂ ಪೂಜ್ಯವಾಗಿದ್ದವು. ವೀರಪೂಜೆ ಮಾನವನ ಸಹಜ ಸಾಮಾಜಿಕ ಪ್ರಜ್ಞೆಯ ಪ್ರತೀಕ.

ರಾಜ ಪ್ರತಿಮಾ ಪ್ರತಿಷ್ಠೆಯ ಪದ್ಧತಿಯು ಬುದ್ಧ–ಮಹಾವೀರರ ಯುಗದಿಂದ (ಕ್ರಿ. ಪೂ. ೫೦೦) ಗುಪ್ತಕಾಲದ ವರೆಗೂ (ಕ್ರಿ. ಪೂ. ೫೦೦) ನಡೆದುಬಂದಿರುವುದನ್ನು ಐತಿಹಾಸಿಕವಾಗಿ ಅವಲೋಕಿಸಬಹುದು. ಪಿತೃಪೂಜೆ ಆರ್ಯ ಸಂಸ್ಕೃತಿಯ ಬಹು ಪ್ರಾಚೀನ ಕಾಲದಿಂದ ಸಾಮಾಜಿಕ ಆಚರಣೆಯಾಗಿ ಉಳಿದು ಬಂದಿದೆ. ವೈದಿಕ ಕಾಲದ 'ಶತಪಥ ಬ್ರಾಹ್ಮಣ'[೪೩] ದಲ್ಲಿ ಶವದ ಅಗ್ನಿಸಂಸ್ಕಾರವಾದ ಮೇಲೆ ಮೂರನೆಯ ದಿನ ಅಸ್ಥಿ–ಭಸ್ಮಗಳ ಚಯನಮಾಡಿ ಅವುಗಳನ್ನು ಸವರ್ಣದೊಂದಿಗೆ ಸ್ತೂಪದಲ್ಲಿ ರಕ್ಷಿಸಿಡಬೇಕೆಂಬ

---

೪೦. ಸತ್ಮಾತ್ ಸ್ವಧರ್ಮಂ ಭೂತಾನಾಂ ರಾಜಾ ನ ವ್ಯಭಿಚಾರಯೇತ್ ।
ಸ್ವಧರ್ಮಂ ಸಂದಧಾನೋ ಹಿ ಪ್ರೇತ್ಯ ಚೇಹ ಚ ನಂದತಿ ॥
ಕೌ. ಅ. ಶಾ. (ಅಧಿ. ೧, ಪ್ರ. ೧, ಅ. ೩)

೪೧. ಪರಶುರಾಮನು ೨೧ ಸಲ ಕ್ಷತ್ರಿಯರ ಸಂಹಾರ ಮಾಡಿದ ಕತೆ ಬರಿಯ ಪೌರಾಣಿಕವಾಗಿರದೆ ಐತಿಹಾಸಿಕವಾಗಿದೆ.

೪೨. ಏಕಮೇವ ದಹತ್ಯಗ್ನಿರ್ನರಂ ದುರುಪಸರ್ಪಿಣಂ ।
ಕುಲಂ ದಹತಿ ರಾಜಾಗ್ನಿಃ ಸಪಶುದ್ರವ್ಯಸಂಚಯಂ ॥ ೯ ॥
ತಂ ಯಸ್ತು ದ್ವೇಷ್ಟಿ ಸಮ್ಮೋಹಾತ್ಸ ವಿನಶ್ಯತ್ಯಸಂಶಯಂ ।
ತಸ್ಯ ಹ್ಯಾಶು ವಿನಾಶಾಯ ರಾಜಾ ಪ್ರಕುರುತೇ ಮನಃ ॥ ೧೦ ॥
ಮ. ಸ್ಮೃ. (ಅ. ೭)

೪೩. S. Br. (ಕಾಂಡ ೨, ಅಧ್ಯಾಯ ೬, ಬ್ರಾಹ್ಮಣ ೧, ಪು. ೪೨೦–೪೨೧) ಇಲ್ಲಿ ದೇವತೆಗಳು ವೃತ್ರಾಸುರನೊಡನೆ ಕಾದಿ ಮಡಿದ ವೀರರನ್ನು ಪಿತೃಗಳೆಂದು ಭಾವಿಸಿ ಅವರ ಆತ್ಮಗಳನ್ನು ಅಗ್ನಿಚಯನ ರೂಪದಲ್ಲಿ ಆಹ್ವಾನಿಸಿದ 'ಪಿತೃಯಜ್ಞ'ದ ವರ್ಣನೆಯಿದೆ. ಇದು ಮೊದಲ ವೀರಪೂಜೆ.

ವಿಧಾನವಿದೆ. ಅದನ್ನು ಮುಂದೆ ಬೌದ್ಧರು ಮತ್ತು ಜೈನರು[೪೪] ಧಾರ್ಮಿಕವಾಗಿ ಸ್ವೀಕರಿಸಿದರು. ಭಗವಂತ ಬುದ್ಧನ ಅವಶೇಷಗಳ ಸ್ಮಾರಕಗಳು ಭಾರತದ ಮೂಲೆ ಮೂಲೆಯಲ್ಲಿ ಚೈತ್ಯ ಮತ್ತು ಸ್ತೂಪಗಳ ರೂಪದಲ್ಲಿ ನಿರ್ಮಿತವಾದವು.

ಮಹೆಂಜೊದಾರೊ ಮತ್ತು ಹರಪ್ಪಗಳಲ್ಲಿಯ ಸೈಂಧವ ಸಂಸ್ಕೃತಿಯಲ್ಲಿ ಸಮಾಧಿಗಳ ರಚನೆ ವಿಶಿಷ್ಟವಾಗಿದ್ದಿತು. ಆ ಕಾಲದ ವಾಸ್ತುಶಿಲ್ಪ ಇಟ್ಟಿಗೆಯದು. ಅದರಿಂದ ಮೊಟ್ಟಮೊದಲು ಪ್ರೇರಣೆ ಪಡೆದವರು ಬುದ್ಧನ ಅನುಯಾಯಿಗಳು. ಬುದ್ಧನಿಗಿಂತಲೂ ಸಾವಿರ ವರ್ಷ ಮುಂಚೆ ಈ ವಾಸ್ತುಶಿಲ್ಪ ಜನಮಾನ್ಯವಾಗಿ ವಿಕಾಸಗೊಂಡಿದ್ದಿತು. ನಮ್ಮ ನಾಡಿನ ಹೆಸರಾಂತ ವಾಸ್ತು-ಶಿಲ್ಪ ಶಾಸ್ತ್ರಜ್ಞರಾದ ಡಾ. ಶಿವರಾಮ ಕಾರಂತ ಅವರ ಅಭಿಮತವಿಲ್ಲಿ ಮನನೀಯ—"ಉಪಯೋಗದ ಜತೆಗೆ, ಚೆಲುವಿನ ದೃಷ್ಟಿಯನ್ನು ಸೇರಿಸಿಕೊಂಡು, ದೀರ್ಘ ಕಾಲ ತಾಳಬಲ್ಲ ವಾಸ್ತು ರಚನೆಗಳು ನಮ್ಮ ದೇಶದಲ್ಲಿ ಕಾಣಿಸಲು, ಮಹೆಂಜೊದಾರೋ ಪತನವಾದ ಬಳಿಕ ಒಂದು ಸಾವಿರ ವರ್ಷಗಳ ಕಾಲವಾದರೂ ಸಂದಿರಬೇಕು. ಇಂಥ ಪ್ರೇರಣೆ ಮತ್ತು ಸಾಹಸಗಳಿಗೆ ಕಾರಣವಾದದ್ದು ಜನಸಮುದಾಯಕ್ಕೆ ಮತಧರ್ಮಗಳಿಂದ ದೊರಕಿದ ಪ್ರೇರಣೆ. ಈಗ ಉಳಿದುಕೊಂಡಿರುವ ಅವಶೇಷಗಳ ಮೇಲಿಂದ ಹೇಳುವುದಾದರೆ—ಬೌದ್ಧ ಜನಸಮುದಾಯ ಈ ಪ್ರೇರಣೆಯನ್ನು ಮೊದಲ ಬಾರಿಗೆ ಕಾರ್ಯರೂಪಕ್ಕೆ ತಂದಿತು. ಅದರ ಚಟುವಟಿಕೆ ವಾಸ್ತು ನಿರ್ಮಾಣದಲ್ಲಿ ಎರಡು ಮುಖವಾಗಿ ಹರಿಯಿತು. ಬೆಟ್ಟಗಳ ಮಗ್ಗುಲುಗಳಲ್ಲಿ ಗುಹೆಗಳನ್ನು ಕೊರೆಯುವ ಬಗೆ ಒಂದು; ಅವು ಪ್ರಾರ್ಥನಾಕೂಟ ಜರುಗಿಸಲು, ಭಿಕ್ಕುಗಳಿಗೆ ನಿವಾಸ ಕಲ್ಪಿಸಲು. ಇನ್ನೊಂದು ಬಗೆ – ಬುದ್ಧನ ಮತ್ತು ಅವನ ಪ್ರಸಿದ್ಧ ಸಹಚರರ ದೇಹದ ಅವಶೇಷಗಳನ್ನು ಇರಿಸಲು ಮಾಡಿದ ಸಮಾಧಿಗಳು. ಇವು ಕೊರೆದ ರಚನೆಗಳಲ್ಲ. ಅಂಥವುಗಳಲ್ಲಿ ತೀರ ಮೊದಲಿನ ಮಾದರಿಗಳು ಸಾರನಾಥದಲ್ಲಿ ಕಾಣುವಂತೆ, ಇಟ್ಟಿಗೆಯ ನಿರ್ಮಾಣಗಳು. ಅನಂತರದವು ಸಾಂಚಿ, ಬಿಲ್ಸಾ ಮೊದಲಾದಲ್ಲಿ ಕಾಣುವಂತೆ ಭವ್ಯ ಸ್ತೂಪ, ಪ್ರಾಕಾರ ಮತ್ತು ತೋರಣಗಳ ನಿರ್ಮಾಣಗಳು. ಬುದ್ಧ ಗತಿಸಿದ ಒಂದೆರಡು ಶತಮಾನಗಳಲ್ಲಿ ತೊಡಗಿರಬಹುದಾದ ಈ ಬಗೆಯ ಚಟುವಟಿಕೆ ಕ್ರಿಸ್ತ ಶಕ ಆರಂಭದ ತನಕವೂ ಮುಂದುವರಿಯಿತು."[೪೫]

---

೪೪. ಬುದ್ಧ ಮಹಾವೀರರು ವ್ರಾತ್ಯ ಕ್ಷತ್ರಿಯರು. ಅವರ ವಂಶ ಲಿಚ್ಛವಿ. ಸವರ್ಣಸ್ತ್ರೀಯಲ್ಲಿ ಜನಿಸಿದ ದ್ವಿಜ ಸಂತಾನ ಉಪನಯನ ಸಂಸ್ಕಾರ ಹೀನವಾದರೆ ಅವರಿಗೆ 'ವ್ರಾತ್ಯ'ರೆಂಬ ಅಭಿಧಾನ. ಕ್ಷತ್ರಿಯ ವ್ರಾತ್ಯನು ಸವರ್ಣಸ್ತ್ರೀಯಿಂದ ಪಡೆದ ಸಂತತಿಯವರೇ ಲಿಚ್ಛವಿ (ನಿಚ್ಛವಿ)ಗಳು. 'ಲಿಚ್ಛವಿ' ವ್ರಾತ್ಯ ಕ್ಷತ್ರಿಯ ವಂಶಗಳ ಒಂದು ಒಳಪಂಗಡ. ಝಲ್ಲ, ಮಲ್ಲ, ನಟ, ಕರಣ, ಖಸ, ದ್ರವಿಡ ಇವರೆಲ್ಲ ವ್ರಾತ್ಯ ಕ್ಷತ್ರಿಯ ವಂಶಜರು.

ಮ. ಸ್ಮೃ: (ಅಧ್ಯಾಯ ೧೦, ಶ್ಲೋ. ೨೦–೨೨)

೪೫. ಚಾ. ವಾ. ಶಿ. (೨: ಕೊರೆದ ಗುಹೆಗಳು, ಪು. ೭)

ಚೈತ್ಯಗಳಲ್ಲಿ ಅಶ್ವತ್ಥವೃಕ್ಷ, ಕಮಲ, ಪಾದಚಿಹ್ನಗಳ ರೂಪದಲ್ಲಿ ಮೊದಲಾದ ಭಗವಂತ ಬುದ್ಧನ ಸ್ಮಾರಕಪೂಜೆ ನಂತರದ ಅನೇಕ ಭವ್ಯ ಶಿಲಾಪ್ರತಿಮೆಗಳಲ್ಲಿ ಪರ್ಯವಸಾನಗೊಂಡಿತು. ದೇವಕುಲದ ಸಾಂಸ್ಕೃತಿಕ ಹಿನ್ನೆಲೆ ಬೌದ್ಧರ ಚೈತ್ಯಾಲಯ ಮತ್ತು ಬಸದಿಗಳ ವಾಸ್ತು ನಿರ್ಮಾಣದಲ್ಲಿ ಅಡಕವಾಗಿದೆ.

ಗುಪ್ತರ ಕಾಲದ ಮಗದ ರಾಜಧಾನಿ ಪಾಟಲಿಪುತ್ರದಲ್ಲಿ ಅನೇಕ ದೇವಕುಲಗಳು ಶೋಭಿಸಿದ್ದವು. ಸುಬಂಧು ಕವಿಯು (ಕ್ರಿ.ಶ. ೬೦೦-೭೦೦)[೪೬] 'ವಾಸವದತ್ತ ಚರಿತಂ' ಎಂಬ ಗದ್ಯಕಾವ್ಯದಲ್ಲಿ ಪಾಟಲಿಪುತ್ರ ನಗರವು ೩೩ ಕೋಟಿ ದೇವತೆಗಳ ತಾಯಿ ಅದಿತಿಯ ಹೊಟ್ಟೆಯಂತೆ ಅನೇಕ ದೇವಕುಲಗಳಿಂದ ತುಂಬಿದೆ[೪೭] ಎಂದು ಅಲಂಕಾರಿಕವಾಗಿ ವರ್ಣಿಸಿರುವನು:

ನವನಂದರಿಗಿಂತ ಮೊದಲು ಮಗಧ ದೇಶವನ್ನು ಶಿಶುನಾಗ ವಂಶಜ ರಾಜರು ಆಳುತ್ತಿದ್ದರು. ಬೌದ್ಧ ಪಾಳಿಗ್ರಂಥಗಳನ್ವಯ ಶಿಶುನಾಗ ಸಂತತಿಯ ಐದು ಜನ ರಾಜರು ಪಾಟಲಿಪುತ್ರದ ಸಿಂಹಾಸನವೇರಿದರು. ಅವರಲ್ಲಿ ಅಜ ಉದಯಿನ್ ಎಂಬವನು ಅಯೋಧ್ಯೆಯ ರಘುಕುಲದ ಮಹಾರಾಜ ಅಜನಂತೆ ಪ್ರತಾಪಶಾಲಿಯಾಗಿದ್ದನು. ಕ್ರಿ. ಶ. ನಾಲ್ಕನೆಯ ಶತಮಾನದ ಮಧ್ಯದಲ್ಲಿ ನವನಂದ ವಂಶದ ಮೂಲ ಪುರುಷ ಮಹಾಪದ್ಮನು ಶಿಶುನಾಗ ರಾಜನನ್ನು ಸೋಲಿಸಿ ಪಟ್ಟವೇರಿದನು.[೪೮] ಆಗಲೇ ನಾಲ್ಕು ಜನ ಶಿಶುನಾಗ ಅರಸರ ಪ್ರತಿಮೆಗಳು ಪಾಟಲಿಪುತ್ರದ ದೇವಕುಲದಲ್ಲಿ ಪ್ರತಿಷ್ಠಾಪಿತವಾಗಿದ್ದವು.[೪೯] ನಂದ ಮತ್ತು ಶಿಶುನಾಗ ವಂಶಗಳ ಚಕ್ರವರ್ತಿಗಳೆಲ್ಲ ಕ್ಷತ್ರಿಯರಾಗಿದ್ದರು. ಆದರೆ ಮಹಾಪದ್ಮನು[೫೦] ವೃಷಲ (ಶೂದ್ರ) ನಾಗಿದ್ದನು. ವೃಷಲೀಪುತ್ರನೆಂದು ಕ್ಷತ್ರಿಯರು ಅವನನ್ನು ಅಣಕಿಸಿದ್ದರು. ಕಾರಣ ಅವನು ಕ್ಷತ್ರಿಯರ ವಂಶಗಳನ್ನು ಅವರ ಸ್ಮಾರಕಗಳನ್ನೂ ಉಧ್ವಸ್ತಗೊಳಿಸಿದನು.[೫೧]

---

೪೬. ಸಂ. ಕಾ. (ಅಧ್ಯಾಯ ೮, ಪು. ೩೭೯)

೪೭. ಅದಿತಿ ಜಠರಮಿವಾನೇಕದೇವಕುಲಾಧ್ಯಾಸಿತಂ ।

೪೮. HAI (Part II, chap. VI, P.108)

೪೯. ಅಜ ಉದಯಿ ಮತ್ತು ನಂದಿವರ್ಧನನ ಪ್ರತಿಮೆಗಳು ಲಂಡನದ ವಸ್ತು ಸಂಗ್ರಹಾಲಯವನ್ನು ಸೇರಿವೆ.
ಗು. ಗ್ರ. (ಪು. ೧೨೬)

೫೦. ಅವನಿಗೆ ಕಾಲಾಶೋಕ, ಕಾಕವರ್ಣ ಎಂಬ ನಾಮಾಂಕಿತಗಳು ಅನ್ವರ್ಥಕವಾಗಿದ್ದವು.

೫೧. ಅವನನ್ನು ಪುರಾಣೇತಿಹಾಸಗಳಲ್ಲಿ 'ಅಖಿಲ ಕ್ಷತ್ರಾಂತಕಾರಿ' ಎಂದು ಕರೆಯಲಾಗಿದೆ. "ಮಹಾನಂದಿಸ್ತುತಃ ಶೂದ್ರಗರ್ಭೋದ್ಭವೋऽತಿಲುಬ್ಧೋऽತಿಬಲೋ ಮಹಾಪದ್ಮೋ ನಂದ ನಾಮಾ ಪರಶುರಾಮ ಇವಾಪರೋऽಖಿಲಕ್ಷತ್ರಾಂತಕಾರೀ ಭವಿಷ್ಯತಿ। ಸಚೈಕಚ್ಛತ್ರಾಮನುಲ್ಲಂಘಿತಶಾಸನೋ ಮಹಾಪದ್ಮಃ ಪೃಥಿವೀಂ ಭೋಕ್ಷ್ಯತಿ। "

HAI (Part II, chap. VI, P. 110)

ವಾಲ್ಮೀಕಿ ರಾಮಾಯಣದಲ್ಲಿ[೫೨] ಭರತನ ಮುಖದಿಂದ ವರ್ಣಿತವಾಗಿರುವ ಅಯೋಧ್ಯೆ ವೈದಿಕ ಸಂಸ್ಕೃತಿಯ ಕೇಂದ್ರವಾಗಿದೆ:

ಅಯೋಧ್ಯಾ ದೃಶ್ಯತೇ ದೂರಾತ್ ಸಾರಥೇ ಪಾಂಡುಮೃತ್ತಿಕಾ ।
ಯಜ್ವಭಿರ್ಗುಣ ಸಂಪನ್ನೈರ್ಬ್ರಾಹ್ಮಣೈರ್ವೇದಪಾರಗೈಃ ॥[೫೩]

ಆದರೆ ಭಾಸನು (ಕ್ರಿ.ಪೂ. ೪೦೦)[೫೪] ಕಂಡ ನಗರಗಳು ಚೈತ್ಯಾಲಯ ಮತ್ತು ದೇವಕುಲಗಳಿಂದ ಶೋಭಿತವಾಗಿದ್ದವು. ಅವನು ಅಯೋಧ್ಯೆಯನ್ನಲ್ಲ ಪಾಟಲಿಪುತ್ರವನ್ನೇ ನೋಡಿದವನು. ರಾಜಗೃಹ ಮತ್ತು ಪಾಟಲಿಪುತ್ರದಲ್ಲಿದ್ದ ದೇವಕುಲಗಳನ್ನು ಅವನು ಕಣ್ಣಾರೆ ಕಂಡವನು. ಶಿಶುನಾಗ ವಂಶದ ನಾಲ್ವರು ರಾಜರ ಶಿಲಾವಿಗ್ರಹಗಳನ್ನು ಅವನು ಪ್ರತ್ಯಕ್ಷ ನೋಡಿರಬೇಕು. ಅವು ಕವಿಯ ಕಾಲದಲ್ಲಿ ಬಹಳ ದರ್ಶನೀಯವೆಂದು ಪ್ರಸಿದ್ಧಿ ಪಡೆದಿರಬೇಕು. ಅಂತೆಯೆ ಭಾಸನು ಅವನ್ನು "ಪ್ರತಿಮಾನಾಟಕ"ದಲ್ಲಿ "ಚತುರ್ದೈವ

---

೫೨. ನಿಷ್ಕ ಮತ್ತು ಸ್ವರ್ಣ ನಾಣ್ಯಗಳು ಬುದ್ಧನ ಕಾಲದಲ್ಲಿ (ಕ್ರಿ. ಪೂ. ೫೦೦) ಬಳಕೆಯಲ್ಲಿದ್ದವು. (H-AI, Part II, chap. VI, p. 108); ರಾಮಾಯಣದಲ್ಲಿ ಅವುಗಳ ಉಲ್ಲೇಖವಿದೆ. ಚೈತ್ಯಗಳ ಸಂದರ್ಭವೂ ಬರುತ್ತದೆ. ಕಾರಣ ವಾಲ್ಮೀಕಿ ರಾಮಾಯಣದ ರಚನೆ ಬೌದ್ಧಾವತಾರದ ನಂತರವಾಗಿರಬಹುದೇ ?

೫೩. ವಾ. ರಾ. (ಅ. ಕಾಂ., ಸ. ೭೧, ಶ್ಲೋ. ೨೦)

೫೪. ಕ್ರಿ. ಪೂ. ೫ನೆಯ ಶತಮಾನದಲ್ಲಿ ಅಜಾತಶತ್ರುವಿನ ಅನಂತರ ಮಗಧ ರಾಜ್ಯದ ಅಧಿಪತಿಯಾಗಿದ್ದ ದರ್ಶಕನ ಉಲ್ಲೇಖ 'ಸ್ವಪ್ನವಾಸವದತ್ತ' ನಾಟಕದಲ್ಲಿ ಬರುತ್ತದೆ. ಚಾಣಾಕ್ಷ ಮಂತ್ರಿವರ್ಯ ಯೌಗಂಧರಾಯಣನು ದರ್ಶಕರಾಜನ ತಂಗಿ ಪದ್ಮಾವತಿಯನ್ನು ವಿರಹಿ ಉದಯನನು ವರಿಸುವಂತೆ ಯೋಜಿಸಿರುತ್ತಾನೆ. ಆದುದರಿಂದ ಭಾಸನ ಕಾಲ ಕ್ರಿ. ಪೂ. ೪ನೆಯ ಶತಮಾನವೆಂದು ಗ್ರಹಿಸಬಹುದು. ಡಾ. ಗಣಪತಿ ಶಾಸ್ತ್ರಿಗಳು ಭಾಸನು ಅದಕ್ಕೂ ಪೂರ್ವದವನೆಂದು ಅಭಿಪ್ರಾಯಪಡುತ್ತಾರೆ. ಪ್ರೊ. ಭಿಡೆ ಅವರು ಭಾಸನ ಕಾಲ ಕ್ರಿ. ಪೂ. ೪೫೮, ಕ್ರಿ. ಪೂ. ೩೭೧ರ ಮಧ್ಯವೆನ್ನುತ್ತಾರೆ. ಭಾಸನು ಪ್ರತಿಜ್ಞಾಯೌಗಂಧರಾಯಣ ಮತ್ತು ಅವಿಮಾರಕ ನಾಟಕಗಳಲ್ಲಿ ದಿಗಂಬರ ಜೈನ ಶ್ರಮಣಕರನ್ನು ವರ್ಣಿಸಿರುವುದರಿಂದ ಅವನು ಶ್ವೇತಾಂಬರ ಜೈನ ಮತವು ಹುಟ್ಟುವುದಕ್ಕಿಂತ ಮೊದಲು ಇದ್ದವನೆಂದು ಭಾವಿಸುತ್ತಾರೆ. ಭಾಸನ ಮತವಾವುದೋ ತಿಳಿಯದು. ಆದರೆ ಸಂಸ್ಕೃತ ವಾಙ್ಮಯದಲ್ಲಿ ಕೆಲವೆಡೆ ಅವನನ್ನು 'ಭಾಸಮುನಿ' ಎಂದು ಸ್ಮರಿಸಿರುವುದು ಗಮನೀಯ. ಅವನು ಆಸ್ತಿಕ ಕವಿಯಂತೆ ಎಲ್ಲಿಯೂ ನಾಟಕಾರಂಭದಲ್ಲಿ ಇಷ್ಟದೇವತೆಯನ್ನು ಸ್ಮರಿಸದಿರುವುದೊಂದು ವಿಶೇಷ. ಪ್ರತಿಮಾ ನಾಟಕದಲ್ಲಿ ದೇವಕುಲಿಕನು ರಘುರಾಜನ ಪ್ರಶಸ್ತಿಯಲ್ಲಿ "ಪ್ರತಿನಿತ್ಯ ಮಲಗುವಾಗ ಮತ್ತು ಏಳುವಾಗ ಅನೇಕ ಸಾವಿರ ಬ್ರಾಹ್ಮಣರು ಸ್ವಸ್ತಿವಾಚನ ಮಾಡುತ್ತಿದ್ದರು" ಎಂದು ನಿರೂಪಿಸುವನು. ಆಗ ಭರತನು– "ಸಾವು ಬಹಳ ಬಲವಾದುದು. ಇಂತಹ ರಕ್ಷೋಪಾಯವನ್ನೂ ಅದು ಲೆಕ್ಕಿಸಲಿಲ್ಲವಲ್ಲ !" ಎಂದು ಹೇಳುವಲ್ಲಿ ವ್ಯಂಗ್ಯವಾಗಿ ಕವಿಯ ನಾಸ್ತಿಕತೆಯು ಸೂಚಿಯುತ್ತದೆ.

ತಸ್ತೋಮ"ವೆಂದು[೫೫] ಸ್ಮರಿಸಿರುವುದು- ಎಂದು ಪಂ.ಚಂದ್ರಧರ ಶರ್ಮಾ ಗುಲೇರಿ[೫೬] ಅವರು ತರ್ಕಿಸಿರುತ್ತಾರೆ.

ಚಂದ್ರಗುಪ್ತ ಮೌರ್ಯನ ಕಾಲದಲ್ಲಿಯೂ (ಕ್ರಿ. ಪೂ. ೩೦೦) ಚೈತ್ಯ ದೇವಕುಲಗಳ ನಿರ್ಮಾಣ ಪದ್ಧತಿಯು ವಾಸ್ತುರೂಪದಲ್ಲಿದ್ದಿತು. ಕೌಟಿಲ್ಯ ವಿಷ್ಣುಗುಪ್ತನು "ಅರ್ಥಶಾಸ್ತ್ರ"ದಲ್ಲಿ ಪುರದೊಳಗೆ ಮತ್ತು ಹೊರಗೆ ನಿರ್ಮಿಸಬೇಕಾದ ದೇವಮಂದಿರಗಳ ವಿವರಣೆ ಕೊಟ್ಟಿರುವನು. ಪುರದ ಮಧ್ಯದಲ್ಲಿ ದುರ್ಗೆ, ಷಣ್ಮುಖ, ಜಯಂತ ಮತ್ತು ಇಂದ್ರ ದೇವತೆಗಳ ಆಲಯಗಳನ್ನು ಹಾಗು ಪುರದ ಹೊರಗೆ ಶಿವ, ಕುಬೇರ, ಅಶ್ವಿನೀದೇವತೆಗಳು, ವಿಷ್ಣು ಸರಸ್ವತಿಯರ ಪೌಳಿಯಿರುವ ಗುಡಿಗಳನ್ನು ನಿರ್ಮಿಸಬೇಕೆಂದು ಮತ್ತು ಪುರದ ಕೋಟೆಯ ಕಂದಕಗಳಿಂದ ನೂರು ಬಿಲ್ಲಳತೆಯ ದೂರದಲ್ಲಿ ಚೈತ್ಯ, ಪುಣ್ಯಸ್ಥಾನ, ಉಪವನ, ಸೇತುವೆಗಳನ್ನು ಸ್ಥಾಪಿಸಬೇಕೆಂದು ವಿಧಿಸಿರುವನು.[೫೭] ಇವುಗಳ ಹತ್ತಿರ ಪೂರ್ವ ಇಲ್ಲವೆ ಉತ್ತರಕ್ಕೆ ಸ್ಮಶಾನ ನಿವೇಶನ. ಅಲ್ಲಿ ಕಾಪಾಲಿಕ ಮತ್ತು ಚಾಂಡಾಲರು ವಾಸವಾಗಿರಬೇಕೆಂಬ ಶಾಸನವಿದ್ದಿತು.

ದೇವಕುಲಗಳ ಶಿಲ್ಪದ ಪರಾಕಾಷ್ಠೆಯನ್ನು ಈಜಿಪ್ತದ ಬಹು ಪ್ರಾಚೀನ 'ಫೆರೊ' ರಾಜರ ಪಿರಮಿಡ್ಡುಗಳಲ್ಲಿ ಕಾಣುತ್ತೇವೆ. ಈಜಿಪ್ತದ ಈ ಅರಸರು ಮತ್ತು ಜನರು ಪ್ರಾಣಪಕ್ಷಿಯು ಹಾರಿಹೋದ ಮೇಲೆ ಅದು ಎಂದಾದರೂ ತಿರುಗಿ ತನ್ನ 'ಶಾಶ್ವತ

---

೫೫. ಅಹೋ ಕ್ರಿಯಾಮಾಧುರ್ಯಂ ಪಾಷಾಣಾನಾಂ ? ಅಹೋ ಭಾವಗತಿರಾಕೃತೀನಾಂ ? ದೈವತೋದ್ದಿಷ್ಟಾನಾಮಪಿ ಮಾನುಷವಿಶ್ವಾಸತಾ ಪ್ರತಿಮಾನಾಂ ? ಕಿಂ ನು ಖಲು ಚತುರ್ದೈವತೋಽಯಂ ಸ್ತೋಮಃ !

—ಪ್ರ. ನಾ. (ಅಂಕ ೩)

೫೬. ಗು. ಗ್ರಂ. (ಪು. ೧೨೫)

೫೭. ಅಪರಾಜಿತಾಽಪ್ರತಿಹತ–ಜಯಂತ–ವೈಜಯಂತ ಕೋಷ್ಠಕಾನ್ ಶಿವ-ವೈಶ್ರವಣ–ಅಶ್ವಿ–ಶ್ರೀಮದಿರಾಗೃಹಂ ಚ ಪುರಮಧ್ಯೇ ಕಾರಯೇತ್ । ಕೋಷ್ಠಕಾಲಯೇಷು ಯಥೋದ್ದೇಶಂ ವಾಸ್ತುದೇವತಾಃ ಸ್ಥಾಪಯೇತ್ । ....ಬಹಿಃ ಪರಿಖಾಯಾಃ ಧನುಶ್ಶತಾವಕೃಷ್ಟಾಃ ಚೈತ್ಯ-ಪುಣ್ಯಸ್ಥಾನ-ವನ-ಸೇತುಬಂಧಾಃ ಕಾರ್ಯಾಃ ।

ಕೌ. ಅ. ಶಾ. (ಅಧಿ. ೨. ಪ್ರ. ೨೨, ಅ. ೪, ಪು. ೬೩)

ಇಲ್ಲಿ 'ಶ್ರೀ ಮದಿರಾಗೃಹ' ಪದದ ಅರ್ಥವಿವೇಚನೆಯನ್ನು ಗಮನಿಸಬೇಕು. ಧಾರವಾಡದ ಸಮಾಜ ಪುಸ್ತಕಾಲಯದವರು ಪ್ರಕಟಿಸಿರುವ 'ಕೌಟಿಲ್ಯನ ಅರ್ಥಶಾಸ್ತ್ರ'ದಲ್ಲಿ (ಪು. ೮೬) ಅನುವಾದಕ ವಿದ್ವಾನ್ ಕೆ. ಕೃಷ್ಣಭಟ್ಟರು 'ಶ್ರೀ ಮದಿರಾಗೃಹ' ಪದಕ್ಕೆ ತಪ್ಪು ಅರ್ಥ ಕಲ್ಪಿಸಿರುವರು. ಶ್ರೀಮತ್ = ಲಕ್ಷ್ಮೀಪತಿ ವಿಷ್ಣು. ಇರಾ = ಸರಸ್ವತಿ ಎಂದು ಅರ್ಥ ಹೇಳದೆ 'ಮದಿರಾ ದೇವಾಲಯ'ವೆಂದು ಅನುವಾದಿಸಿರುವುದು ತೀರ ಅಪಾರ್ಥವೆನಿಸಿದೆ. ಏಕೆಂದರೆ. ಮದಿರಾಗೃಹಗಳು ಗ್ರಾಮ-ದುರ್ಗಗಳೊಳಗೆ ಇರಬೇಕೆಂದು ಕೌಟಿಲ್ಯನೇ ವಿಧಿಸಿರುವನು. (ಅಧಿ ೨. ಪ್ರ. ೪೨. ಅ. ೨೫). ಡಾ. ಟಿ. ಜಿ. ಸಿದ್ದಪ್ಪಾರಾಧ್ಯರು 'ಅರ್ಥಶಾಸ್ತ್ರ'ದಲ್ಲಿ (ಪು. ೫೦) ಕೇವಲ 'ಶ್ರೀದೇವಿಗೃಹ'ವೆಂದು ಅರ್ಥೈಸಿರುವರು.

ನಿವಾಸಕ್ಕೆ[೫೮] ಬಂದೇ ಬರುವದೆಂಬ ನಂಬುಗೆಯಿಂದ ಶವಗಳನ್ನು ರಾಸಾಯನಿಕ ವಸ್ತ್ರಾವರಣಗಳಿಂದ ಪುತ್ಥಳಿಗಳ ರೂಪದಲ್ಲಿ ರಕ್ಷಿಸುತ್ತಿದ್ದರು. ಅವುಗಳಿಗಾಗಿ ಬೃಹದ್ ವಾಸ್ತು-ಶಿಲ್ಪಮಯ ದೇವಕುಲಗಳನ್ನು ಅಜರಾಮರವಾಗಿರುವಂತೆ ನಿರ್ಮಿಸಿದರು. ಸು. ೪೦೦೦ ಸಾವಿರ ವರ್ಷಗಳ ಹಿಂದಿನ ಈಜಿಪ್ತದ ಈ ವಾಸ್ತು-ಶಿಲ್ಪ ಸೃಷ್ಟಿ ನಮ್ಮನ್ನು ಬೆರಗುಗೊಳಿಸುವಂತಹದು.[೫೯]

ಈಜಿಪ್ತದ ಫೆರೊ (Pharaoh) ಅರಸರನ್ನು ದೇವರೆಂದು ಭಾವಿಸಲಾಗುತ್ತಿತ್ತು. ಅವರೆಲ್ಲ ಸೂರ್ಯ ಕುಲದವರು, ಧನುರ್ಧಾರಿಗಳು, ಮಹಾರಥಿಗಳು. ಅವರು ಭೂವ್ಯೋಮಗಳ ಒಡೆಯನಾದ ಸೂರ್ಯದೇವನ[೬೦] ಆರಾಧಕರು. ಪವಿತ್ರವೆನಿಸಿದ ನೈಲ ನದಿಯ ತೀರದಲ್ಲಿ ಈ ಅರಸರು ವಿಶಾಲ ಗುಹಾಸಮಾಧಿಗಳನ್ನು ಕಟ್ಟಿಸಿದರು. ದಕ್ಷಿಣ ಈಜಿಪ್ತ ನುಬಿಯಾ (Nubia) ಪ್ರದೇಶದ ಅಬು ಸಿಂಬೆಲ್ (Abu Simbel) ಎಂಬಲ್ಲಿ ಬಹುಕೀರ್ತಿಶಾಲಿ ಎರಡನೆಯ ರೆಮಸಸ್‌ನ (Ramses) ವಿಗ್ರಹ ಬಹಳ ಭವ್ಯವಾಗಿದೆ. ಅವನ ಪ್ರತಿಮೆಯೊಂದಿಗೆ ಮೂವರು ಹಿಂದಿನ ರಾಜರ ವಿಗ್ರಹಗಳು ಬಹು ಆಕರ್ಷಕವಾಗಿವೆ. ಈಜಿಪ್ತದ ಜನರು ಫೆರೊ ಅರಸರನ್ನು ದೇವರೆಂದು ಭಾವಿಸಿ ಅವರ ಆತ್ಮಕ್ಕೆ ಶಾಂತಿ ಕೋರುವ ಆರಾಧನೆಯಲ್ಲಿ ವಿಶ್ವಾಸವಿಟ್ಟಿದ್ದರು.[೬೧] ಅವರ ಗುಹಾಂತಸ್ಸಮಾಧಿಗಳ ರಕ್ಷಕ ದೇವಕುಲಿಕರು. ಚರ್ಮಾಂಬರಧಾರಿ ಪುರೋಹಿತರು ಗುಹಾಸಮಾಧಿಯ ವಿಗ್ರಹಗಳಿಗೆ ಸಲ್ಲಿಸುವ ಪೂಜೆಯ ವಿಧಾನಗಳನ್ನು ಒಳಗೆ ಬರೆದ ಭಿತ್ತಿ ಚಿತ್ರ ಮತ್ತು ಹೊರಗೆ ಕೊರೆದ ಶಿಲಾಕೃತಿಗಳಲ್ಲಿ ಕಾಣಬಹುದಾಗಿದೆ. ರೆಮಸಸ್ ರಾಜನು ಮತ್ತು ಅವನ ರಾಣಿಯರು ಕರ್ನಾಕದಲ್ಲಿ ನಿರ್ಮಿಸಿದ ದೇವಾಲಯ ಮತ್ತು

---

೫೮. ವಾಸ್ತು, ಶಿಲ್ಪ ಚಿತ್ರ, ನೃತ್ಯ, ಸಂಗೀತ ಇಂಥ ಯಾವ ಕಲೆಯೇ ಇರಲಿ ಇವು ಜಗತ್ತಿನ ಸೊತ್ತುಗಳು. ಭಾರತ ಕನಸು ಕಾಣುವ ಮೊದಲೇ ವಾಸ್ತು, ಶಿಲ್ಪ, ಚಿತ್ರಗಳ ಕ್ಷೇತ್ರದಲ್ಲಿ ಈಜಿಪ್ತ, ಸುಮೇರಿಯ, ಇರಾನ, ಗ್ರೀಸ, ಕ್ರೀಟಗಳು ಕಂಡ ಕನಸುಗಳು, ಮಾಡಿದ ಸೃಷ್ಟಿಗಳು ನಮ್ಮನ್ನು ದಂಗು ಬಡಿದಾವು. ಚಾ. ವಾ. ಶಿ, (ಮೊದಲ ಮಾತು, ಪು. XII)

೫೯. ಅಮನ್ ರೇ (Amman Re)

೬೦. To Supply the necessitis for their life-time of millions, the kings designed tombs and martuary temples that would last for ever. The comon designation to tombs in fact meant "house eternity". AE [chap. I. p. 17]

೬೧. The people of Egypt willingly laboured to build these monuments for their dead rulers, believing that, as gods, the pharaohs had to be properly provided for and propitiated. AE (chap. I. p 17)

ಪ್ರತಿಮಾಗೃಹಗಳು[೬೨] ಫೆರೊ ಚಕ್ರವರ್ತಿಗಳ ಯುಗದ ಔನ್ನತ್ಯದ ಪರಾಕಾಷ್ಠೆಯ ಸಂಕೇತವೆನಿಸಿವೆ[೬೩] ಈಜಿಪ್ತದ ಗುಹಾಂತರ ರಾಜಗೃಹ ಮತ್ತು ಭಾರತದ ಗುಹಾಂತ-ರ್ದೇವಾಲಯಗಳ ಶಿಲ್ಪದಲ್ಲಿ ಸಾಮ್ಯವಿರುವಂತೆ ಕಾಣುತ್ತದೆ. ಶಿಲಾಪರ್ವತಗಳನ್ನು ಕೊರೆದು ಮಾಡಿದ ಈಜಿಪ್ತದ ಈ ದೇವಕುಲಗಳಲ್ಲಿ ನಾಗಚಿಹ್ನಾಂಕಿತ ಶಿರೋಭೂಷಣ ಧರಿಸಿದ ರಾಜ-ರಾಣಿಯರ ಪ್ರತಿಮೆಗಳು ದರ್ಶನೀಯವಾಗಿವೆ.[೬೪]

ನಾಸಿಕದ ಹತ್ತಿರ ನಾನಾಘಾಟದ ಗುಹೆಗಳಲ್ಲಿ ಶಾತವಾಹನ ರಾಜರ (ಕ್ರಿ.ಶ.೨೦೦) ವಿಗ್ರಹಗಳನ್ನು ಕೊರೆಯಲಾಗಿದೆ. ಅವು ಶಾತವಾಹನ ಅರಸರ ದೇವಕುಲಗಳಾಗಿದ್ದವು. ಮಥುರೆಯ ಹತ್ತಿರ ಕುಷಾಣರಾಜರ ಪ್ರತಿಮೆಗಳ ಅವಶೇಷಗಳು ಸಿಕ್ಕಿವೆ. ಅಲ್ಲಿಯೇ ಕನಿಷ್ಕನ ನಿಂತ ಭಂಗಿಯ ಭಗ್ನವಿಗ್ರಹ ದೊರಕಿರುವುದು.[೬೫]

ದಕ್ಷಿಣಾಪಥದಲ್ಲಿಯೂ ದೇವಕುಲಗಳ ಪರಂಪರೆ ಬೆಳೆದು ಬಂದಿತ್ತು. ಕೊಯ ಮತ್ತೂರು ಜಿಲ್ಲೆಯಲ್ಲಿರುವ 'ಪಾಂಡುಕುಲ' ಗಳು ದೇವಕುಲಗಳಂತಹ ರಾಜರ ಸ್ಮಾರಕ ಗಳೇ.[೬೬] ಕರ್ನಾಟಕದ ಚಾಲುಕ್ಯರಾಜರ ಕಾಲದಲ್ಲಿ (ಕ್ರಿ. ಶ. ೬೦೦) ಪ್ರತಿಮಾಗೃಹಗಳ ವಾಸ್ತುಪರಂಪರೆ ಖಿಲವಾಗಿದ್ದರೂ ಅಜಂತೆಯ ಗುಹೆಗಳಲ್ಲಿ ಭಿತ್ತಿಚಿತ್ರಗಳ ರೂಪದಲ್ಲಿ ಅದು ಉಳಿದಿತ್ತು. ಕರ್ನಾಟಕದ ದೇವಾಲಯಗಳಲ್ಲಿ ರಾಜರ, ಗುರುಗಳ ಮತ್ತು ದಾನಿಗಳ ಶಿಲಾಮೂರ್ತಿಗಳು ವಿಪುಲವಾಗಿ ದೊರೆಯುತ್ತವೆ. ಪಟ್ಟದಕಲ್ಲು, ಐಹೊಳೆ. ಮಹಾಕೂಟದ ದೇವಸ್ಥಾನಗಳಲ್ಲಿ ಮೂಲೆಗುಂಪಾಗಿರುವ ಇಂತಹ ಪ್ರತಿಮೆಗಳನ್ನು ಈಗಲೂ ನೋಡಬಹುದಾಗಿದೆ. ಕೂಡಲ ಸಂಗಮೇಶ್ವರ ಶಿವಾಲಯದ ಗರ್ಭಗುಡಿ ಯಲ್ಲಿದ್ದ ಕೈಮುಗಿದ ಮುದ್ರೆಯ ಜಟಾ ರುದ್ರಾಕ್ಷಧಾರಿ ಶೈವಾಚಾರ್ಯನ ಸಿದ್ಧಾಸನ

---

೬೨. ಇವುಗಳ ಕಲಾಸೌಂದರ್ಯದ ಕೀರ್ತಿ ಶಾಸನ ಕಾಲದ ಭಾರತದಲ್ಲಿ 'ಚತುರ್ದೈವತ್ರಸ್ತೋಮ' ವೆಂದು ಜನಜನಿತವಾಗಿದ್ದಿರಬಹುದೇ ? ಕ್ರಿ. ಪೂ. ೪ ನೆಯ ಶತಮಾನದಲ್ಲಿ ಗ್ರೀಕರು ಈಜಿಪ್ತ ವನ್ನು ಆಕ್ರಮಿಸಿದ್ದರು. ಆಗ ಅವರು ಭಾರತದಲ್ಲಿಯೂ ಕೆಲ ಕಾಲ ನೆಲೆಯಾಗಿದ್ದರು. ಅವರ ಮುಖಾಂತರ ಈಜಿಪ್ತದ ಶಿಲ್ಪಕಲೆಯ ವಾರ್ತೆ ಭಾರತದಲ್ಲಿ ಹರಡಿರಬೇಕು. ಈ ಸುಂದರ ಪ್ರತಿಮಾಗೃಹಗಳನ್ನು ಈಗ ಅಸ್ವಾನ ಅಣೆಕಟ್ಟಿನ ನಿರ್ಮಾಣ ಕಾಲದಲ್ಲಿ ಸ್ಥಳಾಂತರಿಸಿ ರಕ್ಷಿಸಲಾಗಿದೆ.

೬೩. The age of Ramses, with its great temples, its colossal statues, its glowing accounts of the leaders' exploits, marks the climax of the age of the pharoahs-

-AE (Chap- 3. Parthway To Power, p. 60)

೬೪. Ibid, p. 55;

೬೫. ಗು. ಗ್ರಂ. (ಪು. ೧೨೭);

೬೬. ಅದೇ. ೧೩೦.

ಬದ್ಧ ವಿಗ್ರಹ[೬೭] ಬಹು ಆಕರ್ಷಣೀಯವಾಗಿದೆ.

ದೇವಕುಲಗಳಲ್ಲಿ, ಕಾಲಗತಿಸಿದಂತೆ ರಾಜರ ಪ್ರತಿಮೆಗಳಿಗೆ ಪೂಜೆ ಸಲ್ಲದಿದ್ದುದರಿಂದ ಕುಲದೇವತೆಯ ಸಾನ್ನಿಧ್ಯದಲ್ಲಿ ಅವರ ವಿಗ್ರಹಗಳನ್ನು ಸ್ಥಾಪಿಸುವ ನವೀನ ವಿಧಾನ ಆಚರಣೆಯಲ್ಲಿ ಬಂದಿತು. ವಿಜಯನಗರದ ದೈವಭಕ್ತ ಚಕ್ರವರ್ತಿ ಕೃಷ್ಣದೇವರಾಯನು ಅವನ ರಾಣಿಯರ ಕಂಚಿನ ಪ್ರತಿಮೆಗಳು ಶ್ರೀ ತಿರುಪತಿ ದೇವಸ್ಥಾನದಲ್ಲಿ ಪ್ರತಿಷ್ಠಿತವಾಗಿರುವುದು ಇದಕ್ಕೆ ನಿದರ್ಶನ. ವಿಜಯನಗರದ ವಿಜಯ ವಿಠ್ಠಲನ ಗುಡಿಯ ಹತ್ತಿರ ಮಂಟಪ, ಗರ್ಭಗೃಹಗಳಲ್ಲಿ ಅರಸರ ಪ್ರತಿಮೆಗಳು ಸ್ಥಾಪಿತವಾಗಿದ್ದವೆನ್ನುವುದನ್ನು ಅಲ್ಲಿಯ ರಿಕ್ತಪೀಠಿಕೆಗಳ ಅವಶೇಷಗಳಿಂದ ಗುರುತಿಸಬಹುದು.[೬೮]

ಕಾಲಕ್ರಮೇಣ ಪ್ರತಿಮೆಗಳ ಪ್ರತಿಷ್ಠೆ ಆಳರಸರಿಗಷ್ಟೇ ಸೀಮಿತವಾಗಿರದೆ, ಅದು ವೀರರ, ಮಹಾಸತಿಯರ ಸ್ಮಾರಕವಾಗಿಯೂ ರೂಢಿಯಲ್ಲಿ ಬಂದಿತು. ಕರ್ನಾಟಕದಂತೆ ರಾಜಸ್ಥಾನದಲ್ಲಿಯೂ[೬೯] ಇಂತಹ ವೀರಸ್ಮಾರಕಗಳು ಬಹಳವಾಗಿವೆ.

ಭಾಸನ 'ದೇವಕುಲ' ಭಾಷೆಯ ವಿಕಾಸದಲ್ಲೂ ಒಂದು ಮೈಲುಗಲ್ಲು. ಪ್ರಾಕೃತದ ದೇಉಲ, ಕನ್ನಡದ ದೇಗುಲ ದೇವಕುಲದ ತದ್ಭವ–ಅಪಭ್ರಂಶ ರೂಪಗಳಾಗಿವೆ. ಭಾಷಾಶಾಸ್ತ್ರದ ದೃಷ್ಟಿಯಿಂದ 'ದೇವಕುಲ' ಪದದ ವ್ಯುತ್ಪತ್ತಿ ಮತ್ತು ಪ್ರಯೋಗ ರೋಚಕವೆನಿಸಿದೆ. ಅದರ ವಿವೇಚನೆಗೆ ಬೇರೊಂದು ಬರೆಹ ಮೀಸಲು.

ಸಂದರ್ಭ ಸಾಹಿತ್ಯ ಸೂಚಿ

ಕನ್ನಡ

ಚಾ.ವಾ.ಶಿ. ಚಾಲುಕ್ಯ ವಾಸ್ತು ಮತ್ತು ಶಿಲ್ಪ : ಡಾ. ಶಿವರಾಮ ಕಾರಂತ; ಪ್ರಕಾಶಕರು : ಮೈಸೂರು ರಾಜ್ಯದ ಲಲಿತಕಲಾ ಅಕಾಡಮಿ, ಬೆಂಗಳೂರು, ೧೯೬೯;

ದ. ರೂ. ದಶರೂಪಕ(ಧನಂಜಯ ವಿರಚಿತ): ಅನುವಾದಕ : ಕೆ.ವಿ. ಸುಬ್ಬಣ್ಣ; ಅಕ್ಷರ ಪ್ರಕಾಶನ; ಪ್ರಥಮ ಮುದ್ರಣ, ೧೯೫೮;

---

೬೭. ಇದು ಬಹುಶಃ ಬಸವಣ್ಣನವರ ಗುರು ಈಶಾನ್ಯ ದೇವರದಾಗಿರಬಹುದು. ಶ್ರೀ ಸಂಗಮೇಶ್ವರ ದೇವಸ್ಥಾನ ಟ್ರಸ್ಟಿಗಳು ಅದರ ಮಹತ್ವವನ್ನು ಗುರುತಿಸದೆ ಅದನ್ನು ದೇವಾಲಯದ ಮುಂದುಗಡೆ ಅನಾಸ್ಥೆಯಿಂದ ಇಟ್ಟಿರುವುದು ಶೋಚನೀಯ. ಅದು ಈಗ ಬಿಸಿಲು–ಮಳೆ–ಗಾಳಿಯಿಂದಾಗಿ ಛಿನ್ನವಾಗುತ್ತಿದೆ. ಈ ಪ್ರಾಚೀನ ವಿಗ್ರಹದ ಸ್ಥಾನದಲ್ಲಿ ಪೂಜಾಂಗಳು ನವೀನ ಗಣಪತಿ ಮೂರ್ತಿಯನ್ನು ಗರ್ಭಗುಡಿಯಲ್ಲಿ ಸ್ಥಾಪಿಸಿರುವುದು ಶ್ರೀ ಬಸವಣ್ಣನವರ ಪೀರಶೈವಾಚಾರಕ್ಕೆ ಅಪಚಾರವೆಸಗಿದಂತಾಗಿದೆ.

೬೮. ಕಲಾಕಾರ ಗೆಳೆಯ ಪ್ರಾ. ಬಿ. ಕೆ. ಹಿರೇಮಠ ಅವರು ಈ ದಿಶೆಯಲ್ಲಿ ನನ್ನ ಗಮನ ಸೆಳೆದುದಕ್ಕೆ ಅವರಿಗೆ ಕೃತಜ್ಞನಾಗಿರುವೆ.

೬೯. ಗು. ಗ್ರಂ. (ಪು. ೧೩೧)

ಭಾ. ಕ.	ಭಾಸಕವಿ (ಕವಿವಿಚಾರ ಮತ್ತು ಕಾವ್ಯ ವಿಮರ್ಶೆ); ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.; ಪ್ರಕಾಶಕರು : ಕನ್ನಡ ಕವಿ ಕಾವ್ಯ ಮಾಲೆ; ಕೃಷ್ಣಮೂರ್ತಿಪುರಂ, ಮೈಸೂರು, ಎರಡನೆಯ ಮುದ್ರಣ, ೧೯೫೦.
ಭಾ. ಮ. ಕ.	ಭಾಸ ಮಹಾ ಕವಿ : ಸಿ. ಕೆ. ವೆಂಕಟರಾಮಯ್ಯ, ಎಂ. ಎ., ಎಲ್‌ಎಲ್.ಬಿ., ಬೆಂಗಳೂರು, ೧೯೩೭;
ಮ.	ಮನ್ವಂತರ ೫–೬ (ನಾಟಕಾಂಕ) : ಸಂಪಾದಕರು : ಜಿ. ಬಿ. ಜೋಶಿ, ಮನೋಹರ ಗ್ರಂಥಮಾಲೆಯ ಪ್ರಕಾಶನ. ಧಾರವಾಡ, ೧೯೬೭ ;
ಸಂ. ಕಾ.	ಸಂಸ್ಕೃತ ಕಾವ್ಯಗಳು : ಡಾ. ಕೆ. ಕೃಷ್ಣಮೂರ್ತಿ, ಎಂ.ಎ., ಪಿ.ಎಚ್. ಡಿ., ಪ್ರಕಾಶಕರು : ಮೈಸೂರು ವಿಶ್ವವಿದ್ಯಾನಿಲಯ, ಮೊದಲ ಮುದ್ರಣ, ೧೯೫೮ ;

ಸಂಸ್ಕೃತ

ಅ. ಕೋ.	ಅಮರಕೋಶ (ಅಮರಸಿಂಹ ವಿರಚಿತ, ಮಾಹೇಶ್ವರ ಟೀಕೆ ಸಹಿತ) : ಸಂಪಾದಕರು : ಡಾ. ಆರ್. ಜಿ. ಭಾಂಡಾರಕರ ಮತ್ತು ಪಂ. ವಾಮನಾಚಾರ್ಯ ಝಳಕೀಕರ : ಮುಂಬಯಿ ಸರಕಾರದ ವಿದ್ಯಾಇಲಾಖೆ ಪ್ರಕಾಶನ, ೧೮೯೦ ;
ಕೌ. ಅ. ಶಾ.	ಕೌಟಿಲೀಯಾರ್ಥ ಶಾಸ್ತ್ರಂ (ಶ್ರೀ ವಿಷ್ಣುಗುಪ್ತ ವಿರಚಿತಂ): ಸಂಪಾದಕ: ಎನ್. ಎಸ್. ವೆಂಕಟನಾಥಾಚಾರ್ಯ; ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು, ೧೯೬೦;
ಭಾ. ನಾ. ಚ.	ಭಾಸ ನಾಟಕ ಚಕ್ರಂ: ಸಂಪಾದಕ: ಸಿ. ಆರ್. ದೇವಧರ, ಎಂ.ಎ. : ಪ್ರಕಾಶಕರು: ಓರಿಯಂಟಲ್ ಬುಕ್ ಏಜನ್ಸಿ, ಪುಣೆ. ೧೯೩೭;
ಮ. ಸ್ಮೃ.	ಮನುಸ್ಮೃತಿ (ಕುಲ್ಲೂಕ ಭಟ್ಟೀಯ ಮನ್ವರ್ಥ ಮುಕ್ತಾವಲಿ ವ್ಯಾಖ್ಯಾಸಹಿತ): ಪಂ. ವಾಸುದೇವ ಶರ್ಮಾ ಪಣಶೀಕರ; ನಿರ್ಣಯ ಸಾಗರ ಮುದ್ರಣಾಲಯ, ಮುಂಬಯಿ ೧೯೩೩;
ರ. ವ.	ರಘುವಂಶಂ (ಮಲ್ಲಿನಾಥೀಯ ಸಂಜೀವಿನೀ ಟೀಕಾಸಹಿತ); ಸಂಶೋಧಕರು: ಕಾಶೀನಾಥ ಪಾಂಡುರಂಗ ಪರಬ ಮತ್ತು ಶ್ರೀನಿವಾಸ ವೆಂಕಟರಾಮ ಶರ್ಮಾ. ನಿರ್ಣಯ ಸಾಗರ ಮುದ್ರಣ, ಮುಂಬಯಿ, ಅಷ್ಟಮ ಸಂಸ್ಕರಣ, ೧೯೨೦;

ನಾ. ರಾ. ಶ್ರೀಮದ್ವಾಲ್ಮೀಕಿ ರಾಮಾಯಣಂ–ಸಂ : ಮ. ಮಂ. ಚಿನ್ನಸ್ವಾಮಿ ಶಾಸ್ತ್ರಿ; ಮದ್ರಾಸ, ಪರಿಶೋಧಿತ ದ್ವಿತೀಯಂ ಸಂಸ್ಕರಣ, ೧೯೫೮;

ಶಿ. ತ. ರ. ಶಿವತತ್ತ್ವರತ್ನಾಕರ (ಕೆಳದಿ ಬಸವರಾಜ ಸಂಕಲಿತ) : ಸಂಪಾದಕ : ಬಿ. ರಾಮರಾವ, ಎಂ. ಎ., ಎಲ್‌ಎಲ್. ಬಿ. ಮತ್ತು ವಿದ್ವಾನ್ ಪಿ. ಸುಂದರ ಶಾಸ್ತ್ರಿಯಾರ; ಪ್ರಕಾಶಕರು ; ಬಿ. ಎಂ. ನಾಥ ಅಂಡ್ ಕಂ., ಮದ್ರಾಸ, ೧೯೨೭;

ಹ. ಚ. ಶ್ರೀಹರ್ಷಚರಿತಕಾವ್ಯಂ (ಬಾಣಭಟ್ಟ ವಿರಚಿತ) : Edited by A. A. FURER PHIL, D. M. A; Bombay Sanskrit and Prakrit Series No. LXVI; The Department of Public Instruction, Bombay, 1909;

ಹಿಂದಿ

ಗು. ಗ್ರಂ. ಗುಲೇರೀ–ಗ್ರಂಥ (ಪಹಲಾ ಖಂಡ, ಪಹಲಾ ಭಾಗ–ಇತಿಹಾಸ): ಪಂ. ಚಂದ್ರಧರ ಶರ್ಮಾ ಗುಲೇರಿ; ಕಾಶೀ ನಾಗರೀ ಪ್ರಚಾರಿಣೀ ಸಭಾ; ವಾರಾಣಸಿ, ಪ್ರಥಮ ಮುದ್ರಣ. ೧೯೬೩.

ಸಂ. ಸಾ. ಇ. ಸಂಸ್ಕೃತ ಸಾಹಿತ್ಯ ಕಾ ಇತಿಹಾಸ: ವಾಚಸ್ಪತಿ ಗೈರೋಲಾ; ಚೌಖಂಬಾ ವಿದ್ಯಾಭವನ, ವಾರಾಣಸಿ, ಪ್ರಥಮ ಸಂಸ್ಕರಣ, ೧೯೬೦;

ಇಂಗ್ಲಿಷ

AE Ancient Egypt (Great Ages of Man Series-A History of the World's Cultures) by Lionel Casson; Time-Life International (Nederland) N. V. , 1966;

NAI History of Ancient India : Dr- R S. Tripathi, M. A., Ph.D. (London) : Motilal Banarasidass, Varanasi, Sec. Ed. 1960;

SED The Practical Sanskrit English Dictionary : V S. Apte, M.A.; Publisher : Gopal Narayen & Co. Bombay; Revised and Enlarged Ed 1924;

S Br. Śatapatha-Brāhmana (The Secred Books of the East by F. Maxe Muller); Val. Xii, Translated by Julius Eggcling, Part I, Books I and II; Motilal Banarasidass, Varanasi, Reprint, 1963;

★ ಜಿ. ಎಂ. ಉಮಾಪತಿಶಾಸ್ತ್ರಿ

ನಾನು

ನಾನು ನಿಮ್ಮಂತೆ ಸ್ವಾಮೀ
ನಾನೂ ನಿಮ್ಮಂತೆ

ಅವರಿವರ ಪರಸೆಯು
ಗೋವಿಂದ ಹಾಡಿನಲಿ
ಮೈತಳೆದು ಬೆಳೆದವನು

"ಹರಾಮತನ"ದ ಬಾಲ ಗುಂಡಾಡಿಸಿ
ಸೂಜಿಯಾಗಿ ಪೋಣಿ
ಡಬ್ಬಣವಾಗಿ ಬಲಿತು
ಮೈಲಾರ ಸುಖವ
ಸುಖಿಸಿದವನು.

ಭೆಟ್ಟಿಯಾದವರಿಗೆಲ್ಲ
ಕಿಸಿಬಾಯಿ ತೋರಿ
ಅವರವರಿಗವರವರ
ಮುಂಜೂರೆಯು ಹೆಗಲೇರಿಸಿಕೊಂಡು
ಹೊರಟವನು

ಮೀನವಾಸನೆಗೆ ಹುಶಾರಾಗಿ
ಬೆದರಾಗಿನಿಂತ ಏಡಿಗಾಲು
ಕುತ್ತಿಗೆಗೆ ಅಮರಿಕೊಳ್ಳುವ ಮುನ್ನ
ಬಂಡೆಗಲ್ಲಿಗೆ ಕುಕ್ಕರಿಸಿ
ಕಿತ್ತು ತಿಂಬ ಬಕಸಂತಾನನು

ನಾನು ನಿಮ್ಮಂತಿಲ್ಲದಿರೆ ಹೋಗಲಿ
ನೀವು ನನ್ನಂತೆ ಯಾಕಿಲ್ಲವೆಂದು ಕೇಳುವವನು

ಬೆಪ್ಪಗೆ ಬೊಟ್ಟು ಚೀಪುತ್ತಿದ್ದವನಿಗೆ
ಬೆಣ್ಣೆರುಚಿ ಹಚ್ಚಿದವರ‍್ಯಾರೆಂದು
ಬೇರು ಅಗಿವವನು
ನಾನು ನಿಮ್ಮಂತೆ ಸ್ವಾಮೀ
ನಾನೂ ನಿಮ್ಮಂತೆ

★ ಲಿಂಗಣ್ಣ ಸತ್ಯಂಪೇಟೆ

ಪಟ್ಟದಕಲ್ಲಿನ ಚಾಲುಕ್ಯ ಪೂರ್ವಕಾಲದ ಒಂದು ಇಟ್ಟಿಗೆ ಕಟ್ಟಡ

ಪಟ್ಟದಕಲ್ಲು, ಬಾದಾಮಿ ಚಾಲುಕ್ಯರ ಕಾಲದ ಶ್ರೇಷ್ಠ ಕಲೆಯ ಭವ್ಯ ದೇವಾಲಯಗಳಿಗೆ (ಕ್ರಿ.ಶ. ೭-೯ನೇ ಶತಮಾನ) ಈಗಾಗಲೇ ಜಗತ್ಪ್ರಸಿದ್ಧವಾಗಿದೆ.

ಟಾಲೆಮಿಯ ಗ್ರಂಥದಲ್ಲಿ (ಕ್ರಿ. ಶ. ೨ನೆಯ ಶತಮಾನ) ಪಟ್ಟದಕಲ್ಲು ಉಲ್ಲೇಖಿತವಾಗಿದೆ. ಆಗ ವಾಣಿಜ್ಯ ವ್ಯವಹಾರಗಳಿಗೆ ಮುಖ್ಯವಾಗಿದ್ದ ನಗರಗಳಲ್ಲಿ ಈ ಪಟ್ಟದಕಲ್ಲು ಒಂದು. ಈ ಕಾಲದ ಜನವಸತಿಯಿದ್ದ ಒಂದು ನೆಲೆಯು[1] (ಕ್ರಿ.ಪೂ. ೩–ಕ್ರಿ.ಶ. ೩ನೆಯ ಶತಮಾನ) ಈ ಊರಿಗೆ ಸುಮಾರು ೧ ಕಿ. ಮೀ. ದೂರದಲ್ಲಿದ್ದ ಬಾಚನಗುಡ್ಡದ ಬದಿಯಲ್ಲಿ ಹಿಂದೆ ಶೋಧವಾಗಿದೆ. ಇತ್ತೀಚೆಗೆ ಈ ಊರಿಗೆ ಹೊಸ ರಸ್ತೆಯನ್ನು ನಿರ್ಮಾಣ ಮಾಡುತ್ತಿದ್ದಾಗ ಊರಿನ ಅತಿ ಸಮೀಪದಲ್ಲಿನ ರಸ್ತೆಯ ಬದಿಯಲ್ಲಿ ಆಗೆದ ಗುಂಡಿಗಳಲ್ಲಿ ಇದೇ ಕಾಲದ ಜನವಸತಿಯಿದ್ದ ಕುರುಹುಗಳಾದ ಹಾಳು ಮಣ್ಣು, ಮೃತ್ ಪಾತ್ರೆಯ ಅವಶೇಷಗಳು[2] ಹೇರಳವಾಗಿ ಕಂಡು ಬಂದವು. ಅಂದರೆ, ಆಗ ಈ ನಗರವು ಈಗಿನ ಬಾಚನ ಗುಡ್ಡದಿಂದ ಪಟ್ಟದಕಲ್ಲಿನ ನದಿಯ ಸಮೀಪದ ವರೆಗೂ ಸುಮಾರು ೧, ೧½ ಕಿ.ಮೀ. ನಷ್ಟು ವಿಸ್ತಾರವಾಗಿತ್ತು ಎಂದು ಅಲ್ಲಲ್ಲಿಯ ಈ ನೆಲೆಗಳಿಂದ ತೋರುವುದು.

ಈ ಹಾಳುಮಣ್ಣಿನ ನೆಲೆಗಳಲ್ಲಿ ಇಟ್ಟಿಗೆಯ ಚೂರುಗಳು, ಹೊಳಪಾದ ಕೆಂಪು–ಕಪ್ಪು ದ್ವಿವರ್ಣದ ಮತ್ತು ಬರೇ ಕಪ್ಪು, ಇಲ್ಲವೆ ಕೆಂಪು ಬಣ್ಣದ ವಿವಿಧ ಮೃತ್ ಪಾತ್ರೆಗಳು, ಕಬ್ಬಿಣದ ಕಿಟ್ಟ ಮುಂತಾದವುಗಳು ವಿಪುಲವಾಗಿವೆ. ದ್ವಿವರ್ಣ ಪಾತ್ರೆಗಳು ಬಿಳಿಯ ಬಣ್ಣದ ರೇಖಾ ಚಿತ್ರಗಳಿಂದ (Russet coated white painted pottery) ಅಲಂಕೃತವಾಗಿರುತ್ತವೆ. ಇಂಥ ಒಂದು ನೆಲೆಯು ಐಹೊಳೆಯಲ್ಲಿ ಬಂಡೆಯಲ್ಲಿ ಕೊರೆದು ಮಾಡಿದ ಜೈನ ಗುಹಾದೇವಾಲಯದ ಹತ್ತಿರದಲ್ಲಿನ ಹೊಲಗಳಲ್ಲಿ ೧೯೭೫ರಲ್ಲಿ ನನಗೆ ಕಂಡು ಬಂದಿತು. ಟಾಲೆಮಿಯ ಗ್ರಂಥದಲ್ಲಿ ಐಹೊಳೆಯೂ ಉಲ್ಲೇಖವಾಗಿದೆ. ಇತ್ತೀಚೆಗೆ ಇಲ್ಲಿರುವ ದೇವಾಲಯಗಳ ಸುತ್ತುಮುತ್ತಲಿನ ಮಣ್ಣನ್ನು ತೆಗೆದು ಸ್ವಚ್ಛ ಮಾಡುತ್ತಿರುವಾಗ ಶಾತ-

---

೧. ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ವಾರ್ಷಿಕ ವರದಿ, ೧೯೪೧-೪೬ ಪುಟ ೪

೨. ನಾನು ೧೯೬೫ ರಲ್ಲಿ, ಇಲ್ಲಿಯ ಬೃಹತ್ ಶಿಲಾ ಗೋರಿಗಳನ್ನು ಪರೀಕ್ಷಿಸುವಾಗ, ಈ ಗುಂಡಿಗಳಲ್ಲಿದ್ದ ಮೃತ್‌ಪಾತ್ರೆಯ ಅವಶೇಷಗಳನ್ನು ನೋಡಿ ಪರೀಕ್ಷಿಸಿದ್ದೆ. ಮತ್ತು ಪಟ್ಟದಕಲ್ಲಿನ ಉತ್ತರಕ್ಕೆ ೩-೪ ಕಿ. ಮಿ. ದೂರದಲ್ಲಿರುವ ಶಂಕರ ಗುಂಡದ ಹತ್ತಿರ

[ಮುಂದಿನ ಪುಟಕ್ಕೆ]

ವಾಹನ ಅರಸರ ಒಂದು ನಾಣ್ಯವು[೩] ಸಿಕ್ಕಿದೆಯೆಂದು ತಿಳಿದು ಬಂದಿದೆ. ಮತ್ತು ಲಾಡ್‌ಖಾನ್ ದೇವಾಲಯದ ತಳಹದಿಯ ಕೆಳಗೆ ಒಂದು ಇಟ್ಟಿಗೆಯ ಕಟ್ಟಡವು[೪] ತೋರಿ ಬಂತು. ಬ್ರಹ್ಮಗಿರಿ ಮತ್ತು ಮಸ್ಕಿಯಲ್ಲಿನ ಉತ್ಖನನಗಳಲ್ಲಿ[೫] ಕಂಡು ಬಂದ ಇತಿಹಾಸ ಪ್ರಾರಂಭ ಕಾಲ (Early Historical Period)ದ ಸಂಸ್ಕೃತಿಯ ವಸ್ತುಗಳಿಗೂ ಮೇಲೆ ಹೇಳಿದ ನೆಲೆಗಳಲ್ಲಿಯ ವಸ್ತುಗಳಿಗೂ ಬಹಳ ಹೋಲಿಕೆಯಿದ್ದು, ಈ ಸ್ಥಳಗಳ ಮತ್ತು ನೆಲೆಗಳಲ್ಲಿಯ ಜನವಸತಿಯ ಸಮಕಾಲೀನತೆಯನ್ನು ಸೂಚಿಸುತ್ತದೆ ಆಗಿನ ಜನಜೀವನದ ಬಗ್ಗೆ ಕೆಲವೊಂದು ವಿಷಯಗಳು ಈ ಉತ್ಖನನಗಳಿಂದ ತಿಳಿದಿದೆ. ಈ ಸಂಸ್ಕೃತಿಯ ಕಾಲಮಾನವನ್ನು[೬] ಕ್ರಿ. ಪೂ. ೩ನೆಯ ಶತಮಾನದಿಂದ ಕ್ರಿ. ಶ. ೩-೪ ನೆಯ ಶತಮಾನದ ವರೆಗೆ ಎಂದು ಸ್ಥೂಲವಾಗಿ ಹೇಳಬಹುದು.

ಆದರೆ, ಪಟ್ಟದಕಲ್ಲಿನಲ್ಲಿ ಈ ಕಾಲದ ಜನರ ನೆಲೆಗಳು ಶೋಧವಾಗಿದ್ದರೂ ಕೂಡ ಅವರ ಸಂಸ್ಕೃತಿಯ ಬಗ್ಗೆ ಸ್ವಾರಸ್ಯಕರವಾದುದೇನೂ ತಿಳಿದು ಬಂದಿಲ್ಲ. ಬಾದಾಮಿಯ ಚಾಲುಕ್ಯ ರಾಜರ ಕಾಲದಲ್ಲಿ ಅತ್ಯಂತ ವೈಭವದಿಂದ ಪವಿತ್ರ

[ಹಿಂದಿನ ಪುಟದಿಂದ]

ಬಹಳ ಹಾಳಾದ ಸುಮಾರು ಇಪ್ಪತ್ತು ಬೃಹತ್ ಶಿಲಾ ಗೋರಿಗಳಿದ್ದುದು ಕಂಡು ಬಂತು. ಈ ಪ್ರದೇಶ ಈಗ ಸಮೀಪದಲ್ಲಿನ ಅಕ್ಕರಗಲ್ ಎಂಬ ಗ್ರಾಮದ ಹದ್ದಿಯಲ್ಲಿ ಬರುತ್ತದೆ. ಈ ಶೋಧನೆಯಿಂದ ತಿಳಿಯುವುದೇನೆಂದರೆ ಪಟ್ಟದಕಲ್ ಪ್ರದೇಶದಲ್ಲಿ ಬೃಹತ್ ಶಿಲಾ ಗೋರಿಗಳ (ಸು. ಕ್ರಿ. ಪೂ. ೮೦೦-೩೦೦) ನೆಲೆ ಬಹಳ ವಿಸ್ತಾರವಾಗಿದ್ದು ಕ್ರಿ ಪೂ. ೮ ನೇ ಶತಮಾನದಿಂದಲೇ ದೊಡ್ಡ ಪ್ರಮಾಣದಲ್ಲಿ ಜನರು ವಾಸಿಸುತ್ತಿದ್ದರು.

೩. ಪುರಾತತ್ತ್ವ ಸರ್ವೇಕ್ಷಣ ಶಾಖೆ, ಕೇಂದ್ರ ರಾಜ್ಯಾಂಗ. ನೈರುತ್ಯ ವಿಭಾಗದ ಅಧಿಕಾರಿಗಳಾದ ಶ್ರೀ ಎಸ್. ಆರ್. ರಾವ್ ಅವರು ಈ ವಿಷಯವನ್ನು ನನಗೆ ತಿಳಿಸಿದರು. ಅವರಿಗೆ ನಾನು ಕೃತಜ್ಞ. ಹಾಗು The Indian Express (Daily) ದಿ. ೨೯ ಜೂನ್ ೧೯೭೧, ೭ ನೇ ಕಾಲಂ ೬ ನೇ ಪ್ಯಾರಾ ನೋಡಿ.

೪. "Diggings at Aihole show two shrines", The Indian Express [Daily] ೨೯ ಜೂನ್ ೧೯ ೭೧, ಪು. ೮.

೫. Ancient India No. 4. ಪು. ೨೦೨-೨೦೩ ಮತ್ತು No 13, ಪು, ೧೫-೨೦,

೬. ಅದೇ ಕಡೆ. ಬ್ರಹ್ಮಗಿರಿ ಮತ್ತು ಮಸ್ಕಿಯ ಉತ್ಖನನಕಾರರು ಈ ಸಂಸ್ಕೃತಿಯ ಕಾಲಮಾನವನ್ನು ಕ್ರಿ. ಶ. ೧-೩ ಶತಮಾನವೆಂದು ಸ್ಥೂಲವಾಗಿ ತರ್ಕಿಸಿದ್ದರು, ಇತ್ತೀಚಿನ ಹಳ್ಳೂರು (ಧಾರವಾಡ ಜಿ.) ಮತ್ತು ಪೈಯಂಪಲ್ಲಿಯಲ್ಲಿನ ಉತ್ಖನನಗಳಲ್ಲಿ ಕಂಡುಬಂದ ಈ ಸಂಸ್ಕೃತಿಯ ಅವಶೇಷಗಳ ಇಂಗಾಲ-೧೪ ಪರೀಕ್ಷೆಯಿಂದ ಈ ಸಂಸ್ಕೃತಿಯು ಇನ್ನೂ ಸ್ವಲ್ಪ ಮುಂಚಿತವಾಗಿಯೇ ಅಂದರೆ ಕ್ರಿ. ಪೂ, ೩—೨ ಶತಮಾನದಲ್ಲಿಯೇ ಶುರುವಾಯಿತೆಂದು ತೋರುವುದು.

ಕ್ಷೇತ್ರವಾಗಿ, ಕಲೆಯ ಬೀಡಾಗಿ ಮೆರೆದಂಥ ಪಟ್ಟದಕಲ್ಲಿಗೆ ಮಹತ್ವದ ಸಾಂಸ್ಕೃತಿಕ ಹಿನ್ನೆಲೆಯಿರಬೇಕಲ್ಲವೆ ? ಆದುದರಿಂದ ಚಾಲುಕ್ಯಪೂರ್ವದ ಪಟ್ಟದಕಲ್ಲಿನ ಇತಿಹಾಸದಲ್ಲಿ ಹೆಚ್ಚಿನ ಸಂಶೋಧನೆಯು ಅವಶ್ಯ. ಈ ಸಂದರ್ಭದಲ್ಲಿ, ಇಲ್ಲಿ ಇತ್ತೀಚಿನ ಉತ್ಖನನದಲ್ಲಿ ಚಾಲುಕ್ಯಪೂರ್ವದ ಒಂದು ವಿಶಾಲವಾದ ಇಟ್ಟಿಗೆಯ ಕಟ್ಟಡವು ದೊರೆತಿರುವುದು ಬಹಳ ಮಹತ್ವದ್ದಾಗಿದೆ. ಏಕೆಂದರೆ, ಚಾಲುಕ್ಯ ಪೂರ್ವದ ಐತಿಹಾಸಿಕ ಕಟ್ಟಡಗಳು ಇದುವರೆಗೂ ದೊರೆತಿರುವುದು ತುಂಬ ವಿರಳ. ಬ್ರಹ್ಮಗಿರಿಯ ಉತ್ಖನನದಲ್ಲಿ ಕಾಣಿಸಿಕೊಂಡ ಗಜಪೃಷ್ಠಾಕೃತಿಯ ಕಟ್ಟಡ[೭] ಮತ್ತು ಬನವಾಸಿಯಲ್ಲಿ ಇತ್ತೀಚಿನ ಉತ್ಖನನದಲ್ಲಿ ಬೆಳಕಿಗೆ ಬಂದ ಬೃಹತ್ ಚೈತ್ಯವು.[೮] ಆದುದರಿಂದ ಪಟ್ಟದಕಲ್ಲಿನ ಇಟ್ಟಿಗೆಯ ಕಟ್ಟಡದ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

ಕೇಂದ್ರ ರಾಜ್ಯಾಂಗದ ಪುರಾತತ್ವ ಸರ್ವೇಕ್ಷಣ ಶಾಖೆಯ ನೈಋತ್ಯ ವಿಭಾಗವು ಆದರ ಅಧಿಕಾರಿಗಳಾದ ಶ್ರೀ ಎಸ್. ಆರ್. ರಾವ್ ಅವರ ನೇತೃತ್ವದಲ್ಲಿ ಈಗ ನಾಲ್ಕೈದು ವರ್ಷಗಳಿಂದ ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಯಲ್ಲಿಯ ದೇವಾಲಯಗಳ ಸುತ್ತುಮುತ್ತಲಿನ ಅತಿಕ್ರಮಣವನ್ನು ಮತ್ತು ಕೊಳಚೆಯನ್ನೆಲ್ಲ ತೆಗೆಸಿ ಅರೆಮುಚ್ಚಿಹೋಗಿದ್ದ ದೇವಾಲಯಗಳು ಎಲ್ಲ ಕಡೆಗಳಿಂದಲೂ ಸಂಪೂರ್ಣವಾಗಿ ಬಲು ಮನೋಹರವಾಗಿ ಕಾಣುವ ಹಾಗೆ ಮಾಡಿರುವುದು ಯೋಗ್ಯ ಹಾಗೂ ಪ್ರಶಂಸನೀಯ. ಪಟ್ಟದಕಲ್ಲಿನಲ್ಲಿ ಈ ಸ್ವಚ್ಛತೆಯ ಕಾರ್ಯವು ನಡೆಯುತ್ತಿದ್ದಾಗ, ಅಲ್ಲಿಯ ಸಂಗಮೇಶ್ವರ ಮತ್ತು ಗಳಗನಾಥ ದೇವಾಲಯಗಳ ಕಾಲಸಂಬಂಧ(Relative Chronology)ವನ್ನು ಗೊತ್ತು ಮಾಡಲು ಸಣ್ಣ ಪ್ರಮಾಣದಲ್ಲಿ ಉತ್ಖನನವನ್ನು ಮಾಡಲು ನನಗೆ ಆದೇಶವು ಬಂದಿತು. ೧೯೭೦ನೆಯ ಮೇ ತಿಂಗಳ ಎರಡನೆಯ ಪಕ್ಷದಲ್ಲಿ ಶ್ರೀ ಎಸ್. ಆರ್. ರಾವ್ ಅವರ ನಿರ್ದೇಶನದಲ್ಲಿ ಈ ಉತ್ಖನನವನ್ನು ನಡೆಸಿದೆನು. ಈ ಎರಡೂ ದೇವಾಲಯಗಳು ಸೇರುವ ಹಾಗೆ ಉದ್ದಕ್ಕೂ ಶಾಸ್ತ್ರೀಯವಾಗಿ ಗುಂಡಿ ತೋಡಲಾಯಿತು. ಆದರೆ ಗಳಗನಾಥ ದೇವಾಲಯದ ಬದಿಯಲ್ಲಿ ತೋಡಿದ ಗುಂಡಿಯ ಭಾಗದ ಪ್ರದೇಶವು ಉತ್ಖನನ ಮಾಡುವುದಕ್ಕಿಂತ ಮೊದಲೇ ಜನರು ತಮ್ಮ ಮನೆಗಳನ್ನು ಕಟ್ಟುವುದಕ್ಕೋಸ್ಕರ ಅದನ್ನು ಅಗೆದು ಅಲ್ಲಿಯ ಮೊದಲಿನ ಸ್ಥಿತಿಯನ್ನೂ ಹಾಳುಮಾಡಿದ್ದರಿಂದ ನಮ್ಮ ಉತ್ಖನನದ ಉದ್ದೇಶವು ಸಫಲವಾಗಲಿಲ್ಲ. ಈ ಉತ್ಖನನವು ನಡೆಯುತ್ತಿರುವಾಗ ಸಂಗಮೇ-

---

೭. Ancient India No. 4. ಪು ೧೮೬, ಚಿತ್ರ ೨.

೮. ಶೇಷಾದ್ರಿ, ಎಮ್. ೧೯೭೧: "Excavations of brick apsidal temple at Banavasi" ಪುರಾತತ್ವ, ಸಂ. 4, 1970-71 ಪು. ೫೬-೫೮

ಶ್ವರ ದೇವಾಲಯದ ಮುಂದಿನ ನಂದಿ ಮಂಟಪದ ಬಲಭಾಗದ ಪ್ರದೇಶದಲ್ಲಿ ಕಾಣಿಸುತ್ತಿದ್ದಂಥ ಎರಡು ಇಟ್ಟಿಗೆಗಳನ್ನು ಕುತೂಹಲದಿಂದ ಸ್ಪಷ್ಟವಾಗಿ ಕಾಣುವ ಹಾಗೆ ಬಿಡಿಸಿದೆ. ಆಗ ಅದು ಒಂದು ಗೋಡೆಯ ಕೆಳಭಾಗವೆಂದು ಕಂಡುಬಂದಿತು ಈ ಗೋಡೆಯಿದ್ದ ಭಾಗದಲ್ಲಿ ಕ್ರಮವಾಗಿ ಉತ್ಖನನವನ್ನು ಮಾಡಿದಾಗ ಕಂಬಗಳುಳ್ಳ ವಿಶಾಲವಾದ ಕಟ್ಟಡವೇ ಬೆಳಕಿಗೆ ಬಂದಿತು. (ಚಿತ್ರಗಳು 1–3) ಈ ಕಟ್ಟಡದ ಅತ್ಯಂತ ಕೆಳಭಾಗದ ಅಂದರೆ ಎರಡು ಸಾಲಿನಿಂದ ಹಿಡಿದು ಆರು ಸಾಲಿನ ಎತ್ತರದ ವರೆಗೆ ಮಾತ್ರ ಉಳಿದ ಇಟ್ಟಿಗೆ ಗೋಡೆಗಳು, ಕಂಬಗಳು ದೊರಕಿದವು.

ಕಟ್ಟಡವು ಸಂಗಮೇಶ್ವರ ದೇವಾಲಯದ ಮುಂಭಾಗದಲ್ಲಿರುವ ನಂದಿ ಮಂಟಪದ ಅಧಿಷ್ಠಾನದ ಪೂರ್ವದ ಬದಿಯಿಂದ ಹಿಡಿದು ದೇವಾಲಯದ ಮುಂಬದಿಯ ಅಧಿಷ್ಠಾನದ ವರೆಗೂ ಇದೇ ಮತ್ತು ವಿಸ್ತಾರದಲ್ಲಿ ದೇವಾಲಯದ ಆಗಲಕ್ಕಿಂತ ಸ್ವಲ್ಪ ಕಡಿಮೆ ಇದರ ಪಶ್ಚಿಮ ಭಾಗವು ಇನ್ನೂ ಸ್ವಲ್ಪ ದೇವಾಲಯದ ಅಧಿಷ್ಠಾನದ ಕೆಳಗೆ ಇದೆ. (ಚಿತ್ರ 3 ನೋಡಿ) ಇದರ ಹೊರಬದಿಯ ಕ್ಷೇತ್ರಫಲ ೧೪×೧೪. ೯೦ ಮಿ. ಇದು ಮಧ್ಯದಲ್ಲಿ ಉದ್ದಕ್ಕೂ ಇರುವ ಕಂಬಗಳ ಎರಡು ಸಾಲುಗಳಿಂದ ಮಧ್ಯಾಂಗಣ (nave) ಮತ್ತು ಇಕ್ಕೆಲದ ಹಜಾರ (Sideaisles) ಗಳಾಗಿ ವಿಭಾಗಿಸಲ್ಪಟ್ಟಿವೆ.

ಮಧ್ಯಾಂಗಣವು ಸುಮಾರು ೬ ಮೀ. ಅ.×೮ ಮೀ. ಉ. ವಾಗಿದೆ. ಈಗ ಆದರ ಪೂರ್ವದ ಬದಿಯಲ್ಲಿ ಗೊಡೆಯ ಮೇಲೆ ಸ್ವಲ್ಪ ಚಾಚಿಕೊಂಡಿರುವ ೪.೭೫ ಚದುರದ ಚಾಲುಕ್ಯರ ಕಾಲದ ನಂದಿಮಂಟಪದ ಅಧಿಷ್ಠಾನವಿದೆ. ಅಧಿಷ್ಠಾನದ ಅಂಚಿನ ಆಡಿಯಲ್ಲಿ ಸುತ್ತಲೂ ಅರ್ಧ ಹೊರಗೆ ಕಾಣುತ್ತಿರುವ ಇಟ್ಟಿಗೆಯ ಸಾಲು ಇದೆ.(ಚಿತ್ರ 1;೨. 3;೧),ನಂದಿ ಮಂಟಪದ ಮೆಟ್ಟಲಿನ ಬಲಬದಿಯ ಆಧಿಷ್ಠಾನದ ಮೂಲೆಯ ಕೆಳಗಡೆಗೆ ಒಂದು ಹೋರಿನಲ್ಲಿ (ಚಿತ್ರ 3:೨) ತುಂಬ ಇಟ್ಟಿಗೆಗಳು ಕಾಣುತ್ತಿದ್ದವು. ಅಂದರೆ, ನಂದಿಮಂಟಪದ ಅಧಿಷ್ಠಾನವಿದ್ದಲ್ಲಿ, ಮೊದಲು ಗೋಡೆಗೆ ಸೇರಿದ ಹಾಗೆ ೫×೪. ಚದುರದ ಒಂದು ಇಟ್ಟಿಗೆಯ ಕೋಣೆಯು ಇದ್ದಿರಬೇಕು. ಇದು ಹಾಳುಬಿದ್ದ ನಂತರ, ಇದರ ಮೇಲೆ ಈಗ ಇರುವ ಅಧಿಷ್ಠಾನವು ಏರಿಸಲ್ಪಟ್ಟದೆಯೆಂಬುದು ಸುಸ್ಪಷ್ಟ.

ಇಕ್ಕೆಲದ ಹಜಾರವು ಸುಮಾರು ೨ ಮೀ. ಅ. ೮. ಮೀ ಉದ್ದ ಇದೆ. ಇಕ್ಕೆಲದ ಹಜಾರಗಳನ್ನೂ ಮಧ್ಯಾಂಗಣದಿಂದ ಪ್ರತ್ಯೇಕಿಸುವ ಎರಡು ಸಾಲುಗಂಬಗಳಿವೆ. ಉತ್ತರ ಬದಿಯ ಸಾಲಿನಲ್ಲಿ ೨ ಕಂಬಗಳು, ದಕ್ಷಿಣ ಬದಿಯ ಸಾಲಿನಲ್ಲಿ ೩ ಕಂಬಗಳು ಮಾತ್ರ ದೊರೆತಿವೆ. ಇವುಗಳಿಗೆ ಅನುರೂಪವಾಗಿ ಹಜಾರದ ಗೊಡೆಗಳಿಗೆ ಹತ್ತಿದ ಹಾಗೆ ಸುತ್ತಲೂ ಒಟ್ಟು ೬ ಕಂಬಗಳು ಮಾತ್ರ ಉಳಿದಿವೆ. ಮೊದಲು ಮಧ್ಯದಲ್ಲಿ ೮ ಕಂಬಗಳು ಮತ್ತು ಗೋಡೆಗೆ ಸೇರಿದ

ಹಾಗೆ ೮ ಕಂಬಗಳು ಇದ್ದ ಹಾಗೆ ತೋರುವುದು. ಕಂಬಗಳೆಲ್ಲವೂ ಸುಮಾರು ೧ ಮಿ. ಚದುರದ ಚೌಕೋನವಾಗಿವೆ.

ಮಧ್ಯಾಂಗಣದ ಪಶ್ಚಿಮ ಬದಿಯ ಎರಡು ಕಡೆಗಳಲ್ಲಿ ಗೋಡೆಯ ಭಾಗಗಳು (ಚಿತ್ರ 3;೩,೪) ಮತ್ತು ಹೊರಭಾಗದ ಉತ್ತರ ಭಾಗದ ಕಂಬಗಳ ಸಾಲಿಗೆ ಸರಿಯಾಗಿ, ಸ್ವಲ್ಪ ಬಾಗಿದ ಗೋಡೆಯು ಇವೆ. (ಚಿತ್ರ 3;೫) ಇದು ಸಂಗಮೇಶ್ವರ ದೇವಾಲಯದ ಮೆಟ್ಟಲಿನ ಪಾರ್ಶ್ವದ ಕಲ್ಲಿನ (ಚಿತ್ರ 3;೬) ಕೆಳಗೆ ಹೋಗಿದೆ. ಈ ಗೋಡೆಯ ಎದುರಿಗೆ, ದಕ್ಷಿಣದ ಕಂಬಗಳ ಸಾಲಿಗೆ ಸರಿಯಾಗಿ ಗೋಡೆಯ (?) (ಚಿತ್ರ. 3;೭) ಅವಶೇಷಗಳಿವೆ. ಈ ಇಟ್ಟಿಗೆ ಅವಶೇಷಗಳ ದಕ್ಷಿಣಕ್ಕೆ ಸಭಾಂಗಣದ ಗೋಡೆಗೆ ಸೇರಿದ ಹಾಗೆ ಒಂದು ಕಂಬ (ಚಿತ್ರ. 3;೮) ವಿದೆ. ಮತ್ತು ಈ ಕಂಬಕ್ಕೆ ಹೊಂದಿದ ಗೋಡೆಯು ಸಂಗ-ಮೇಶ್ವರ ದೇವಾಲಯದ ಅಧಿಷ್ಠಾನದ ಕೆಳಗೆ ಹೋಗಿದೆ.

ಗೋಡೆಯು ಉದ್ದಕ್ಕೂ ೫ ಸಾಲುಗಳಿಂದ ಕೂಡಿ ಸುಮಾರು ೧ ಮಿ. ನಷ್ಟು ಅಗಲವಾಗಿದೆ. ಇಟ್ಟಿಗೆಗಳ ಅಳತೆಯು ಸ್ವಲ್ಪ ಹೆಚ್ಚು ಕಡಿಮೆಯಿದ್ದುದರಿಂದ ಅವುಗಳನ್ನು ಹೇಗೆ ಅನುಕೂಲವಾಗುವುದೊ ಹಾಗೆ ಅಡ್ಡವಾಗಿಯೂ ಉದ್ದವಾಗಿಯೂ ಜೋಡಿಸಿವೆ. ಸಾಮಾನ್ಯವಾಗಿ ಇಟ್ಟಿಗೆಯ ಅಳತೆಯು ೩೮×೨೨×೬ತ್ತಿ ಸೆ. ಮಿ. ಗೋಡೆಗಳಿಗೆ ೧ ಸೆ. ಮಿ.ನ. ದಪ್ಪದಷ್ಟು ಸುಣ್ಣವು ಬಳಿಯಲ್ಪಟ್ಟಿತ್ತು. ನಂದಿಮಂಟಪದ ಉತ್ತರದ ಅಂಚಿನ ಕೆಳಗಿರುವ ಇಟ್ಟಿಗೆಯ ಗೋಡೆಗೆ ಹಚ್ಚಿದ ಸುಣ್ಣ ಲೇಪನದ ತುಣುಕುಗಳು ಸಿಕ್ಕವು.

ಇತ್ತೀಚಿನವರೆಗೂ ಈ ಕಟ್ಟಡ ಇದ್ದ ಭಾಗದಲ್ಲಿ ಇದ್ದ ಮನೆಗಳನ್ನು ಕಟ್ಟಿದ ಕಾಲದಲ್ಲಿ, ಇದರ ಬಹುಭಾಗವು ಹಾಳಾಗಿದೆ. ಏಕೆಂದರೆ ಇದರ ನೈರುತ್ಯ ಭಾಗದಲ್ಲಿ ಮತ್ತು ದಕ್ಷಿಣದ ಗೋಡೆಯ ಒಂದೆರಡು ಭಾಗದಲ್ಲಿ (ಚಿತ್ರ 3;೯, ೧೦) ಇಟ್ಟಿಗೆಯ ಗೋಡೆಯ ತಳಭಾಗದ ಹಂತದಿಂದ ಕೆಳಗೆ ಕೂಡ ಬೂದಿ ಮತ್ತೂ ಇತ್ತೀಚಿನ ಕಾಲದ ಗಡಿಗೆಯ ಚೂರುಗಳು ಸಿಕ್ಕವು. ಮತ್ತು ಈ ಮಧ್ಯಾಂಗಣ ಮತ್ತು ಹಜಾರಗಳ ಪಶ್ಚಿಮದ ಬದಿಯಲ್ಲಿನ ಭಾಗವು ದೇವಾಲಯದ ಅಧಿಷ್ಠಾನದ ಅಡಿಯಲ್ಲಿರುವುದರಿಂದ ಕಟ್ಟಡದ ಆ ಭಾಗದ ಸ್ವರೂಪ ಹೇಗಿತ್ತೆಂಬುದನ್ನು ತಿಳಿಯುವುದು ದುಸ್ತರ.

ಆದರೆ ಈ ಕಟ್ಟಡದ ರಚನೆಯಲ್ಲಿ ಪರಿಮಾಣ ಔಚಿತ್ಯ ಇರುವುದರಿಂದ, ದಕ್ಷಿಣ ಬದಿಯ ಗೋಡೆಯಿದ್ದ ಹಾಗೆ ಉತ್ತರ ಬದಿಯಲ್ಲಿಯೂ ಮತ್ತೂ ಮಧ್ಯಾಂಗಣದ ಉತ್ತರಬದಿಯ ಕಂಬಗಳ ಸಾಲಿನ ನೇರಕ್ಕೆ ಇರುವ ಗೋಡೆಯ ಹಾಗೆ ದಕ್ಷಿಣ ಭಾಗದಲ್ಲಿಯೂ ರೇಖಾಚಿತ್ರದಲ್ಲ ತುಂಡು ಗೆರೆಗಳಿಂದ ತೋರಿಸಿದ ಹಾಗೆ ಇದ್ದಿರಬಹುದು.

ದೇವಾಲಯದ ಅಧಿಷ್ಠಾನದ ಕೆಳಗೆ ಉಳಿದ್ದಿದ್ದಿರಬಹುದಾದ ಈ ಗೋಡೆಗಳ ಭಾಗಗಳ ಮೊದಲಿನ ವಿನ್ಯಾಸವನ್ನು ತಿಳಿಯುವುದು ತೀರ ಕಷ್ಟ. ಆದರೂ ಕಣ್ಣಿಗೆ ತೋರುವ ಭಾಗಗಳಲ್ಲಿ ಸ್ವಲ್ಪ ಬಾಗಿದ ಗೋಡೆಯನ್ನು ಲಕ್ಷಿಸಿದರೆ, ಈ ಅಧಿಷ್ಠಾನವಿರುವ ಪ್ರದೇಶದಲ್ಲಿ ಕಟ್ಟಡದ ಪಶ್ಚಿಮ ಭಾಗವು ಚುಕ್ಕೆಗಳಿಂದ ತೋರಿಸಿದ ಗಜ ಪೃಷ್ಠಾಕೃತಿಯ ಹಾಗೆ ಇದ್ದಿರಬಹುದು. ಆಗ ಸ್ವಲ್ಪ ಬಾಗಿದ ಗೋಡೆಯು, ಮೊದಲು ಪ್ರದಕ್ಷಿಣ ಪಥವುಳ್ಳ ಪೂರ್ವಾಭಿಮುಖವಾಗಿರುವ ಗಜ ಪೃಷ್ಠಾಕೃತಿಯ ಚೈತ್ಯ ಗೃಹದ ಅಥವಾ ಗರ್ಭಗೃಹದ ಭಾಗವಾಗಿರ ಬಹುದು. ಹೀಗಿದ್ದಲ್ಲಿ ನಂದಿಮಂಟಪ ಇರುವಲ್ಲಿ ಪೂರ್ವದ ಗೋಡೆಗೆ ಹತ್ತಿದ ಹಾಗೆ ಇದ್ದ ಕೋಣೆ (ಅಥವ ವೇದಿಕೆ ?)ಯಿರುವುದು ಸಮಂಜಸವಾಗು ವುದಿಲ್ಲ. ಮತ್ತು ಆ ಬದಿಯ ಗೋಡೆಯ ಉದ್ದ ಮತ್ತು ಆಕಾರವನ್ನು ನೋಡಿದರೆ ಅದರ ಮುಂದೆ ಮುಖ ಮಂಟಪವಿದ್ದ ಹಾಗೆ ಇಲ್ಲಿ ಬಾಗಿದ ಗೋಡೆಯ ವೃತ್ತಾಕಾರವು ಬಹಳ ಅಲ್ಪವಾಗಿದ್ದು ಆ ಗೋಡೆಯು ಗಜ ಪೃಷ್ಠಾಕೃತಿಯ ಆಕಾರವನ್ನು ತಾಳಬಹುದೆ ಎಂದು ಅನುಮಾನವಾಗಬಹುದು. ಈ ರೀತಿಯಲ್ಲದೆ ತುಂಡುಗೆರೆಯಲ್ಲಿ ತೋರಿಸಿದ ಹಾಗೆ ಪಶ್ಚಿಮ ಭಾಗವು ಇದ್ದಲ್ಲಿ ಕಟ್ಟಡಕ್ಕೆ ಪಶ್ಚಿಮದ ಕಡೆ ಮುಖಮಂಟಪವಿದ್ದು ಮಧ್ಯಾಂಗಣಕ್ಕೆ ಹೋಗಲು ಚಿತ್ರದಲ್ಲಿ ತೋರಿಸಿದ ಹಾಗೆ ದ್ವಾರವಿದ್ದಿರಬಹುದು. ಆಗ ನಂದಿ ಮಂಟಪವಿರುವಲ್ಲಿ ಇದ್ದ ಗೋಡೆಗೆ ಹತ್ತಿಕೊಂಡಿರುವ ಚೌಕೋನದ ಕೋಣೆಯು ಪಶ್ಚಿಮಾಭಿಮುಖವಾಗಿರುವ ಗರ್ಭಗೃಹವಿರಬಹುದು. ಈ ಪ್ರಕಾರವಾಗಿದ್ದಲ್ಲಿ (ಅಥವ ಈಗ ದೊರೆತ ಭಾಗದಷ್ಟು ಆಗಲಿ) ಈ ಕಟ್ಟಡದ ತಳವಿನ್ಯಾಸ ಮತ್ತು ವಿಸ್ತಾರದಲ್ಲಿ ಐಹೊಳೆಯಲ್ಲಿಯ ಲಾಡ್‌ಖಾನ್ ದೇವಾಲಯಕ್ಕೆ ಬಹಳಷ್ಟು ಹೋಲುತ್ತದೆ. ಮುಖಮಂಟಪ ವಿನ್ಯಾಸದಲ್ಲಿ ಮಾತ್ರ ಸ್ವಲ್ಪ ವ್ಯತ್ಯಾಸವಿದ್ದಿರ ಬಹುದು. ಲಾಡ್‌ಖಾನ್ ದೇವಾಲಯದಲ್ಲಿ ಮುಖಮಂಟಪವು ಮುಂದಿನ ಸಭಾಂಗಣದಷ್ಟೆ ಅಗಲವಾಗಿಲ್ಲ. ಮತ್ತು ಅದರ ಮಧ್ಯಾಂಗಣದ ಕೇಂದ್ರದಲ್ಲಿ ನಂದಿಮಂಟಪವಿದೆ.

ಸಂಗಮೇಶ್ವರ ದೇವಾಲಯ ಅಧಿಷ್ಠಾನದ ಕೆಳಗೆ ಇದ್ದಿರಬಹುದಾದ ಈ ಕಟ್ಟಡದ ಭಾಗದ ಬಗ್ಗೆ ಮೇಲೆ ಮಂಡಿಸಿರುವ ವಿಚಾರಗಳ ಸತ್ಯಾಸತ್ಯತೆಯನ್ನು ತಿಳಿಯಲು ನಂದಿಮಂಟಪದ ಅಧಿಷ್ಠಾನ ಮತ್ತು ಸಂಬಂಧಪಟ್ಟ ದೇವಾಲಯದ ಅಧಿಷ್ಠಾನವನ್ನು ಎಚ್ಚರಿಕೆಯಿಂದ ಕ್ರಮವಾಗಿ ಬಿಡಿಸಿ ತೆಗೆದು, ಆ ಭಾಗಗಳನ್ನು ಪರೀಕ್ಷಿಸಿ ಮತ್ತೆ ಹಾಗೆಯೇ ಜೋಡಿಸಬೇಕಾಗುವುದು. ಇದು ಗುರುತರದ ಜವಾಬ್ದಾರಿಯ ಮತ್ತು ಬಹಳ ಪರಿಶ್ರಮದ ಕೆಲಸ.

ಎಲ್ಲೆಲ್ಲಿ ಈ ಕಟ್ಟಡದ ಭಾಗವು ಕಾಲಾಂತರದಲ್ಲಿ ಕಟ್ಟಿದ ಮನೆಗಳ ತಳ ಪಾಯ ಗುಂಡಿಯಿಂದಾಗಲಿ, ತಿಪ್ಪೆಯ ಗುಂಡಿಯಿಂದಾಗಲಿ ಹಾಳಾಗಿಲ್ಲವೋ,

ಚಿತ್ರ 1.



೧. ಪಟ್ಟದಕಲ್ಲು : ಸಂಗಮೇಶ್ವರ ದೇವಾಲಯದ ಮುಂದೆ ಉತ್ಖನನದಲ್ಲಿ ತೋರಿ ಬಂದ ಇಟ್ಟಿಗೆ ಕಟ್ಟಡ.



೨. ಸಂಗಮೇಶ್ವರ ದೇವಾಲಯದ ಮುಂದಿನ ನಂದಿ ಮಂಟಪ ಮತ್ತು ತಳಭಾಗದಲ್ಲಿನ ಇಟ್ಟಿಗೆ ಕಟ್ಟಡದ ಒಂದು ಭಾಗ.


ಚಿತ್ರ



ಸಂಗಮೇಶ್ವರ ದೇವಾಲಯದ ಮೇಲಿನಿಂದ ಇಟ್ಟಿಗೆ ಕಟ್ಟಡದ ಒಂದು ನೋಟ

ಚಿತ್ರ 3

ಚಾಲುಕ್ಯಪೂರ್ವದ ಇಟ್ಟಿಗೆ ಕಟ್ಟಡ,
ಪಟ್ಟದಕಲ್ಲು.



ಅಲ್ಲೆಲ್ಲ ಈ ಕಟ್ಟಡದ ಒಳಹೊರಬದಿಯಲ್ಲಿಯ ಮಣ್ಣಿನಲ್ಲಿ ಗಡಿಗೆಯ ಚೂರು ಗಳೂ ಯಾವ ತರಹದ ಅವಶೇಷಗಳೂ ಕೂಡ ಇರಲಿಲ್ಲ. ಈ ಕೆಂಪುಬಣ್ಣದ ಮರಳುಮಣ್ಣಿನಲ್ಲಿ ನಿತ್ಯ ಜನವಸತಿಯಿದ್ದ ಲಕ್ಷಣಗಳು ಇರದೆ ಸ್ವಚ್ಛವಾಗಿತ್ತು. ಆದುದರಿಂದ ಈ ಕಟ್ಟಡವು ಒಂದು ಧಾರ್ಮಿಕ ಕಟ್ಟಡವಾಗಿರಬೇಕು.

ಈ ಕಟ್ಟಡದ ಸಮೀಪದಲ್ಲಿಯೇ ಕಾಶೀ ವಿಶ್ವೇಶ್ವರ ದೇವಾಲಯದ ಮುಂಭಾಗದ ಪ್ರದೇಶದಲ್ಲಿ ಕೆಲವು ಇಟ್ಟಿಗೆಯ ಕಟ್ಟಡಗಳ ಅವಶೇಷಗಳಿದ್ದುದು ಅಲ್ಲದೆ ಅಲ್ಲಿದ್ದ ಮನೆಗಳನ್ನು, ಮಣ್ಣನ್ನು ತೆಗೆಯಿಸುವಾಗ ಕೆಳಮಟ್ಟದಲ್ಲಿ ದೊರೆದ ಇಟ್ಟಿಗೆಯ ಪುಡಿ ಮಿಶ್ರಿತ ಮಣ್ಣು, ಇಟ್ಟಿಗೆಯ ತುಂಡುಗಳು ಗಮನಾರ್ಹವಾದ ಪ್ರಮಾಣದಲ್ಲಿ ಕಂಡುಬಂದವು. ಮತ್ತು ಅಲ್ಲಲ್ಲಿ ಒಂದೆರಡು ಪೂರ್ಣ ಇಟ್ಟಿಗೆಗಳುಳ್ಳ ಸಾಲುಗಳೂ ತೋರಿದವು. ಆದರೆ ಇವುಗಳ ಪರಿಸರದ ಮಣ್ಣಿನಲ್ಲಿ ಸಮಕಾಲೀನದ ಮೃತ್ಪಾತ್ರೆಯ ಚೂರುಗಳಾಗಲಿ, ಜನವಸತಿಯ ಕುರುಹುಗಳಾಗಲಿ ಸಿಗಲಿಲ್ಲ. ಆದುದರಿಂದ ಈ ನದಿಯ ದಂಡೆಯಲ್ಲಿ ಬಾದಾಮಿ ಚಾಲುಕ್ಯರಗಿಂತಲೂ ಪೂರ್ವದಲ್ಲಿ ಧಾರ್ಮಿಕ ಕಟ್ಟಡಗಳಿದ್ದು ಈ ಸತ್ಸಂಪ್ರದಾಯವು ಇಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಶಿಲಾ ದೇವಾಲಯಗಳ ನಿರ್ಮಾಣಗಳಲ್ಲಿ ಮುಂದುವರೆಯಿತು ಎಂದು ತೋರುತ್ತದೆ,

ಕಾಲಮಾನ :

ಈ ಕಟ್ಟಡದ ಕೆಲವು ಭಾಗಗಳು ವಿಜಯಾದಿತ್ಯನ ಕಾಲ (ಕ್ರಿ- ಶ. ೬೯೬-೭೩೩) ದಲ್ಲಿ ಕಟ್ಟಿದ ವಿಜಯೇಶ್ವರ-ಅಂದರೆ ಈಗಿನ ಸಂಗಮೇಶ್ವರ– ದೇವಾಲಯದ ಮತ್ತು ಅದರ ನಂದಿ ಮಂಟಪದ ಕೆಳಗಿರುವುದರಿಂದ ಇದು ಕಾಲಾಂತರದಲ್ಲಿ ಹಾಳಾದ ನಂತರವೇ ಇದರ ಅವಶೇಷಗಳ ಮೇಲೆ ದೇವಾಲಯವು ಕಟ್ಟಲ್ಪಟ್ಟಿದೆ ಎಂಬುದು ಸುಸ್ಪಷ್ಟವಾಗುತ್ತದೆ. ಇದನ್ನು ದಕ್ಷಿಣ ಬದಿಯ ಗೋಡೆಯ ಹೊರಗೆ ಅದಕ್ಕೆ ಹತ್ತಿದ ಹಾಗೆ ಚೌಕೋನ ಕಲ್ಲು ತುಂಡುಗಳ ಸಾಲು ಮತ್ತು ಇಟ್ಟಿಗೆಯ ಗೋಡೆಯ ಮೇಲೆ ಚಾಲುಕ್ಯರ ಕಾಲದ ಒಂದು ಸಣ್ಣ ಶಿಲಾ ದೇವಾಲಯದ ಅಧಿಷ್ಠಾನದ ಕಲ್ಲು (ಚಿತ್ರ ೩, ೧೧) ಇರುವುದು ಪುಷ್ಟೀಕರಿಸುತ್ತದೆ. ಅಂದರೆ ಇದು ಕ್ರಿ. ಶ. ೬-೭ ನೇ ಶತಮಾನ ಕ್ಕಿಂತಲೂ ಪೂರ್ವದ್ದು. ಎಷ್ಟು ಕಾಲ ಹಿಂದಿನದು ಎಂಬುದನ್ನು ಕೂಡ ಸ್ಥೂಲವಾಗಿ ಹೇಳಬಹುದು. ಈ ಕಟ್ಟಡದ ಇಟ್ಟಿಗೆಯ ಆಕಾರ ಮತ್ತು ಅಳತೆ ಗಳು ಮತ್ತು ಕಟ್ಟುವ ಪದ್ಧತಿಯು ಬ್ರಹ್ಮಗಿರಿಯ "ಇತಿಹಾಸ ಪ್ರಾರಂಭ" ಕಾಲದ ಗಜಪೃಷ್ಠಾಕೃತಿಯ ಇಟ್ಟಿಗೆಯ ಕಟ್ಟಡಕ್ಕೆ ಮತ್ತು ಬನವಾಸಿ ಯಲ್ಲಿಯ ಶಾತವಾಹನರ ಅರಸರ ಕಾಲದ ಕಟ್ಟಡಕ್ಕೂ ಸ್ವಲ್ಪ ಮಟ್ಟಿಗೆ

ಹೋಲಿಕೆಯಿದೆ. ಮತ್ತು ಇದರ ಅನತಿ ದೂರದಲ್ಲಿಯೇ "ಇತಿಹಾಸ ಪ್ರಾರಂಭ" ಕಾಲದ ಜನವಸತಿಯು ನೆಲೆಯಿರುವುದನ್ನು ಮೇಲೆ ಹೇಳಿದೆ. ಆದುದರಿಂದ ಇದು ಕ್ರಿ. ಶ. ೩–೪ ನೆಯ ಶತಮಾನದ ಅಂತರದಲ್ಲಿ ನಿರ್ಮಾಣವಾಗಿರಬಹುದೆಂದು ಹೇಳಬಹುದು.

ಈ ಕಟ್ಟಡವೂ ಸೇರಿ ಕರ್ನಾಟಕದಲ್ಲಿ ಇದುವರೆಗೆ "ಇತಿಹಾಸ ಪ್ರಾರಂಭ" ಕಾಲದ ಕಟ್ಟಡಗಳು ಒಟ್ಟು ಮೂರು ದೊರೆತ ಹಾಗಾಯಿತು. ಈ ಮೂರರ ವಾಸ್ತು ವಿನ್ಯಾಸವು ಬೇರೆ ಬೇರೆಯಾಗಿರುವುದು. ಇವೆಲ್ಲವು ಬಹುಶಃ ಧಾರ್ಮಿಕ ಕಟ್ಟಡಗಳಾಗಿವೆ. ಬ್ರಹ್ಮಗಿರಿಯದು ಗಜಪೃಷ್ಠಾಕೃತಿಯುಳ್ಳ ಒಂದು ಉದ್ದನೆಯ ಕಟ್ಟಡ. ಒಳಭಾಗದಲ್ಲಿ ಕಂಬಗಳಿದ್ದವೋ ಇಲ್ಲವೋ ತಿಳಿಯದಾಗಿದೆ. ಬನವಾಸಿಯಲ್ಲಿಯದು ಒಂದು ವೇದಿಕೆಯುಳ್ಳ ಗಜಪೃಷ್ಠಾಕೃತಿಯ ದೇವಾಲಯ. ಪಟ್ಟದಕಲ್ಲಿನಲ್ಲಿ ದೊರೆತ ಕಟ್ಟಡದ ಭಾಗವು ಚೌಕೋನವಾಗಿದ್ದು ಕಂಬಗಳ ಸಾಲುಗಳಿಂದ ಮಧ್ಯಾಂಗಣವು ಮತ್ತು ಇಕ್ಕೆಲದಲ್ಲಿ ಹಜಾರಗಳಾಗಿ ವಿಭಾಗಿಸಲ್ಪಟ್ಟದ್ದು ಹೆಚ್ಚು ಬೋಧಕವಾಗಿವೆ. ಆದುದರಿಂದ ಈ ಕಾಲದ ವಾಸ್ತುಶಿಲ್ಪದ ರಚನೆ ಮತ್ತು ವೈವಿಧ್ಯತೆ ತಿಳಿಯಲು ಇವುಗಳು ಅಮೂಲ್ಯವಾದ ಆಧಾರಗಳಲ್ಲದೆ ಕರ್ನಾಟಕದಲ್ಲಿ ಮುಂದೆ ಬಾದಾಮಿ ಚಾಲುಕ್ಯರ ಕಾಲದಿಂದ ತುಂಡು ಕಲ್ಲಿನ ಲಾಡ್‌ಖಾನ್, ದುರ್ಗ ಮುಂತಾದ ದೇವಾಲಯಗಳ ನಿರ್ಮಾಣದಲ್ಲಿನ ಪೂರ್ವಭಾವಿ ಪದ್ಧತಿಯನ್ನು ಇವುಗಳಲ್ಲಿ ಕಾಣಬಹುದು.

★ ಅ. ಸುಂದರ

ಕೃತಜ್ಞತೆ :

ಪಟ್ಟದಕಲ್ಲಿನಲ್ಲಿನ ಉತ್ಖನನದಲ್ಲಿ ದೊರೆತ ಇಟ್ಟಿಗೆ ಕಟ್ಟಡದ ವಿಷಯವಾಗಿ ಲೇಖನ ಬರೆಯಲು ಕೇಂದ್ರ ರಾಜ್ಯಾಂಗದ ಪುರಾತತ್ತ್ವ ಸರ್ವೇಕ್ಷಣ ಶಾಖೆಯ ನೈರುತ್ಯ ವಿಭಾಗದ ಸೂಪರಿನ್‌ಟೆಂಡಿಂಗ್ ಆರ್ಕಿಯಾಲಜಿಸ್ಟ್ ಇವರು ವಿಶ್ವಾಸದಿಂದ ಅನುಮತಿ ಕೊಟ್ಟಿದ್ದಾರೆ. ಶ್ರೀ ಕೃ. ಜೋಶಿಯವರು ಈ ಕಟ್ಟಡದ ರೇಖಾಚಿತ್ರವನ್ನು (ಚಿತ್ರ - 3) ಬಹು ಚೆನ್ನಾಗಿ ಸಿದ್ಧಪಡಿಸಿದ್ದಾರೆ. ಇವರುಗಳಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.

ಸೋಮ-ಭೀಮರ ಕಥೆ

(ಜಾನಪದ)

ಸೋಮರಾಯ ಭೀಮರಾಯ ಜೋಡೀಲಿ ಗೆಳೆಯರು;
ನಿಷ್ಠೆಯಿಂದ ಕಂಡರು ಮುಕ್ತಿ ಮಾರ್ಗವನು;
ಕೇಳಿರಿ ಇದನು.

ಸೋಮರಾಯನ ಮನೆತನ ಭೀಮರಾಯ್ಗೆ ಗೊತ್ತಿದ್ದಿಲ್ಲ
ಭೀಮಥಾಯನ ಮನೆತನ ಸೋಮರಾಯಗೆ;
ಇಬ್ರ ಗೆಣೆತನ ನಡಿಯೋದು ಗರಡಿ ಆಲಯದಿ.

ಒಂದಲ್ಲ ಒಂದು ದಿವ್ಸ ಸೋಮರಾಯನ ಹೆಂಡತಿ
ತಾಂಬ್ಲ ತಕೊಳ್ಳೋಕೆ ಬಂದಾಳಂಗ್ಡಿ ಬಾಗಿಲಲಿ;
ಇವರ ಎದುರಿನಲಿ.

ಗೆಣೆಯನ ಹೆಣತಿ ಎಂಬುದ ಗುರುತು ಇಲ್ಲದ
ಗೆಣೆಯನ ಕೇಳಿದ:
ಈಕೆ ಯಾರೋ ನನಗೆ ಹೇಳೆಂದ.
ಈಕೆ ಮೇಲೆ ಮನಸು ನಂದೈತಿ
ಹತ್ತೈತಿ ಬಲ್‌ಬರಾ!
ಹೆಚ್ಚೈತಿ ಒಳ್ಳೆ ಇರಾ
ಕೂಡಿಸು ಅಂದಾನು—
ಒಂದು ರಾತ್ರಿ ಕಾಲ ಕಳೆದೇನೂ.

ಹೆಣ್ತಿ ಅಂತ ಹೇಳಿದರ ಗೆಣ್ತಾನ ಕೆಟ್ಟೋಗತ್ತೈತಿ
ಹೆಣ್ತಿ ಅಂತ ಹೇಳಬಾರದೆಂದಿವನು:
ಈಕೆ ಸೂಳೆ ಅಂತ ಸುಳ್ಳೆ ಮಾತ ಹೇಳಿದನು.

ಇಷ್ಟ ಮಾತ ಹೇಳಿ ಸೋಮ ಶಿಸ್ತಾಗಿ ಮನೇಗೆ ಬಂದು
ಪತೀವ್ರತಾ ಬಾ ಎಂದು ಕರೆದಾನು.
ಕೇಳ ನನ್ ಗೆಳೆಯಾ ಮನಸಿಟ್ಟ ನಿನ್ನೋಳು:
ಒಲ್ಲೆ ಎನ್ನಬೇಡ ಸ್ತ್ರೀಯಳೆ ಮಾತ ಕೇಳು:
ಭೋಗ ಕೊಡು ಏಳು.

ನಿನ್ನಂಥ ಪುರುಷಾನ ಬಿಟ್ಟು ಅನ್ಯ ಪುರುಷಾನ ಕೈಲಿ
ಹ್ಯಾಗೆ ಹೋಗಿ ನಾ ಭೋಗ ಕೊಡಲ್ಬೇಳು?
ಕರುಣ ತಪ್ಪಿತೇನೋ ಪ್ರಿಯ ನನ್ನೋಳು?

ಗಂಡ ಹೆಂಡಿರಾಡ್ಯಾರು ಪ್ರೀತಿಮಾತ
ಮಂಚ ಹಾಸುತ;
ಹಾಸಿಗೆ ಒಳ್ಳೆ ತುರು ತಾ.

ಮಾಡ್ಯಾರೋ ಲೇಪ ತಡಿ
ನಾಲಕ ಕಡಿ ಹಚ್ಚ್ಯಾರ ನಾಲ್ಕ ಸವಿ;
ಗಂದೆಣ್ಣಿ ಸಂಪಿಗೆ ತನಿ
ಅದಿರಾದ ಪುಡಿ
ತಬಕ ತುಂಬಿ ಇಟ್ಯಾರ ಸಜ್ಜುಮಾಡಿ.

ಸೋಮು ಹೋದ ಗೆಣೆಯನ ಕರೆಯಲಿಕೆ
ಗರಡಿ ಆಲಯುಕೆ.
ಇದೆ ವೇಶ್ಯೆಮನೆ ಹೋಗೆಂದ
ದೂರನಿಂತು ತೋರಿದ:
ಹಿಂದಕೆ ತಿರುಗಿದ:
ಸೋಮು ಹೋದ ಗರಡಿ ಆಲಯುಕೆ.

ಚಿಂತೆಗೆಟ್ಟ ಭೀಮರಾಯು:
ಮುಂಚೆ ಹಾಸಿದ ಲೇಪ ತಡಿ;
ಮಂಚದ ಮೇಲೆ ತಾ ಹೋಗಿ ಕೂತಿದನು.
ಮುಂಚೆ ದೀಪ ಹೋಗತಾವೆ ಬತ್ತಿ ಚಾಚೆಂದನು.

ಬೆಟ್ಟಲಿ ದೀಪವ ಚಾಚಿ
ಬಟ್ಟೆಗೆ ಒರೆಸಿ ಯಾಳು ನಾರಿ:
ಭೀಮರಾಯು ಕೂನ ಹಿಡಿದಾನು.
ಸೂಳೆಯಾಗಿದ್ರೆ ಈಕೆ ಶೀಲ ಸೂಕ್ಷ್ಮ ಇರುತಿತ್ತು:
ಸೂಳೆಯಲ್ಲ ಪತಿವ್ರತೆ ಎಂದಿದನು.

ಯಾವ ತಾಯಿ ಮಗಳು ನೀನು;
ಯಾವ ಪುರುಷಾನ ಸತಿಯು ನೀನು?
ಚೂರ್ ಕೂನ ಇಲ್ಲದಂಗೆ ಹೇಳೆಂದನು.
ಆಕೆ ಸೂಳೆ ಅಂತ ಸುಳ್ಳೆ ಮಾತ ಹೇಳಿದಳು.

ಮಂಚದ ಮೇಲೆ ಕುಂತಗೊಂಡು
ಅತ್ತ ಇತ್ತ ನೋಡೋದ್ರೊಳಗೆ:
ಮಂಚದ ಮೇಲೆ ಕಡಗವನ್ನು ಕಂಡಾನು
ಅದೇ ಕಡಗ ಕೈಯಲ್ಹಿಡಿದು ನೋಡಿದನು.

ಸೋಮರಾಯನ ಮನೆತನವಿದು;
ಸೋಮರಾಯನ ಸತಿಯುಳೀಕೆ.
ಇಂಥ ಕೆಟ್ಟ ಕೆಲ್ಸ ಮಾಡೋವ್ನಲ್ಲ ಎಂದು ನಾನು.
ಮುಂಜಾಲಿ ಹ್ಯಾಂಗೆ ಎದ್ದು ಗೆಣೆಯಾಗೆ
ಮಾರಿ ತೋರಲೆಂದನು.

ಇವಕಿಂತ ಸಾಯೋದೆ ಲೇಸೈತಿ
ತಗಂಡನದೆ ಕತ್ತಿ ತನ್ನ ಪ್ರಾಣ ಹತಿ
ಮಾಡಿ ಕೊಂಡಿದಾನು ಪ್ರಾಣ ಹತಿ.

ನಾಳೆ ಉದಯಾಕೆ ಸೋಮ ಸುಗಜಾಣ
ವ್ಯರ್ಥ ಕೊಲ್ಲು ತಾನೆ ತನ್ನ ಪ್ರಾಣ
ಇದಕಿಂತ ಸಾಯೋದೆ ಲೇಸೈತಿ
ತಗೊಂಡಳದೆ ಕತ್ತಿ; ತನ್ನ ಪ್ರಾಣಹತಿ.
ಬಿದ್ದಾವು ಎರಡು ಹೆಣ ಜತಿ.

ನಾಳೆ ಉದಯಾಕೆ ಸೋಮ ಸುಗಜಾಣ
ಗೆಣೆಯಾನ ಕರೆಯಲಿಕೆ
ಹೋದಾನು ತನ್ನ ಅರಮನೆಗೆ:
ಏನಗಲಿ ಹೋದ್ಯೋ ಭೀಮ ಜತಿ
ಯಾರ ಕೂಟ ಆಡಲಿ ನಾ ಕುಸ್ತಿ ?
ನನ್ನ ಅನುಕೂಲಕ್ಕೆ ಸರಿಯಾದ ಹೆಣತಿ
ಎಲ್ಲಿ ಹುಡುಕಿದರೆ ಸಿಕ್ಯಾಳು ಇಂಥ ಸತಿ ?
ಇಂಥರೋದ ಮೇಲೆ ನಂದೇನೈತಿ
ತಗೊಂಡನದೆ ಕತ್ತಿ ತನ್ನ ಪ್ರಾಣಹತಿ.

ಕತ್ತಿಯು ತಗೊಂಡು ಸೋಮ ಕುತ್ತಿಗೆಯ ಕೊಯ್ಯುವಾಗ
ಪರಮೇಶ್ವರ ಕೈ ಹಿಡಿದಾನು;
ಅವರ ಭಕ್ತಿಭಾವ ನೋಡಿ ಮೆಚ್ಚಿದನು;
ಅವರು ಮೂವರಿಗು ಕೊಟ್ಟ ಮುಕ್ತಿ ಫಲಗಳನು;
ಗುಡಿ ಸಂಗಮೇಶ ಮಾಡಿದ ಕವಿತಾ
ಕೇಳರಿ ಇದನು.

(ಹಾಡಿದವರು : ದಿ. ಬಸಪ್ಪ ತಾಳಗುಪ್ಪ, ಶಿವಮೊಗ್ಗ ಜಿ.)

★ ನಾ. ಡಿಸೋಜ

ವಿಷಕನ್ಯೆ

ಆ ದಿನ ಸುರೇಶನ ವಾಗ್ಬಾಣಕ್ಕೆ ರಮಾ ಗುರಿಯಾಗಿದ್ದಳು. ಅವಳ ಮನಸ್ಸಿಗೆ ಹತ್ತುವಂಥ ಮಾತನ್ನಾಡಿದ ಬಗೆಗೆ ಗೆಳೆಯ ಗಣಪತಿ ಆಕ್ಷೇಪಿಸಿದ್ದ.

"ದರಿದ್ರ ಮುಖ ನೋಡಿದ್ದೇವೆ. ಈ ದಿನ ನಮಗೇನು ಕಾಯ್ದಿದೆಯೋ ಏನೋ" ಎಂದು ಸುರೇಶ ಆಡಿದ ಮಾತು ಅವಳಿಗೆ ಕಣ್ಣೀರು ತರಿಸಿತ್ತು.

ಕ್ಲಾಸು ಬಿಟ್ಟು ಹೊರಗೆ ಬಂದ ಮೇಲೆ ಗಣಪತಿ ಸುರೇಶನನ್ನು ತರಾಟೆಗೆ ತೆಗೆದುಕೊಂಡ. "ಜೀವನದಲ್ಲಿ ಅವಳಿಗೇನು ಕಷ್ಟವಿದೆಯೋ ಏನೋ? ಆಕೆ, ಕಾಲೇಜಿಗೆ ಬರುವ ಇನ್ನುಳಿದ ಹುಡುಗಿಯರಂತೆ ಇಲ್ಲವೆನ್ನುವುದು ಅವಳನ್ನು ನೋಡಿದರೇ ಕಾಣುತ್ತದೆ. ಮೊದಲೇ ನೋವು ತಿಂದವಳ ಮನಸ್ಸಿಗೆ ಈ ನೀನು ಆಡಬಾರದ ಮಾತು ಆಡಿ ಹೊಸ ಗಾಯಮಾಡಿದಂತಾಯಿತು."

ಸುರೇಶನಿಗೆ ಪಶ್ಚಾತ್ತಾಪವೆನಿಸಿತ್ತು. ರಮಾಳನ್ನು ಅಳಿಸಬೇಕೆನ್ನುವ ಉದ್ದೇಶ ಅವನಿಗೆ ಇರಲಿಲ್ಲ. ಅನುದ್ದೇಶಪೂರ್ವಕವಾಗಿ ತಾನು ಆಡಿದ ಮಾತು ಇಷ್ಟು ದೂರ ಹೋದೀತೆಂದು ಅವನು ನಿರೀಕ್ಷಿಸಿರಲಿಲ್ಲ. ಅವನ ಚೇಷ್ಟೆಯ ಸ್ವಭಾವ ಈಗ ಒಮ್ಮೆಲೇ ಗಾಂಭೀರ್ಯಕ್ಕೆ ತಿರುಗಿತು.

"ಗಣಪತಿ ನಾನು ಅವಳ ಕ್ಷಮೆಯನ್ನು ಕೇಳಲೇಬೇಕು", ಎಂದು ಸುರೇಶ ಹೇಳುವ ಹೊತ್ತಿಗೆ ನವಜೀವನ ಹಾಸ್ಟೆಲಿನ ದಳವಾಯಿ ರಾಮೂ ಬಂದು ಅವರಿಬ್ಬರನ್ನೂ ಆ ದಿನದ ಫೀಸ್ಟಿಗೆ ಬರುವಂತೆ ಆಮಂತ್ರಿಸಿದ.

ರಾಮೂ ಅತ್ತ ಹೋದುದೇ ತಡ, ಗಣಪತಿಯು ಸುರೇಶನ ಬೆನ್ನಮೇಲೆ ಒಂದು ಗುದ್ದು ಹಾಕಿ, "ಅವಳದು ದರಿದ್ರಮುಖ ಎಂದು ಹೇಳಿದ್ದೆಯಲ್ಲೋ ಗುಗ್ಗು! ಆ ದರಿದ್ರ ಮುಖ ನೋಡಿದಮೇಲೆಯೇ ನಿನಗೆ ಸವಿಯೂಟದ ಆಮಂತ್ರಣ ಸಿಕ್ಕಿತು. ಈಗ ನೀನೇ ಹೇಳು, ಅವಳದೇನು ದರಿದ್ರಮುಖವೋ, ಸುದೈವದ ಮುಖವೋ?" ಎಂದ. ಯಾರು ಹೇಗಿದ್ದಾರೆನ್ನುವುದು ಅವರ ಮುಖ ನೋಡಿದರೆ ತಿಳಿಯುವುದಿಲ್ಲ. ಕೆಲವು ತೋಳಗಳು ಕುರಿಯ ಮುಖವನ್ನು ಧರಿಸಿರುತ್ತವೆ.

* * * *

ಅವರೊಂದಿಗೆ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸೀನಿಯರ್ ಬಿ. ಎಸ್‌ಸಿ. ಓದುತ್ತಿದ್ದ ರಮಾ ನಾಯಕ ಸಾದಾ ಎಂದರೆ ತುಂಬ ಸಾದಾ. ಥಳಕು ಬೆಳಕು ಎನ್ನುವ ಮಾತು ಅವಳ ಶಬ್ದಕೋಶದಲ್ಲಿಯೇ ಇರಲಿಲ್ಲ.

ಅವಳ ಮುಖ ಯಾವಾಗಲೂ ಮ್ಲಾನವಾಗಿರುತ್ತಿತ್ತು. ಅವಳು ನಕ್ಕು

ದುದನ್ನು ಯಾರೂ ನೋಡಿರಲಿಲ್ಲ. ಅವಳನ್ನು ನೋಡಿದವರಿಗೆ ಅವಳಲ್ಲಿ ಭಾವನೆಗಳೇ ಇದ್ದಿರಲಾರವೆಂಬಂತೆ ತೋರುತ್ತಿತ್ತು.

ತನಗೆ ಇನ್ನೊಂದು ಸೀರೆ ಇಲ್ಲವೇನೋ ಎಂಬಂತೆ ಅವಳು ದಿನವೂ ಮಾಸಿದ ಒಂದು :ಬಿಳಿಯ ಸೀರೆ ಉಟ್ಟುಕೊಂಡು ಕಾಲೇಜಿಗೆ ಬರುತ್ತಿದ್ದಳು. ಬೆಳ್ಳಗೆ ಇದ್ದರೆ ಬಿಳಿಯ ಸೀರೆ; ಮಾಸಿಕೊಂಡಿದ್ದರೆ ಅದರಷ್ಟು ಹೊಲಸಾಗಿ ಯಾವುದೂ ಕಾಣುವುದಿಲ್ಲ.

ಬಡತನವು ಅವಳನ್ನು ಆ ಸ್ಥಿತಿಯಲ್ಲಿ ಇಟ್ಟಿರಬಹುದೇ? ಛೇ, ಇದ್ದಿರ ಲಾರದು. ಬಟ್ಟೆಗಳನ್ನು ಪರಿಶುಭ್ರವಾಗಿ ಇರಿಸಿಕೊಳ್ಳಲು ಬಡತನವೇಕೆ ಅಡ್ಡ ಬಂದೀತು?

ಅವಳ ಕೈಯಲ್ಲಿ ಬಳೆಯೂ ಇರಲಿಲ್ಲ; ಹಣೆಯಲ್ಲಿ ಕುಂಕುಮವೂ ಇರಲಿಲ್ಲ. ತುಟಿಯ ರಂಗು, ಉಗುರಿನ ಬಣ್ಣ ದೂರದಲ್ಲಿಯೇ ಉಳಿದವು. ಪೌಡರು ಸುವಾಸಿಕಗಳನ್ನಂತೂ ಕೇಳಲೇಬಾರದು. ಹಳ್ಳಿಯ ಮುಗ್ಧಳಂತೆ ಆಕೆ ತಲೆತುಂಬ ಸೆರಗು ಹೊದೆದು, ಮುಖ ಕೆಳಗೆ ಹಾಕಿಕೊಂಡು ಕಾಲೇಜಿಗೆ ಬರುತ್ತಿದ್ದಳು.

* * * *

ಸುರೇಶ ಹಾಗೂ ಗಣಪತಿ ಆ ಇಬ್ಬರೂ ಸ್ನೇಹಿತರು ಅವಳ ಬಗೆಗೆ ಹೆಚ್ಚಿನ ಆಸಕ್ತಿ ವಹಿಸಿದರು. ಅವರ ಶೋಧವು ಅವಳು ವಿದ್ಯಾರ್ಥಿನಿಯರ ಹಾಸ್ಟೆಲಿನಲ್ಲಿ ಇರುವುದನ್ನು ಅವರಿಗೆ ತಿಳಿಸಿಕೊಟ್ಟಿತು. ಅವರು ಅದರ ಬಗೆಗೆ ತರ್ಕ ಮಾಡತೊಡಗಿದರು.

ಅವಳು ಬಡವಳಾಗಿದ್ದರೆ ವಿದ್ಯಾರ್ಥಿನಿಯರ ಹಾಸ್ಟೆಲ್ಲಿನಲ್ಲಿ ಇರುತ್ತಿರಲಿಲ್ಲ; ಧಾರವಾಡದವಳೇ ಆಗಿದ್ದರೆ ಹಾಸ್ಟೆಲಿಗೆ ಬರುತ್ತಿರಲಿಲ್ಲ.

ಹಾಗಾದರೆ, ಆಕೆ ಯಾರು? ಎಲ್ಲಿಯವಳು? ಅದನ್ನು ತಿಳಿಯುವ ಬಗೆಗೆ ಅವರು ಹೆಚ್ಚಿನ ಶೋಧ ಕೈಕೊಂಡರು.

ಗಣಪತಿ, ಸುರೇಶನನ್ನು ಕೆಣಕುವಂತೆ ಕೇಳಿದ, “ ನೀನು ಅವಳನ್ನೇನೋ ಅಳಿಸಿದೆ. ಈಗ ಒಮ್ಮೆ ನಗಿಸು ನೋಡೋಣ. ಅದು ನಿನ್ನಿಂದ ಆಗಲಾರದು ಎಂದು ನನ್ನ ಅಭಿಪ್ರಾಯ”.

ಪ್ರತಿಜ್ಞೆ ತೊಟ್ಟವನಂತೆ ಸುರೇಶ ಧೃಡತೆಯಿಂದ ಹೇಳಿದ. '' ಈ ದಿನ ನಾನು ಅವಳನ್ನು ನಗಿಸಿಯೇ ತೀರುತ್ತೇನೆ. ನಗಿಸದಿದ್ದರೆ ನಾನು ಸುರೇಶನೇ ಅಲ್ಲ.

ಎಂದಿನಂತೆ ಅಂದು, ಅವರು ಹುಡುಗಿಯರು, ಅದೂ ರಮಾ ಕುಳಿತಿರುತ್ತಿದ್ದ ಬೆಂಚಿನ ಹಿಂದೆಯೇ ಕುಳಿತುಕೊಂಡರು.

ಪ್ರೊಫೆಸರ್ ಬರುವುದಕ್ಕೆ ಇನ್ನೂ ಎರಡು ನಿಮಿಷಗಳಿದ್ದವು. ಅಷ್ಟರಲ್ಲಿ ರಮಾ ಅಲ್ಲಿಗೆ ಬಂದಳು.

ತಾನು ಏನು ಆಡುತ್ತಾನೆನ್ನುವುದನ್ನು ಸುರೇಶನೇನೂ ಗಣಪತಿಗೆ ಮುಂಚಿತವಾಗಿ ತಿಳಿಸಿರಲಿಲ್ಲ. ರಮಾ ತನ್ನ ಸ್ಥಳದಲ್ಲಿ ಕುಳಿತೊಡನೆಯೇ ಅವಳಿಗೆ ಕೇಳಿಸುವಂತೆ ಅವನು ಗಣಪತಿಗೆ ಹೇಳಿದ.

“ಅಲಂಕಾರ ಇಲ್ಲದ ಈ ದರಿದ್ರ ಮುಖವೇ ನಮಗೆ ಮೃಷ್ಟಾನ್ನ ಭೋಜನ ತಂದು ಕೊಟ್ಟಿತು. ದಿನವೂ ಸವಿಯೂಟ ಸಿಕ್ಕಬೇಕಾದರೆ ನಾವು ಈ ಮುಖವನ್ನೇ ನೋಡಿಕೊಂಡು ಹೋಗಬೇಕು. ಕ್ಲಾಸ್ ಇದ್ದ ದಿನವಂತೂ ಅದು ನಮಗೆ ನೋಡಲು ಸಿಕ್ಕುತ್ತದೆ ರಜೆ ಇದ್ದಾಗ, ಶನಿವಾರ ಹಾಗೂ ಭಾನುವಾರ ಏನು ಮಾಡಬೇಕೋ ನನಗೆ ಯೋಚನೆಯಾಗಿದೆ.”

ಈ ಮಾತು ಕೇಳಿ ರಮಾನ ಹೃದಯವನ್ನು ಕಟ್ಟಾಡಿಸಿದಂತಾಯಿತು. ನಗೆಯ ಮುಗುಳು ಅಲ್ಲಿಂದ ತೇಲಿಬಂದು ಅವಳ ಮುಖದಲ್ಲಿ ಅರಳಿಕೊಂಡಿತು. ಸುರೇಶ ಆಡಿದ ಮಾತನ್ನು ನೆನೆದಂತೆಲ್ಲ ಅವಳ ಮನಸ್ಸಿಗೆ ಹಿತವೆನಿತು. ಮ್ಲಾನವಾಗಿದ್ದ ಅವಳ ಮುಖ ಪ್ರಸನ್ನತೆ ಪಡೆದು ಪ್ರಫುಲ್ಲವಾಯಿತು.

“ಹಾಳಾದ ಈ ಕ್ಲಾಸುಗಳಲ್ಲಿ ನಮಗೆ ಬೆನ್ನುಗಳೊಂದೇ ಕಾಣಿಸುತ್ತವೆ-ಯಲ್ಲದೆ ಮುಖವೊಂದೂ ಕಾಣಿಸುವುದಿಲ್ಲ. ನೋಡಬೇಕೆಂದರೆ ನಾವು ಪ್ರೊಫೆ-ಸರರ ಮುಖವೊಂದನ್ನೇ ನೋಡಬೇಕು. ಆದರೆ ಅಲ್ಲಿ ನೋಡುವುದು ಏನಿರುತ್ತದೆ?” ಎಂದು ಸುರೇಶ ಗೊಣಗಿದ.

ಅವನು ಗೊಣಗಿದ ರೀತಿಯನ್ನು ಕಂಡು ರಮಾ ತನ್ನಷ್ಟಕ್ಕೆ ಉತ್ತೇಜಿತಳಾದಳು. ಆ ದಿನ ಪ್ರೊಫೆಸರರು ತಮ್ಮ ಲೆಕ್ಕದಲ್ಲಿ ಸಂಪೂರ್ಣ ತಪ್ಪಿದರು. ಅವರ ಮುಖ ಹರಳೆಣ್ಣೆ ಕುಡಿದವನಂತೆ ವಿಕೃತವಾಗಿತ್ತು,

ಕ್ಲಾಸಿನಿಂದ ಹೊರಬಿದ್ದ ಮೇಲೆ ಗಣಪತಿಯು, “ನೀನು ಏನೋ ಮಂತ್ರ ಮಾಡಿಬಿಟ್ಟೆ. ನಿರ್ಜೀವ ಬೊಂಬೆಯಲ್ಲಿಯೂ ಕೂಡ ಪ್ರಾಣ ತುಂಬುವ ಸಾಮರ್ಥ್ಯ ನಿನ್ನಲ್ಲಿ ಇದೆ. ಇದು, ನಗದೇ ಇರುವ ರಾಜಪುತ್ರಿಯನ್ನು ನಗಿಸಿದ ಕಥೆಯಂತಾಯಿತು. ನೀನು ಗೆದ್ದೆ” ಎಂದು ಸುರೇಶನನ್ನು ಪ್ರಶಂಸೆ ಮಾಡಿದ.

* * * *

ಅಂದು ರಮಾ ನಕ್ಕಮೇಲೆ ಅವಳ ಮುಖಚರ್ಯೆ ಬದಲಿಸಿತು. ಅದರಂತೆ ಅವಳ ಜೀವನ ಚರ್ಯೆಯೂ ಬದಲಿಸಿತು.

ಮಾಸಿದಂತೆ ಕಾಣುತ್ತಿದ್ದ ಅವಳ ಬಿಳಿಯ ಸೀರೆ ದಿನದಿಂದ ದಿನಕ್ಕೆ ಹೆಚ್ಚು ಪರಿಶುಭ್ರವಾಗಿ ಕಾಣಿಸಿಕೊಳ್ಳತೊಡಗಿತು. ಕೈಗೆ ಎರಡು ಬಳೆ ಬಂದವು. ಹೌದೋ ಅಲ್ಲವೋ ಎನ್ನುವಂಥ ಕುಂಕುಮದ ಒಂದು ಚಿಕ್ಕ ಬೊಟ್ಟು ಅವಳ ಹಣೆಯ ಮೇಲೆ ಕಾಣಿಸಿಕೊಂಡಿತು. ಪುಷ್ಪಪರಾಗದ ತೆಳುವಾದ ಹುಡಿ ಅವಳ ಮುಖದ ಮೇಲೆ ಹರಡಿಕೊಂಡಿತ್ತು.

ಅವಳು ಕ್ಲಾಸಿಗೆ ಬಂದೊಡನೆಯೇ ಗಣಪತಿಯು ಹುಬ್ಬೇರಿಸಿ ಬಹು ಅರ್ಥ

ಪೂರ್ಣವಾಗಿ ಸುರೇಶನ ಕಡೆಗೆ ನೋಡಿದ.

"ಮನಸ್ಸಿಗೆ ಮುದವನ್ನು ಮಾಡುವುದು ಎಂಬುದಕ್ಕೆ ಒಂದೇ ಶಬ್ದ ಯಾವುದು?" ಎಂದು ಸುರೇಶ ಅವನನ್ನು ಕೇಳಿದ.

"ಅದು ನನಗೇನು ಗೊತ್ತು? ಮುಂದೆ ಇರುವವರಿಗೆ ಗೊತ್ತು" ಎಂದ ಗಣಪತಿ.

"ಮುಂದೆ ಇರುವವರು ಎಂದರೆ ತನಗಿಂತ ಮುಂದೆ ಇರುವವರೋ ಅಥವಾ ನಿನ್ನ ಮುಂದೆ ಇರುವವರೋ?" ಎಂದು ಸುರೇಶ ಅವನಿಗೆ ಚೇಷ್ಟೆ ಮಾಡಿದ.

ಅವರ ಮಾತಿಗೆ ರಮಾ ತನ್ನಷ್ಟಕ್ಕೇ ನಕ್ಕಳು,

"ಜನರು ಏಕೆ ನಗುತ್ತಾರೆ?" ಎಂದು ಸುರೇಶ ಗಣಪತಿಯನ್ನು ಕೇಳಿದ.

"ಕೆಲವರು ಸುಮ್ಮನೆ ನಗುತ್ತಾರೆ, ಇನ್ನೂ ಕೆಲವರು ಯಾವುದೋ ಮಾತು ಕೇಳಿ ನಗುತ್ತಾರೆ. ಮತ್ತೆ ಕೆಲವರು, ಇನ್ನೊಬ್ಬರು ನಗುತ್ತಾರೆಂದು ನಗುತ್ತಾರೆ" ಎಂದ ಗಣಪತಿ.

ಕ್ಲಾಸು ಬಿಟ್ಟ ಮೇಲೆ ಗೆಳೆಯರಿಬ್ಬರೂ ತಾವು ಅರ್ಥಮಾಡಿಕೊಂಡಿರುವುದನ್ನು ಒಬ್ಬರಿಗೊಬ್ಬರು ವಿವರಿಸಿದರು. "ಬಹಳ ಬದಲಾವಣೆ ಆಗಿದೆ" ಎನ್ನುವ ಗಣಪತಿಯ ಮಾತಿಗೆ ಸುರೇಶ ಸಮ್ಮತಿಸಿದ.

"ಹಿಂದೆ ನೀನು ಅವಳು ಅಳುವಂತೆ ಮಾಡಿದ ತಪ್ಪು ಅಳಿಸಿ ಹೋಗಬೇಕಾದರೆ ನೀನು ಅವಳನ್ನು ನಮ್ಮ ಹಾಸ್ಟೆಲಿನ ಫೀಸ್ಟಿಗೆ ಆಮಂತ್ರಿಸಿ ಕರೆತರಬೇಕು" ಎಂದು ಗಣಪತಿ ತನ್ನ ಸ್ನೇಹಿತನನ್ನು ಒತ್ತಾಯಿಸಿದ.

"ಆಗಲಿ" ಸುರೇಶ ಅವನಿಗೆ ಹೇಳಿದ. "ಮುಂದಿನ ಭಾನುವಾರದ ಭೋಜನಕ್ಕೆ ಬರುವಂತೆ ಅವಳಿಗೆ ಈ ಹೊತ್ತೆ ಆಮಂತ್ರಣ ಕೊಟ್ಟು ಬರುತ್ತೇನೆ."

ಸಂಜೆಯ ಹೊತ್ತು ಅವನು ಗಣಪತಿಯನ್ನು ಕಂಡಾಗ, ತನ್ನ ನಿಯೋಗದಲ್ಲಿ ಆತ ವಿಫಲನಾದಂತೆ ಗಣಪತಿಗೆ ತೋರಿತು, "ಎಲ್ಲದರಲ್ಲಿಯೂ ಗೆಲ್ಲುತ್ತೇನೆನ್ನುವ ನಿನ್ನ ಹೆಮ್ಮೆಯ ಕೋಡು ಈದಿನ ಮುರಿದಂತೆ ಕಾಣುತ್ತದೆ" ಎಂದ ಅವನು ಸುರೇಶನನ್ನು ಲೇವಡಿ ಮಾಡಿದ.

ಏನಾಗಿತ್ತೆಂದರೆ ಅವನು ವಿದ್ಯಾರ್ಥಿನಿಯರ ಹಾಸ್ಟೆಲಿಗೆ ಹೋಗಿ ಲೇಡಿ ಸುಪರಿಂಟೆಂಡೆಂಟರನ್ನು ಕಂಡು ತಾನು ರಮಾ ನಾಯಕಳನ್ನು ಕಾಣುವುದಿದೆಯೆಂದು ಹೇಳಿದಾಗ ಅವರಿಗೆ ಪರಮಾಶ್ಚರ್ಯವೆನಿಸಿತ್ತು. "ರಮಾ ನಾಯಕಳ ಬಗೆಗೂ ಆಸಕ್ತಿ ವಹಿಸುವವರು ಇದ್ದಾರಲ್ಲ" ಎಂಬುದೇ ಅವರು ಸೋಜಿಗಪಡುವುದಕ್ಕೆ ಕಾರಣವಾಗಿತ್ತು.

ಸುರೇಶನು ಅವಳನ್ನು ಮೂರು ಸಲ ಕೇಳಿದ್ದರೂ ಆಕೆ "ಇಲ್ಲ ಬರೋದಿಲ್ಲ, ಕರೆಯಬೇಡಿ" ಎಂದು ಕಡ್ಡಿ ಮುರಿದಂತೆ ನುಡಿದು ಬಿರಬಿರನೆ ನಡೆದು ಹೋಗಿದ್ದಳು.

ಇಂಥ ಪ್ರಸಂಗದಲ್ಲಿ ಅವನಿಗೆ ಉಪಾಯ ಹೇಳಿಕೊಡಬೇಕೆಂದರೆ ಗಣಪತಿಯೇ ಹೇಳಿಕೊಡಬೇಕು.

ತಮ್ಮ ಹಾಸ್ಟೆಲ್ ಸುಪರಿಡೆಂಟರು, ಇನ್ನುಳಿದ ಎಲ್ಲ ಹಾಸ್ಟೆಲ್ ಸುಪರಿಟೆಂಡೆಂಟರನ್ನೂ ಭೋಜನಕ್ಕೆ ಆಮಂತ್ರಿಸಬೇಕೆನ್ನುವ ಸಲಹೆಯನ್ನು ಅವನು ಮುಂದೆ ಮಾಡಿದ. ಸುರೇಶನಿಗೆ ಅವನ ಸಲಹೆ ಸರಿ ಎನಿಸಿತು. ಅವರಿಗೆ ಬೇಕಾದುದು ವಿದ್ಯಾರ್ಥಿನಿಯರ ಹಾಸ್ಟೆಲಿನ ಸುಪರಿಟೆಂಡೆಂಟ್‌ರೊಬ್ಬರೇ! ಆದರೆ ಅವರೊಬ್ಬರನ್ನೇ ಕರೆಯುವುದು ಹೇಗೆ? ಹೂವಿನ ಜತೆಗೆ ನಾರೂ ಸ್ವರ್ಗಕ್ಕೆ ಹೋಯಿತು ಎನ್ನುವಂತೆ, ಅವರ ಕಾರಣದಿಂದಾಗಿ ಇನ್ನುಳಿದವರಿಗೂ ಚಾನ್ಸ್ ಸಿಕ್ಕಿತು.

ವಿದ್ಯಾರ್ಥಿನಿಯರ ಹಾಸ್ಟೆಲ್ ಸುಪರಿಂಟೆಂಡೆಂಟರಿಗೆ ರವಿವಾರದ ಭೋಜನ ಆಮಂತ್ರಣ ಹೋಗಿದೆ ಎಂಬುದು ತಿಳಿದ ಮೇಲೆ, ರಮಾಗೆ ಆಮಂತ್ರಣ ನೀಡಲು ಸುರೇಶ ಪುನಃ ಅವಳ ಬಳಿಗೆ ಹೋದ.

ಆಗಲೂ ಕೂಡ ಅವಳದು ಅದೇ ಉತ್ತರ, "ನನ್ನನ್ನು ಕರೆಯಬೇಡಿ', ಎಂದು ನಾನು ನಿಮಗೆ ಆಗಲೇ ಒಮ್ಮೆ ಹೇಳಿದ್ದೆ."

ಅವಳಿಂದ ಇಂಥ ಉತ್ತರ ಬಂದೇ ಬರುವುದೆಂದು ಸುರೇಶ ಮೊದಲೇ ನಿರೀಕ್ಷಿಸಿದ್ದ. ಅವಳ ಉತ್ತರದಿಂದ ಅಧೀರನಾಗದ ಅವನು "ನೋಡಿ ಮ್ಯಾಡಮ್" ಎಂದು ಲೇಡಿ ಸುಪರಿಂಟೆಂಡೆಂಟರಿಗೆ ಹೇಳಿದ, "ಹೇಗೂ ನೀವು ನಮ್ಮ ಹಾಸ್ಟೆಲಿಗೆ ಊಟಕ್ಕೆ ಬರುತ್ತೀರಿ. ರಮಾ ಕೂಡ ನಿಮ್ಮೊಂದಿಗೆ ಬರಬಹುದಲ್ಲ?"

ಗಣಪತಿ ಹೇಳಿಕೊಟ್ಟಿದ್ದ ಈ ಉಪಾಯಗಾರಿಕೆ ಕೆಲಸ ಮಾಡಿತು, "ಹೌದೇ ರಮಾ. ನೀನೂ ನನ್ನ ಜೊತೆಯಲ್ಲಿ ಬಾ. ಇಬ್ಬರೂ ಹೋಗಿ ಬರೋಣ" ಎನ್ನುವ ಅವರ ಮಾತಿಗೆ ರಮಾ ಪ್ರತಿಯಾಗಿ ಹೇಳುವಂತಿರಲಿಲ್ಲ.

* * * *

ಈ ಊಟದ ಸಮಾರಂಭವು ರಮಾ, ಸುರೇಶ ಹಾಗೂ ಗಣಪತಿ ಇವರ ಪರಿಚಯಕ್ಕೆ ಹೊಸ ತಳಹದಿಯನ್ನು ಒದಗಿಸಿಕೊಟ್ಟಿತು.

ಬ್ಯಾಡ್ ಮಿಂಟನ್ ಡಬಲ್ಸ್‌ದಲ್ಲಿ ಆಕೆ ಸುರೇಶನ ಜತೆಗಾರ್ತಿಯಾದಳು.

ಹೀಗೆಯೇ ಒಂದರಿಂದ ಇನ್ನೊಂದು; ಇನ್ನೊಂದರಿಂದ ಮತ್ತೊಂದು

ಕನ್ನಡ ನಾಟಕದಲ್ಲಿ ಸುರೇಶನಿಗೆ ಎದುರಾಗಿ ನಾಯಕಿಯ ಪಾತ್ರ ವಹಿಸುವುದಕ್ಕೆ ಅವಳು ಒಪ್ಪಿದಳು.

ರಂಗತಾಲೀಮು ಮುಗಿದು, ನಾಟಕ ಇನ್ನೇನು ನಾಳೆ ಅಭಿನಯಗೊಳ್ಳಬೇಕು ಎಂದಾಗ, ನಾಟಕದಲ್ಲಿಯ ಅವಳ ಪಾತ್ರಕ್ಕೆ ಬೇಕಾದ ಸೀರೆಯನ್ನು ತನ್ನ ನೆಂಟರ ಮನೆಯಲ್ಲಿ ಕೇಳಿತಂದು ಕೊಡುವುದಾಗಿ ಸುರೇಶ ಅವಳಿಗೆ ಹೇಳಿದ.

"ಇಲ್ಲ. ಅದನ್ನು ನಾನೇ ತರುತ್ತೇನೆ" ಎಂದು ಆಕೆ ಹೇಳಿದಾಗ ಅವಳು ಯಾರಲ್ಲಿಯೋ ಅದನ್ನು ಇಸಿದುಕೊಂಡು ಬರಬಹುದೆಂದು ಅವನು ಭಾವನೆ ಮಾಡಿಕೊಂಡ.

ಆದರೆ, ಅಂದು ಸಂಜೆ, ಆಕೆ ಸುರೇಶನನ್ನು ಕರೆದುಕೊಂಡು ಪೇಟೆಗೆ ಹೋಗಿ ೨೫೦ ರೂಪಾಯಿ ಕೊಟ್ಟು ಭರ್ಜರಿ ಜರತಾರೀ ಸಿರೆಯೊಂದನ್ನು ತೆಗೆದುಕೊಂಡಾಗ ಅವನಿಗೆ ನಿಜವಾಗಿಯೂ ಅಚ್ಚರಿ ಎನಿಸಿತು.

ಅವಳು ಬಡವಳಾಗಿರಬೇಕೆನ್ನುವ ಅವನ ತರ್ಕ ತಲೆಕೆಳಗಾಗಿ ಹೋಗಿತ್ತು.

ಈ ವಿಚಾರವಾಗಿ ಗೆಳೆಯರಿಬ್ಬರೂ ಬಹಳಷ್ಟು ತರ್ಕವಿತರ್ಕ ಮಾಡಿದರು. ಅವರ ಶೋಧವು, ಅವರಿಗೆ ಹೊಸ ಹೊಸ ಸಂಗತಿಗಳನ್ನು ತಿಳಿಸಿಕೊಟ್ಟಿತು. ಅವಳು ಕಾರವಾರದವಳೆಂದೂ, ಗೋಕರ್ಣಕ್ಕೆ ಸೇರಿದವಳೆಂದೂ ಗೊತ್ತಾಯಿತು.

ಅವರ ಪರಿಚಯು ಗಾಢವಾಗಿ ಬೆಳೆದಮೇಲೆಯೂ ಕೂಡ, ಅವಳು ತನ್ನ ಜೀವನಕ್ಕೆ ಸಂಬಂಧಿಸಿದ ಸಂಗತಿಗಳನ್ನು ಅವರಿಗೆ ತಿಳಿಸದಂತೆ ರಹಸ್ಯವಾಗಿ ಇರಿಸಿದ್ದಳು. ಸುರೇಶನಿಗೆ ಅವಳ ಸ್ವಭಾವದ ಅರ್ಥ ಆಗಲೇ ಇಲ್ಲ. ಸಮೀಪ ಹೋದಷ್ಟೂ ಕ್ಷತಿಜದಂತೆ ದೂರ ಹೋಗುತ್ತಿದಳು. ಸುರೇಶನು ಅವಳಲ್ಲಿ ಆಸಕ್ತಿ ತೋರಿಸಿದಂತೆಲ್ಲ ಅವಳಲ್ಲಿ ವಿರಾಗಿಣೀ ಭಾವ ಕಾಣಿಸಿಕೊಳ್ಳುತ್ತಿತ್ತು.

ಪರೀಕ್ಷೆ ಮುಗಿದ ಮೇಲೆ ಒಂದೆರಡುದಿನ ವಿನೋದ ಮಾಡಿ, ಸಿನೇಮಾ ನೋಡಿ, ಲೋಕಾಭಿರಾಮವಾಗಿ ಕಾಲಹರಣ ಮಾಡಬೇಕೆಂದಿದ್ದ ಆ ಸ್ನೇಹಿತರಿಗೆ ರಮಾ ಇಲ್ಲವೆಂಬುದನ್ನು ತಿಳಿದು ನಿರಾಶೆ ಎನಿಸಿತು.

"ಹಕ್ಕಿ ಹಾರಿಹೋಗಿದೆ" ಎಂದು ಗಣಪತಿ ನುಡಿದಾಗ ಸುರೇಶನ ಮನಸ್ಸು ಬಹುದೂರ, ಗೋಕರ್ಣದ ಸುಂದರವಾದ ಸಮುದ್ರ ತೀರದಲ್ಲಿ ವಿಹಾರಕ್ಕೆ ಹೋಗಿತ್ತು.

"ನಡೆ, ಗೋಕರ್ಣಕ್ಕೆ ಹೋಗುವ" ಎಂದು ಸುರೇಶ ಉದ್ವಿಗ್ನನಾಗಿ ಗಣಪತಿಯನ್ನು ಕೇಳಿದ.

"ಹಾಂ ರೈಲನ್ನು ಅಷ್ಟೊಂದು ವೇಗವಾಗಿ ಬಿಡಬೇಡ. ಸ್ವಲ್ಪ ನಿಧಾನ" ಎಂದು ಎಚ್ಚರಿಕೆ ಸೂಚಿಸುತ್ತ ಗಣಪತಿ ಹೇಳಿದ· "ನೀನು ಹೋಗಿ, ನಿನ್ನ ದೈವ ಪರೀಕ್ಷೆಮಾಡಿಕೊಂಡು, ಆಮೇಲೆ ನನಗೆ ಒಂದು ಕಾಗದ ಬರೆ."

* * * *

ಸುರೇಶ ಅಂಕೋಲೆಗೆ ಹೋದ ಮೇಲೆ ಅವಳು ಗೋಕರ್ಣದವಳಲ್ಲ ಅಂಕೋಲೆಯವಳು ಎಂಬುದಾಗಿ ತಿಳಿಯಿತು. ಗೋಕರ್ಣಕ್ಕೆ ಹೋಗುವ ತೊಂದರೆ ತಪ್ಪಿತೆಂದು ಅವನ ಮನಸ್ಸಿಗೆ ಸಮಾಧಾನವೆನಿಸಿತು.

"ಅದೇ ರಮಾ ನಾಯಕಳ ಮನೆ" ಎಂದು ಯಾರೋ ಒಬ್ಬರು ಒಂದು ಮನೆಯ ಕಡೆಗೆ ಬೆರಳು ಮಾಡಿ ತೋರಿಸಿದಾಗ ಸುರೇಶನಿಗೆ ನಂಬಲಿಕ್ಕಾಗಲಿಲ್ಲ.

ಅವರು ಹೇಳಿದುದು ನಿಜವಿರಲಾರದು ಎಂದುಕೊಂಡ. ಆದರೆ ಸತ್ಯ ಸಂಗತಿ ತಿಳಿಯುವುದಕ್ಕೆ ಹೆಚ್ಚು ಸಮಯ ಹಿಡಿಯಲಿಲ್ಲ. ಆ ಊರಿನ ದೊಡ್ಡ ಮನೆಗಳಲ್ಲಿ ರಮಾ ನಾಯಕಳ ಮನೆಯೂ ಒಂದು. ಜರತಾರೀ ಸೀರೆಗೆ ೨೫೦ ರೂಪಾಯಿ ಕೊಟ್ಟು ರಮಾ ಖರೀದಿ ಮಾಡಿದುದು ಅವನ ಜ್ಞಾಪಕಕ್ಕೆ ಬಂದಿತು.

ಅವನು ಮನೆಗೆ ಹೋಗಿ ವಿಚಾರಿಸಿದ. ಹೌದು, ಅದು ಅವಳದೇ ಮನೆ. ಆದರೆ ಅವಳು ಮಾತ್ರ ಮನೆಯಲ್ಲಿ ಇರಲಿಲ್ಲ. ಅವಳ ಚಿಕ್ಕಪ್ಪನಾದ ಸಣ್ಣಪ್ಪ ನಾಯಕ ಸುರೇಶನನ್ನು ಬರಮಾಡಿಕೊಂಡ.

ಆತ ರಮಾನ ಸಹಪಾಠಿ ಎಂದು ತಿಳಿದಾಗ ಸಣ್ಣಪ್ಪನ ಮನಸ್ಸು ಸ್ವಲ್ಪ ಕುಸಿಯಿತು. ಆದರೂ ಅದನ್ನು ಹೊರಗೆ ತೋರಗೊಡದೆ; ಅವನನ್ನು ಒಳಗೆ ಕರೆದುಕೊಂಡು ಹೋಗಿ ಹೆಂಡತಿಯನ್ನು ಕೂಗಿ ಕರೆದು ತಿಂಡೀ ತರುವಂತೆ ಹೇಳಿದ.

"ಸುರೇಶ ನಮ್ಮ ಜಾತಿಯವರೇ" ಸಣ್ಣಪ್ಪ, ಹೆಂಡತಿಗೆ ಅವನನ್ನು ಪರಿಚಯ ಮಾಡಿಕೊಟ್ಟ. "ಅವರದಿನ್ನೂ ಮದುವೆ ಆಗಿಲ್ಲ. ನಮ್ಮ ರಮಾಗೆ ಹೇಳಿಮಾಡಿಸಿದ ವರ. ಆದರೆ, ಅವಳ ಭಾಗ್ಯದಲ್ಲಿ ಯಾರನ್ನೂ ಮದುವೆಯಾಗುವ ಯೋಗವಿಲ್ಲ. ಆಕೆಯನ್ನು ಮದುವೆಯಾದ ಯಾರೂ ಬದುಕುವುದಿಲ್ಲ."

ಆ ಮಾತು ಕೇಳಿ ಸುರೇಶನ ಮನಸ್ಸಿಗೆ ಆಘಾತವೆನಿಸಿತು. ಅವನೇನೂ ಅವಳನ್ನು ಮದುವೆಯಾಗಬೇಕೆಂದು ಆಲೋಚಿಸಿರಲಿಲ್ಲ. ಹಾಗಿದ್ದರೂ ಅವನ ಮನಸ್ಸಿಗ ಕಳವಳವೆನಿಸಿತು.

"ಹೌದಪ್ಪ ನಮ್ಮ ಹುಡುಗಿಯ ಜಾತಕದಲ್ಲಿ ಗಂಡಿನ ಹೆಸರನ್ನೇ ಬರೆದಿಲ್ಲ" ಎಂದು ಲಚ್ಮವ್ವ ವ್ಯಸನ ವ್ಯಕ್ತಪಡಿಸಿದಳು.

ರಮಾಳ ತಂದೆ ವೆಂಕಣ್ಣನಾಯಕರು, ತಾಯಿಯಿಲ್ಲದ ತಬ್ಬಲಿ ಮಗಳನ್ನು ಬಹಳಷ್ಟು ಆಸ್ತಿಯನ್ನೂ ಬಿಟ್ಟು ಸತ್ತು ಹೋಗಿದ್ದರು.

ಎಡಬಿಡಂಗಿಯಂತೆ ಊರೂರು ಸುತ್ತಿಕೊಂಡು ಅಲೆದಾಡುತ್ತ ಇದ್ದ ಸಣ್ಣಪ್ಪನಿಗೆ, ಅನಾಯಾಸವಾಗಿ, ಬಹುದೊಡ್ಡ ಆಸ್ತಿಯ ಪಾರುಪತ್ಯಗಾರಿಕೆ ಲಭಿಸಿತು ಲಚ್ಚವನೂ ರಮಾಳನ್ನು ಬಹುವಾಗಿ ಹಚ್ಚಿಕೊಂಡಳು. ತಾಯಿಯಿಲ್ಲದ ಅವಳಿಗೆ ತಾಯಿಯೆಂದರೆ ಹೇಗಿರುತ್ತಾಳೆನ್ನುವ ಕಲ್ಪನೆ ಉಂಟಾಗುವಂತಾಯಿತು.

ರಮಾ, ಅವರಮಗ ಗೋವಿಂದನಿಗೆ ತಂಗಿಯಾಗಿ ಬೆಳೆದಳು.

ಅವಳಿಗೆ ಗಂಡು ಸಿಕ್ಕುವ ತೊಂದರೆಯೇನೂ ಇರಲಿಲ್ಲ. ವರನನ್ನು ಆರಿಸಿಕೊಳ್ಳುವ ಪ್ರಶ್ನೆ ಇದ್ದಿತೇ ವಿನಾ, ನೋಡುವ ಪ್ರಶ್ನೆಯೇ ಇರಲಿಲ್ಲ. ಅವಳು ಎಸ್. ಎಸ್. ಎಲ್. ಸಿ. ಮುಗಿದಾಗಲೇ ಮದುವೆ ಬಹು ವಿಜೃಂಭಣೆಯಿಂದ ನೆರವೇರಿತ್ತು.

ಹೊಸ ಜೀವನದ ರಮ್ಯ ಕನಸುಗಳನ್ನು ರಮಾಳ ಮನಸ್ಸಿನಲ್ಲಿ ಹೆಣೆದಿದ್ದವು. ಅಮೃತದ ಪಾತ್ರೆಯೇ ಸಿಕ್ಕಿಬಿಟ್ಟಿತು. ಅದನ್ನು ತುಟಿಗೆ ಹಚ್ಚಬೇಕು ಎನ್ನುವಷ್ಟರಲ್ಲಿಯೇ ಅದು ತಿಪ್ಪೆಯ ಮೇಲೆ ದೊಪ್ಪನೆ ಕಡಿದುಕೊಂಡು ಬಿದ್ದಂತೆ, ಪ್ರಸ್ತನಡೆಯಬೇಕೆಂದು ಗೊತ್ತಾದ ಹಿಂದಿನ ದಿನವೇ ಗೋಪಾಲ ಏಕಾಏಕಿ ಹಾವು ಕಡಿದು ಸತ್ತುಹೋದ. ಸಂಸಾರದ ಸುಖವೆಂದರೆ ಏನೆಂಬುದು ತಿಳಿಯುವ ಮೊದಲೇ, ಪ್ರಥಮರಾತ್ರಿಯ ಮುಂಚೆಯೇ ರಮಾ, ವಿಧವೆಯಾಗಿ ಬಿಟ್ಟಳು.

ಕಾಲೇಜಿಗ ಬರುತ್ತಿದ್ದ ರಮಾ, ಯಾವ ಬೆಡಗು ಬಿನ್ನಾಣವೂ ಇಲ್ಲದೆ ಅವನತ ಮುಖಿಯಾಗಿ ಏಕೆ ಇದ್ದಳೆಂಬುದು ಸುರೇಶನಿಗೆ ಈಗ ಕೋಲ್ಮಿಂಚು ಸೆಳೆದಂತೆ ತಟ್ಟನೆ ಹೊಳೆಯಿತು.

ರಮಾ, ಹಾಗಾದರೆ, ವಿಷಕನ್ಯೆ. ಸಮಾಜದ ಮನಸ್ಸಿನ ಮೇಲೆ, ಹೆಚ್ಚಾಗಿ ರಮಾಳ ಮನಸ್ಸಿನ ಮೇಲೆ ಇದು ಬಿಂಬಿಸಿ ಹೋಗಿತ್ತು.

ಆಕೆ ವಿಷಕನ್ಯೆಯೆಂಬಂದು ಸಣ್ಣಪ್ಪನಿಗೆ, ಅವನ ಹೆಂಡತಿ ಲಚ್ಚಿಗೆ, ಅವರ ಮಗ ಗೋವಿಂದನಿಗೆ ಅಮೃತವನ್ನು ಒದಗಿಸಿಕೊಟ್ಟಿತ್ತು. ಬಂಗಾರದ ಮೊಟ್ಟೆಯಿಡುವ ಬಾತುಕೋಳಿಯೆಂಬ ಭಾವನೆಯಿಂದ ಅವರು ರಮಾಳನ್ನು ಚೆನ್ನಾಗಿ ನೋಡಿಕೊಂಡು ನಡೆದಿದಿದ್ದರು.

ರಮಾ ಹೊರಗಿನಿಂದ ಬಂದಳು. ಅವಳಿಗೆ ಸುರೇಶ ಬಂದುದು ತಿಳಿಯಿತು. ಏಕೆ ಬಂದಿದ್ದಾನೆ ಎನ್ನುವ ಪ್ರಶ್ನೆ ಅವಳ ಮನಸ್ಸಿನಲ್ಲಿ ಮೂಡಿ ಮರೆಯಾಯಿತು.

ಸುರೇಶನನ್ನು ಕಂಡೊಡನೆಯೇ ಆಕೆ "ಮನೆಯಲ್ಲಿ ನಮ್ಮ ಚಿಕ್ಕಪ್ಪ ಚಿಕ್ಕಮ್ಮ ಇದ್ದ ಮೇಲೆ, ನಿಮ್ಮ ಉಪಚಾರ ಆಯಿತೇ ಎಂದು ಕೇಳುವ ಪ್ರಶ್ನೆಯೇ ಇಲ್ಲ" ಎನ್ನುತ್ತ ತನ್ನ ಚಿಕ್ಕಮ್ಮನಿಗೆ, "ಇವರು ನಾಲ್ಕು ದಿನ ಇಲ್ಲಿಯೇ ಇರುತ್ತಾರೆ. ಚಿಕ್ಕಮ್ಮ, ನಿಮ್ಮ ಎಲ್ಲ ಅಡುಗೆಗಳ ಪರೀಕ್ಷೆಯೂ ಈಗ ನಡೆದುಬಿಡಲಿ" ಎಂದು ಹೇಳಿದಳು.

* * * *

ಏಕಾಂತದಲ್ಲಿ ಮಾತನಾಡಲು ಅನುಕೂಲವಾಗಲೆಂದು, ರಮಾ ಸುರೇಶ ಇಬ್ಬರೂ ಒಂದು ಸಂಜೆ ಸಮುದ್ರದ ತೀರದಲ್ಲಿ ಬಹು ದೂರ ಹೋದರು.

ಸುರೇಶ ಒಮ್ಮೆಲೇ ರಮಾಳ ಕೈ ಹಿಡಿದುಕೊಂಡಾಗ ಅವಳು ಬೆಚ್ಚಿಬಿದ್ದು ಅವನಿಂದ ತನ್ನ ಕೈಯನ್ನು ಕೊಸರಿಕೊಂಡಳು. "ಇದರಲ್ಲಿ ಅನಾಹುತ ಇದೆ. ನೀವು ನನ್ನನ್ನು ಮುಟ್ಟಬೇಡಿ" ಎಂದು ಹೆದರಿಸುವಂತೆ ಆಕೆ ಅವನಿಗೆ ಎಚ್ಚರಿಕೆ ಹೇಳಿದಳು.

"ನೀನು ನನ್ನನ್ನೇಕೆ ಹೆದರಿಸುತ್ತೀ ಎಂಬುದು ನನಗೆ ಗೊತ್ತಿದೆ. ನೀನು ವಿಷಕನ್ಯೆ".

"ಹೌದು, ಅದು ನಿಮಗೆ ಹೇಗೆ ಗೊತ್ತಾಯಿತು?

"ನಿಮ್ಮ ಚಿಕ್ಕಪ್ಪ ಚಿಕ್ಕಮ್ಮ ನನಗೆ ಎಲ್ಲವನ್ನೂ ಹೇಳಿದ್ದಾರೆ."

"ನಾನೇ ನಿಮಗೆ ಹೇಳಬೇಕೆಂದಿದ್ದೆ. ಅವರೇ ಹೇಳಿದುದು ಒಳ್ಳೆಯದೇ ಆಯಿತು. ಅಷ್ಟೆಲ್ಲ ತಿಳಿದೂ ನೀವು ನನ್ನನ್ನು ಪ್ರೀತಿಸುವುದೆಂದರೆ? ಇರುಳು ಕಂಡ ಭಾವಿಯನ್ನು ಯಾರಾದರೂ ಹಗಲಿನಲ್ಲಿ ಹೋಗಿ ಬೀಳುತ್ತಾರೆಯೇ? ನನ್ನ ಮೇಲಿನ ಮೋಹವನ್ನು ನೀವು ಬಿಟ್ಟುಬಿಡಬೇಕು."

"ನಾನು ನಿನ್ನನ್ನು ಮದುವೆ ಆಗಬೇಕೆಂದಿದ್ದೆನೆ"

"ನಾವು ಗಂಡಹೆಂಡಿರಾಗಿ ಇರುವುದು ಸಾಧ್ಯವಿಲ್ಲ. ಸ್ನೇಹಿತರಾಗಿ ಇರಬಹುದು. ಹಾಗೆ ಇರೋಣ ಎಂದು ನನ್ನ ಅಪೇಕ್ಷೆ."

"ಗಂಡಹೆಂಡಿರಾಗಿಯೂ ನಾವು ಸ್ನೇಹಿತರಾಗಿ ಇರುವುದು ಸಾಧ್ಯವಿದೆ, ರಮಾ!"

"ನನ್ನನ್ನು ಮದುವೆಯಾದರೆ ನೀವು ಬದುಕಿ ಇರುವುದಿಲ್ಲ. ನಿಮ್ಮೊಂದಿಗೆ ನಮ್ಮ ಸ್ನೇಹವೂ ಹೊರಟು ಹೋಗುತ್ತದೆ. ಅದನ್ನು ಕಳೆದುಕೊಳ್ಳಲು ನಾನು ಸಿದ್ಧಳಿಲ್ಲ."

ಏನೇ ಆದರೂ ತಾನು ಅವಳನ್ನು ಮದುವೆ ಆಗಿಯೇ ತೀರುವುದಾಗಿ ಸುರೇಶ ಹಟಹಿಡಿದ. ತನ್ನ ಕೈಯಾರೆ ತಾನು ಅವನನ್ನು ಕೊಲ್ಲಲು ಸಿದ್ಧಳಿಲ್ಲವೆಂದು ರಮಾ ಅಷ್ಟೇ ನಿರ್ಧಾರದಿಂದ ಹೇಳಿದಳು.

ಇವರಿಬ್ಬರ ಪ್ರಶ್ನೆಯನ್ನು ಇತ್ಯರ್ಥಪಡಿಸಲು ಗಣಪತಿಯೇ ಬರಬೇಕಾಯಿತು.

ಸುರೇಶನು ರಮಾಳನ್ನು ಮದುವೆ ಆಗುವುದಾಗಿ ಪಟ್ಟು ಹಿಡಿದಿರುವುದನ್ನು ತಿಳಿದು ಸಣ್ಣಪ್ಪ ವ್ಯಾಕುಲಗೊಂಡ. "ರಮಾಳನ್ನು ಮದುವೆ ಆದವರು ಯಾರೂ ಬದುಕಿ ಉಳಿಯುವುದಿಲ್ಲ, ನನಗೆ ನಿಮ್ಮ ಸ್ನೇಹಿತರ ಬಗ್ಗೆ ಚಿಂತೆಯಾಗಿದೆ" ಎಂದು ಅವನು ಗಣಪತಿಯ ಎದುರು ಚಿಂತೆ ಪಟ್ಟುಕೊಂಡು ಹೇಳಿದ.

ಆದಿನ ಗೋವಿಂದನಿಗೆ ಹೆಣ್ಣು ಕೊಡಬೇಕೆಂದಿದ್ದವರು ಮನೆ ನೋಡಿ, ಮಾತು ಕತೆ ಆಡಿಕೊಂಡು ಹೋಗಬೇಕೆಂದು ಬಂದಿದ್ದರು. ಮನೆಯಲ್ಲಿ ಸಂಭ್ರಮದ ವಾತಾವರಣ ತುಂಬಿತ್ತು. ತನ್ನ ಅಣ್ಣನಿಗೆ ಮದುವೆ ಎಂದು ರಮಾಳ ಮನಸ್ಸು ಸಂತೋಷದಿಂದ ಕುಣಿದಿತ್ತು.

ಯಾವುದೋ ಒಂದು ವಸ್ತ್ರ ಬೇಕಾಗಿತ್ತು. "ಪೆಟ್ಟಿಗೆಯಲ್ಲಿದೆ ತಾ" ಎಂದು ಸಣ್ಣಪ್ಪ ಗೋವಿಂದನಿಗೆ ಕೂಗಿ ಹೇಳಿದ "ಯಾವ ಪೆಟ್ಟಿಗೆಯಲ್ಲಿ" ಎಂದು ಕೇಳಿ, ಅದರ ಹಿಂದೆಯೇ "ಅಯ್ಯೋ ಹಾವು" ಎಂದು ಗೋವಿಂದ ಕಿರುಚಿದ. ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಅವನು ಕೈ ಹಾಕಿದಾಗ ನಾಗರ ಹಾವೊಂದು ಅವನಿಗೆ ಕಡಿದಿತ್ತು. ಅದು ಎಲ್ಲಿಂದ ಬಂದು ಅಲ್ಲಿ ಸೇರಿಕೊಂಡಿತ್ತೋ ಏನೋ!

ಗೋವಿಂದನಿಗೆ ಹಾವು ಕಡಿಯಿತೆನ್ನುವ ಕೋಲಾಹಲವನ್ನು ಕೇಳಿದೊಡನೆಯೇ ಅಡುಗೆಯ ಸಂಭ್ರಮದಲ್ಲಿ ತೊಡಗಿದ್ದ ಲಚ್ಮವ್ವ ಹುಚ್ಚಿಯಂತೆ, "ಅಯ್ಯೋ, ನನ್ನ ಮಗನ್ನ ಕೊಂದರೆ. ಅಳಿಯನ್ನ ಆಹುತಿ ತಕ್ಕೊಂಡದ್ದು ಸಾಲದೆ, ಈಗ ಮಗನ್ನ ಆಹುತಿ ತೆಗೆದುಕೊಂಡರೇ, ನನ್ನ ಗೋವಿಂದ ಹೋದನೇ" ಎಂದು ಹಾಡಿ ಹಾಡಿಕೊಂಡು ಅಳತೊಡಗಿದಳು.

* * * *

ನಡೆದ ಸಂಗತಿ ಏನೆಂದರೆ, ಆಸ್ತಿ, ತನಗೆ, ತನ್ನ ಮಗನಿಗೆ ದಕ್ಕಬೇಕೆಂದು ಸಣ್ಣಪ್ಪನು, ಗೋಪಾಲನಿಗೆ ಹಾವು ಕಡಿದು ಸಾಯುವಂತೆ ಮಾಡಿ, ರಮಾ ವಿಷಕನ್ಯೆಯೆಂಬುದನ್ನು ಸೃಷ್ಟಿಸಿ, ಸುಳ್ಳು ಜಾತಕ ನಿರ್ಮಿಸಿ, ಅವಳಲ್ಲಿ ಆ ಭಾವನೆ ರಕ್ತಗತವಾಗುವಂತೆ ಒಂದು ಯಶಸ್ವೀ ಭ್ರಮೆಯನ್ನು ನಿರ್ಮಿಸಿದ್ದ. ಈಗ ಅವನು ಸುರೇಶನನ್ನು ಆಹುತಿ ತೆಗೆದುಕೊಂಡು, ರಮಾ ವಿಷಕನ್ಯೆಯೆಂಬುದನ್ನು ಸಮಾಜಕ್ಕೆ ಪುನಃ ದೃಢಪಡಿಸಿ ತೋರಿಸಬೇಕೆಂದಿದ್ದ. ಆದರೆ ಅಚಾತುರ್ಯ ಸಂಭವಿಸಿ, ಸಣ್ಣಪ್ಪನ ಮಹತ್ವಾಕಾಂಕ್ಷೆ ಈಗ ಅವನ ಮಗನನ್ನೆ ಬಲಿತೆಗೆದುಕೊಂಡಿತ್ತು.

★ ಪಾಟೀಲ ಪುಟ್ಟಪ್ಪ.

ಮಣಿಪ್ರವಾಳಂ
(ಚಾರಿತ್ರಿಕ ಅವಲೋಕನ)

ಮಣಿ ಪ್ರವಾಳವನ್ನು ಕುರಿತು ಮಲಯಾಳದಲ್ಲಿ ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ; ಮತ್ತು ಲೇಖನಗಳನ್ನು ಬರೆದಿದ್ದಾರೆ. ಲೀಲಾತಿಲಕವನ್ನು ಲಕ್ಷಣ ಗ್ರಂಥವನ್ನಾಗಿಟ್ಟುಕೊಂಡು, ಅದನ್ನೇ ಆಧಾರವಾಗಿಟ್ಟುಕೊಂಡು ಆ ವಿದ್ವಾಂಸರೆಲ್ಲ ಪರ್ಯಾಲೋಚನೆ ನಡೆಸಿರುವುದು. ಅದರಲ್ಲಿಯೂ ಅವರಿಗೆ ಸಹಾಯಕವಾದದ್ದು "ಭಾಷಾ ಸಂಸ್ಕೃತ ಯೋಗೋ ಮಣಿಪ್ರವಾಳಂ" ಎನ್ನುವ ಮೊದಲನೆಯ ಸೂತ್ರ ಮತ್ತು ಅದರ ವೃತ್ತಿ. ಆ ಮಾರ್ಗವನ್ನು ಬಿಟ್ಟು ಚಾರಿತ್ರಿಕವೂ ಸಂಶೋಧನಾತ್ಮಕವೂ ಆದ ಬೇರೆ ಒಂದು ಮಾರ್ಗದಲ್ಲಿ ಸಂಚರಿಸುವ ಉದ್ದೇಶವನ್ನಿಟ್ಟುಕೊಂಡು ಪ್ರಥಮತಃ ಪ್ರಯತ್ನಿಸಿದವರು ಡಾ|| ಪಿ. ಕೆ. ನಾರಾಯಣ ಪಿಳ್ಳೆ ಅವರು ಪದ್ಯರತ್ನ (೧೯೪೯)ದ ಪ್ರಸ್ತಾವನೆಯಲ್ಲಿ ಶ್ರೀನಾರಾಯಣ ಪಿಳ್ಳೆ ಅವರು ಮಣಿಪ್ರವಾಳದ ಚಾರಿತ್ರಿಕವಾದ ಭಾಗಗಳನ್ನು ಬಹಳ ಎಚ್ಚರಿಕೆಯಿಂದ ಅಳವಡಿಸಿದ್ದಾರೆ. ಪ್ರೊ|| ಇಳಂಕುಳ ಅವರ ಲೀಲಾತಿಲಕದ ವ್ಯಾಖ್ಯಾನದ ಮೇಲೂ ಮತ್ತಿತರ ವಿಷಯಗಳ ಮೇಲೂ ತುಂಬ ಬೆಳಕನ್ನು ಚೆಲ್ಲಲು ಶ್ರಮಿಸಿದ್ದಾರೆ. ಆದರೂ ಇನ್ನೂ ತಿಳಿಯಬೇಕಾದ ಎಷ್ಟೋ ವಿಷಯಗಳಲ್ಲಿ, ಕೆಲವನ್ನು ಕುರಿತು ಆಲೋಚಿಸುವುದೇ ಈ ಲೇಖನದ ಉದ್ದೇಶ.

ಪದ್ಯರತ್ನದ ಪ್ರಸ್ತಾವನೆಯಲ್ಲಿ ಸಂಸ್ಕೃತ ಬಂದಿರುವ ಕಡೆಯಲ್ಲೆಲ್ಲ ದೇಶ ಭಾಷೆಯೊಡನೆ ಬೆರೆತ ಕೃತ್ರಿಮ ಸಾಹಿತ್ಯಭಾಷೆಯನ್ನು ಸೃಷ್ಟಿಸಿರುವುದನ್ನು ಎತ್ತಿ ತೋರಿಸಿದ್ದಾರೆ. ಜಾವಾ ಭಾಷೆಯ ಒಂದು ಮಣಿಪ್ರವಾಳ ಶ್ಲೋಕವನ್ನು ಸರದಾರ್ ಕೆ. ಎಂ. ಫಣಿಕ್ಕರ್ ಉದ್ಧರಿಸಿರುವುದನ್ನು ಅದರಲ್ಲಿ ಸೇರಿಸಿರುವುದು ಕಂಡುಬರುತ್ತದೆ.[೧]

ಸಮುರ್ ದಿವಾರಾತ್ರಿನೆ ಕಾಂಜ಼ ಸುರಾಲಯ
ದೆನಿಂಜ಼ ಪ್ರಕಾಶಾತ್ಮಕ ಸರ್ವಭಾಸ್ವರ
ಅಂಜ಼ಗಿಂಜ಼ಗ ಸೆಕರ್‌ನಿಂಜ಼ ಕುಮುದಾಗರಿಜ಼ಕುಲಂ
ಮುವಾಜ಼ ಚಕ್ರವಾಕಿನ್ ಪಪಸಃ ಲವಾನ್‌ಪ್ರಿಯ ॥

(ರಾತ್ರಿಯಲ್ಲೂ ಹಗಲಿನಲ್ಲೂ ದೇವಲೋಕದಲ್ಲಿದ್ದ ವಸ್ತುಗಳ ಪ್ರಕಾಶದಿಂದಾಗಿ ಹಗಲು-ರಾತ್ರಿ ಯಾವುದೂ ತಿಳಿಯಲಿಲ್ಲ. ಕುಮುದಗಳು ಅರಳುವ

---

೧. Manipravala in Java, Dr. C. KunhanRaja Presentation Volume [Madras 1946] P. P. 65-69.

ದನ್ನೂ ಚಕ್ರವಾಕ ಪಕ್ಷಿಗಳ ವಿರಹವನ್ನೂ ಕಂಡು ರಾತ್ರಿಯನ್ನು ತಿಳಿಯ ಬೇಕಾಯಿತು.)

ಹಿಂದಿನ ಸಂಸ್ಕೃತ ಕವಿಗಳ ಕಲ್ಪನೆಯೇ ಇದರಲ್ಲಿಯೂ ಇರುವುದು– ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ. ಜಾವಾ ಭಾಷೆ ನಮಗೆ ಅಪರಿ ಚಿತವಾಗಿದ್ದರೂ ಈ ಪದ್ಯದಲ್ಲಿರುವ ಸಂಸ್ಕೃತ ಪದಗಳನ್ನು ನೋಡಿದರೆ ಭಾಷಾ ಮಿಶ್ರಣದ ಸಾಂಪ್ರದಾಯವನ್ನು ಗುರುತಿಸಬಹುದು.

ದಾಕ್ಷಿಣಾತ್ಯಭಾಷೆಗಳಲ್ಲಿ ಮಣಿಪ್ರವಾಳ.

ದಕ್ಷಿಣ ಭಾರತದ ಭಾಷೆಗಳಲ್ಲಿ ಮಣಿಪ್ರವಾಳ ಶೈಲಿ ಮನೆಮಾಡಿ ಕೊಂಡಿದೆಯಾದರೂ ತೆಲುಗು, ಕನ್ನಡಗಳ ಪಂಡಿತರಿಗೂ ಇದು ಒಂದು ಕಾಲ ದಲ್ಲಿ ಪರಿಚಿತವಾಗಿತ್ತು ಎಂದು ತಿಳಿದು ಬರುತ್ತದೆ. ತೆಲುಗಿನಲ್ಲಿ ಮಣಿಪ್ರವಾಳ ಪದ್ಯವೇ ಕಂಡುಬರುತ್ತವೆ. ವೀರಶೈವರಲ್ಲಿ ಪಾಲ್ಕುರಿಕೆ ಸೋಮನಾಥನ (೧೨ ನೆಯ ಶತಕ) ಕೃತಿಗಳು ತುಂಬ ಪ್ರಚಾರದಲ್ಲಿದ್ದ ಕೃತಿಗಳು. ತೆಲುಗಿನಲ್ಲಿ ಮಾತ್ರವಲ್ಲ ಸಂಸ್ಕೃತದಲ್ಲೂ ಕನ್ನಡದಲ್ಲೂ ಅನೇಕ ಗ್ರಂಥಗಳನ್ನು ಬರೆದಿ- ದ್ದಾನೆ. ಪಂಡಿತಾರಾಧ್ಯ ಚರಿತಂ ಬಸವ ಪುರಾಣಂ, ಅನುಭವ ಸಾರಂ ಮುಂತಾ ದುವು ಈತನ ಕೃತಿಗಳು. ಈ ಕವಿಯ 'ವೃಷಾಧಿಪ ಶತಕಂ' (೧೦೮ ಪದ್ಯಗಳು) ತೆಲುಗು ಶತಕ ಸಾಹಿತ್ಯದಲ್ಲಿ ಮೊದಲ ಹಾಗೂ ಮುಖ್ಯ ಕೃತಿಯೆಂದು ಪರಿ ಗಣನೆ ಹೊಂದಿದೆ. ಇದರಲ್ಲಿ "ಅನುಯಮು ಚೆದುಲನ್ದು ಭವದಂಘ್ರಿ ಸರೋಜ ಯುಗಂ ನಮಾಮಿ" ಎನ್ನುವ ಒಂದು ಪದ್ಯವನ್ನು ಡಾ. ಪಿ. ಕೆ. ನಾರಾಯಣ ಪಿಳ್ಳೆ ಅವರು (ಉಪೋದ್ಘಾತ, ಪು. ೩) ಉದ್ಧರಿಸಿದ್ದಾರೆ. ಇದರಲ್ಲಿ 'ಮಣಿ- ಪ್ರವಾಳ' ಎನ್ನುವ ಶಬ್ದವೇ ಬರುತ್ತದೆ. ಪ್ರಸ್ತುತ ಶತಕದಲ್ಲಿ 59 ನೆಯ ಪದ್ಯ ಇದು. ೬೦,೬೧ ಪದ್ಯಗಳಲ್ಲೂ ಈ ಶಬ್ದವನ್ನೂ ಸೇರಿಸಿ ರಚಿಸಿರುವ ಪದ್ಯಗಳು ಇವು. ೬೦ ನೆಯ ಪದ್ಯವನ್ನು ಕೆಳಗೆ ಉದಾಹರಿಸಲಾಗಿದೆ:

> " ಅರುಳಗಿರಿ ಪ್ರಸಾದ ಮುದಯಾನ ಭವದ್ ಗುಣ ವರ್ಣನ ನಿಲ್ಪಿನಾ
> ಪೆರುವುಣಾ ನೇ ಸ್ಮರಾಮಿ ಪರಮೇಶ್ವರರೇ ಗುಣನರ್ಕಯುಂಚುನಿ–
> ಟ್ಳರದು ಮಣಿಪ್ರವಾಳಮುನ ನಜಕನಚುಯುದು ನಿನ್ನು ಮನ್ಮನೋ
> ವರ ಕರುಣಾ ವಿಧೇಯ, ಬಸವಾ, ವೃಷಾಧಿಪಾ ॥

(ಹೇ ಪರಮೇಶ್ವರಾ, ಗಣಾಧಿಪಾ, ದಯಾನಿಧೇ, ಪ್ರಭಾತದಲ್ಲಿ ಎದ್ದು ನಿನ್ನ ಗುಣಗಳಲ್ಲಿ ಮನಸ್ಸು ನಾಟಿ ನಿನ್ನ ಸ್ನೇಹ ಸಾಂದ್ರತೆಯ ಕಾರುಣ್ಯವನ್ನು ಪಡೆ ಯಲು ದುರ್ಲಭವಾದ ಮಣಿಪ್ರವಾಳ ಶೈಲಿಯಲ್ಲಿ ನಾನು ನಿನ್ನನ್ನು ಸ್ತುತಿಸು ತ್ತೇನೆ. ಹೇ ಬಸವಾ, ವೃಷಾಧಿಪಾ ಆಲಿಸು.

ತಮಿಳು, ಕನ್ನಡ, ಸಂಸ್ಕೃತ ಮುಂತಾದ ಇತರ ಭಾಷೆಗಳಲ್ಲಿ ಬರೆದಿರುವ

ಪದ್ಯಗಳೂ ಪ್ರಸ್ತುತ ಶತಕದಲ್ಲಿವೆ. ಕನ್ನಡದಲ್ಲಿ ಮಣಿಪ್ರವಾಳ ಶೈಲಿಯಿಲ್ಲವಾದರೂ ಜೈನ ಪಂಡಿತರಲ್ಲಿ ಈ ಶೈಲಿ ಹಿಂದಿನ ಕಾಲದಲ್ಲಿ ಪ್ರಚಾರದಲ್ಲಿತ್ತೆಂದು ತೋರಿಸಲು ಅನೇಕ ಲಕ್ಷ್ಯಗಳು ದೊರೆಯುತ್ತವೆ. ಉದಾಹರಣೆಗೆ ಪಾರ್ಶ್ವನಾಥ (ಕ್ರಿ.ಶ. ೧೨೦೦) ತನ್ನ ಪಾರ್ಶ್ವನಾಥ ಪುರಾಣದಲ್ಲಿ ಚಂದ್ರಪ್ರಭಾ ಪುರಾಣದ ಕರ್ತೃವಾದ ಅಗ್ಗಳ (೧೨ ನೆಯ ಶತಕದ ಕೊನೆ) ಮಣಿಪ್ರವಾಳದ ಒಂದು ರೂಪಸ್ತವ (ಕೇಶಾದಿ ಪಾದಂ ಪೋಲುಳ್ಳ ರೂಪವರ್ಣನ)ವನ್ನು ರಚಿಸಿರುವದಾಗಿ ಹೇಳಿದ್ದಾನೆ. "ವಾಸ್ತವ ಭಕ್ತಿಯುತಂ ರೂಪಸ್ತವನ ಮಣಿಪ್ರವಾಳವುಂ" ಎನ್ನುವ ಪಾದದಲ್ಲಿ ಆ ಶಬ್ದವೇ ಬರುವುದನ್ನು ನೋಡಿ. ಆದರೆ ಪ್ರಸ್ತುತ ಕೃತಿಯಾಗಲೀ ಆ ಶೈಲಿಯಲ್ಲಿ ರಚಿಸಿರುವ ಇತರ ಕೃತಿಗಳಾಗಲೀ ಇಂದು ದೊರೆ-ಯುವುದಿಲ್ಲ.

ತಮಿಳು, ಮಲಯಾಳಗಳು 'ಮಣಿಪ್ರವಾಳ'ವೆನ್ನುವ ಹೆಸರನ್ನೂ ಶೈಲಿಯನ್ನೂ ಉಳಿಸಿಕೊಂಡು ಬಂದ ಭಾಷೆಗಳು. ಆದರೂ ಸಮೃದ್ಧ ಸಾಹಿತ್ಯವಿರುವ ತಮಿಳಿನಲ್ಲಿ ಪಂಡಿತರ ಒಂದು ರೀತಿಯ ವಿಚಿತ್ರ ರಚನಾ ಸಂಪ್ರದಾಯವೆಂದಲ್ಲದೆ ಜನತೆ ಅದನ್ನು ಬಹುಮುಖ್ಯವಾದುದೆಂದು ಪರಿಗಣಿಸಿರಲಿಲ್ಲ. ಸಂಸ್ಕೃತದ ಆಧಿಪತ್ಯವಿದ್ದ ಕಾಲದಲ್ಲಿ ಮತಗ್ರಂಥ ರಚನೆಗೆ ಕೆಲವರು ಆ ಶೈಲಿಯನ್ನು ಉಪಯೋಗಿಸುತ್ತಿದ್ದರು ಅಷ್ಟೆ. ಚೋಳರು ಆಳುತ್ತಿದ್ದ ಕಾಲದಲ್ಲಿ ಇದರ ಆವಿರ್ಭಾವವುಂಟಾಯಿತೆಂದು ಹೇಳಬಹುದು. ತಮಿಳಿನಲ್ಲಿ ಜೈನರು ಮತ್ತು ವೈಷ್ಣವರು ಪ್ರಸ್ತುತ ಶೈಲಿಯನ್ನು ಪ್ರಧಾನವಾಗಿ ಸ್ವೀಕರಿಸಿರುವುದು ಕಂಡು ಬರುತ್ತದೆ. ಮಣಿಪ್ರವಾಳ ಶೈಲಿಯಲ್ಲಿ ಬರೆಯುವಾತ ಮಧ್ಯೆ ಮಧ್ಯೆ ಒಳ್ಳೆಯ ತಮಿಳಿನಲ್ಲೂ ಬರೆಯುತ್ತಿದ್ದುದೂ ಉಂಟು. ಉದಾಹರಣೆಗಳನ್ನು ಮುಂದೆ ಒಂದೆಡೆಯಲ್ಲಿ ಕೊಡಲಾಗಿದೆ. ಮಲಯಾಳ ಸಾಹಿತ್ಯ ಸೃಷ್ಟಿಯಾಗತೊಡ-ಗಿದ ಕಾಲದಲ್ಲಿ ಸಂಸ್ಕೃತ ವಿದ್ವಾಂಸರಾಗಿದ್ದವರು ತಮಿಳಿನಲ್ಲಿ ಈ ಶೈಲಿಯನ್ನು ಮುಖ್ಯವಾಗಿ ಅಂಗೀಕರಿಸಿದರು. ವಿನೋದಕ್ಕೂ ವಿಜ್ಞಾನಕ್ಕೂ ಈ ಶೈಲಿಯನ್ನು ಬಳಸತೊಡಗಿದರು. ಅಚ್ಚ ತಮಿಳು ಪಂಡಿತರಿಗೆ ಒಂದು ರೀತಿಯಲ್ಲಿ ವಿಕೃತಿಯಾಗಿ ತೋರಿದ ಮಣಿಪ್ರವಾಳ, ಮಲಯಾಳದಲ್ಲಿ ಪ್ರಕೃತಿಯಾಗಿ ತೋರಿತು ಎಂದು ಹೇಳಬಹುದು. ತಮಿಳಿನ ಆ ಮಾದರಿಗಳನ್ನು ಕುರಿತು ಹೆಚ್ಚು ವಿವರಣೆಗೆ ತೊಡಗುವ ಮೊದಲು ಆಗಮಾದಿಗಳನ್ನು ಕುರಿತು ಮತ್ತೂ ಕೆಲವು ಸಂಗತಿಗಳನ್ನು ತಿಳಿಯಬೇಕಾದುದು ಅಗತ್ಯ. ಈ ಶೈಲಿ ಆರ್ಯ ಭಾಷೆಗಳನ್ನಾಡುತ್ತಿದ್ದ ಉತ್ತರ ಭಾರತದ ಜನರಿಗೆ ಹೆಚ್ಚು ತಿಳಿದಿತ್ತೋ ಇಲ್ಲವೋ ಎನ್ನುವ ಸಂಶಯವನ್ನು ಮೊದಲು ಎತ್ತೋಣ.

ಮಧ್ಯಕಾಲದಲ್ಲಿ ದಕ್ಷಿಣಾಪಥದಲ್ಲಿ ಬಳಕೆಯಲ್ಲಿದ್ದ ಮಣಿಪ್ರವಾಳ ಶೈಲಿ ಔತ್ತರೇಯರಿಗೂ ತಿಳಿದಿತ್ತು ಎನ್ನುವುದು ನಿರ್ವಿವಾದ. ಅಭಿನವ ಗುಪ್ತ

(೧೧ನೆಯ ಶತಕ) ನಾಟ್ಯ ಶಾಸ್ತ್ರದ ವ್ಯಾಖ್ಯಾನದಲ್ಲಿ (ಅಭಿನವ ಭಾರತಿ) ಇದನ್ನು ಎತ್ತಿ ತೋರಿಸಿದ್ದಾನೆ. ಭರತ ಧ್ರುವಾಪದ್ಯಗಳ[೨] ಭಾಷೆಯನ್ನು ಕುರಿತು ನಾಟ್ಯ ಶಾಸ್ತ್ರದ ಮುವತ್ತೆರಡನೆಯ ಅಧ್ಯಾಯದಲ್ಲಿ ಹೀಗೆ ವಿವರಿಸಿದ್ದಾನೆ:

ಭಾಷಾಂತು ಶೌರಸೇನೀಂತು
ಧ್ರುವಾಣಾಂ ಸಂಪ್ರಯೋಜಯೇತ್
ಯದಾಪಿ ಮಾಗಧಿಯತ್ರ[೩]
ಕರ್ತವ್ಯಂ ನರ್ಕುಟಂ ತಥಾ
ದಿವ್ಯಾನಾಂ ಸಂಸ್ಕೃತಂ ಗಾನಂ
ಪ್ರಮಾಣ್ಯೈಸ್ತು ವಿಧೀಯತೇ
ಅರ್ಧ ಸಂಸ್ಕೃತ ಮೇವಂತು
ಮಾನುಷಾಣಾಂ ಪ್ರಯೋಜಯೇತ್ ॥

(ನಾಟ್ಯ. ಅಧ್ಯಾಯ. ೩೨ ಪು. ೩೮೩-೮೪)

ಸಾಮಾನ್ಯವಾಗಿ ಶೌರಸೇನಿಯನ್ನು 'ಧ್ರುವ'ಗಳಿಗೆ ಉಪಯೋಗಿಸುವುದು. 'ನರ್ಕುಟ'ದಲ್ಲಿ[೪] ಮಾಗಧಿಯನ್ನು ಉಪಯೋಗಿಸುತ್ತಾರೆಂದು ಮೊದಲನೆಯ ಕಾರಿಕೆಯಲ್ಲಿ ಹೇಳಲಾಗಿದೆ. ಎರಡನೆಯ ಕಾರಿಕೆಯಲ್ಲಿ ಅರ್ಧಸಂಸ್ಕೃತವೆನ್ನುವ ಪದವನ್ನು ವ್ಯಾಖ್ಯಾನಿಸುವಾಗ ಮಣಿಪ್ರವಾಳದ ವಿಷಯವನ್ನು ಅಭಿನವಗುಪ್ತ ಹೇಳುವುದು. ಮೇಲಿನ ಕಾರಿಕೆಯನ್ನು ಆತ ಹೀಗೆ ವ್ಯಾಖ್ಯಾನಿಸುತ್ತಾನೆ: "ಪ್ರಕೃತಿ ದಿವ್ಯರಾದ ದೇವತೆಗಳು, ರಾಜರು ಮುಂತಾದವರಿಗೆ ಸಂಬಂಧಿಸಿದ ಕಥೆಗಳಿಗೆ ಪದ್ಯ ರಚನೆ ಮಾಡುವಾಗ ವ್ಯಾಕರಣಾದಿ ಲಕ್ಷಣಗಳು ಸೇರಿದ ಶುದ್ಧ ಸಂಸ್ಕೃತವನ್ನು ಪ್ರಯೋಗಿಸಬೇಕು. ಬ್ರಾಹ್ಮಣಾದಿಗಳಾದ ಮೂರು ವರ್ಗಗಳಿಗೆ ಸಂಬಂಧಿಸಿದ ಕಡೆಗಳಲ್ಲಿ ಪದ ಮಧ್ಯದಲ್ಲಿ ದೇಶಭಾಷಾದಿಗಳು ಬೆರೆತ ಸಂಸ್ಕೃತವನ್ನು ಬಳಸಬೇಕು. (ಇದೇ ಅರ್ಧ ಸಂಸ್ಕೃತ)". ದಕ್ಷಿಣಾ ಪಥದಲ್ಲಿ ಮಣಿಪ್ರವಾಳವೆಂದೂ ಕಾಶ್ಮೀರದಲ್ಲಿ ಶಾಟಕುಲವೆಂದೂ ಈ ಶೈಲಿ ಪ್ರಸಿದ್ಧವಾಗಿದೆ. ಮತ್ತೆ ಕೆಲವು ಪಂಡಿತರ ಪ್ರಕಾರ ವ್ಯಾಖ್ಯಾನವಿಲ್ಲದೆಯೇ ಎಲ್ಲರಿಗೂ ಅರ್ಥವಾಗುವ ಸರಳಸಂಸ್ಕೃತವೇ 'ಅರ್ಧಸಂಸ್ಕೃತ' ವರರುಚಿ ಮುಂತಾದ ಇನ್ನೂ ಕೆಲವರು ಶೌರ

---

೨. ಗಾನಗಳ ಮೊದಲು ತಾಳಗಳಿಂದ ಕೂಡಿ ಹಾಡುವ ಒಂದು ರೀತಿಯ ಗೀತೆ ಧ್ರುವ. (ಧ್ರುವ, ಧ್ರುವಕಂ ಎಂದು ಹೇಳುತ್ತಾರೆ) ಇದನ್ನು ಪಲ್ಲವಿಯಾಗಿ ಉಪಯೋಗಿಸುತ್ತಾರೆ. ಆಕ್ಷಿಪ್ತಿಕಾ, ಪ್ರಸಾದಿಕೆ, ಮೊದಲಾದ ಐದು ರೀತಿಯ ಧ್ರುವಗಳಿವೆ ಹೆಚ್ಚು ವಿವರಗಳಿಗೆ ನೋಡಿ:
Music in Sanskrit Drama by H. S. Wisker. JAS. Bombay. 1966—67 P. P 124--144.

೩. "ಭಾಷಾಚೈವತು ಕರ್ತವ್ಯಂ ಮಾಗಧ್ಯಂ ನರ್ಕುಟಂ ತಥಾ" (ಪಾಠಾಂತರ)

೪. ನರ್ಕುಟಂ (ನರ್ಕುಟಕಂ) ಪ್ರಾಕೃತದಲ್ಲಿ ತಾಳಾತ್ಮಕವಾದ ಒಂದು ಮಾತ್ರಾವೃತ್ತ. ಭಾಷಾ ಪ್ರಸ್ತಾವನೆಯಲ್ಲಿ ಹೇಳಿರುವುದು ಮಾತ್ರವಲ್ಲದೆ ಧ್ರುವಗಳೊಡನೆ ಯಾವ ಸಂಬಂಧವೂ ಇಲ್ಲ.

ಸೇನಿ ಮೊದಲಾದ ದೇಶಭಾಷೆಗಳಲ್ಲಿ ಸೇರದ ಪ್ರಾಕೃತವೇ ಅರ್ಧಸಂಸ್ಕೃತ[೫] ಎಂದು ಹೇಳಿದ್ದಾರೆ. ಅಭಿನವಗುಪ್ತನ ದೃಷ್ಟಿಯಲ್ಲಿ ಮೊದಲನೆಯ ವಾದವನ್ನು ಸ್ವೀಕರಿಸಬೇಕೆನ್ನುವುದು ಸ್ಪಷ್ಟವಾಗುತ್ತದೆ. ಸ್ವೀಕರಿಸಬೇಕಾದದ್ದೂ ಅದೇ. ಇದರಿಂದ ಹನ್ನೊಂದನೆಯ ಶತಕದಲ್ಲಿ ಪ್ರಾದೇಶಿಕ ಭಾಷೆಗಳನ್ನೂ ಸಂಸ್ಕೃತವನ್ನೂ ಬೆರಸಿ ಸಾಹಿತ್ಯವನ್ನು ಸೃಷ್ಟಿಸುವ ಸಂಪ್ರದಾಯ ಭಾರತದಲ್ಲಿ ಹಲವು ಕಡೆಗಳಲ್ಲಿ ರೂಢಿಯಲ್ಲಿತ್ತು ಎನ್ನುವುದು ತಿಳಿದುಬರುತ್ತದೆ. ದಕ್ಷಿಣ ಭಾರತದಲ್ಲಿ ಇದು ಮಣಿಪ್ರವಾಳವೆನ್ನುವ ಹೆಸರಿನಿಂದ ಪ್ರಸಿದ್ಧವಾಗಿತ್ತು. ಅಭಿನವಗುಪ್ತ ಹೇಳುವುದು ಕಾಶ್ಮೀರದಲ್ಲಿ ಇದು "ಶಾಟಕುಲಂ" ಎನ್ನುವ ಹೆಸರಿನಿಂದ ರೂಢಿಯಲ್ಲಿತ್ತು ಎಂದು. ಇದನ್ನು ಕುರಿತು ಪಂಡಿತರಿಗೆ ಯಾವ ತಿಳಿವೂ ಇಲ್ಲ. ಆ ಶಬ್ದಶುದ್ಧ ಶಬ್ದ ಎಂದೂ ನಮಗೆ ಹೇಳಲಾಗುವುದಿಲ್ಲ.

ಪ್ರಾರಂಭ ಕಾಲ

ಮಣಿ ಪ್ರವಾಳ ಜನ್ಮ ತಾಳಿದುದು ಯಾವಾಗ? ಅದರ ಪೂರ್ವ ರೂಪವೇನಿತ್ತು? ಇತ್ಯಾದಿ ಪ್ರಶ್ನೆಗಳು ಸ್ವಾಭಾವಿಕವಾಗಿ ಉದ್ಭವಿಸುತ್ತವೆ. ಈ ಪದ ಆಲಂಕಾರಿಕ ರೀತಿಯಲ್ಲಿ ಬಹಳ ಮೊದಲೇ ಪ್ರಯೋಗದಲ್ಲಿತ್ತು ಎಂದು ತೋರುತ್ತದೆ. ಅಗನಾನೂರಿನ ಕಳಿಟ್ರು ಯಾನೈ ನಿರೈ (ಯುವ ಗಜಗಳ ಪಂಕ್ತಿ) ಮಣಿಮಿಡೈ ಪವಳಂ (ಮುತ್ತು ಸೇರಿಸಿ ಪೋಣಿಸಿದ ಹವಳ) ನಿತ್ತಿಲಕ್ಕೋವೈ (ಪವಿಳ ಮಾಲ್ಯಂ) ಹೀಗೆ ಮೂರು ವಿಭಾಗಗಳು ಕಾಣಿಸಿಕೊಳ್ಳುತ್ತವೆ. ಪ್ರಸ್ತುತ ಗ್ರಂಥದಲ್ಲಿ ಗಾನಗಳನ್ನು ಸಂಗ್ರಹಿಸಿ ಈ ಹೆಸರುಗಳನ್ನಿಟ್ಟಿರುವವನು ರುದ್ರಶರ್ಮನೇ ಇರಬಹುದೇ ಎಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಈ ವಿಭಾಗದಲ್ಲಿ ಹೀಗೆ ಉದ್ದೇಶಿಸಿರುವುದೂ ಸ್ಪಷ್ಟವಾಗಿಲ್ಲ. ಆದರೂ ಇದರಲ್ಲಿ ಮಣಿ ಮಿಡೈಪವಳಂ ಎನ್ನುವುದು ಮಣಿಪ್ರವಾಳ ಶಬ್ದವನ್ನು ನೆನಪು ಮಾಡಿಕೊಡುತ್ತದೆ. ಮಣಿಯನ್ನೂ ಹವಳವನ್ನೂ ಬೆರಸಿ ಪೋಣಿಸಿದ ಮಾಲೆಗೆ ಒಂದು ಪ್ರತ್ಯೇಕ ಆಕರ್ಷಣೆಯಿರುತ್ತದೆಯೆಂದು ಮೊದಲೇ ಅನುಭವ ಗೋಚರವಾಗಿದ್ದಿರಬೇಕು.

ಸಾಹಿತ್ಯ ಶೈಲಿಯ ಸ್ಥಾನದಲ್ಲಿ ಮಣಿಪ್ರವಾಳ ಕಾಣಿಸಿಕೊಳ್ಳುವುದು ಕ್ರಿ.ಶ. ೮ ನೆಯ ಶತಕದ ಹತ್ತಿರದಲ್ಲಿ ಎಂದೂ ಅದರ ಸೃಷ್ಟಿಕರ್ತರು ಜೈನರೆಂದೂ ಊಹಿಸಲಾಗಿದೆ. ದಿಗಂಬರ ಜೈನರಿಗೆ ಪೂಜ್ಯವೂ ಪ್ರಸಿದ್ಧವೂ ಆದ "ಷಟ್ಖಂಡಾಗಮಂ" ಎನ್ನುವ ಒಂದು ಗ್ರಂಥವಿದೆ. ಪುಷ್ಪದಂತ, ಭೂತಬಲಿ ಎನ್ನುವ ಆಚಾರ್ಯರು ಆರುಸಾವಿರ ಪ್ರಾಕೃತ ಸೂತ್ರಗಳಲ್ಲಿ ರಚಿಸಿದ ಈ ಗ್ರಂಥ

---

೫. ಅಭಿನವ ಭಾರತಿ IV (ಗಾಯಕವಾಡ ಓರಿಯಂಟಲ್ ಸೀರೀಸ್ ನಂಬರ್ 145) 1964. P.379.

(ಕ್ರಿ.ಶ.೧–೨ ಇದರ ಕಾಲ) ಮೇಲೆ ಹಲವಾರು ವ್ಯಾಖ್ಯಾನಗಳು ಬಂದಿವೆ. ಕೊನೆಯಲ್ಲಿ ಬರುವುದು ವೀರಸೇನ ಪ್ರಾರಂಭಿಸಿದುದೂ ಅವನ ಶಿಷ್ಯನಾದ ಜಿನಸೇನ ಮುಕ್ತಾಯಗೊಳಿಸಿದುದೂ ಆದ ಧವಳ, ಜಯಧವಳ, ಎನ್ನುವ ವ್ಯಾಖ್ಯಾನಗಳು. ಎಪ್ಪತ್ತೆರಡು ಸಾವಿರ ಗ್ರಂಥಗಳ(ಗ್ರಂಥ= ೩೨ ಅಕ್ಷರ)ಧವಳವನ್ನೂ ಇಪ್ಪತ್ತು ಸಾವಿರ ಗ್ರಂಥಗಳುಳ್ಳ ಜಯಧವಳದ ಮೂರನೆ ಒಂದು ಭಾಗವನ್ನೂ ವೀರಸೇನ ನಿರ್ಮಿಸಿದ. (ಕ್ರಿ.ಶ. ೭೯೨–೮೨೩). ಜಿನಸೇನ ನಲವತ್ತು ಸಾವಿರ ಗ್ರಂಥಗಳನ್ನು ಸೇರಿಸಿ ಜಯಧವಳ ಕ್ರಿ.ಶ. ೮೩೭ರಲ್ಲಿ ಮುಕ್ತಾಯಗೊಳಿಸಿದ. ರಾಷ್ಟ್ರಕೂಟ ರಾಜನಾದ ಅಮೋಘವರ್ಷನ ಆಳ್ವಿಕೆಯ ಇಪ್ಪತ್ತಮೂರನೆಯ ವರ್ಷದಲ್ಲಿ ಇದು ನಡೆದದ್ದು. ಅಂತ್ಯದಲ್ಲಿರುವ ಕೆಲವು ಪದ್ಯಗಳನ್ನು ಕೆಳಗೆ ಕೊಟ್ಟಿದೆ.

"ಪ್ರಾಕೃತ ಭಾಷಾ ಮಿಶ್ರಂ
ಟೀಕಾಂ ವಿಲಿಖ್ಯ ಧವಳಾಖ್ಯಾಂ
ಜಯ ಧವಳಾಂ ಚ ಕಷಾಯ-
ಪ್ರಾಭೃತರೇ ಚತ ಸೃಣಾಂ ವಿಭಕ್ತೀನಾಂ
....
ಪ್ರಾಯಃ ಪ್ರಾಕೃತ ಭಾರತ್ಯಾ
ಕ್ವಚಿತ್ ಸಂಸ್ಕೃತ ಮಿಶ್ರಯಾ
ಮಣಿ ಪ್ರವಾಳ ನ್ಯಾಯೇನ
ಪ್ರೋಕ್ತೋಽಯಂ ಗ್ರಂಥವಿಸ್ತರಃ

ಪ್ರಾಕೃತವನ್ನೂ ಸಂಸ್ಕೃತವನ್ನೂ ಬೆರಸಿ "ಮಣಿಪ್ರವಾಳ ನ್ಯಾಯ"ದಲ್ಲಿ ವ್ಯಾಖ್ಯಾನ ಗ್ರಂಥವನ್ನು ಬರೆಯಲಾಗಿದೆಯೆಂದು ಜಿನಸೇನ ಹೇಳುವುದು. 'ಮಣಿ' ಎಂದರೆ ಲೀಲಾತಿಲಕಕಾರ ಹೇಳುವಂತೆ ದೇಶಭಾಷೆಯನ್ನು (ಪ್ರಾಕೃತವನ್ನು) ಸೂಚಿಸುವುದಿರಬೇಕು. ಏನೇ ಇದ್ದರೂ ಸಂಸ್ಕೃತವನ್ನೂ ಪ್ರಾಕೃತವನ್ನೂ ಮಿಶ್ರಗೊಳಿಸಿ ಬರೆಯುವ ರೀತಿಗೆ ಈ ಹೆಸರನ್ನು ಆದಿಕಾಲದಲ್ಲಿ ಕೊಡಲಾಗಿತ್ತು ಎಂದು ಕಂಡುಬರುತ್ತದೆ. ಪ್ರಸ್ತುತ ಶಬ್ದವನ್ನು ಜಿನಸೇನನೇ ಸ್ವತಃ ನಿರ್ಮಿಸಿದ್ದಲ್ಲವೆಂದು ಭಾವಿಸುವುದೊಳ್ಳೆಯದು. ಆ ಕಾಲದಲ್ಲಿ "ಮಣಿಪ್ರವಾಳ ನ್ಯಾಯ" ಒಂದು ಪದ್ಧತಿಯಾಗಿ ಹೋಗಿದ್ದಿರಬೇಕು. ಒಂದು ಶತಮಾನದಷ್ಟಾದರೂ ಪ್ರಾಚೀನತೆಯನ್ನು ಕಲ್ಪಿಸಿದರೆ ಏಳನೆಯ ಶತಕವೋ ಎಂಟನೆಯ ಶತಕದ ಮೊದಲೋ ಇದರ ಉತ್ಪತ್ತಿ ಕಾಲವಾಗಿರಬೇಕು ಎಂದಂತಾಗುತ್ತದೆ. ಜಿನಸೇನನ ಪ್ರಸ್ತಾವನೆಗಿಂತ ಮೊದಲು ಮಣಿಪ್ರವಾಳ ಶಬ್ದವನ್ನು ಎಲ್ಲಿಯೂ ಪ್ರಯೋಗಿಸಿರುವುದು ಕಂಡುಬರುವುದಿಲ್ಲವೆಂದು ಒಬ್ಬ ಪ್ರಮುಖ

೧. ದಕ್ಷಿಣ ಕನ್ನಡದ ಮೂಡಬಿದರೆಯಲ್ಲಿ ಇದರ ತಾಳೆಯೋಲೆ ಗ್ರಂಥ ಸಿಕ್ಕಿದೆ. ಅಮರಾವತಿಯಿಂದ ಹೀರಾಲಾಲ್ ಜೈನ್ ಅವರು ಇದನ್ನು ಭಾಗ ಭಾಗಗಳಾಗಿ ಪ್ರಕಟಿಸಿದ್ದಾರೆ.

ಪಂಡಿತರಾದ ಡಾ|| ಎ. ಎನ್. ಉಪಾಧ್ಯೆ (ಕೊಲ್ಹಾಪುರ ಕಾಲೇಜು) ಹೇಳು ತ್ತಾರೆ. ಅದನ್ನು ನಾವು ಒಪ್ಪಬಹುದು. ಮಾಗಧಿ, ಅರ್ಧಮಾಗಧಿ, ಶೌರಸೇನಿ, ಮಹಾರಾಷ್ಟ್ರ ಮೊದಲಾದ ಪ್ರಾಕೃತಗಳಲ್ಲಿ ಹಳೆಯ ಅರ್ಧಮಾಗಧಿ, ಶಕ್ತಿಯುತ ಶೌರಸೇನಿ ಮತ್ತು ಮರಾಠಿ ಮಿಶ್ರವಾದುದೇ ಜೈನರು ಬಳಸುತ್ತಿದ್ದ ಪ್ರಾಕೃತ. ಡಾ|| ಪಿಶ್ಚಲು ಮುಂತಾದವರು ಇದನ್ನು ಜೈನ ಶೌರಸೇನಿ ಎಂದು ಕರೆದಿದ್ದಾರೆ. ಸಂಸ್ಕೃತ ಗುಪ್ತ ಸಾಮ್ರಾಜ್ಯ ಕಾಲದಿಂದ ಪ್ರಾರಂಭವಾಗಿ ಪಂಡಿತರಿಂದ ಪ್ರಾಬಲ್ಯವನ್ನು ಪಡೆಯಲು ಪ್ರಾರಂಭವಾಗಿತ್ತು. ಆಗ ಬೌದ್ಧರು ಪಾಳಿಯನ್ನೂ ಜೈನರು ಪ್ರಾಕೃತವನ್ನೂ ಕ್ರಮವಾಗಿ ಉಪೇಕ್ಷಿಸುತ್ತ ಬಂದಿದ್ದರು. ಮೇಲೆ ನಾವು ಪ್ರಸ್ತಾಪಿಸಿದಾಗ ಷಟ್‌ಖಂಡಾಗಮದ ಮೂಲ ಸೂತ್ರಗಳಿರುವುದು ಪ್ರಾಕೃತವನ್ನೂ ಸಂಸ್ಕೃತವನ್ನೂ ಮಿಶ್ರಮಾಡಿ ವೀರಸೇನನೂ ವ್ಯಾಖ್ಯಾನವನ್ನು ರಚಿಸಿರುವುದು ಕೂಡ ಇಲ್ಲಿ ಗಮನಾರ್ಹ.

ಆದರೆ ಧವಳದಲ್ಲೂ ಜಯಧವಳದಲ್ಲೂ ಉಪಯೋಗಿಸಿದ ಮಣಿಪ್ರವಾಳವನ್ನು ನಮಗೆ ತಿಳಿಯುವ ರೀತಿಯಲ್ಲಿ ಪ್ರಾಕೃತ ಶಬ್ದಗಳನ್ನೂ ಸಂಸ್ಕೃತ ಶಬ್ದಗಳನ್ನೂ ಬೆರೆಸಿ ಬರೆದದ್ದಲ್ಲ, ಕೆಲವು ವಾಕ್ಯಗಳು ಪ್ರಾಕೃತದಲ್ಲಿ ಕೆಲವು ವಾಕ್ಯಗಳು ಸಂಸ್ಕೃತದಲ್ಲಿ–ಹೀಗೆ ಅವುಗಳ ರಚನೆ. ಮಾದರಿಗಾಗಿ ಈ ಕೆಳಗಿನ ಒಂದು ಭಾಗವನ್ನು ನೋಡೋಣ.

> “ತತ್ಥ ಕಾಲಮಂಗಲಂ ಣಾಮ ಜಮ್ಹಿ ಕಾಲೇ ಕೇವಲ
> ಣಾಣಾದಿ–ಪಂಬ ಎಹಿ ಪರಿಚದೋ ಕಾಲೋಪಾವ–ಮಲ
> ಗಾಲಣತ್ತಾದೋ ಮಂಗಲಂ ತಸ್ಯೋದಾಹರಣಂ
> ಪರಿಷ್ಕಮಣ-ಕೇವಲ ಜ್ಞಾನೋತ್ಪತ್ತಿ ಪರಿನಿರ್ವಹಣ
> ದಿವಸಾದಯಃ ಜಿನಮಹಿಮ ಸಂಬಂಧ ಕಾಲೋಪಿ
> ಮಂಗಲಂ ಯಥಾ ನಂದೀಶ್ವರ ದಿವಸಾದಿಃ ತತ್ಥ
> ಭಾವ ಮಂಗಲಂ ಣಾಮ ವರ್ತಮಾನ ಪರ್ಯಾ
> ಯೋಪಲಕ್ಷಿತಂ ದ್ರವ್ಯಂ ಭಾವಃ”[೭]

[ಮಂಗಲ (ಶುಭ)ಕ್ಕೆ ಸಂಬಂಧಿಸಿದ ಒಂದು ವಿವರಣೆ ಮೇಲೆ ಕೊಟ್ಟಿರುವುದು.]

ಇದರಲ್ಲಿ ಯಾವ ನಿಯಮವನ್ನೂ ಅನುಸರಿಸುವುದಿಲ್ಲ. ಕೆಲವು ಸಲ ಉದ್ಧೃದ್ಧವಾದ ಖಂಡಕಗಳು ಸಂಸ್ಕೃತದಲ್ಲೂ ಬರುತ್ತವೆ: ಕೆಲವು ಸಲ ಪ್ರಾಕೃತದಲ್ಲೂ ಬರುತ್ತವೆ.

ಪ್ರಾಕೃತವೂ ಸಂಸ್ಕೃತವೂ ಬರುವ ಭಾಗಗಳನ್ನು ಮಿಶ್ರಗೊಳಿಸಿ ಬರೆಯುವುದು ಎನ್ನುವ ಜೈನರ ಮಣಿಪ್ರವಾಳ ನ್ಯಾಯ ದಾಕ್ಷಿಣಾತ್ಯ ಭಾಷೆಗಳಲ್ಲಿ

---

೭. ಷಟ್‌ಖಂಡಾಗಮ (Ed ಹೀರಲಾಲ್ ಜೈನ್) ಭಾ. ೧ ಅಮರಾವತಿ ೧೯೩೯ ಪು. [illegible].

ಹಿಂದಿನ ಕಾಲದಲ್ಲಿ ಅರ್ಥವ್ಯತ್ಯಾಸವನ್ನು ಹೊಂದಿದ್ದಿತೆಂದು ಊಹಿಸಬಹುದು. ಪ್ರಾದೇಶಿಕ ಭಾಷೆಯಲ್ಲೂ ಸಂಸ್ಕೃತದಲ್ಲೂ ಪದಗಳನ್ನು ಪಂಡಿತರು ಒಂದೇ ವಾಕ್ಯದಲ್ಲಿ ಜೋಡಿಸಿ ಬರೆಯಲು ತೊಡಗಿದರು. ಅರ್ಥಪುಷ್ಟಿಯನ್ನುಂಟು ಮಾಡಲು ಇದನ್ನು ಉಪಯೋಗಿಸುತ್ತಿದ್ದಿರಬೇಕು. ತಮಿಳು ಕನ್ನಡ ಮೊದಲಾದ ಭಾಷೆಗಳಲ್ಲಿ ಜೈನ ಮತ್ತು ಬೌದ್ಧ ಪಂಡಿತರು ಮೊದಲು ತುಂಬ ಕೆಲಸ ಮಾಡಿದವರು. ಜೈನರು ಹೊಸರೂಪದಲ್ಲಿದ್ದ ಮಣಿಪ್ರವಾಳ ಪದ್ಧತಿಯನ್ನು ತಮಿಳಿನಲ್ಲೂ ಮತ್ತಿತರ ಭಾಷೆಗಳಲ್ಲೂ ಪ್ರಚಾರಗೊಳಿಸಲು ನೆರವಾಗಿರಬೇಕು. ಸಂಸ್ಕೃತವನ್ನು ಆಗತ್ಯಕ್ಕಿಂತ ಹೆಚ್ಚಾಗಿ (ವಿಭಕ್ತ್ಯಂತ ಪದಗಳೊಡನೆ) ಪ್ರಯೋಗಿಸುವ ರೀತಿಯನ್ನು ತಮಿಳಿನಲ್ಲಿ ಜೈನರೂ ವೈಷ್ಣವರೂ ಆಚರಣೆಗೆ ತಂದವರು.

ಜೈನ ಕೃತಿಗಳಲ್ಲಿ ಪ್ರಾಮುಖ್ಯತೆಯನ್ನು ವಹಿಸುವ ಒಂದು ಗ್ರಂಥ ಹದಿನೈದನೆಯ ಶತಕದ ಶ್ರೀ ಪುರಾಣ. ದಕ್ಷಿಣ ಆರ್ಕಾಟುಕಾರನೆಂದು ಊಹಿಸಲಾದ ಒಬ್ಬ ಜೈನ ಕವಿಯ ಕೃತಿ. ಮದರಾಸು ವಿಶ್ವವಿದ್ಯಾನಿಲಯದಿಂದ ೧೯೪೩ ರಲ್ಲಿ ಇದು ಪ್ರಕಟಗೊಂಡಿದೆ. ಇದರ ಪ್ರಸ್ತಾವನೆಯಲ್ಲಿ ಸುಪ್ರಸಿದ್ಧ ತಮಿಳು ಪಂಡಿತರಾಗಿದ್ದ ವೈಯಾಪುರಿ ಪಿಳ್ಳೆ ಅವರು ಹೀಗೆ ಬರೆದಿದ್ದಾರೆ.

"ಈ ಗ್ರಂಥಕರ್ತೃ ಮಣಿಪ್ರವಾಳ ಶೈಲಿಯನ್ನು ಅನುಸರಿಸಿದ್ದಾನೆ. ಈ ಶೈಲಿ ಸು. ಹದಿಮೂರನೆಯ ಶತಕದಿಂದ ಹಿಡಿದು ಹದಿನೇಳನೆಯ ಶತಕದ ವರೆಗೆ ಜೈನ, ವೈಷ್ಣವ ಮತ್ತು ಶೈವ ವ್ಯಾಖ್ಯಾನಕಾರರಲ್ಲಿ ಪ್ರಚಾರದಲ್ಲಿತ್ತು. ಇದು ತಮಿಳು ಗದ್ಯದ ಚರಿತ್ರೆಯಲ್ಲಿ ಸುನಿಶ್ಚಿತವಾದ ಒಂದು ಕಾಲಘಟ್ಟವನ್ನು ತಿಳಿಸುತ್ತದೆ. ಹನ್ನೊಂದನೆಯ ಶತಕದ "ವೀರಚೋಳಿಯ" ಈ ಶೈಲಿಯನ್ನು ಕುರಿತು ಹೇಳುತ್ತದೆ. (ಸು. ೧೮೦) ಒಂದನೆಯ ರಾಜರಾಜ ಚೋಳ ಸಿಂಹಾಸನಕ್ಕೆ ಬಂದ ಮೂರನೆಯ ವರ್ಷದಲ್ಲಿ (ಕ್ರಿ.ಶ. ೯೮೮) ಒಂದು ಶಾಸನದಲ್ಲಿ ಪ್ರಗತಿಪರವಾದ ಒಂದು ಮಣಿಪ್ರವಾಳ ಶ್ಲೋಕವೇ ಕಂಡು ಬರುತ್ತದೆ." ತಂಜಾವೂರು ಜಿಲ್ಲೆಯಲ್ಲಿ ಚೆಂಬಿಯನ್ ಮಹಾದೇವಾಲಯದಲ್ಲಿರುವ ಒಂದು ಶಾಸನದಲ್ಲಿ ಕಾಣುವ ಶ್ಲೋಕ ಹೀಗಿದೆ.

"ಮಾಣಿಕ್ಕಂಗಳಿರಂಡಿನಾಲ್ ಮರಕತ್ತೈ
ರಷ್ಟಾಭಿರುಷ್ಣಾಂ ಶುಭಿರ್
ವೈರ್ರೈ ರಟ್ಟಿರು ಸೂಟ್ರ್ಯೋಡೊಂಬದು
ಶತಾದುರ್ಧ್ವಂ ತ್ರಿಮುಕ್ತೈರ್ಲಸಲ್
ಪ್ರೋನ್ನೈ ರಾಟ್ರ್ಯೊಡು ಮುಕ್ಕಬಿಂಚಿನ್ ಮುಕುಟಂ
ಪಾದಾಸ್ಯ ಪಾಕಾಧಿಕಂ
ಪಾಯಾಲ್ ಚೆಂಬಿಯ ಮುಂಗೈ ಮನ್ನಿಯ
ತಿರುಕ್ಕೈಲಾಸಿನೊ ವಶ್ಚಿರಂ."

ಈ ಗೀತಿ ಮಣಿ ಪ್ರವಾಳ ಶೈಲಿ ಸು. ಹತ್ತನೆಯ ಶತಕಕ್ಕೆ ಮೊದಲು ಕಾಣಿಸಿಕೊಂಡಿತೆಂದು ಊಹಿಸಬಹುದು. ಇದರ ನಿಜವಾದ ಫಲಿತಾಂಶ ತಮಿಳಿನ ಪದ ಸಂಪತ್ತು ವೃದ್ಧಿಯಾದದ್ದು. ವಿಶಿಷ್ಟವೂ ಮತ ಪರವೂ ತತ್ತ್ವ ಶಾಸ್ತ್ರಯುತವೂ ಆಗಿ ಹೆಚ್ಚಾಗಿ ಪದಗಳು ತಮಿಳಿನಲ್ಲಿ ಬಂದು ಸೇರಿದವು. ಇದರಿಂದ ದೊರೆತ ಮತ್ತೊಂದು ಫಲವೆಂದರೆ ಪ್ರತ್ಯೇಕ ಬರೆಹಗಾರರಲ್ಲಿಯೂ ಒಂದು ಪ್ರತ್ಯೇಕ ವಿಧಾನವುಂಟಾದದ್ದು. ಈ ಜ್ಞಾನ ಒಂದು ವಿಧದಲ್ಲಿ ವಿನಾಶವನ್ನುಂಟುಮಾಡುವ ವರೆಗೆ ಬೆಳೆದು ಬಂದಿತೆಂದು ಕೂಡ ಹೇಳಬಹುದು. ಈ ಫಲಿತಾಂಶಗಳನ್ನೆಲ್ಲ ಪ್ರಸ್ತುತ ಶೈಲಿಗೆ ಬೆಲೆ ಕಟ್ಟುವುದನ್ನು ನಾವು ಮರೆಯಬಹುದು. ಅದರ ಶಕ್ತಿಯನ್ನು ಕುರಿತು ಮಾತ್ರ ನೆನಪಿಟ್ಟುಕೊಂಡರೆ ಸಾಕು. ಆದ್ದರಿಂದಲೇ ಇದು ಇನ್ನೂ ನಷ್ಟಗೊಂಡಿಲ್ಲ.[೮]

ಮೇಲೆ ಹೇಳಿದ ಶ್ರೀಪುರಾಣ, ಜೈನ ತೀರ್ಥಂಕರರ ಮತ್ತಿತರರ ಕಥೆಗಳನ್ನು ಹೇಳುವ ಗ್ರಂಥ. ಜಿನಸೇನ, ಗುಣಭದ್ರ ಮೊದಲಾದವರು ಒಂಬತ್ತನೆಯ ಶತಕದಲ್ಲಿ ಸಂಸ್ಕೃತದಲ್ಲಿ ಬರೆದ ಮಹಾಪುರಾಣವನ್ನು ಸರಿಯಾಗಿ ಅನುಸರಿಸಿಕೊಂಡು ಹೋಗುವುದು ಇದರದ್ದೇ ಅನುವಾದವೆನಿಸಿದ ಚಾವುಂಡರಾಯ ಪುರಾಣ, (ಕ್ರಿ. ಶ. ೯೭೮) ಹಳಗನ್ನಡದಲ್ಲಿ ಒಂದು ಗದ್ಯಗ್ರಂಥ. ತಮಿಳಿನಲ್ಲಿ ಇಜಿಯನಾರ್ ಆಗಪ್ಪೊರುಳ್‌ನಂತಿರುವ ವಿಸ್ತೃತ ಗ್ರಂಥಗಳು ಕಡಮೆ. ಮಣಿಪ್ರವಾಳ ಶೈಲಿಯಲ್ಲಿ ಬರೆದ ಮಧ್ಯಕಾಲದ ಕೃತಿಗಳು ಎಣಿಕೆಯಲ್ಲೂ ಗಾತ್ರದಲ್ಲೂ ಎದ್ದು ಕಾಣುವಂಥವು.

ಶ್ರೀಪುರಾಣದ ಮುನ್ನುಡಿಯಲ್ಲಿ ಅದರ ಸಂಪಾದಕರಾದ ಶ್ರೀ ವೆಂಕಟರಾಜುಲು ರೆಡ್ಡಿಯಾರ್ ಹೀಗೆ ಬರೆದಿದ್ದಾರೆ.[೯]

" ಮಣಿ ಪ್ರವಾಳ ಭಾಷೆಯನ್ನು ಬೆಳೆಸಿದವರು ಹೆಚ್ಚಾಗಿ ಜೈನರು ಮತ್ತು ವೈಷ್ಣವರು. ಮಲಯಾಳದಲ್ಲೂ ಧಾರಾಳವಾಗಿ ಮಣಿಪ್ರವಾಳ ಕೃತಿಗಳಿವೆ ಆದರೆ ಅವು ಚಂಪು ಕಾವ್ಯಗಳು ಅವಲ್ಲದೆ ಗದ್ಯ ಗ್ರಂಥಗಳಿಲ್ಲ. ದ್ರಾವಿಡ ಭಾಷೆಗಳಲ್ಲಿ ಕನ್ನಡದಲ್ಲೂ ತೆಲುಗಿನಲ್ಲೂ ಈ ರೀತಿಯ ಮಣಿಪ್ರವಾಳ ಕೃತಿಗಳಿಲ್ಲ."

ಇನ್ನು ಶ್ರೀಪುರಾಣದಲ್ಲಿ ಮಣಿಪ್ರವಾಳ ಶೈಲಿಯ ಮಾದರಿಯನ್ನು ನೋಡೋಣ. " ದೇವನೇ! ರಾತ್ರಿಯಿಲ್ ನಿದ್ರಾಸಮಯತ್ತು. ಅಪರಯಾಮತ್ ಇಪ್ಪೆರಿಯವಾಕಿಯ ಸ್ವಪ್ನಂಗಳ್ ಎನ್ನಾಲ್ ಕಾಣ ಪೆಟ್ಟನ್. ಇವಟ್ಟಿನ್ ಫಲಂಗಳೈ ಅರಿವಿತ್ತರುಳ್ ವಾಯಾಕ ಎನ್ನ ನಾಭಿ ಮಹಾರಾಜನುಂ ಅವಧಿ ಜ್ಞಾನ–

೮. Sripuranam. Edited by V. Venkata rajulu Reddyar. Madras[1943]ಮುನ್ನುಡಿ ಪು. 10

೯. ಅದೇ ಮುನ್ನುಡಿ. I

ತ್ತಾಲ್ ಪಾರ್ತ್ಥ ಅತಿಪ್ರೀತ ನಾಕಿ ಅವಟ್ಟೈನ್ ಫಲಂಗಳೆ ಚೊಲ್ಲವಾನ್[೧೦]

ನಮ್ಮ ಪ್ರಾಚೀನ ಮಲಯಾಳ ಗದ್ಯದ ಮಾದರಿಗಳಲ್ಲೂ ಮತ್ತಿತರ ಕಡೆಗಳಲ್ಲೂ ಕಾಣುವ ಗದ್ಯದೊಡನೆ ಇದನ್ನು ಹೋಲಿಸಿ ನೋಡಿ. ಲೀಲಾತಿಲಕ ಹೇಳುವ ನಂಬ್ಯಾರ್ ತಮಿಳು (ನಂಬಿಯಾರ ತಮಿಳು) ಚರಿತ್ರೆಯ ದೃಷ್ಟಿಯಲ್ಲಿ ಮಣಿಪ್ರವಾಳವೇ ಎಂದು ಸ್ಪಷ್ಟವಾಗುತ್ತದೆ. ವಿಭಕ್ತ್ಯಂತ ಸಂಸ್ಕೃತ ಶಬ್ದಗಳನ್ನು ಬಳಸಬೇಕು ಎನ್ನುವುದೊಂದು ಲಕ್ಷಣ. ಹೆಚ್ಚಾಗಿ ಬಳಸಿದ ಅದನ್ನು ತಮಿಳಿನಿಂದ ಬೇರ್ಪಡಿಸುವುದನ್ನೇ ಲೀಲಾತಿಲಕಕಾರ ಮಾಡುವುದು. ಮಲಯಾಳದಲ್ಲಿ ಮಣಿಪ್ರವಾಳ ಸಂಜ್ಞೆ ಆಗಲೇ ಪದ್ಯಕೃತಿಗಳಲ್ಲಿ ಬೇರುಬಿಟ್ಟು ತಮಿಳಿನಲ್ಲಿ ಅದಕ್ಕೆ ಪ್ರತಿಯಾಗಿ ಗದ್ಯಕೃತಿಗಳಾಗಿ ಬಹುಶಃ ಅದರಲ್ಲಿ ಬರುವುದು. ಶಾಸ್ತ್ರದ ದೃಷ್ಟಿಯಲ್ಲಿ ಎರಡುಭಾಷೆಗಳಲ್ಲೂ ಆಚೀಚೆಗಾಗುವುದರಲ್ಲಿ ಆಕ್ಷೇಪವಿರಲಿಲ್ಲ ಅಷ್ಟೆ. ನಂಬೂದಿರಿಗಳು ಸೃಷ್ಟಿಸಿದ ಕೋಮಾಳಿರೂಪಗಳೇ ಮಣಿಪ್ರವಾಳದಲ್ಲಿ ಕಾಣುವುದೆಂದು ಕೆಲವರು ಹೇಳುವುದನ್ನು ಇಂದು ಹೇಳುವುದರಲ್ಲಿ ಅರ್ಥವಿಲ್ಲ. 'ಅಥ' 'ಇಹ' ಇತ್ಯಾದಿಗಳು ವಾಕ್ಯಗಳ ನಡುವೆ ಸೇರಿಸಿ ವಾಕ್ಯರಚನೆಯನ್ನು ವಿಕೃತಗೊಳಿಸುವುದು ಮುಂತಾದುದೆಲ್ಲ ಶ್ರೀಪುರಾಣದಲ್ಲಿಯೇ ಕಂಡುಬರುತ್ತದೆ. ಕೆಲವು ತಮಿಳು ಶಾಸನಗಳಲ್ಲೂ ಪ್ರಯತ್ನಪಟ್ಟು ಸಂಸ್ಕೃತ ವಿಭಕ್ತ್ಯಂತ ರೂಪಗಳನ್ನು ಪ್ರಯೋಗಿಸಿರುವುದು ಕಂಡುಬರುತ್ತದೆ. ತಥೈವ, ಏವಂಚ, ಪ್ರತ್ಯುತ ಮುಂತಾದ ಸಂಸ್ಕೃತ ಶಬ್ದಗಳನ್ನು ಮಲಯಾಳ ವಿದ್ವಾಂಸರು ಇಂದೂ ಸಂಪೂರ್ಣವಾಗಿ ಉಪೇಕ್ಷಿಸಿಲ್ಲ. ನಮ್ಮ ಹಳೆಯ ಚಾಕ್ಯಾರ್ ಶೈಲಿ ಒಂದು ಹಳೆಯ ತಮಿಳು ಪಾರಂಪರ್ಯದ ಮುನ್ನಡೆ ಎಂದು ನಮಗೆ ತಿಳಿದಿದೆಯಲ್ಲ. ಮಣಿಪ್ರವಾಳವೂ ವಿನೋದಕ್ಕಾಗಿ ವಿದೂಷಕನೋ ನಂಬೂದಿರಿಯೋ ಪ್ರಯತ್ನಪೂರ್ವಕವಾಗಿ ಸೃಷ್ಟಿಸಿದುದೇ ಎನ್ನುವ ವಾದದಲ್ಲಿ ಅಸಮಂಜಸತೆಯಿದೆ. ಆ ಶೈಲಿ ಹಿಂದಿನಕಾಲದಲ್ಲಿ ಬಹುಮಟ್ಟಿಗೆ ಕೃತಕವಾಗಿದ್ದಿರಲೇಬೇಕು. ಅದೂ ಅಷ್ಟು ಮುಖ್ಯ ಬದಲಾವಣೆಯೇನಲ್ಲ. "ಸಂದರ್ಭೇ ಸಂಸ್ಕೃತೀ ಕೃತಾಚ" ಎನ್ನುವ ನಿಯಮದ ಪ್ರವರ್ತನೆಯನ್ನು ತುಂಬ ದುರ್ಲಭವಾಗಿಯೇ ನಾವು ಕಾಣುವುದು.

ಆ ಮಣಿಪ್ರವಾಳ ಶ್ಲೋಕ

ಶ್ರೀ ಪುರಾಣದ ಪ್ರಸ್ತಾವನೆಯಲ್ಲಿ ಶ್ರೀ ವೈಯಾಪುರಿಪಿಳ್ಳೆ ಉದ್ಧರಿಸಿದ "ಮಾಣಿಕ್ಕಂಗಳಿರಂಡಿನಾಲ್" ಎನ್ನುವ ಪದ್ಯವನ್ನು (ಮೇಲೆ ತಿಳಿಸಿರುವುದು ಎಷ್ಟೋ ಜನ ಮಲಯಾಳ ವಿದ್ವಾಂಸರು (ಪ್ರೊ. ಇಳಂಕುಳ ಅವರು-ಮೊದಲುಗೊಂಡು) ಅದನ್ನೇ ಪ್ರತಿಮಾಡಿರುವಂತೆ ತೋರುತ್ತದೆ. ಅದನ್ನು

೧೦. ಶ್ರೀಪುರಾಣಂ, ಪು. ೭೭.

ಓದುವ ಸಾಮಾನ್ಯ ಜನರಿಗೆ ಈ ರೀತಿಯ ಮಣಿಪ್ರವಾಳ ಪದ್ಯಗಳು ತಮಿಳು ಶಾಸನಗಳಲ್ಲಿ ಧಾರಾಳವಾಗಿ ಇರಬೇಕು ಎನ್ನಿಸುತ್ತದೆ. ನಿಜವಾಗಿಯೂ ಈವರೆಗೆ ಪ್ರಕಟಿಸಿದ ದಕ್ಷಿಣ ಇಂಡಿಯದ ತಮಿಳು ಶಾಸನಗಳಲ್ಲಿ ಈ ರೀತಿಯ ಶ್ಲೋಕಗಳು ಬೇರೆ ಇವೆಯೇ ಎನ್ನುವುದು ಸಂಶಯ. "ಮಾಣಿಕಂಗಳಿರಂಡಿನಾಲ್" ಎನ್ನುವ ಚೆಂಬಿಯನ್ ಮಹಾದೇವಿ ಶಾಸನವನ್ನು ಕೂಡ ಇದುವರೆಗೆ (A. R.-498· of 1925) ಪ್ರಕಟಿಸಿಲ್ಲ. ಭಾರತ ಸರ್ಕಾರದ ಪ್ರಾಚೀನ ಶಾಸನ ಸಂಗ್ರಹದಲ್ಲಿ ಪ್ರತಿ ತೆಗೆದಿಟ್ಟಿದ್ದಾರೆ ಅಷ್ಟೆ. ತಂಜಾವೂರು ಜಿಲ್ಲೆಯ ನಾಗಪಟ್ಟಣ ತಾಲೂಕಿನಲ್ಲಿ ಚೆಂಬಿಯನ್ ಮಹಾದೇವಿ ಗ್ರಾಮದಲ್ಲಿರುವ[೧೧] ಕೈಲಾಸನಾಥ ಕ್ಷೇತ್ರದ ಉತ್ತರ, ಪಶ್ಚಿಮ ಮತ್ತು ದಕ್ಷಿಣದ ಗೋಡೆಗಳಲ್ಲಿ ಎಷ್ಟೋ ಶಾಸನಗಳು ಗೋಚರಿಸುತ್ತವೆ. ಅವುಗಳಲ್ಲಿ ಒಂದು "ಶ್ರೀಮತ್ ಚೈಂಬ್ಯ ಮಹಾದೇವ್ಯಾಃ" ಎನ್ನುವ ಶಾಸನದಲ್ಲಿ ಒಂದು ಶುದ್ಧ ಸಂಸ್ಕೃತ ಪದ್ಯವನ್ನು ಮೊದಲು ಸೇರಿಸಿ ಆಮೇಲೆ ಬರುವುದೇ ಮೇಲೆ ಕೊಟ್ಟಿರುವ ಮಣಿಪ್ರವಾಳ ಶ್ಲೋಕ. ಆದರ ನಂತರ ಇರುವುದೂ ಸಂಸ್ಕೃತವೇ. ತಮಿಳನ್ನೂ ಗ್ರಂಥಾಕ್ಷರವನ್ನೂ ಬೆರೆಸಿ ಬರೆಯಲಾಗಿದೆ. ಇದೇ ರೀತಿಯಲ್ಲಿರುವ ಮಣಿಪ್ರವಾಳ ಶ್ಲೋಕಗಳು ಚೋಳರ ಕಾಲದಲ್ಲಿ ಇನ್ನೂ ಇತರ ಶಾಸನಗಳಲ್ಲಿ ದೊರೆಯಬಹುದು. ಆದರೆ ಈ ತೆರನಾದ ಕಾರ್ಯಗಳಲ್ಲಿ ತಮಿಳು ಪಂಡಿತರಲ್ಲಿ ಶ್ರದ್ಧೆಯಿದ್ದಂತೆ ಕಾಣುವುದಿಲ್ಲ. ಅವರು ಅವುಗಳನ್ನು ಒಂದು ಮುಖ್ಯ ವಿಷಯವೆಂದು ಭಾವಿಸದಿರುವುದೇ ಕಾರಣ. ಇದೇ ರೀತಿ ನಮ್ಮ (ಮಲಯಾಳದ) ಚಾಕ್ಯಾರರನ್ನು ಕುರಿತೂ ಕೆಲವು ಪ್ರಸ್ತಾಪಗಳು ತಮಿಳು ಶಾಸನಗಳಲ್ಲಿವೆ. ಆದರೆ ಅವರ ಕೂತ್ತನ್ನೂ (ಕಲೆಯನ್ನು, ಚಾಕ್ಯಾರ್ ಕಲೆಯನ್ನು) ಕುರಿತು ವಿವರವಾದ ವ್ಯಾಖ್ಯಾನಗಳೊಂದೂ ದೊರೆಯುವುದಿಲ್ಲ. ತಮಿಳು ಮತ್ತು ಸಂಸ್ಕೃತವನ್ನು ಬಲ್ಲ ಮಲಯಾಳ ಪಂಡಿತರು ತಮಿಳು ನಾಡಿನಲ್ಲಿ ಅಪ್ರಕಟಿತವೆನಿಸಿ ಮೂಲೆಗುಂಪಾಗಿರುವ ಶಾಸನಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿದ್ದಾದರೆ ಈ ರೀತಿಯ ವಿಷಯಗಳ ಮೇಲೆ ಸ್ವಲ್ಪ ಬೆಳಕು ಹರಡಬಹುದು. ಕೇವಲ ಶಾಸನ ಸಂಗ್ರಹಗಳ ಚಿಕ್ಕ ಚಿಕ್ಕ ವರದಿಗಳಿಂದ ಸಾಕಷ್ಟು ಪ್ರಯೋಜನ ದೊರೆಯುವುದಿಲ್ಲ.

ವೀರ ಚೋಳೀಯಂ

ನಮ್ಮ ವಿದ್ವಾಂಸರಲ್ಲಿ ಎಷ್ಟೋ ಮಂದಿ ವೀರ ಚೋಳೀಯದಲ್ಲಿ (೧೧-ನೆಯ ಶತಕ) 'ಇಡೈಚ್ಚೇವಡವೆಟ್ಟೆಯ್ದಿಲ್' ಎನ್ನುವ ಸೂತ್ರವನ್ನು

೧೧. ಒಂದನೆಯ ಪರಾಂತಕನ ಮೊದಲನೆಯ ಮಗನಾದ ಗಂಡರಾದಿತ್ಯನ ಪತ್ನಿಯಾಗಿದ್ದವಳು ಚೆಂಬಿಯನ್ ಮಹಾದೇವಿ. ಇಬ್ಬರೂ ದೊಡ್ಡ ಭಗವದ್ ಭಕ್ತರಾಗಿದ್ದರು. ರಾಣಿಯ ಹೆಸರಿನಲ್ಲಿ ಪ್ರಸಿದ್ಧಿಯಾದದ್ದು ಪ್ರಸ್ತುತ ಸ್ಥಳ.

(ಅಲಂಕಾರ ಪಟಲಂ – 40) ಮಣಿಪ್ರವಾಳ ವಿಚಿಂತನೆಯಲ್ಲಿ ಉದ್ಧರಿಸಿರುವುದು ಕಂಡುಬರುತ್ತದೆ. ಇದನ್ನು ನೋಡಿದಾಗ ಪ್ರಸ್ತುತ ಗ್ರಂಥಕರ್ತೃ ಮಣಿಪ್ರವಾಳಕ್ಕೆ ಮಲಯಾಳದ ಹಾಗೆ ತಮಿಳಿನಲ್ಲಿಯೂ ಪ್ರಾಧಾನ್ಯವನ್ನು ಕೊಟ್ಟಿರಬಹುದೆಂದು ಓದುವವರಿಗೆ ತೋರಬಹುದು. ಆದರೆ ವಾಸ್ತವವಾಗಿ ಶಬ್ದ ಚಿತ್ರಗಳನ್ನು ಮತ್ತಿತರ ವಿಷಯಗಳನ್ನು ಕುರಿತು ಹೇಳಿದ ಬಳಿಕ ಪ್ರಯೋಗದಲ್ಲಿರುವ ಅನೇಕ ರೀತಿಯ ರಚನಾ ಸಂಪ್ರದಾಯಗಳಲ್ಲಿ ಒಂದೆಂದು ಮಣಿಪ್ರವಾಳವನ್ನು ಪರಿಗಣಿಸಿ ಅದರ ಸ್ವರೂಪವನ್ನು ಆನುಷಂಗಿಕವಾಗಿ ಗ್ರಂಥಕರ್ತೃವಾದ ಬುದ್ಧಮಿತ್ರ ವ್ಯಕ್ತಪಡಿಸಿದ್ದಾನೆ ಅಷ್ಟೆ. ಪ್ರಸ್ತುತ ಸೂತ್ರ ಆ ಗ್ರಂಥದಲ್ಲಿ ಉಪಾಂತ ಸೂತ್ರ. ಆದನ್ನು ಕೆಳಗೆ ಉದ್ಧರಿಸಲಾಗುತ್ತದೆ. ಈ ಸೂತ್ರಕ್ಕೆ ಪ್ರಸಿದ್ಧ ವಿದ್ವಾಂಸರಾದ ಶ್ರೀ ಎಲ್. ವಿ. ರಾಮಸ್ವಾಮಿ ಅಯ್ಯರ್ ಅವರು ಕೊಡುವ ಅರ್ಥವೂ ಸರಿಯಾಗಿ ಹೊಂದಿಕೆಯಾಗುವುದಿಲ್ಲ.[೧೨] ಮಲಯಾಳ ವಿದ್ವಾಂಸರು ಮೊದಲಿನ ಎರಡು ಪಾದಗಳನ್ನು ಮಾತ್ರವೇ ಉದ್ಧರಿಸುವುದು. ಅದರಿಂದಲೂ ಸರಿಯಾದ ಚಿತ್ರಣ ದೊರೆಯುವುದಿಲ್ಲ.

“ಇಡೈಯೇ ವಡವೆಟುತ್ತೈಯ್ದಿಲ್
ವಿರವಿಯ ಲೀಣ್ಡೆದು ಕೈ
ನಡೈಯೇದು ಮಿಲ್ಲಾ ಮಣಿಪ್ಪಿರವಾಳ
ನಟ್ಟಿಯ್‌ನಚ್ಚೊಲ್ಲಿನ್
ಕಿಡೈಯೇ ಮುಡಿಯುಂ ಪದಮುಡೈತ್ತಾ
ಙ್ಕಳವಿಕ್ಕವಿಯಿನ್–
ಐತೊಡೆಯೇ ತುರೈ, ನರ್‌ಪಿರಳಿಕ್ಕೈ
ಯಾತಿ ತುಣಿನ್ದಜಿಯೇ ”

ಈ ಗ್ರಂಥದ ಹಳೆಯ ವ್ಯಾಖ್ಯಾನ ಕರ್ತೃವಾದ ಪೆರುನ್ದೇವ ನಾರ್[೧೩] ಈ ರೀತಿಯ ಅರ್ಥವನ್ನು ಕೊಡುತ್ತಾರೆ.

“ವಡವಟುತ್ತು ವಿರವುವತು, ವಿರವಿಯಲಾಂ ವಡವೊಟು ವಿರವೊಟು ವರವಿಲ್ ಮಣಿಪ್ಪಿರವಾಳ ಮಾಂ ಅದರ್‌ಕದು ಕೈಯಿಲ್ಲೈ ಕಿಳವಿಕ್ಕವಿಯುಂ, ತುರೈಕ್ಕವಿಯೂ ಪಿರಳಿಕ್ಕೈ ಮುದಲಿಯ ವಿನಾವಿಡೈಕವಿಯುಂ ಆಜಿಗ”

ತಮಿಳು ಪದದ ಮಧ್ಯೆ ಸಂಸ್ಕೃತಾಕ್ಷರ ಬಂದರೆ ಆದನ್ನು ವಿರವಿಯಲ್ (ವಿರವುಕ=ಒಂದಾಗಿ ಸೇರು) ಎಂದು ಹೆಸರು. ಸಂಸ್ಕೃತ ಶಬ್ದವನ್ನು (ದೈವ

೧೨. L. V. Ramaswamy Iyyar ; Grammar in Lilatilakam. Trichur-1954.

೧೩. ವೀರಚೋಳಿಯದ ಕರ್ತೃವಾದ ಬುದ್ಧಮಿತ್ರನ ಒಬ್ಬ ಶಿಷ್ಯ ಈ ಪೆರುಂದೇವನಾರ್. ಪ್ರಸಿದ್ಧನಾದ “ಪಾರತವನ್ನು ಪಾಡಿದ ಪೆರುಂದೇವನಾರ್” ಅಲ್ಲ.

ಚ್ಚೊಲ್, ಎಂದು ಸೂತ್ರದಲ್ಲಿ ಉಪಯೋಗಿಸುವುದು) ತಮಿಳು ಪದದ ನಡುವೆ ಉಪಯೋಗಿಸಿದರೆ ಅದೇ ಮಣಿಪ್ರವಾಳ. ಅದರಲ್ಲಿ ದ್ವಿತೀಯಾಕ್ಷರ ಪ್ರಾಸವಿಲ್ಲ (ಎದುಗ), ಮೇಲೆ ಹೇಳಿದ ಎರಡು ಸಂಪ್ರದಾಯಗಳಲ್ಲದೆ ಕಿಳವಿ ಕವಿ, ತುರ್ರೈಕವಿ, ಪಿರಳಿಕ (ಪ್ರಹೇಳಿಕ) ಮುಂತಾದ ಪ್ರಶ್ನೋತ್ತರ ಕವಿತೆಗಳು ಎನ್ನುವ ಇವುಗಳನ್ನು ವಿದ್ಯಾರ್ಥಿಗಳು ತಿಳಿಯಬೇಕಾಗಿದೆ. ಇದನ್ನೇ ವ್ಯಾಖ್ಯಾನಕಾರ ಹೇಳುವುದು. ಮೂಲದಲ್ಲಿ ಮುಂದಿನ ಸೂತ್ರದಲ್ಲಿ ತುರೈಕವಿ ಕಿಳವಿ ಕವಿ ಮುಂತಾದುವುಗಳಲ್ಲಿ ಈ ಭಾಗಗಳು ಬರುತ್ತವೆ. ಮಣಿಪ್ರವಾಳದಲ್ಲಿ 'ಎದುಗ' ಅಥವಾ ದ್ವಿತೀಯಾಕ್ಷರ ಪ್ರಾಸವಿಲ್ಲವೆಂದು ಮೇಲೆ ಉದ್ಧರಿಸಿದ ಸೂತ್ರದಲ್ಲಿ ಹೇಳಲಾಗಿದೆಯಷ್ಟೆ. ಮಣಿಪ್ರವಾಳ ಪದವನ್ನು ತಮಿಳಿನಲ್ಲಿ 'ಎದುಗ'ಕ್ಕೆ ಉಪಯೋಗಿಸಕೂಡದು ಎನ್ನುವುದು ಇದರ ತಾತ್ಪರ್ಯವೆಂದು ತಿಳಿದು ಬರುತ್ತದೆ. ತಮಿಳು ಸಾಹಿತ್ಯದಲ್ಲಿ ಮಧ್ಯಕಾಲದಲ್ಲಿ ಪ್ರಚಾರದಲ್ಲಿದ್ದ ಅನೇಕ ರೀತಿಯ ರಚನಾ ಸಂಪ್ರದಾಯಗಳಲ್ಲಿ ಮಣಿಪ್ರವಾಳವನ್ನು ಬುದ್ಧಮಿತ್ರ ಅಳವಡಿಸಿದ್ದಾನೆ ಎನ್ನುವುದಲ್ಲದೆ ಅದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಆಸಕ್ತಿಯನ್ನೇನೂ ತೋರಿಸಿದಂತಿಲ್ಲ. ಪ್ರಹೇಳಿಕೆಗಳು ಮುಂತಾದವುಗಳ ಜೊತೆಯಲ್ಲಿ ಅದನ್ನು ಪರಿಗಣಿಸಲಾಗಿದ್ದುದನ್ನು ನೋಡಿ. ಅಲಂಕಾರ ಪ್ಪಟಲಂ-೨ನೆಯ ಸೂತ್ರದಲ್ಲೂ ಸಂಸ್ಕೃತದ (ಪಡವೆಟುತ್ತಿನ್ಡ) ಪ್ರಸ್ತಾವನೆಯಿದೆ. 'ಮಣಿಪ್ಪಿರವಾಳ'ದಲ್ಲೂ 'ವಿರವಿಯ'ದಲ್ಲೂ ಅದು ಬರುವುದು ತಪ್ಪಲ್ಲವೆಂದು ವಾಖ್ಯಾನಕಾರ ವಿವರಣೆಯನ್ನು ನೀಡುತ್ತಾನೆ. ಆ ಶೈಲಿಯ ನೈಜತೆ ಸುಸಮ್ಮತವಾಗಿದ್ದರೂ ಅದನ್ನು ಪಂಡಿತರು ತುಂಬ ಮುಖ್ಯವಾದುದೆಂದು ಪರಿಗಣಿಸಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ವೀರಚೋಟಿಯ ತಮಿಳು ಪರಂಪರೆಯಿಂದ ಪ್ರತ್ಯೇಕವಾಗಿ ನಿಲ್ಲುವ ಒಂದು ಕೃತಿಯೆಂಬುದನ್ನೂ ನೆನಪಿನಲ್ಲಿಡಬೇಕು ಎನ್ನುವಂತಿದೆ. ಸಂಸ್ಕೃತದ ವ್ಯಾಕರಣ ಸಂಕೇತಗಳನ್ನೂ ಸಾಹಿತ್ಯ ಸಿದ್ಧಾಂತಗಳನ್ನೂ ಅದರಲ್ಲಿ ತಮಿಳು ನಿಯಮಗಳೊಡಗೂಡಿ ಹೆಣೆದಿದ್ದಾರೆ. 'ಅಲಂಕಾರ ಪಟಲ'ದಲ್ಲಿ ದಂಡಿಯ ಅಲಂಕಾರಗಳೆಲ್ಲ ಬರುತ್ತವೆ. ಸರ್ಪಬಂಧಾದಿಗಳೊಡನೆ ಸೇರಿಸಿರುವುದೂ ಕಂಡು ಬರುತ್ತದೆ. 'ಪೊರುಳ್' ಪಟಲದಲ್ಲಿ ಸಂಸ್ಕೃತದ ಸಾತ್ವತಿ, ಆರಭಟಿ ಮುಂತಾದ ವೃತ್ತಿಗಳನ್ನೂ 'ಯಾಪ್ಪು ಪಟಲ'ದಲ್ಲಿ ಆರ್ಯ ಮುಂತಾದ ಸಂಸ್ಕೃತ ವೃತ್ತಗಳನ್ನೂ ಕೃತ್ರಿಮವಾಗಿ ಅಳವಡಿಸಲಾಗಿದೆ. ತಮಿಳು ಪಂಡಿತರಿಗೆ ಇದೊಂದೂ ಒಪ್ಪಿಗೆಯಾಗುವುದಿಲ್ಲವೆಂದು ಪ್ರತ್ಯೇಕವಾಗಿ ಹೇಳಬೇಕಾದದ್ದಿಲ್ಲವಲ್ಲ! ಅವರಲ್ಲಿ ಎಲ್ಲೋ ಕೆಲವರು ಈ ಗ್ರಂಥದ ಕಡೆಗೆ ಕಣ್ಣು ಹಾಯಿಸುವವರು ಅಷ್ಟೆ.[೧೪]

---

೧೪. ಇದೇ ಲೇಖಕ ವೀರಚೋಟಿಯವನ್ನು ಕುರಿತು ಬರೆದ ವಿಸ್ತೃತವಾದ ಒಂದು ಲೇಖನವನ್ನು 1970ರ 'ಜಯ ಕೇರಳ' ವಿಶೇಷಾಂಕದಲ್ಲಿ ನೋಡಿ.

ಜೈನರ ಇನ್ನೂ ಕೆಲವು ಕೃತಿಗಳು

ಶ್ರೀ ಪುರಾಣದಂತಿರುವ ಇತರ ಜೈನ ಮಣಿಪ್ರವಾಳ ಕೃತಿಗಳು ತಮಿಳಿನಲ್ಲಿವೆ. ತೇವೇಂತಿರ ಮಾಮುನಿ [ದೇವೇಂದ್ರ ಮಹಾಮುನಿ]ಯ "ಚೀವ ಚಂಬೋತನ" [ಜೀವಸಂಬೋಧನ] ಇದರಲ್ಲಿ ಒಂದೊಂದೂ[೧ಳನೆಯ ಶತಕ]ಗದ್ಯಪದ್ಯ ಮಿಶ್ರ ವಾದುದೆಂದೂ ಕಂಡುಬರುತ್ತದೆ. ಪದ್ಯಗಳು ತಮಿಳಿನಲ್ಲೂ ವ್ಯಾಖ್ಯಾನ ಮಣಿ ಪ್ರವಾಳದಲ್ಲೂ ಇವೆ. ಸಂಸ್ಕೃತವನ್ನು ಬೆರಸದಿದ್ದರೆ ಮತಗ್ರಂಥಗಳಿಗೆ ಗೌರವ ಕಡಿಮೆಯಾಗುವದೆಂದು ಭಾವಿಸುತ್ತಿದ್ದುದು ಒಂದು ಕಾಲದಲ್ಲೂ ವಿದ್ವಾಂಸರಲ್ಲಿ ಆಚರಣೆಯಲ್ಲಿತ್ತೆಂದು ತಮಿಳು ಸಾಹಿತ್ಯ ಚರಿತ್ರಕಾರರು ಬರೆದಿದ್ದಾರೆ. ಮೇಲೆ ಹೇಳಿದ ಚೀವ ಚಂಬೋತನ [ಜೀವ ಸಂಬೋಧನ]ದಲ್ಲಿ ಒಂದು ವಾಕ್ಯವನ್ನು ನೋಡಿ, ಇಚ್ಚೊಲ್ಲಪಟ್ಟ ಚುಪಾಪಜ್ಕಳೈಯುಡಯನ್ಂಡ್ರಿಕ್ಷೀರೋತಕತ್ತಿಲ್ ನೀರ್ ಒೞಿಯ ಪಾಲ್ ಸುಗರುಂ ಹಂಸಪೋಲತೋಷತ್ತೈವಿಟ್ಟು ಕಣಕ್ಕಿರಾಕೀ [ಗುಣಗ್ರಾಹಿ] ಯಾಯಿರುಪ್ಪಾರ್ ತಮ್ಮಚ್ಚಿರುವಣಂ [ಧರ್ಮಶ್ರವಣಂ] ಕೇಟ್ಪರ್‌ಕ್ಕು ಉರಿಯರ್" ಅಂದರೆ ಪ್ರಸ್ತುತ ಗ್ರಂಥದಲ್ಲಿ ಶುದ್ಧ ತಮಿಳಿನ ಭಾಗ ಗಳೂ ಇವೆ. "ಅರಿವೆನಪ್ಪಡುವುದು ತುಂಬಂತುಡೈತಾಲ್; ಚೆರಿವೆನಪ್ಪೆಡುವದು ಮುಮ್ಮೈಯುಂ ಚೆರಿತಲ್. ಆಣ್ ಮೈಎನಪ್ಪಡುಪದು ಐಂಪುಲಂ ವೆಲ್ಲಲ್ [ಪರರ ದುಃಖವನ್ನು ಇಲ್ಲದಂತೆ ಮಾಡುವುದೇ ಅರಿವು. ತ್ರಿಕರಣ ಶುದ್ಧಿಯೇ" ಯಥಾರ್ಥ ಶುದ್ಧಿ. ಪೌರುಷವೆಂದರೆ ಯಥಾರ್ಥದಲ್ಲಿ ಇಂದ್ರಿಯ ನಿಗ್ರಹ]ಮಣಿ ಪ್ರವಾಳದ ರೀತಿ ವೈಚಿತ್ರ್ಯವನ್ನುಂಟು ಮಾಡಲು ಮಾತ್ರ ಉಪಯೋಗಿಸಿದಂತಿದೆ.

ವೈಷ್ಣವ ಮಣಿಪ್ರವಾಳ

ವೈಷ್ಣವರ ಪ್ರಸಿದ್ಧ ಮತವ್ಯಾಖ್ಯಾನಗಳೆಲ್ಲ ಇರುವುದು ಮಣಿಪ್ರವಾಳ ಶೈಲಿಯಲ್ಲಿ ಎಂದು ಮೊದಲೇ ಹೇಳಿದೆ. ತಿರುವಾಯ್, ಮೊೞಿ ಪಿಳ್ಳೈ, ಅೞಗಿಯ ಮಣವಾಳಪ್ಪೆರುಮಾಳ್‌ನಾಯರ್, ಕೋಯಿಲ್ ಅಣ್ಣನ್ ಮುಂತಾದವರ ಮುಖ್ಯ ಗ್ರಂಥಗಳಾದ "ಅಷ್ಟಾದಶಹಸ್ರ" ಗಳು ಈ ಶೈಲಿಯಲ್ಲಿ ರಚನೆಗೊಂ-ಡಿವೆ. ಅವುಗಳ ಹೆಸರೇ ತತ್ವತ್ರಯಂ; ಶ್ರೀವಚನ ಪೂಷಣಂ, ಪ್ರಮೇಯ ಚೇಕರಂ; ಚಂಚಾರ ಚಾಮ್ರಾಜ್ಯಂ [ಸಂಸಾರ ಸಾಮ್ರಾಜ್ಯಂ] ಇತ್ಯಾದಿ. ಅೞ-ಗಿಯ ಮಣವಾಳಪ್ಪೆರು ಮಾಳ್, ಭಗವದ್ಗೀತೆಯನ್ನು ಮಣಿಪ್ರವಾಳ ಶೈಲಿ ಯಲ್ಲಿ ತರ್ಜುಮೆ ಮಾಡಿದುದಾಗಿ ಹೇಳಿದ್ದಾನೆ. ಈತನ "ಆಚಾರಿಯ ಹಿರುದ ಯತ್ತಿನ" [ಆಚಾರ್ಯ ಹೃದಯ]ವೂ ಮಣಿಪ್ರವಾಳ ಮಾಮುನಿಗಳು ಬರೆದ ವ್ಯಾಖ್ಯಾನವೂ ಪ್ರಸ್ತುತ ಶೈಲಿಯಲ್ಲೇ ಇರುವುದು. ಆಚಾರ್ಯ ಹೃದಯದಿಂದ ಒಂದು ಸೂತ್ರವನ್ನು ಆಯ್ದು ಈ ಕೆಳಗೆ ಕೊಡಲಾಗಿದೆ.

"ಚೇರ್ಪ್ಪಾರೈ ಪಕ್ಷಿಗಳ್ ಆಕ್ಕಿ ಜ್ಞಾನ ಕರ್ಮಂಗಳ್ಳೈ ಚಿರಕ್ಕ್ಕು ಖನು ಕುರು
ಸಬ್ರಹ್ಮ ಚಾರಿ ಪುತ್ರ ಚಿಷ್ಯಸ್ತಾನೇ ಪೇಚುಂ" [ಆಚಾ. ಹೃ.ಸೂ. ೧೫೦]

ಸ್ತಾನೇ (ಸ್ಥಾನೇ) ಎನ್ನುವ ವಿಭಕ್ತ್ಯಂತ ಸಂಸ್ಕೃತವೇ ಇದರಲ್ಲಿ ಬಂದಿರುವುದು ಎಂಬುದನ್ನು ಗಮನಿಸಿ. 'ಕಿಳಿ' 'ಬಂಡು' ಮುಂತಾದವುಗಳನ್ನು ಕೂಗಿ ಕರೆದು ಹಾಲು, ಜೇನು ಮೊದಲಾದುವನ್ನು 'ಕೊಟ್ಟು' ಇಷ್ಟದೇವತೆಗಳ ಹತ್ತಿರಕ್ಕೆ ಕಳುಹಿಸುವ ಸಂಪ್ರದಾಯ ತಮಿಳು ನಾಡಿನಲ್ಲಿ ನಮ್ಮಾಳ್ವಾರ್ ಮುಂತಾದ ಭಕ್ತರ ಕವಿತೆಯಲ್ಲಿವೆ. 'ದೂತ' ಎಂದು ಇವುಗಳಿಗೆ ಹೆಸರು. ಇದರ ವಿಕಸಿತ ರೂಪಗಳ ಮುನ್ನಡೆಯೇ ಮಲಯಾಳದಲ್ಲಿ ಗಿಳಿಪ್ಪಾಟ್ಟಿನಲ್ಲೂ ಕುಯಿಲ್ ಪಾಟ್ಟಿನಲ್ಲೂ ಮತ್ತಿತರ ಕಡೆಗಳಲ್ಲೂ ಕಂಡು ಬರುವುದು. ಭಕ್ತನ ಆತ್ಮವನ್ನೇ ಮೇಲೆ ಹೇಳಿದ ಜೀವಿಗಳಾಗಿ ಕಲ್ಪಿಸಿರುವುದು. (ನಮ್ಮ ಭಾಗವತದಲ್ಲಿ ಗಿಳಿಯನ್ನು ಕರೆಯುವದನ್ನು ನೋಡಿದರೆ ಆದರಲ್ಲಿ ಒಂದು 'ಮಿಸ್ಟಿಕ್' ಘಟಕ) (ಆಧ್ಯಾತ್ಮಯೋಗ)ವುಂಟೆಂದು ತೋರುತ್ತದೆ. ಈ ರೀತಿ ಸಂಕಲ್ಪಗಳ ಸ್ವರೂಪವೂ ಅರ್ಥವೂ ಪ್ರಕಟವಾಗುವ ಸೂತ್ರಗಳಲ್ಲಿ ಒಂದು, (ಒಂದು ಬೇರ್ ಪ್ಪಾರೈ ಪಕ್ಷಿಗಳನ್ನಾಗಿ ಮಾಡಿದುದು) ಮೇಲೆ ಕೊಟ್ಟದ್ದು ಆದರ ವ್ಯಾಖ್ಯಾನ ಮಣಪ್ರವಾಳ ಮುನಿಗಳ ಮಣಿಪ್ರವಾಳ ಶೈಲಿಯಲ್ಲಿ ಹೀಗೆ ಬರುತ್ತದೆ, "ಇನಿಪಕವಾನಿಡತ್ತಿಲ್ ತುದಾಕಿ ವಿಡುಕಿರ ಪರವೈಗಳುಕ್ಕು ಉಳ್ಳುರೈ ಪ್ಪೋರುಳ್‌ಯಾದು ಎನ್ನುಂ ವಿನಾವಿರ್‌ಕು ಇಚ್ಚೂತ್ತಿರಂ ಮುದಲ್‌ಕೊಂಡು ಅರುಳಿಚ್ಚೈಯನ್‌ಗಿರಾರ್" (ಭಗವಂತನ ಹತ್ತಿರಕ್ಕೆ ದೂತನನ್ನು ಕಳುಹಿಸುವ ಪಕ್ಷಿಗಳಿಗೆ ಸಂಬಂಧಿಸಿದ ವ್ಯಂಗಾರ್ಥ ಯಾವುದು. ಎನ್ನುವ ಪ್ರಶ್ನೆಯು ಈ ಸೂತ್ರ ಮೊದಲಾಗಿ ಉತ್ತರ ಹೇಳುತ್ತದೆ.)

ವಡಕ್ಕು ತಿರುವೀದಿ ಪಿಳ್ಳೆಯ ಪ್ರಸಿದ್ಧವಾದ 'ಈಡು' ಎನ್ನುವ ತಿರುವಾಯ್ ಮೊಳಿ ವ್ಯಾಖ್ಯಾನ ಮಣಿಪ್ರವಾಳ ಶೈಲಿಯಲ್ಲಿದೆ. ಆದರಿಂದ ಒಂದು ವಾಕ್ಯವನ್ನು ಉದಾಹರಣೆಗಾಗಿ ಕೊಟ್ಟಿದೆ.

"ಮುಡಿಯಿಲ್ ಇತ್ತಿರುವಾಯ್ ಮೊಟಿಯಿರ್ ಚೊನ್ನ ಆರ್‌ತ್ತತ್ತೈ ಚುರುಕ್ಕು ಮಾಗಚೊಲ್ಲಿ ಇದಿನೆ ಕರ್ಗಿರವರ್ ಕಳ್‌ಜರ್ ವೇಚ್ಚುವರನ್ನೈ ಅಡೈನ್ದು ಉಜ್ಜೀವಿಕ್ಕಲಂ ಎನ್‌ಗಿರಾರ್" ಇದರಲ್ಲಿ ತಮಿಳು ಮತ್ತು ಸಂಸ್ಕೃತ ಮಿಶ್ರಿತವಾಗಿರುವುದನ್ನು ನೋಡಿ. ತತ್ಸಮವಾಗಿಯೂ ತದ್ಭವವಾಗಿಯೂ ಬರಹಗಾರರು ಸಂಸ್ಕೃತ ಪದಗಳನ್ನು ಯಥೇಷ್ಟವಾಗಿ ತೆಗೆದು ಸೇರಿಸುತ್ತಾರೆ. ತಮಿಳು ಲಿಪಿಯಲ್ಲಿ ಬರೆಯಲು ಪ್ರಯಾಸವಿರುವ ಪದಗಳನ್ನು ಗ್ರಂಥಾಕ್ಷರದಲ್ಲಿ ಬರೆಯುತ್ತಾರೆ.

ಶೈವಾಚಾರ್ಯರು ಗಣನೀಯವಾದ ವ್ಯಾಖ್ಯಾನವೊಂದನ್ನು ಈ ಶೈಲಿಯಲ್ಲಿ ಬರೆದಿಲ್ಲವೆನ್ನುವುದು ಸ್ಮರಿಸಬೇಕಾದ ವಿಷಯ. ೧೬ ನೆಯ ಶತಕದಲ್ಲಿ

ಚಿವಾಕ್ಕಿರ ಯೋಗಿ (ಶಿವಾಕ್ಷರ ಯೋಗಿ) ಬರೆದ “ಚಿವ ಞಾನ ಚಿತ್ತಿಯಾರ್ ಉರೈ” ಮಾತ್ರವೇ ಇದರಲ್ಲಿ ಕಾಣುತ್ತದೆ. ಅದರ ಶೈಲಿಯೂ ಮೊದಲು ಹೇಳಿದ ಉದಾಹರಣೆಯಲ್ಲಿರುವಂತೆಯೇ ಇದೆ.

ಉಪ ಸಂಹಾರ

ಈ ಲಘುಪತನದಿಂದ ಮಣಿಪ್ರವಾಳ ಶೈಲಿಯ ಉಗಮಕ್ಕೂ ಬೆಳವಣಿಗೆಗೂ ಸಂಬಂಧಿಸಿದ ಒಂದು ಸಾಮಾನ್ಯ ಜ್ಞಾನ ಓದುಗರಿಗೆ ಉಂಟಾಗಿರಬಹುದು. ಕ್ರಿ.ಶ. ೮ ನೆಯ ಶತಕದಲ್ಲೋ ಅಥವಾ ಅದಕ್ಕೆ ಮೊದಲೋ ಪ್ರಾಕೃತವನ್ನೂ ಬೆರೆಸಿ ಜೈನರು ಗ್ರಂಥರಚನೆ ಮಾಡಲಾರಂಭಿಸಿದುದು. ಅಲ್ಲಿಂದ ಪ್ರಾರಂಭವಾಯಿತೆಂದು ಊಹಿಸಬಹುದು. ಆದರೆ ಅದರ ಸ್ವರೂಪದಲ್ಲಿ ದಾಕ್ಷಿಣಾತ್ಯ ಭಾಷೆಗಳಲ್ಲಿ ಬದಲಾವಣೆಯುಂಟಾಯಿತು. ಮಧ್ಯಕಾಲದಲ್ಲಿ ಔತ್ತರೇಯ ಪಂಡಿತರಿಗೂ ಈ ಶೈಲಿಯ ಹೆಸರೂ ಸ್ವರೂಪವೂ ತಿಳಿಯುವಂತಹದಾಗಿತ್ತು. ಈ ರಚನಾ ಸಂಪ್ರದಾಯ ಬೇರೆ ಹೆಸರುಗಳಲ್ಲಿದ್ದಿತೆಂದು ಕಂಡುಬರುತ್ತದೆ. ಅಭಿನವಗುಪ್ತನ ಪ್ರಸ್ತಾವನೆಯ ಅನಿಷೇಧ್ಯವಾದ ನೆಲೆಯಲ್ಲಿ ಈ ವಿಷಯ ತಿಳಿದುಬರುತ್ತದೆ. ಮೊದಲೇ ತಳಹದಿ ದೊರೆತ ತಮಿಳಿನಲ್ಲಿ ಈ ಮಿಶ್ರಭಾಷಾ ವ್ಯಾಖ್ಯಾನಕಾರರ ವಿಶೇಷ ಪ್ರಯತ್ನದಿಂದಾಗಿ ಭಾಷೆಯ ಮುನ್ನಡೆಯ ಮುಖ್ಯ ಪ್ರವಾಹದಲ್ಲಿ ಬೆರೆಯದೆ ಬೇರೆಯಾಗಿ ಸಂಚರಿಸಿತು. ಮಲಯಾಳದಲ್ಲಾದರೋ ಆದಿಕಾಲದ ಗಣನೀಯ ಸಾಹಿತ್ಯರಚನೆ ಈ ಶೈಲಿಯಲ್ಲಿ ನಡೆದದ್ದು. ಆ ದಿಕ್ಕಿನಲ್ಲಿ ಅದನ್ನು ಕುರಿತು ವಿವರಿಸುವ ಲೀಲಾತಿಲಕದಂತಿರುವ ಒಂದು ಲಕ್ಷಣ ಗ್ರಂಥವೇ ರಚನೆಯಾಗಲು ಅವಕಾಶವುಂಟಾಯಿತು. ಮಲಯಾಳದಲ್ಲಿ ಪದ್ಯವೇ ಮಣಿಪ್ರವಾಳದ ಮುಖ್ಯ ವಿಷಯವಾಗಿತ್ತು.

ಭಾಷಾ, ಭಾಷಾಮಿಶ್ರಂ, ಮಣಿಪ್ರವಾಳ ಎಂದು ಕರೆಯುವ ಈ ಮಿಶ್ರ ಶೈಲಿಯನ್ನೂ ಶಾಸ್ತ್ರಕೃತಿಗಳನ್ನೂ ಒಂದೇ ರೀತಿಯಲ್ಲಿ ಬರೆಯಲು ಉಪಯೋಗಿಸಿದ್ದರು. ಭಾಷಾ ಮಿಶ್ರಣದ ಕಲಾ ಸೌಂದರ್ಯದಿಂದ ಕೂಡಿದ ರೂಪ ಮಾತ್ರ ಮಣಿಪ್ರವಾಳವೆಂದು ಕಲ್ಪಿಸಬೇಕಾಗಿಲ್ಲ. ವೈದ್ಯಶಾಸ್ತ್ರವನ್ನೂ ಜ್ಯೋತಿಷ್ಯ ಶಾಸ್ತ್ರವನ್ನೂ ಮಣಿ ಪ್ರವಾಳದಲ್ಲಿ ಬರೆಯಲಾಗಿತ್ತು ಎಂದು ಲೀಲಾ ತಿಲಕದಲ್ಲಿ ಹೇಳಲಾಗಿದೆ. ಗಣಿತಸಾರ, ಜೋತಿಷದೀಪಮಾಲ ಭಾಷಾ ಶಿಲ್ಪರತ್ನ ಮುಂತಾದುವೆಲ್ಲ ಈ ತೆರನಾದ ಗ್ರಂಥಗಳು. ಶಿಲ್ಪರತ್ನ ಭಾಷಾ ಮಿಶ್ರವೆಂದು ಲೇಖಕನೇ ಹೇಳುತ್ತಾನೆ.

> “ಭಾಷಾಮಿಶ್ರಂ ಶಿಲ್ಪರತ್ನಾಖ್ಯಮೇಷಂ
> ಬಾಲಾ ನಾ ಪೊಟ್ಟಿಪ್ಪ ಮೆನ್ನೋರ್‌ಶ್ಚು ತೀರ್‌ತ್ತೇನ್”

ವಾಸುದೇವನ ವಿಶ್ವಕರ್ಮೀಯ ಲಕ್ಷಣವನ್ನು ಅನುವಾದ ಮಾಡಿದ ಪಂಡಿತ ಬರೆಯುವುದು ಹೀಗೆ.

ವಿಘ್ನೇಷನೆ ನಮಸ್ಕೃತ್ಯ
ವಿಶ್ವಕರ್ಮೀಯ ಲಕ್ಷಣಂ
ಮಣಿಪ್ರವಾಳ ವಾಕಿನ್ನೇನ್
ಪರಿಪ್ಪಾನ್ ಮಂದ ಚೇತಸಾಂ

ಮಣಿಪ್ರವಾಳದಂತೆ ಕಾಣುವ ತೋಲ*ನಿಗೆ ಸಂಬಂಧಿಸಿದ ಕಥೆಗೂ ಚರಿತ್ರೆಯ ದೃಷ್ಟಿಯಲ್ಲಿ ದೊಡ ಸ್ಥಾನವುಂಟೆಂದು ಕಾಣಿಸುವುದಿಲ್ಲ.

★ ಬಿ. ಕೆ. ತಿಮ್ಮಪ್ಪ

* ತೋಲನ್ ಮಲಯಾಳದ ಹಾಸ್ಯಕವಿ.

ಎರಡು ಕವನಗಳು

ನಾಯಿ

ನಾ ಹೊಂಟ್ರ ಹಿಡ್ದ್ ನನ್ ದಾರೀನ
ನನ್ ಕಂಡು,
ಒದರೇ ಒದರತ್ತೈತಿ ನಿಂತ್ ಮಂದೀಮನಿ ಕಟ್ಟೀಮ್ಯಾಲ–
ನಾಯಿ.
ಪಡ್ದ್ ಬಂದ್ಯೆತಿ ಇರೂವಾಗ್ಲೆ ತಾಯಿ ಹೊಟ್ಯಾಗ
ಇದು
ಒದರೋ ಜಾಗೀರೀನ
ಒದರ್ಲಿ ಬಿಡು–ಅಂದು.
ಹೊಂಟೇನಿ ತಲೀ ತಗ್ಗಿಸ್ಕೊಂಡು ಹಾಕಿ ಕಿವ್ಯಾಗ್ ಬೊಟ್ಟು.
ಏನೈತಿ ಇವ್ನಲ್ಲಿ ದಮ್ಮು ಅಂತಾ ತಿಳಿದು
ಬಂತು ಎದಿಮ್ಯಾಲ್ ಹಾರಿ ಕಡಿಯಾಕ್ ಗಂಟ್ಲ!
ಎತ್ತಿದೆ ಕೈ–ಕೊಡಾಕ್ ದವಡಿಮ್ಯಾಲ,
ನಿಂತ್ರ ಕೇಳ್ ಆಗ
ಓಡಿ-ಮುದುರ್ಕೊಂಡು ನಿಗರಿದ ಬಾಲಾನ,
ತೇಕ್ತನಿಂತು ಅಡಗಿ ಕಳ್ಳೀ ಸಂದ್ಯಾಗ,
ಮತ್ತೆ ಒದರಕ್ಕೈತಿ.
ಖೋಡಿ!!

ಗ್ವಾಡಿ

ಯಾರ್ ಕಟ್ಟಿ ಹೋಗ್ಯಾರೊ ಏನ್ಕಥಿ
ಈ
ಗ್ವಾಡೀನಃ!
ಹೇಳ್ಯಾರ್ ಹೋಗಲಿಲ್ಲೋಡು ನಮ್ಮಜ್ಜ.
ಮನಸಾಗೈತಿ ಹೋಗ್ಬೇಕಂತ ಇದರ್ ಆಚಿಗಿ.
ಹೋಗ್ಲೇನು ಕೆಡವಿ ಇದನ?
ಹೌದು!
ಹಾರಿ, ಗುದ್ದಿ–ಎಲ್ಲಾ ಐತಿ.
ಆ–ದ–ರ,
ಹೊಡೀತೈತಿ ಎದಿ ಡಬಡಬಾ ಅಂತ!
ಯಾಕ್ಬೇಕ್ ಬಿಡು ಮಾರಾಯ ಹೋಗ್ಲಿ–ಅಂದು
ಕುಂತೀನಿ ಕಣ್ಬಗಲ್ಮಾಡಿ ನೋಡತಾಃ ಇದನ !!

★ ಶ. ಗು. ಚನ್ನಹಳ್ಳಿ.

ಭಾಷೆಯ ವೈವಿಧ್ಯ

ಭಾಷೆ :

ನಾವು ದಿನನಿತ್ಯವೂ ಮಾತನಾಡುವಾಗ ಕನ್ನಡ ಭಾಷೆ, ಕನ್ನಡ ನುಡಿ, ಕನ್ನಡ ಮಾತು ಎನ್ನುತ್ತೇವೆ. ಇಂಗ್ಲೀಷ್ ಭಾಷೆ, ಇಂಗ್ಲೀಷ್ ಮಾತು ಎನ್ನುತ್ತೇವೆ. ಹಿಂದಿ ಭಾಷೆ, ಹಿಂದಿ ಮಾತು ಮುಂತಾಗಿ ಹೇಳುತ್ತೇವೆ. ಅಂದರೆ ಇಲ್ಲಿ ಭಾಷೆ, ನುಡಿ, ಮಾತು ಒಂದೆ ಅರ್ಥ ಕೊಡುವ ಶಬ್ದಗಳು. ಮಾತೆಂದರೆ ನುಡಿ, ನುಡಿಯೆಂದರೆ ಭಾಷೆ. ಒಟ್ಟಿನ ಮೇಲೆ ಮಾತನಾಡಿದ್ದು, ನುಡಿದದ್ದು ಭಾಷೆ. ಈ ರೀತಿಯ ಬಳಕೆ ಭಾಷೆಯ ಬಗೆಗಿನ ನಮ್ಮ ಸಾಮಾನ್ಯ ಕಲ್ಪನೆಯನ್ನು ಹೊರಗೆಡಹುತ್ತದೆ. ಭಾಷೆಯೆಂದರೆ ಮಾತು ಎನ್ನುವುದೇ ಆ ಕಲ್ಪನೆ.

ಭಾಷ್–'ಮಾತನಾಡು' ಇದರಿಂದ ಭಾಷೆ, ನುಡಿ–'ಮಾತನಾಡು' ಇದರಿಂದ ನುಡಿ ಈ ನಿಷ್ಪತ್ತಿ ಹೇಳಬಹುದು. ಅಂದರೆ ಮಾತಿನ ಮೂಲಕ ವ್ಯಕ್ತವಾಗುವುದೇ ಭಾಷೆ. ಭಾಷೆಯೆಂದರೆ ನಮ್ಮ ಮನಸ್ಸಿನಲ್ಲಿಯ ಭಾವನೆಗಳನ್ನು ಪ್ರಕಟಪಡಿಸುವ ಒಂದು ಸಾಧನ. ನಮ್ಮನಮ್ಮಲ್ಲಿ ಸಂಪರ್ಕ ಸಾಧಿಸುವುದಕ್ಕಾಗಿ ಮಾತನ್ನು ನಾವು ಹೊರಡಿಸುವ ಒಂದು ಧ್ವನಿಗುಂಪನ್ನು ಬಳಸಿಕೊಂಡೆವು ಮತ್ತು ಅದನ್ನು ಅತ್ಯಂತ ಪ್ರಬಲ ಸಂಪರ್ಕ ಸಾಧನವನ್ನಾಗಿ ಮಾಡಿಕೊಂಡೆವು. ಆದರೆ ನಮ್ಮ ವಿಚಾರಗಳನ್ನು ಭಾವನೆಗಳನ್ನು ಅಭಿವ್ಯಕ್ತಗೊಳಿಸಲು ಇದೊಂದೇ ಸಾಧನವೆ? ಅಥವಾ ಮತ್ತೆ ಬೇರೆ ಸಾಧನಗಳು ಉಂಟೆ ? ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ.

ತೀರ ಇತ್ತೀಚೆಗೆ : ಮಾನವ ಭೂಮಿಯ ಮೇಲೆ ಲಕ್ಷಾವಧಿ ವರ್ಷಗಳಿಂದಲೂ ಇದ್ದಾನೆ. ಆದರೆ ಆತನಿಗೆ ಮಾತು ಕರಗತವಾದದ್ದು ಮಾತ್ರ ಬಹಳ ಕಾಲದಿಂದಲ್ಲ. ಅಂದರೆ ಮಾನವ ತಾನು ಹೊರಡಿಸುವ ಧ್ವನಿಗಳನ್ನು ಒಂದು ವಿಶಿಷ್ಟ ವಸ್ತುವನ್ನು, ವಿಚಾರವನ್ನು ನಿರ್ದೇಶಿಸಲು ಬಳಸುವ ಕಲೆ ಅವನಿಗೆ ತೀರ ತಡವಾಗಿ ಅವಗತವಾಯಿತು. ಈ ಕಲೆ ಅವಗತವಾದ ಮೇಲೆ ಅವನ ಪ್ರಗತಿ ಭರದಿಂದ ನಡೆಯಿತು. ಆದರೆ ಒಂದು ವಸ್ತು, ವಿಚಾರ ನಿರ್ದೇಶನಕ್ಕಾಗಿ ಕೆಲವು ಧ್ವನಿಗಳನ್ನು ಬಳಸುವ ಈ ಕಲೆಯ ಪ್ರಭುತ್ವ ಅವನಿಗೆ ಸಾಧ್ಯವಾಗುವುದಕ್ಕಿಂತ ಮೊದಲೂ ಮನುಷ್ಯ ತನ್ನ ಭಾವನೆಗಳನ್ನು ಪ್ರಕಟ ಪಡಿಸುತ್ತಿದ್ದ, ತನಗೆ ಬೇಕಾದ ವಸ್ತುವನ್ನು ನಿರ್ದೇಶಿಸುತ್ತಿದ್ದ. ಅಂದರೆ ಈ ಮಾತಿನ ಕಲೆಗಿಂತ ಮೊದಲು ಆತ ಆ ಕ್ಷೇತ್ರದಲ್ಲಿ ಬೇರೆ ಸಾಧನಗಳನ್ನು ಬಳಸುತ್ತಿದ್ದ.

ಆಂಗಿಕ ಚೇಷ್ಟೆ : ಮಾತನಾಡುವವರಿಗಷ್ಟೇ ಭಾಷೆ ಬರುತ್ತದೆಯೆಂದೇನೂ ಅಲ್ಲ. ಅಂದರೆ ಮಾತನಾಡಲು ಸಾಧ್ಯವಿದ್ದವರಿಗೆ ಮಾತ್ರ ತಮ್ಮ ಜನರೊಡನೆ ಸಂಪರ್ಕ ಸಾಧ್ಯವಾಗುತ್ತದೆ, ಇಲ್ಲದವರಿಗೆ ಇಲ್ಲ ಎನ್ನುವ ವಿಚಾರ ತಪ್ಪು. ಮೂಕರೂ ತಮಗೆ ಅನಿಸಿದ್ದನ್ನು ತಿಳಿಸಲು ಸಮರ್ಥರಾಗುತ್ತಾರೆ ಎನ್ನುವುದು ನಿತ್ಯ ಅನುಭವದ ಮಾತು.

ಅವರು ಅನುಸರಿಸುವ ವಿಧಾನವೆಂದರೆ ಆಂಗಿಕ ಚೇಷ್ಟೆ. ತಮ್ಮ ಕೈ ಕಣ್ಣು ಮುಂತಾದ ಅವಯುವಗಳಿಂದ ಹಾವಭಾವಗಳ ಮೂಲಕ ತಮ್ಮ ವಿಚಾರವನ್ನು ಅವರು ಸ್ಪಷ್ಟಪಡಿಸುತ್ತಾರೆ. ಆದರೆ ಅವರ ಸಂಪರ್ಕ ಕ್ಷೇತ್ರ ಹಾಗು ಅಭಿವ್ಯಕ್ತಿ ಕ್ಷೇತ್ರ ಅತಿ ಪರಿಮಿತವಾಗಿರುತ್ತದೆ. ಅದು ಹೆಚ್ಚಾಗಿ ಮೂರ್ತ ವಸ್ತುಗಳ, ಅತಿ ಸಾಮಾನ್ಯ ಭಾವಗಳ ನಿರ್ದೇಶನಕ್ಕಾಗಿ ಮಾತ್ರ ಉಪಯೋಗವಾಗುತ್ತದೆ. ಅಮೂರ್ತ ವಿಚಾರಗಳನ್ನು ವ್ಯಕ್ತಪಡಿಸುವುದು ಅವರಿಗೆ ಅತಿ ಕಷ್ಟಸಾಧ್ಯವಾದುದು.

ಧ್ವನಿ ಬಳಕೆ ಮಾನವನ ಕರಗತವಾಗುವುದಕ್ಕಿಂತ ಮೊದಲಿನ ಮಾನವನ ಭಾಷೆ-ಸಂಪರ್ಕ ಸಾಧನ ಎನ್ನುವ ಅರ್ಥದಲ್ಲಿ-ಮೂಕ ಮಾತನಾಡಿದಂತಿರಬೇಕು. ತನ್ನ ವಿವಿಧ ಅಂಗಗಳ ಮೂಲಕ, ವಿಶಿಷ್ಟ ಹಾವಭಾವಗಳ ಮೂಲಕ ಒಂದು ಪ್ರಾಣಿಯನ್ನು ತೋರಿಸುವುದು, ಒಂದು ಪ್ರಾಣಿಯನ್ನು ಕೊಂದದ್ದು, ಬೇಕಾದ ಆಯುಧ ತೆಗೆದು ಕೊಳ್ಳುವುದು ಮುಂತಾದ ಭಾವನೆಗಳನ್ನು ಹೊರಗೆಡಹುತ್ತಿರಬೇಕು. ತನ್ನ ಪರಿಮಿತ ಕ್ಷೇತ್ರದಲ್ಲಿಯಾದರೂ, ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಆತ ಈ ರೀತಿಯ ಭಾಷೆಯನ್ನು ಉಪಯೋಗಿಸುತ್ತಿದ್ದ. ಈ ಕಾಲ ಮಾನವ ಇನ್ನೂ ಕಾಡು ಸ್ಥಿತಿಯಲ್ಲಿದ್ದಾಗ ಇರಬೇಕು. ಮುಂದೆ ಅವನ ಬುದ್ಧಿ-ಶಕ್ತಿ ಬೆಳೆದಂತೆಲ್ಲ ಈ ಸಂಪರ್ಕ ವಿಧಾನದಲ್ಲಿಯೂ ಬದಲಾವಣೆಯಾಯಿತು.

ಧ್ವನಿ ಚೇಷ್ಟೆ: ಯಾವಾಗಲೂ ಕಾಡಿನಲ್ಲಿಯೋ ಪ್ರಾಣಿಗಳ ಪರಿಸರದಲ್ಲಿಯೋ ಇರುತ್ತಿದ್ದ ಮಾನವ ಆ ಪ್ರಾಣಿಗಳ ಕೂಗನ್ನು ನಿರೀಕ್ಷಿಸಿದ. ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿ ಕೂಗುವುದನ್ನು ಕಂಡ. ಈ ರೀತಿ ಕೂಗಿನಿಂದ ಅವು ತಮ್ಮ ಇತರ ಬಂಧುಗಳೊಡನೆ ಸಂಪರ್ಕ ಹೊಂದುತ್ತಿದ್ದವು. ಆ ಪ್ರಾಣಿಗಳನ್ನನುಸರಿಸಿ, ಮಾನವ ಕೆಲ ಧ್ವನಿಗಳನ್ನು ಬಳಸ ಹತ್ತಿದ. ಬೇರೆ ಬೇರೆ ಪ್ರಸಂಗಗಳಲ್ಲಿ ಬೇರೆ ಬೇರೆ ಧ್ವನಿಗಳನ್ನು, ಬಹಳಷ್ಟು ಸಲ ಈ ಧ್ವನಿಗಳೊಡನೆ ಕೆಲವು ಆಂಗಿಕ ಚೇಷ್ಟೆಗಳನ್ನು ಬೆರೆಸಿ, ತನ್ನ ಅಭಿವ್ಯಕ್ತಿಗೆ ಅವನ್ನು ಬಳಸಿಕೊಂಡ. ಆದರೆ ಈ ಧ್ವನಿಗೂ ಮುಂದೆ ಆತ ಭಾಷೆಯಲ್ಲಿ ಬಳಸಿದ ಧ್ವನಿಗೂ ಬಹಳ ವ್ಯತ್ಯಾಸವಿದೆ. ಆದಿಯ ಮನುಷ್ಯ ಕೆಲವು ಸಂದರ್ಭಗಳಲ್ಲಿ ಒಂದು ಧ್ವನಿಮಾಲೆಯನ್ನು ಹೊರಡಿಸುತ್ತಿದ್ದ. ಆದರೆ ಆ ಧ್ವನಿಯಲ್ಲಿ ವಿಭಿನ್ನತೆಯಿರಲಿಲ್ಲ. ಈ ಪ್ರಕ್ರಿಯೆ ಅಲ್ಪಸ್ವಲ್ಪ ಧ್ವನಿ ಹೊರಡಿಸುವ ಮೂಕರ ರೀತಿಯನ್ನು ಹೋಲುತ್ತದೆ. ಇಂಥ ಮೂಕರು ತಮಗೆ ಸಾಧ್ಯವಿದ್ದ ಧ್ವನಿಯೊಡನೆ ಹಾವಭಾವಗಳನ್ನು ಸೇರಿಸಿ. ಒಟ್ಟಿನ ಮೇಲೆ ಸಂಪರ್ಕಕ್ಕೆ ಅನುಕೂಲ ಮಾಡಿಕೊಳ್ಳುತ್ತಾರೆ.

ಸಂಜ್ಞಾ ಭಾಷೆ: ಮಾನವ ತನ್ನ ಧ್ವನಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಕಲಿತು, ನಂತರ ಅದಕ್ಕೆ ಒಂದೊಂದು ಸಂಕೇತವನ್ನು ಕೊಡಲು ಪ್ರಾರಂಭಿಸಿದ ರೂಪವೇ ಈಗಿನ ಭಾಷೆಯ ಮೂಲ ರೂಪ. ಧ್ವನಿಯ ಸಾಂಕೇತಿಕತೆ ಭಾಷೆಯ ವಿಶಿಷ್ಟ ಗುಣ. ಯಾವಾಗ ಒಂದು ಧ್ವನಿಗುಂಪು ಒಂದು ವಸ್ತುವನ್ನು-ಪ್ರಾರಂಭದ ಹಂತದಲ್ಲಿ ಮೂರ್ತ

ವಸ್ತುವನ್ನು ಮಾತ್ರ ನಿರ್ದೇಶಿಸುವ ಸಲುವಾಗಿ ಬಳಕೆಯಾಗಹತ್ತಿತೋ, ಆಗ ಅದರ ಸಾಂಕೇತಿಕತೆ ಪ್ರಾರಂಭವಾಯಿತು. ಮೂರ್ತವಸ್ತು ನಿರ್ದೇಶನ ಮಾಡುವ ಈ ಶಕ್ತಿ ಅಮೂರ್ತ ವಸ್ತುಗಳನ್ನು ನಿರ್ದೇಶಿಸಲೂ ಮುಂದೆ ಬಳಕೆಯಾಗಹತ್ತಿತು. ಇದು ಭಾಷೆಯ ಬೆಳವಣಿಗೆಯಲ್ಲಿ ಪ್ರಗತಿಯ ಹೆಜ್ಜೆ. ಇದರ ನಂತರ ಭಾಷೆ ಭರದಿಂದ ಬೆಳೆಯ ಹತ್ತಿತು.

ನೃತ್ಯ ಮತ್ತು ಶಿಲ್ಪಗಳಲ್ಲಿ ತನ್ನ ಭಾವನೆಗಳನ್ನು ವ್ಯಕ್ತಪಡಿಸುವ ಮಾನವನ ಭಾಷೆ ಸಂಕೇತಮಯವಾಗಿರುವುದನ್ನು ಕಾಣಬಹುದು. ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ನೃತ್ಯಶಿಲ್ಪಗಳಲ್ಲಿ ಕಂಡುಬರುವುದು ಸಂಜ್ಞಾ ರೀತಿ. ಆದರೆ ಒಂದು ಮಾತನ್ನೂ ಆಡದೆ ಕೇವಲ ಸಂಜ್ಞೆಗಳ ಮೂಲಕವೆ ದೈನಂದಿನ ವ್ಯವಹಾರಗಳನ್ನು ಸಾಗಿಸುವ ಜನಾಂಗ ಗಳಿವೆ. ಅಂದರೆ ಇವರು ಬಳಸುವುದು ಸಂಜ್ಞಾ ಭಾಷೆ. ಈ ಭಾಷೆಗಳಲ್ಲಿ ಶಬ್ದ ನಿಶ್ಶಬ್ದ. ಉತ್ತರ ಅಮೇರಿಕೆಯಲ್ಲಿಯ ಹಡಸನ್ ಕೊಲ್ಲಿಯಿಂದ ಮೆಕ್ಸಿಕೊ ಕೊಲ್ಲಿಯ ನಡುವಿನ ಭಾಗದಲ್ಲಿ ಇಂಥ ಅನೇಕ ಸಂಜ್ಞಾ ಭಾಷೆಗಳಿವೆಯೆಂದು ವಿಲಿಯಮ್ ಟಾಂಕಿನ್ಸ್ ಹೇಳುತ್ತಾರೆ. ಇಲ್ಲಿ ಮಾಧ್ಯಮ ವಿವಿಧ ಆಂಗಿಕ ಚೇಷ್ಟೆಗಳು. ಇಂಥ ಸಂಜ್ಞಾ ಭಾಷೆ ಅಮೇರಿಕದ ಪ್ರಥಮ ಭಾಷೆಯೆಂದು ಆತನ ಅಭಿಪ್ರಾಯ.

ಕಂಬಳಿ ಭಾಷೆ : ಅಮೇರಿಕೆಯ ಇಂಡಿಯನ್ನರಲ್ಲಿ ಒಂದು ಬಗೆಯ ಭಾಷೆಯಿದೆ. ಅದು ಅಲ್ಲೊಂದು ಇಲ್ಲೊಂದು ಬಿಡಿ ಸಂಕೇತಗಳಾಗಿರದೆ, ಒಂದು ವ್ಯವಸ್ಥೆಯೇ ಆಗಿ ರೂಪಗೊಂಡಿದೆ. ಈ ವಿಧಾನದ ಮೂಲಕ ಅವರು ದೂರದೂರದ ವರೆಗೂ ಮಾತನಾಡದೆ ಸಂಪರ್ಕಿಸುತ್ತಿದ್ದರು. ಇಂಥ ವಿಧಾನಗಳಲ್ಲಿ ಅತಿ ಮಹತ್ವದ್ದೆಂದರೆ 'ಉರಿಸಂಕೇತ'. ರಾತ್ರಿ ವೇಳೆಯಲ್ಲಿ ಗುಡ್ಡದ ನೆತ್ತಿಯಲ್ಲಿ ಅಥವಾ ಸಮುದ್ರದ ದಂಡೆಯಲ್ಲಿ ಉರಿ ಹಚ್ಚಿ ಹೊಗೆ ಎಬ್ಬಿಸುತ್ತಿದ್ದರು. ಒಂದು ಘಟನೆಯ ವಿವರಣೆಗೆ ಇಷ್ಟು ಸಲವೆಂದು ಬೆಂಕಿಯನ್ನು ಹಚ್ಚಿ ಆರಿಸುತ್ತಿದ್ದರು. ಈ ವಿಧಾನವನ್ನು ಹಗಲಿನಲ್ಲಿಯೂ ಬಳಸುತ್ತಿದ್ದರು.

ಇದಲ್ಲದೆ ಈ ಜನರಲ್ಲಿ ಒಂದು 'ಕಂಬಳಿ ಭಾಷೆ' (Blanket Language) ಬಳಕೆ ಯಲ್ಲಿತ್ತು. ಎಮ್ಮೆಯ ಮೇಲೆ ಕುಳಿತೋ ಕಾಲು ನಡಿಗೆಯಲ್ಲೋ ಕಂಬಳಿ ಹಿಡಿದು ಕೊಂಡು, ಒಂದು ರೀತಿಯಾಗಿ ಕಂಬಳಿಯನ್ನು ಆಡಿಸಿ ಒಂದು ವಿಚಾರವನ್ನು ಪ್ರಕಟಪಡಿ ಸುತ್ತಿದ್ದರು. ಉದಾಹರಣೆಗೆ 'ಸಮುದ್ರ ದಂಡೆ ನಿರಪಾಯವಾಗಿದೆ' ಎಂಬ ವಿಚಾರ ವನ್ನು ಸೂಚಿಸಲು ಪೂರ್ಣ ಬಿಚ್ಚಿದ ಕಂಬಳಿಯನ್ನು ತನ್ನ ಮುಂದೆ ನಿಯಮಿತವಾಗಿ ಬೀಸುತ್ತಿದ್ದ. ಒಬ್ಬನ ತಲೆಯ ಮೇಲೆ ವೇಗವಾಗಿ ಕಂಬಳಿಯನ್ನು ಬೀಸಿಕೊಂಡರೆ, ಅದು ವೈರಿಯ ಬರುವಿಕೆಯ ಸೂಚನೆ.

ನಗಾರಿ ಭಾಷೆ : ಇವೆರಡಕ್ಕಿಂತಲೂ ಸಮರ್ಥವಾದ ಒಂದು ಭಾಷೆ ಉತ್ತರ ಅಮೇರಿಕೆಯ ಇಂಡಿಯನ್ನರಲ್ಲಿ, ಆಫ್ರಿಕನ್ನರಲ್ಲಿ ಬಳಕೆಯಲ್ಲಿತ್ತು. ಅದೇ 'ನಗಾರಿ ಭಾಷೆ' (Drum Language). ನಗಾರಿಯ ಸಪ್ಪಳ ಬಹು ದೂರ ಕೇಳುವುದರಿಂದ, ಅದರ

ಮೂಲಕ ವೈರಿಯ ಸುಳುಹು, ಹಬ್ಬಿದ ಸುದ್ದಿ ಮತ್ತಿತರ ಘಟನೆಗಳನ್ನು ತಿಳಿಸಲು ಅದನ್ನು ಉಪಯೋಗಿಸುತ್ತಿದ್ದರು. ಆದರೂ ಅದು ಹೆಚ್ಚಾಗಿ ಹೊಸ ಸುದ್ದಿ ತಿಳಿಸಲು ಬಳಕೆಯಾಗುತ್ತಿತ್ತು. ಈ ಭಾಷೆಯ ಕ್ರಮ ಕೆಳಗಿನಂತಿದೆ. ಬೇಟೆಯಿಂದ ಹಸಿದು ಹಿಂತಿರುಗಿ ಬಂದ ಗಂಡ, ಮನೆಯಲ್ಲಿ ಹೆಂಡತಿ ಇಲ್ಲದ್ದನ್ನು ಕಂಡು, ಅವಳನ್ನು ಕರೆಯಲು ಮಾಧ್ಯಮ ಧ್ವನಿಯ ಐದು ಹೊಡೆತಗಳನ್ನು ಮೂರು ಸಲ ಬಾರಿಸಿದರೆ ಅದು 'ಮನೆಗೆ ಬಾ' ಎನ್ನುವ ಸಂಕೇತ. ಇಷ್ಟು ಬಾರಿಸಿದ ಕೂಡಲೆ ಏಕಧ್ವನಿಯ ಆರು ಹೊಡೆತಗಳು ಕರೆಯುವ ವ್ಯಕ್ತಿಯನ್ನು ತಿಳಿಸುತ್ತದೆ. ಬೇರೆ ಬೇರೆ ವ್ಯಕ್ತಿಗಳಿಗೆ ಈ ರೀತಿ ಬೇರೆ ಬೇರೆ ಸಂಕೇತಗಳಿರುತ್ತವೆ. ಕೆಲವೊಂದು ಜನಾಂಗಗಳಲ್ಲಿ ವ್ಯಕ್ತಿಗೆ ಬೇರೆ ಸಂಕೇತಗಳು. ಕುಟುಂಬಕ್ಕೆ ಬೇರೆ ಸಂಕೇತಗಳು. ನಗಾರಿಯ ಸಪ್ಪಳವನ್ನು ಕೇಳಿದ ಕೂಡಲೆ ಇದು ವ್ಯಕ್ತಿಯ 'ದೂರವಾಣಿ'ಯೋ, ಕುಟುಂಬದ ದೂರವಾಣಿಯೋ ಎಂಬುದು ತಟ್ಟನೆ ಗೊತ್ತಾಗುತ್ತದೆ. ಈ ನಗಾರಿಯೆ ಆ ಜನಾಂಗಗಳ ದೂರವಾಣಿ [Telephone].

ನಡತೆಯ ಭಾಷೆ: ಇವಲ್ಲದೆ 'ಚಿತ್ರ ಭಾಷೆ', 'ಸಿಳ್ಳು ಭಾಷೆ' [Whistle Language] ಗಳೂ ಸಾಕಷ್ಟು ಇಂದಿಗೂ ಎಲ್ಲ ಜನಾಂಗಗಳಲ್ಲಿಯೂ ಬಳಕೆಯಲ್ಲಿವೆ. ಆಯಾ ಗುಂಪಿಗೆ ಭಿನ್ನವಾಗಿ ಈ ಸಿಳ್ಳು ಬಳಕೆಯಾಗುತ್ತದೆ. ಆದರೆ ಇದಕ್ಕೂ ವಿಚಿತ್ರವಾದ ಒಂದು 'ಭಾಷೆ'ಯಿದೆ. ಅದೇ ನಮ್ಮ ನಡತೆ. ನಮ್ಮ ನಡತೆಯೂ ಭಾಷೆಯೆಂದರೆ ಆಶ್ಚರ್ಯವಾಗಬಹುದು. ಆದರೂ ಪ್ರತಿಯೊಂದು ಸಮಾಜದಲ್ಲಿಯೂ ಅದು ಅವಶ್ಯವಾಗಿ ಬಳಕೆಯಲ್ಲಿದೆ. ಸಮಾಜ ಜೀವಿಗಳ ಮಧ್ಯದಲ್ಲಿ ನಮ್ಮ ನಡತೆ ಎಂದರೆ ಅದೂ ಒಂದು ರೀತಿಯ ಸಂಪರ್ಕವೇ. ಹಾಗಾದರೆ ನಡತೆಯ ಮೂಲಕ ಒಬ್ಬ ವ್ಯಕ್ತಿ ಅಭಿವ್ಯಕ್ತಿಗೊಳಿಸುವದಾದರೂ ಏನನ್ನು? ಉದಾಹರಣೆಗೆ, ನಮ್ಮ ಸಮಾಜದಲ್ಲಿಯೇ ಯಾರಾದರೂ ಪರಿಚಿತರು ಭೆಟ್ಟಿಯಾದಾಗ ನಾವು ನಮಸ್ಕರಿಸುತ್ತೇವೆ, ಅವರೂ ಪ್ರತಿಯಾಗಿ ನಮಸ್ಕರಿಸಬಹುದು. ಒಂದು ಸಭೆಯಲ್ಲಿ ಕುಳಿತಾಗ ಹಿರಿಯರು ಪ್ರವೇಶಿಸಿದರೆ, ಎದ್ದು ನಿಲ್ಲುತ್ತೇವೆ. ಅದು ಅವರಿಗೆ ಕೊಡುವ ಗೌರವದ ದ್ಯೋತಕ. ಅದೇ ಒಂದು ವ್ಯಕ್ತಿಯ ಬಗೆಗೆ ನಮಗೆ ಗೌರವವಿಲ್ಲದಿದ್ದರೆ ನಾವು ನಮಸ್ಕರಿಸಲಿಕ್ಕಿಲ್ಲ, ಎದ್ದೂ ನಿಲ್ಲಲಿಕ್ಕಿಲ್ಲ. ನಾವು ಒಂದು ವೇಳೆ ಗೌರವದ ದ್ಯೋತಕವಾಗಿ ನಮಸ್ಕರಿಸಿದರೂ, ಆ ವ್ಯಕ್ತಿಗೆ ನಮ್ಮ ಬಗೆಗೆ ಕಹಿ ಭಾವನೆ ಉಂಟಾಗಿದ್ದರೆ ಅವನು ಪ್ರತಿಯಾಗಿ ನಮಸ್ಕರಿಸಲಿಕ್ಕಿಲ್ಲ. ಬಾಯಿ ಬಿಟ್ಟು ನಿಮ್ಮ ಬಗ್ಗೆ ನನಗೆ ಗೌರವವಿಲ್ಲ ಎನ್ನುವದರ ಬದಲು ನಮಸ್ಕರಿಸುವದನ್ನು ಬಿಡುವದೂ ಭಾಷೆಯಲ್ಲವೆ ?

ಈ ರೀತಿಯ ನಮ್ಮ ಭಾಷೆ ಸಮಾಜ ಸಮಾಜಕ್ಕೆ ಭಿನ್ನವಾಗಿರಬಹುದು. ಏಕೆಂದರೆ ಒಂದು ಕ್ರಮ ಆ ಜನರಿಗೆ ಒಪ್ಪಿತವಾದ ಒಂದು ಅರ್ಥವನ್ನು ಹುಟ್ಟಿಸುತ್ತದೆ. ಅದೇ ಎಲ್ಲ ಭಾಷೆಯಲ್ಲಿಯೂ ಇದೆಯೆಂದಲ್ಲ. ನಮಗೆ ಎಷ್ಟೇ ದಣಿವಾಗಿದ್ದರೂ, ಬೇಸರವಾಗಿದ್ದರೂ, ಸಭೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಆಫೀಸಿನಲ್ಲಿ ಆಕಳಿಸುವದು ನಮ್ಮಲ್ಲಿ

ದರಿದ್ರ ಲಕ್ಷಣ. ಆದರೆ ಜಪಾನಿನಲ್ಲಿ ಹೀಗಲ್ಲ. ಅಲ್ಲಿ ಆಫೀಸಿನಲ್ಲಿ ತಾಸೆರಡು ತಾಸಿಗೊಮ್ಮೆ ಒಡಮುರಿಯಲು ಒಂದೆರಡು ನಿಮಿಷ ವೇಳೆ ಕೊಡುತ್ತಾರೆ, ಹೀಗೆ ನಮ್ಮ ನಡತೆಯೂ ಸಮರ್ಥ ಸಂಪರ್ಕ ಮಾಧ್ಯಮವಾಗಿ–ಭಾಷೆಯಾಗಿ–ಬಳಕೆಯಾಗುತ್ತಿರುವದು ಅರಿಯದ ವಿಷಯವೇನಲ್ಲ.

ಇಂದು : ಭಾಷೆ ಪ್ರೌಢಾವಸ್ಥೆಯನ್ನು ಮುಟ್ಟಿದ ಈಗಿನ ಕಾಲದಲ್ಲಿ ಅದರ ಹಳೆಯ ರೂಪಗಳಾದ ಆಂಗಿಕ ಚೇಷ್ಟೆ, ಧ್ವನಿಸನ್ನೆಗಳು ಸಾರ್ವತ್ರಿಕವಾಗಿ ಬಳಕೆಯಾಗುವದಿಲ್ಲ, ನಿಜ. ಆದರೆ ಅವು ಸಂಪೂರ್ಣವಾಗಿ ಮಾಯವಾಗಿವೆಯೆಂದೇನೂ ಅಲ್ಲ. ಈಗಲೂ ನಮ್ಮ ಎಲ್ಲ ವಿಚಾರಗಳಿಗೆ, ಭಾವನೆಗಳಿಗೆ ಒಮ್ಮೆಲೆ ಶಬ್ದ ಸಿಗುವದಿಲ್ಲ. ಅಂಥ ಸಂದರ್ಭದಲ್ಲಿ ನಾವು ನಮ್ಮ ಮೂಲ ಪ್ರವೃತ್ತಿಗೇ ಶರಣು ಹೋಗುತ್ತೇವೆ. ಆಂಗಿಕ ಹಾವಭಾವ ಗಳನ್ನು ಈಗಲೂ ನಾವು ಬಳಸುವದು ನಮ್ಮ ಅನುಭವದ ಹೊರಗಿನ ವಿಷಯ–ವೇನಲ್ಲ.

ಸಂಪರ್ಕ ಸಾಧನಗಳು ಭರದಿಂದ ಪ್ರಗತಿಯನ್ನು ಸಾಧಿಸುತ್ತಿರುವ ಇಂದಿನ ಕಾಲ ದಲ್ಲಿಯೂ ಇನ್ನೊಂದು ಅಂಶವೂ ಇದೆ. ಅದೆಂದರೆ, ಯಾವಾಗಲೂ ನಮ್ಮ ಮಾತು ಮಾತ್ರ ಸಂಪರ್ಕಕ್ಕೆ ಸಾಧನವಾಗಬೇಕಾಗಿಲ್ಲ. ಮಾತನ್ನು ಒಳಗೊಂಡು ಇನ್ನೂ ಅನೇಕ ವಿಧಾನಗಳು ಎಂದಿನಿಂದಲೂ ಬಳಕೆಯಲ್ಲಿರುವಂತೆ. ಈಗಲೂ ವಿಶಿಷ್ಟ ಸಂಪರ್ಕಸಾಧನ ಗಳನ್ನು ನಾವು ಬಳಸುತ್ತೇವೆ. ಇದು ನಮ್ಮ ಅನುಕೂಲತೆಯ ದೃಷ್ಟಿ. ಈಗ ಇಂತಹ ವಿಧಾನಗಳಲ್ಲಿ ಪ್ರಮುಖವಾದುದೆಂದರೆ ಮೋರ್ಸ ಕೋಡ್ (More's code). ಈ ವ್ಯವಸ್ಥೆಯಲ್ಲಿ ಒಂದು 'ಕಟ್' ಧ್ವನಿಗೆ ಒಂದು ಸಂಕೇತ, ಎರಡು 'ಕಟ್‌ಕಟ್' ಧ್ವನಿಗೆ ಇನ್ನೊಂದು ಸಂಕೇತ. ಒಂದು 'ಕಡ್' ' ಧ್ವನಿಗೆ ಒಂದು ಸಂಕೇತ. ಎರಡು 'ಕಡ್‌ಕಡ್' ಧ್ವನಿಗೆ ಇನ್ನೊಂದು ಸಂಕೇತ. ಈ ರೀತಿಯ ಕೇವಲ ವಿಶಿಷ್ಟ ಧ್ವನಿ ಸಂಕೇತಗಳ ಮೂಲಕ ನಮಗೆ ತಿಳಿಸಬೇಕಾದ್ದನ್ನು, ನಾಡಿನ ಯಾವುದೇ ಭಾಗಕ್ಕೆ ತಿಳಿಸಲು ಸಾಧ್ಯ. ಇಲ್ಲಿ ಯಾವ ಹಂತದಲ್ಲಿಯೂ ನಮ್ಮ ಧ್ವನಿಗಳ ಬಳಕೆಯಿಲ್ಲ. ಆದರೂ ನಮ್ಮ ಸಂಪರ್ಕ ಪ್ರಭಾವಿಯಾಗಿ ಸಾಧ್ಯವಾಗುತ್ತದೆ.

ಇದೇ ರೀತಿ, ದಿನ ನಿತ್ಯ ಮಾತಿಗೆ ಹೊರತಾದ ಅನೇಕ ರೀತಿಯ ಸಂಕೇತಗಳನ್ನು ಕಾಣುತ್ತೇವೆ. ಒಂದು ಗಂಟೆಯನ್ನು ಬಾರಿಸಿದರೆ ಬಸ್ಸು ನಿಲ್ಲುವದೂ, ಎರಡು ಗಂಟೆ ಬಾರಿಸಿದರೆ ಬಸ್ಸು ಹೊರಡುವದೂ. ಒಂದು ಸಾಂಕೇತಿಕ ಭಾಷೆಯೇ. ಕೈ (Signal) ಬಿದ್ದರೆ ಟ್ರೇನು ಮುಂದೆ ಹೊರಡುವದೂ, ಕೈ ಬೀಳದಿದ್ದರೆ ಅದು ನಿಲ್ಲುವದೂ ಒಂದು ಭಾಷೆಯೇ. ಹಸಿರು ಬಾವುಟತೋರಿಸಿದರೆ ರೈಲು ಮುಂದೆ ಹೋಗುತ್ತದೆ. ಕೆಂಪು ಬಾವುಟ ತೋರಿಸಿದರೆ ನಿಲ್ಲುತ್ತದೆ. ಈ ಯಾವ ಸಂಕೇತಗಳಲ್ಲಿಯೂ ಧ್ವನಿಯ ಬಳಕೆಯಿಲ್ಲ.

ಮಾನವ ಹುಟ್ಟಿದಂದಿನಿಂದಲೂ ಯಾವದಾದರೊಂದು ರೀತಿಯಲ್ಲಿ ತನ್ನ ವಿಚಾರವನ್ನು ಅಭಿವ್ಯಕ್ತಗೊಳಿಸುತ್ತಲೇ ಇದ್ದಾನೆ. ತನ್ನ ವಿಚಾರವನ್ನು ಅಭಿವ್ಯಕ್ತ

ಗೊಳಿಸಿ, ಅನ್ಯರೊಡನೆ ಸಂಪರ್ಕ ಸಾಧಿಸುವುದೇ ಭಾಷೆಯ ಉದ್ದೇಶ. ಮಾತನ್ನುಳಿದ ಅನೇಕ ರೀತಿಯ 'ಭಾಷೆ'ಗಳು ಎಂದಿನಿಂದಲೂ ಬಳಕೆಯಾಗುತ್ತ ಈಗಲೂ ಅಲ್ಲಲ್ಲಿ ಕಂಡರೂ, ಅವುಗಳ ಕ್ಷೇತ್ರ ಪರಿಮಿತ. ಮಾನವನ ಜ್ಞಾನಪ್ರಪಂಚ ವಿಸ್ತಾರವಾದಂತೆ ಆ ಎಲ್ಲ ವಿಚಾರಗಳನ್ನು ಹಳೆಯ ವಿವಿಧ ರೀತಿಯ ಭಾಷೆಗಳು ಅಭಿವ್ಯಕ್ತಗೊಳಿಸಲು ಸಾಧ್ಯವೇ ಇಲ್ಲ. ಅಂದರೆ ಉಳಿದ ಯಾವ ವಿಧಾನದಲ್ಲಿಯೂ ಇಲ್ಲದ ಒಂದು ಸೌಲಭ್ಯ ಮಾತಿನ ಭಾಷೆಯಲ್ಲಿದೆ. ಅದು ಯಾವದೇ ವಿಚಾರವನ್ನು-ಮೂರ್ತವಿರಲಿ ಅಮೂರ್ತವಿರಲಿ–ಪ್ರಕಟಪಡಿಸಬಹುದು. ಈ ಒಂದು ಸೌಲಭ್ಯದ ಮೂಲಕ ಇತರ ಮಾರ್ಗಗಳನ್ನು ಮರೆಸುವಷ್ಟು ಅದು ಪ್ರಮುಖವಾಗಿ ಮಾತು ಮಾತ್ರ ಭಾಷೆಯನ್ನು ವಷ್ಟು ಪ್ರಮುಖವಾಗಿ ನಿಂತಿದೆ ಅಷ್ಟೆ.

★ ಜೆ. ಎಸ್. ಕುಳ್ಳಿ.

ವೈದಿಕ ಅಪ್ರಕಟಿತ ಗ್ರಂಥಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
613	ಯದುಗಿರಿ ತಿರುನಾರಾಯಣ ಕೀರ್ತನೆ	?	17. ಶ.	ಹಾ	III. 428
614	ಯದುಗಿರಿ ಮಹಾತ್ಮ್ಯ	ಚಿಕುಪಾಧ್ಯಾಯ	1672	ಗ., ಅ. 12	II. 482-83
615	ಯಾಗ ಚರಿತ್ರೆ	ಹುಚ್ಚ ಕವಿ	?	ಯ	K. 435
616	ಯಾಜ್ಞವಲ್ಕ್ಯ ಧರ್ಮಶಾಸ್ತ್ರ (ವ್ಯವಹಾರಾಧ್ಯಾಯ) ಟೀಕೆ	ಮಹೇಂದ್ರ ಯತಿರಾಜ	1800	ಟೀ	KRI I. ಸಂ.57; K.395?
617	ಯಾಜುಷ ಸಂಧ್ಯಾ ಭಾಷ್ಯ ಟೀಕೆ	ಎಂ. ಎ. ನರಸಿಂಹಾಚಾರ್ಯ	19 ಶ.	ಟೀ	III. 468
618	ಯಾದವಗಿರಿ ಮಹಾತ್ಮ್ಯ	ಚಿಕುಪಾಧ್ಯಾಯ	1672	ಸಾಂ. 12.1219	II. 482
619	ಯಾದವಗಿರಿ ಮಹಾತ್ಮ್ಯ	ತಿಮ್ಮಕವಿ	1677	ಚಂ., ಆ. 16	II. 492-95
620	ಯಾದವಗಿರಿ ಮಹಾತ್ಮ್ಯ	ಲಕ್ಷ್ಮಯ್ಯ	17. ಶ	ಷ.	III. 428
621	ಯಾದವಗಿರಿ ಮಹಾತ್ಮ್ಯ	ವೆಂಕಟಾರ್ಯ ಶಿಷ್ಯ	1700	ಭಾ. ಷ	II. 545-46
622	ಯಾದವಗಿರಿ ಮಹಾತ್ಮ್ಯ ಟೀಕೆ	?	17. ಶ.	ಟೀ.	III. 428

623	ಯೋಗ ತಾರಾವಳಿ	?	?	ಗ	KB. 397
624	ಯೋಗದ ರಹಸ್ಯವು	?	?	ಶ್ಲೋ+ಟೀ	K. 322/2
625	ಯೋಗ ರತ್ನಾಕರ	ಪದ್ಮನಾಭ	17. ಶ.	?	III. 428
626	ಯೋಗ ರತ್ನಾಕರ	ಶಾನಭಾಖ್ಯ	?	ಷ	III. 236
627	ಯೋಗ ವಾಸಿಷ್ಠ	ಶಾಂತಕವಿ	1856-1920	?	?
628	ರಘುವಂಶ್ರ್ರಿನೇ ಸರ್ಗ	ಶಾಂತಕವಿ	1856-1920	ಷ	III. 467
629	ರಘುವಂಶ ಟೀಕೆ	?	19. ಶ.	ಟೀ	III. 428
630	ರಟ್ಟಿನ ಜಾತಕ	ಗಂಗಾಧರ	.1550	ಕಂ. + ವ್ಟ; 120	II. 270-71
631	ರತ್ನನಂದಿಕೃತ 'ಭದ್ರಬಾಹುಚರಿತ' ಟೀಕೆ	ಜಗನ್ನಾಥಾಚಾರ್ಯ	?	ಟೀ	III. 421
632	ರತ್ನಶಾಸ್ತ್ರ	ಬಾಲವೈದ್ಯದ ಚೆಲುವ	1715	ವಾ ಷ; 98	III. 5-6,8-9-71
633	ರತ್ನಶಾಸ್ತ್ರ ಟೀಕೆ	?	17. ಶ.	ಟೀ	III. 428
634	ರತ್ನಶೇಖರ ಚರಿತ್ರೆ	ಪಟ್ಟಾಭಿರಾಮ	1725	ಸಾಂ.	III. 25-7
635	ರತ್ನಾವಳಿ	ಶಾನುರಾಯ ವೆಂಕಟಾದ್ರಿ	1848-1917	?	ಸಿಗ್ರಂಚಕೋ. 173-74
636	ರತ್ನಾವಳೀ	ಕಿ. ಶ್ರೀನಿವಾಸಯ್ಯಂಗಾರ್	19 ಶ.	ನಾ	ಕನಂ. 3. 5 (8)
637	ರತಿಕಲ್ಯಾಣ ನಾಟಕ	ವೇದಗಿರಿಯಾಚಾರ್ಯ	?	ನಾ	K B. 300
638	ರತಿರಹಸ್ಯ ಟೀಕೆ	?	19. ಶ.	ಟೀ	III. 428
639	ರತಿರಹಸ್ಯ ದೀಪಿಕೆ	?	18. ಶ.	ಟೀ	III. 428
640	ರನಾಭ್ಯುದಯ	ವೆಂಕಾನಾತ್ಯ	1770	ಚಂ	III. 131-33

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
641	ರಸಕಲಿಕೆ	ರುದ್ರಭಟ್ಟ	1185	?	I. 313 [ಅಲಭ್ಯ]
642	ರಸಿಕಾರಸಿಕ ವಿಚಾರ	ಶಾಂತಕವಿ	1865-1920	ಷ	III. 467
643	ರಹಸ್ಯತ್ರಯ	?	17. ಶ.	ಗ	III. 428
644	ರಂಗಕ್ಷೇತ್ರಾಷ್ಟತೀರ್ಥ ಮಹಿಮೆ	?	17. ಶ.	ಗ	III. 428
645	ರಂಗನಾಯಕ ರಂಗನಾಯಕೀ ಸ್ತುತಿ ಸಾಂಗತ್ಯ	ಚಿಕುಪಾಧ್ಯಾಯ	1672	ಸಾಂ., 49	II. 489
646	ರಂಗಸ್ವಾಮಿ ಯಶೃಂಗಾರ ಸೂತ್ರೋದಹರಣೆ	ಚಿಕುಪಾಧ್ಯಾಯ	1672	ಹಾ	II. 467,488
647	ರಾಘವಾಭ್ಯುದಯ	ಸಿಂಗರಾರ್ಯ	1680	?	II. 503
648	ರಾಜತರಂಗಿಣಿ	ಕೊ. ರಾಮಸ್ವಾಮಿ ಅಯ್ಯಂಗಾರ್	19. ಶ.	?	III. 465
649	ರಾಜಪುತ್ರ ರಮಣಿಯರು	ಕೊ. ರಾಮಸ್ವಾಮಿ ಅಯ್ಯಂಗಾರ್	19. ಶ.	ಗ ?	III. 465
650	ರಾಜನಶ್ಯ ಟೀಕೆ	?	18. ಶ	ಟೀ	III. 428
651	ರಾಜಸೂಯ	ಭೀಮ	18. ಶ.	ಯ	ಯ ಬ. 246
652	ರಾಜಸೂಯ	ಹ. ರಾಮಭಟ್ಟ	19. ಶ.	ಯ	ಯ ಬ. 225

653	ರಾಜಸೂಯಾಧ್ವರ	?	?	ಯ	ಯ ಬ. 259
654	ರಾಧಾಕೃಷ್ಣ ವಿಲಾಸ	ಸರಗೂರು ವೆಂಕಟವರದಾಚಾರ್ಯ	19. ಶ.	?	III. 223
655	ರಾಧಾ ವಿಲಾಸ	ನಂಜುಂಡ ಭಾಗವತ	1847-1906	ಯ ?	III. 206
656	ರಾಧಾ ವಿಲಾಸ	ಮುಟ್ಟಿ ವಾಸುದೇವಪ್ರಭು	19. ಶ.	ಯ	ಯ ಬ. 237
657	ರಾಮ ಕೊರವಂಜಿ	ವೆಂಕಟೇಶ ಕವಿ	?	ಯ	K. 532
658	ರಾಮ ಚರಿತದ ಹಾಡು	?	18. ಶ.	ಹಾ	III. 428
659	ರಾಮಚರಿತೆ	?	1750	ಯ	III. 320
660	ರಾಮಚಂದ್ರ ಷಟ್ಪದಿ	?	16. ಶ.	ಷ	III. 428
661	ರಾಮದೂತ ವಿಜಯ	ತಿ. ಶ್ರೀನಿವಾಸ ಅಯ್ಯಂಗಾರ್	19. ಶ.	ನಾ	ಕ ನಂ. 3.5 (8)
662	ರಾಮಧ್ಯಾನಾಮೃತ	?	19. ಶ.	?	III. 428
663	ರಾಮಪಾದುಕಾ ಪಟ್ಟಾಭಿಷೇಕ	ವಿಷ್ಣು ಸಭಾಹಿತ	19. ಶ.	ಯ	ಉ ಕ ಗ್ರಂ. 133
664	ರಾಮಭಕ್ತಿಸಾರ	ನರಸ	?	ಷ+ಹಾ	KB- 205/3
665	ರಾಮ ರಾವಣ ಯುದ್ಧ	?	?	ಯ	KB. 420/3
666	ರಾಮವರ್ಗ ಲೀಲಾವತೀ ಚರಿತ್ರೆ	ಜಯರಾಯಾಚಾರ್ಯ	19. ಶ.	ನಾ ?	III. 221
667	ರಾಮ ವಿಜಯ	ಆತ್ಮಾರಾಮದಾಸ	1830	ಭಾ.ಷ., 44.5372	ಕಸಾಪಪ. 21.3
668	ರಾಮಾನುಜರ ಆಹ್ನಿಕ	?	17. ಶ.	?	III. 428
669	ರಾಮಾನುಜ ವಿಜಯ	ದೊಡ್ಡ ತಿಮ್ಮದಾಸ	1700	ಗ	II. 553
670	ರಾಮಾಮೃತ ಕಥಾ ಸುಧಾನಿಧಿ	?	?	?	ಕ ಸಾಪಪ 11.3 (189)

ಅ ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
671	ರಾಮಾಯಣ*	ವೆಂಕಾಮಾತ್ಯ	1770	ವಾ. ಷ; 195-9865	III. 129-33
672	ರಾಮಾಯಣ	ಸೋಸಲೆ ಅಯ್ಯಾಶಾಸ್ತ್ರಿ	19. ಶ	ನಾ	KB. 80
673	ರಾಮಾಯಣ ಕರ್ಣಾಮೃತಂ	?	?	ಗ	JOR ××viii(ಪು.72(1961)
674	ರಾಮಾಯಣದ ಸೋಬಾನೆ	?	19. ಶ.	ಹಾ	III. 428
675	ರಾಮಾಯಣ ವಚನ	?	?	ಗ	GOML I ಸಂ. 137-38
676	ರಾಮಾಯಣ ವಚನ ಕಥೆ	?	18. ಶ	ಗ	III 428
677	ರಾಮಾಷ್ಟಕ	?	17. ಶ.	?	III 428
678	ರಾವಣ ದಿಗ್ವಿಜಯ	ಗೇ. ಶಾಂತಯ್ಯ	1830	ಯ	III 188
679	ರಾವಣ ದಿಗ್ವಿಜಯ	ದ್ರಾವಿಡ ವೆಂಕಟಕವಿ	19. ಶ.	ಯ	III 229
680	ರಾವಣ ದಿಗ್ವಿಜಯ	?	?	ಗ	III 428
681	ರಾವಣನ ಕಥೆ	?	?	ಯ	KB. 353/8
682	ರಾವಣ ವಧೆ	ಶಾಂತಕವಿ	1856-1920	ನಾ	III. 467
683	ರಾವಣ ವಧೆ	?	?	ಯ	ಯು.ಬ. 187
684	ರಾವಣ ವಧೆ	?	?	ವಿ	KB. 246
685	ರುಕ್ಮಾಂಗದ ಕಥೆ	ನಂಜುಂಡ ಭಾಗವತ	1847-1906	?	ಹರಿ.ಕ (ಪೀಠಿಕೆ)
686	ರುಕ್ಮಾಂಗದ ಚರಿತೆ	ಚಿಕುಪಾಧ್ಯಾಯ	1672	ಚಂ; 10-2286	II. 475-77

687	ರುಕ್ಮಾಂಗದ ಚರಿತೆ	ಸೋಮನಾಥ	1650	ಸಾಂ; 9-1154	II. 412-13
688	ರುಕ್ಮಾಂಗದ ಚರಿತೆ	ಅರಮನೆ ನಾಟಕದ ಸುಬ್ಬರಾಯ	19. ಶ	ನಾ ?	ತ್ರೈ.ಕಂ.ಕ. ಪದ್ಯ 117
689	ರುಕ್ಮಾಂಗದ ಚರಿತ್ರೆ	ತಿಪ್ಪೇಂದ್ರ	18. ಶ.	?	III 428
690	ರುಕ್ಮಾಂಗದ ಚರಿತ್ರೆ	ಧಾ. ತಿಮ್ಮಪ್ಪದಾಸ	19. ಶ.	ಯ	—
691	ರುಕ್ಮಾಂಗದ ಚರಿತ್ರೆ	ರಾಮಣ್ಣ ವೆಂಕಟ ಸುಬ್ಬಯ್ಯ	19. ಶ.	ನಾ	ಸಿಗ್ರಂಚಕಸೂ 121
692	ರುಕ್ಮಾಂಗದ ಚರಿತ್ರೆ	ಲಕ್ಷ್ಮಕವಿ	1723	ಸಾ. ಷ; 17-953	III. 15-7, 20-2
693	ರುಕ್ಮಾಂಗದ ಚರಿತ್ರೆ	ಶೇಷ	1650	ಸಾಂ: 7-313	II. 438
694	ರುಕ್ಮಾಂಗದ ಚರಿತ್ರೆ	?	?	ಯ	KB. 370
695	ರುಕ್ಮಾಂಗದ ಚರಿತ್ರೆ ಅಥವಾ ಕೃಷ್ಣರಾಜ ಮುದೋಲ್ಲಾಸ	?	1830	?	III. 325
696	ರುಕ್ಮಾಂಗದ ನಾಟಕ	ಜಹೊಳೆ ವೆಂಕಟದಾಸ	1835-1915	ನಾ	ಹಕ 289
697	ರುಕ್ಮಿಣಿ ಪರಿಣಯ	ಗಣಪಕ್ಕ	1870		ಕಕ. 328
698	ರುಕ್ಮಿಣೀ ಕಲ್ಯಾಣ	ರಾಮಣ್ಣ ವೆಂಕಟ ಸುಬ್ಬಯ್ಯ	19. ಶ.	ನಾ	ಸಿಗ್ರಂಚಕೋ. 121
699	ರುಕ್ಮಿಣೀ ಕಲ್ಯಾಣ	?	19. ಶ.	ಸಾಂ	III. 428
700	ರುಕ್ಮಿಣೀ ಸ್ವಯಂವರ	ಅ. ವೆಂ. ಸುಬ್ಬ	19. ಶ.	ಯ	K B. 209
701	ರುಕ್ಮಿಣೀ ಸ್ವಯಂವರ	ಎಣ್ಣೆಮುಡಿ ವೆಂಕಟರಮಣಯ್ಯ	19. ಶ.	ಯ	III. 222
702	ರುಕ್ಮಿಣೀ ಸ್ವಯಂವರ	ಸುಬ್ಬಯ್ಯ	1840	ಯ	III. 228
703	ರುಕ್ಮಿಣೀ ಸ್ವಯಂವರ	?	?	ಯ	ಯ ಬ. 72

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
704	ರುಕ್ಮಿಣೀ ಸ್ವಯಂವರ	?	1825	ಹಾ., 22	III. 324
705	ರುಕ್ಮಿಣೀ ವರಣ	ಕೆರೂರ ವಾಸುದೇವಾಚಾರ್ಯ	1866-1921	ವಾ	ವಾಪ್ರ. 75
706	ರುಂಡಭೈರವನ ಕಾಳಗ	ಬತ್ತಲೇಶ್ವರ	1700	ಭಾ. ಷ., 4.217	ಪ್ರ. ಕ. 42.2 (51)
707	ಲಕ್ಷಣೆ ಸ್ವಯಂವರ	?	1500	ಯ	K. 563
708	ಲಕ್ಷ್ಮಣಾ ಕಲ್ಯಾಣ	ವೆಂಕಮ್ಮ	17. ಶ.	?	III. 429
709	ಲಕ್ಷ್ಮೀ ಕಲ್ಯಾಣ	ರಂಗ	?	ಯ	K. 208/2
710	ಲಕ್ಷ್ಮೀದೇವಿಯ ಸೋಬಾನೆ	?	19. ಶ.	ಹಾ	III. 429
711	ಲಕ್ಷ್ಮೀ ಭಕ್ತಿಸಾರ	ತಿ. ಶ್ರೀನಿವಾಸಯ್ಯಂಗಾರ್	19. ಶ.	ಷ?	ಕ ನಂ. 3.5 (8)
712	ಲಕ್ಷ್ಮೀ ಸ್ವಯಂವರ	?	18. ಶ.	ಯ	III. 429
713	ಲಕ್ಷ್ಮೀ ಸ್ವಯಂವರ ಶೋಭಾನ	ತಿರುಮಲಾರ್ಯ	1645-1706	ಸಾ., 3 196	GOML VII ಸಂ. 1290
714	ಲಕ್ಷ್ಮೀ ಸ್ವಯಂವರ ಸೋಬಾನೆ	?	1715	ಹಾ	III. 314
715	ಲಕ್ಷ್ಮೀಸ್ತುತಿ	?	?	ಗ	GOML IV. ಸಂ. 649
716	ಲಕ್ಷ್ಮೀ ಸ್ತೋತ್ರ	?	?	ಸಾಂ	GOML IV. ಸಂ. 651
717	ಲಘು ಕವಿತಾ ಪದ್ಧತಿ	ಶಾಂತಕವಿ	1856-1920	?	III. 467
718	ಲವಕುಶರ ಕಾಳಗ	ಹೆ. ಗಿರಿಯಮ್ಮ	1750	ಹಾ	ಕಕ. 260-64
719	ಲವಕುಶರ ಕಾಳಗ	?	1800	ಯ	III. 323

720	ಲವಣ ಸಂಹಾರ	ಗೇ. ಶಾಂತಯ್ಯ	1830	ಯ	III. 188
721	ಲವಣಾಸುರ ಕಾಳಗ	?	19. ಶ.	ಯ	III. 429
722	ಲಂಪಾಕ ಟೀಕೆ (ಮೂಲ ಪದ್ಮನಾಭ)	?	?	ಟೀ	III. 428
723	ವಜ್ರಮುಕುಟರಾಯನ ಕಥೆ	?	18. ಶ.	ಯ	III. 429
724	ವನಮಾಲಿ ವಿಲಾಸ ಕಥೆ	ದೇ. ಶ್ರೀನಿವಾಸಯ್ಯಂಗಾರ್	19. ಶ.	ಗ?	III. 226
725	ವರದ ವಿಟ್ಠಲ ರಾಮಾಯಣ	ವಿಟ್ಠಲ	1750	ಭಾ. ಷ.,	III. 111-13
726	ವರನಂದೀ ಕಲ್ಯಾಣ	?	17. ಶ.	ಯ	III. 429
727	ವರಾಹ ಪುರಾಣ ಟೀಕೆ	?	18. ಶ.	ಟೀ	III. 429
728	ವಸು ಚರಿತ್ರೆ	ಶ್ರೀನಿವಾಸ ಕವಿ	?	ನಾ	III. 134
729	ವ್ಯಭಿಚಾರಾಪರ್ಣ ಸಿಂಧು	ಶಾಂತಕವಿ	1856–1920	ನಾ ?	III. 467
730	ವಾಕ್ಯ ಸುಧಾ ಟೀಕೆ	ರಾಮಬ್ರಹ್ಮಾನಂದ	1700	ಟೀ	II. 543
731	ವಾಗಜಿಗಳು	ಟಿ. ವ್ಯಾಸರಾಯ	19. ಶ.	ಗ.	II. 234
732	ವಾತ್ಸ್ಯಾಯನೀಯ ಟಿಪ್ಪಣಿ	?	13-15 ಶ.	ಟೀ	III. 429
733	ವಾಮನ ಚರಿತ	?	?	ಭಾ. ಷ; 24–997	I. K. S.
734	ವಾಮನ ವಿಜಯ	ಮೋ. ರಾಮ ಶೇಷಶಾಸ್ತ್ರಿ	19. ಶ.	?	ಸಿಗ್ರಂಚಕೋ 127
735	ವಾಮಲೂರಿ ಕಥಾವಳಿ	ದೇವ	1725	?	III. 31 [ಅಲಭ್ಯ]
736	ವಾರ್ಷಿಕ ತಂತ್ರ ಟೀಕೆ	ಹರಿಭಟ್ಟ	?	ಟೀ	III. 429
737	ವಾಸಪ್ಪ ನಾಯಕನ ಫಾರ್ಸ	ಶಾಂತಕವಿ	1856-1920	ನಾ	III. 467

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
738	ವಾಸ್ತು ಪುರುಷ ಲಕ್ಷಣ ಟೀಕೆ	?	17. ಶ.	ಟೀ	III. 429
739	ವಾಸ್ತುಶಿಲ್ಪಾದಿ ವಿಶ್ವಕರ್ಮ ಪುರಾಣ	?	?	?	III. 429
740	ವ್ಯಾಘ್ರಮುಖ ಸ್ತಂಭನ ಮಂತ್ರ	?	15. ಶ.	ಗ	III. 429
741	ವ್ಯಾಘ್ರಾಚಲ ಮಾಹಾತ್ಮ್ಯ	ಕರಗೂರು ವೆಂಕಟವರದಾರ್ಯ	19. ಶ.	?	III. 223
742	ವಿಶಾಲರಾಯ ಚರಿತ್ರೆ	?	18. ಶ.	?	III. 429
743	ವಿಚಾರ ಸಾಗರ	ಮೊ. ರಾಮಶೇಷಶಾಸ್ತ್ರಿ	19. ಶ.	?	ಸಿಗ್ರಂಚಕೋ. 127
744	ವಿಟಕಂಠ ಖಡ್ಗ	ಶಾಂತಕವಿ	1856–1920	ಷ	III. 467
745	ವಿಠೋಬ ಚರಿತೆ	ವೆಂಕಟೇಶ ಭಟ್ಟ	1830	ಸಾಂ; 70	III. 184
746	ವಿಠೋಬ ಚರಿತ್ರೆ	?	?	ಯ	KB. 395/2
747	ವಿದ್ಯಾನಾಥನೀಯ ಟೀಕೆ	?	18. ಶ.	ಟೀ	III. 429
748	ವಿದಗ್ಧಮಂಗ ಮಂಜರಿ	?	15. ಶ. (ಮುಂ)	ಟೀ ?	III. 429
749	ವಿನಾಯಕಾಷ್ಟಕ	?	1750	?	III. 320
750	ವಿರಾಟಪರ್ವ	ಜಕೊಳಿ ವೆಂಕಟದಾಸ	1835–1915	ಯ ?	ಹಕ. 289
751	ವಿರಾಟಪರ್ವ	ಗಿ. ತಿಮ್ಮಯ್ಯ	19. ಶ.	ಯ	ಸಿಗ್ರಂಚಕೋ 56
752	ವಿರಾಟಪರ್ವ	ಧಾ. ತಿಮ್ಮಪ್ಪದಾಸ	19 ಶ.	ಯ	ಕನಂ. 2.5 (5)
753	ವಿರಾಟಪರ್ವ	ನಿ. ನರಸಿಂಹ ಮೂರ್ತಿರಾಯ	19. ಶ.	?	III. 462

754	ವಿವೇಕ ಸಾಗರ	ವಾಸುದೇವಯತಿ ಶಿಷ್ಯ	?	ಗ	KB. 189
755	ವಿಶ್ವಕರ್ಮ ಕಥೆ	?	18. ಶ.	?	III. 429
756	ವಿಶ್ವಗುಣಾದರ್ಶ ಟೀಕೆ	?	?	ಟೀ	III. 429
757	ವಿಶ್ವಪತಿ ನೀತಿ	?	17. ಶ.	ಕಂ	III. 429
758	ವಿಶ್ವರೂಪ ವರ್ಣನೆಯ ದಂಡಕ	ಸುರಪುರದ ಆನಂದದಾಸ	?	ದಂ	ಶ್ರೀ ಕ ಭ ವಿಜಯ (ಪು 609) [1963]
759	ವಿಶ್ವಾಮಿತ್ರ ತಪೋಭಂಗ ಅಥವಾ ಶಕುಂತಲೆಯ ಉತ್ಪತ್ತಿ	ಶಾಂತಕವಿ	1856-1920	ಭಾಗ-೧,೨	III. 467
760	ವಿಶುದ್ಧ ವೈದಿಕಾದ್ವೈತ ಸಿದ್ಧಾಂತ	?	17. ಶ.	?	III. 429
761	ವಿಶೇಷ ರಾಮಾಯಣ	?	?	ಭಾ. ಷ.	ಎಸ್. ಕೆ. ಹೆಗಡೆ
762	ವಿಷಯಾ ಚಂಪಕ ಮಾಲಿನೀ ಪರಿಣಯ	ಶಾನುರಾಯ ವೆಂಕಟಾದ್ರಿ	1848-1917	ನಾ ?	ಸಿಗ್ರಂಚಕೋ. 173-74
763	ವಿಷ್ಣು ಕವಚ	?	18. ಶ.	?	III. 429
764	ವಿಷ್ಣು ಕೀರ್ತನೆಗಳು	?	?	ಹಾ	K. 184/7
765	ವಿಷ್ಣು ದಾಸಾವತಾರ ಕಥೆ	?	?	?	III. 429
766	ವಿಷ್ಣು ಧರ್ಮ	?	17. ಶ.	?	III. 429
767	ವಿಷ್ಣು ಧರ್ಮೋತ್ತರ	?	?	ಗ	III. 429
768	ವಿಷ್ಣು ಪುರಾಣ*	ಚಿಕುಪಾಧ್ಯಾಯ	1672	ಗ	II. 467
769	ವಿಷ್ಣು ಪುರಾಣ*	ಚಿಕುಪಾಧ್ಯಾಯ	1672	ಚಂ , ಅ 32-6255	II. 477-78
770	ವಿಷ್ಣುಮಾನಸ ಪೂಜೆ	?	18. ಶ.	?	III. 429

ಅ.ಸಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
771	ವಿಷ್ಣು ಸ್ತುತಿ	?	?	ಗ	GOML IV. ಸಂ. 661
772	ವಿಷ್ಣು ಸ್ತೋತ್ರ	?	?	ಕಂ	III. 429
773	ವೀರವರ್ಮನ ಕಾಳಗ	ನಂಜುಂಡ ಭಾಗವತ	1847-1906	ಯ ?	ಹರಿ. ಕ (ಪೀಠಿಕೆ)
774	ವೀರಸಿಂಹ ಚರಿತ್ರೆ	?	?	ನಾ., ಅಂಕ. 5	KB. 200
775	ವೃತ್ತ ರತ್ನಾಕರ ಟೀಕೆ	?	1775	ಟೀ	III. 320
776	ವೃಷ್ಟಿ ಶಾಸ್ತ್ರ ಟೀಕೆ	?	18. ಶ.	ಟೀ	III. 430
777	ವೆಂಕಟಗಿರಿ ಮಾಹಾತ್ಮ್ಯ	ಚಿಕುಪಾಧ್ಯಾಯ	1672	ಗ., ಆ. 10-	II. 483
778	ವೆಂಕಟಗಿರಿ ಮಾಹಾತ್ಮ್ಯ	ತಿಮ್ಮಕವಿ	1677	ಚಂ , ಆ. 10-502	II. 496-98
779	ವೆಂಕಟಗಿರಿ ಮಾಹಾತ್ಮ್ಯ	ಮೂಳಿಕೆ ರಾಮಕೃಷ್ಣ ಕವಿ	19. ಶ.	ಷ.	III. 395
780	ವೆಂಕಟಗಿರಿ ಮಾಹಾತ್ಮ್ಯ ಟೀಕೆ	?	18. ಶ.	ಟೀ	III. 430
781	ವೆಂಕಟಪುರ ವೈಷ್ಣವಾದಿ ನಾನಾ ಮತೋತ್ಪತ್ತಿ	?	18. ಶ.	ಗ ?	III. 430
782	ವೆಂಕಟರಮಣ ಬೆಟ್ಟದ ಸ್ಥಳಪುರಾಣ	?	?	ಗ	KA. 567
783	ವೆಂಕಟಾಚಲರಾಮನ ಹಸೆಗೆ ಕರೆಯುವ ಹಾಡು	ಅಂ/' ಪಿರಿಯ ಪುರದ ಚೆನ್ನಕೇಶವ'	1820	ಹಾ; ದಂಡಕ 22	III. 323
784	ವೆಂಕಟೇಶ ಜೋಗುಳ ಪದ	?	1830	ಹಾ; 17	III. 326, 431

785	ವೆಂಕಟೇಶ ದಂಡಕ	?	17. ಶ.	ದಂಡಕ	III. 430
786	ವೆಂಕಟೇಶ ಭಾರತ	ಶ್ರೀನಿವಾಸ ಶರ್ಮ	?	ಭಾ., ಷ; 5.828	KB. 435
787	ವೆಂಕಟೇಶ ಮಹಾತ್ಮೆ	ಹ. ಭೀಮಪ್ಪ	19. ಶ.	ಹಾ	ಕಕ. 303
788	ವೆಂಕಟೇಶ್ವರ ಪ್ರಬಂಧ	ವೆಂಕಕವಿ	1650	ಚಂ	II. 404-06
789	ವೆಂಕಟೇಶ್ವರ ಲಾವಣಿ	?	?	ಹಾ	K. 400
790	ವೇದಾಂತ ಕೀರ್ತನೆ	?	18. ಶ.	ಹಾ	III. 430
791	ವೇದಾಂತ ಡಿಂಡಿಮ ಟೀಕೆ	ಕೃಷ್ಣಕವಿ	18. ಶ.	ಟೀ	III 430
792	ವೇದಾಂತ ತತ್ವ	?	17. ಶ	?	III. 430
793	ವೇದಾಂತ ತತ್ವ ರಸಾಯನ	?	19. ಶ.	?	III. 430
794	ವೇದಾಂತ ಪಂಚದಶೀ ಟೀಕೆ	?	18. ಶ.	ಟೀ	III. 420
795	ವೇದಾಂತ ವಾರ್ತಿಕ	?	18. ಶ.	?	III. 430
796	ವೇದಾಂತ ವಿಚಾರ	ಮಾತಂಗ ?	?	ಶ್ಲೋ + ಟೀ	K. 355/16
797	ವೇಶ್ಯಾನಾಟಿಕಾ ಸಂಚಾರ	ಶಾಂತಕವಿ	1856-1920	?	III. 467
798	ವೈಕುಂಠ ನಾರಾಯಣ ಶತಕ	?	1750	ಷ;	III. 315
799	ವೈದ್ಯಕಂದ	ಬ್ರಹ್ಮ	1750	ಕಂ; 616	III. 86-7
800	ವೈದ್ಯಾಮೃತ	ಚಿಕುಪಾಧ್ಯಾಯ	1672	ಟೀ	II. 467
801	ವೈನತೇಯ ಶತಕ	ಲಕ್ಷ್ಮೀನಾರಾಯಣಪ್ಪ	18. ಶ.	?	III. 430
802	ವೈಷ್ಣವ ಧರ್ಮ	?	18. ಶ.	?	III. 430

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
803	ಶಕುನ ಪ್ರಪಂಚ	ಚಾಕರಾಜ	1500	ಕಂ + ವ್ನ; 25.620	II. 172–74
804	ಶಕುನ ಪ್ರಪಂಚ	ದೇವ	1725	?	III. 31 [ಅಲಭ್ಯ]
805	ಶಕುನ ಸಾರ	ಲಕ್ಷ್ಮಣಾಂಕ	1500	ವ್ನ., 8-312	II. 172-73
806	ಶತಕತ್ರಯ (ಭರ್ತೃಹರಿ) ಟೀಕು	ಲಕ್ಷ್ಮಣ ಸೂರಿ	?	ಟೀ	K. 803
807	ಶತಕಂಧರ ಚರಿತೆ	ಅಂ/ 'ಸಿಬಿಪುರ ನಿಲಯವಾಸ ನರಸಿಂಹ'	?	ಯ	K. 208/1
808	ಶತಕಂದರ ರಾಮಾಯಣ	?	19. ಶ.	?	III. 430
809	ಶತಾಸ್ಯ ರಾವಣ ಕಾಳಗ	ವಿಷ್ಣು ಸಭಾಹಿತ	19. ಶ.	ಯ	ಯ ಬ. 253
810	ಶನಿತ್ರಯೋದಶೀ ವ್ರತ	ವೆಂಕಟರಾಮಶಾಸ್ತ್ರಿ	1823	ಟೀ	III. 182-83
811	ಶನಿ ಮಹಾತ್ಮ್ಯೆ	ನಂಜುಂಡ ಭಾಗವತ	1847-1906	?	ಹರಿ. ಕ (ಪೀಠಿಕೆ)
812	ಶನೀಶ್ವರನ ಕಥೆ	?	?	ಗ	K B. 193
813	ಶನೀಶ್ವರಾ ದಂಡಕ	?	?	ದಂಡಕ	K B. 324/4
814	ಶಬರಧನಂಜಯ ವಿಲಾಸ ಮಂಜರಿ	ನಂಜಯ್ಯ	1750	ಯ	III. 329
815	ಶಬರ ನಾಟಕ	ಅಂ/ 'ಶಿವಪುರ ನಿವಾಸವೀರ'	?	ಯ	K. B. 574
816	ಶಬ್ದ ಮಂಜರಿ	ಶ್ರೀರಂಗ ಪಟ್ಟಣದ ಕೃಷ್ಣಮಾಚಾರ್ಯ	1830	ಗ	III. 188

817	ಶಶಿರೇಖಾ ಪರಿಣಯ	?	?	?			ಭಾ ಕಾ ವಿಸಾ. 473
818	ಶಂಕರ ಭಾರತಿ	?	17. ಶ.	?			III. 430
819	ಶಂಕರ ರಾಮಾಯಣ*	ತಿಮ್ಮಣ್ಣ	1700	ಭಾ. ಷ., 47.3300			III. 312–13
820	ಶಂಕರ ವಿಜಯ	?	1750	ಗ			III. 320
821	ಶಂಕರ ವಿಜಯದ ಕಥೆ	?	19. ಶ.	?			III. 430
822	ಶಂಕರ ವಿಜಯ ಸಂಗ್ರಹ	?	?	?			III. 430
823	ಶಂಬರಾಸುರ ಕಾಳಗ	ಅಂ 'ನರಹರಿ'	?	ಯ			K B. 140
824	ಶಂಬರಾಸುರನ ಕಾಳಗ	ಸುಬ್ರಹ್ಮಣ್ಯ	1840	ಯ., 385			III. 192–93; ಯ ಬ. 249 ?
825	ಶಾಕುಂತಲ	ಶಾಂತಕವಿ	1856–1920	ನಾ			III. 467
826	ಶಾಕುಂತಳ	ಚಿಕ್ಕಮ್ಮ ಲಾಟಿಂ ನೀರಭಟ್ಟರ ಶಾಮಣ್ಣ	19. ಶ.	?			III. 239
827	ಶಾಂತಿ ಪರ್ವ	?	?	ಗ			K. 82
828	ಶ್ರೀಕಥೆ	ದೇವ	1725	?			III. 31 [ಅಲಭ್ಯ]
829	ಶ್ರೀನಿವಾಸ ಕಲ್ಯಾಣ	ಪರಿಶೇಷ	1800	ಯ			III. 160; ಹ ಕ., 200-01
830	ಶ್ರೀನಿವಾಸ ಕಲ್ಯಾಣ	ಅಂ/ 'ಗುರುರಂಗ ವಿಠಲ'	?	ಯ			K B. 389
831	ಶ್ರೀನಿವಾಸ ಕಲ್ಯಾಣ	ವಿಷ್ಣುಕವಿ	19. ಶ.	ಯ			III. 230
832	ಶ್ರೀಮತೀ ಸ್ವಯಂವರ	ಶಾಂತಕವಿ	1856–1920	ಕೀರ್ತನೆ			III. 467

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
833	ಶ್ರೀ ಮತ್ಶೈನ್ನಾಚಾರ್ಯ ಪ್ರಭಾವದೀಪಿಕಾ	?	?	ಗ	K B. 242
834	ಶ್ರೀಮದಬ್ರಹ್ಮ ಸೂತ್ರದ ಕನ್ನಡ ಅನುವಾದ	?	?	ಗ ?	ಪ ಸಾ. 12.4 (170)
835	ಶ್ರೀರಂಗ ಮಾಹಾತ್ಮ್ಯ	ಚಿಕುಪಾಧ್ಯಾಯ	1672	ಗ., ಪರಿಚ್ಛೇದ. 10	II. 483
836	ಶ್ರೀರಂಗ ಮಾಹಾತ್ಮ್ಯ	ಮಲ್ಲಿಕಾರ್ಜುನ	1678	ಚಂ., ಆ. 12	II. 498 500
837	ಶ್ರೀರಂಗ ಮಾಹಾತ್ಮ್ಯ	?	1680	ಚಂ.	III. 300
838	ಶ್ರೀರಂಗ ಮಾಹಾತ್ಮ್ಯ	ರಂಗಾಚಾರ್ಯ	1570	ಗ., ಪರಿ. 10	II. 300
839	ಶ್ರೀರಂಗ ಮಾಹಾತ್ಮ್ಯ	ಸಿಂಗರಾಚಾರ್ಯ	1770	ಗ., ಅ. 10	III. 133-34
840	ಶ್ರೀರಂಗ ಮಾಹಾತ್ಮ್ಯ	ಸೀತಾರಾಮಸಿಂಗ್	19. ಶ.	ಗ?	III. 232
841	ಶ್ರೀರಂಗ ಮಾಹಾತ್ಮ್ಯ	ದೊಡ್ಡತಿಮ್ಮದಾಸ	18. ಶ.	?	III. 431
842	ಶ್ರೀರಂಗ ಮಾಹಾತ್ಮ್ಯ	ಯಗ್ಗಮ್ಮ	19. ಶ.	ಹಾ	ಕ ನಂ. 3.6 (2)
843	ಶ್ರೀರಂಗರಾಜ ವಂಶಪ್ರಭಾವ	?	?	ಗ	III. 431
844	ಶ್ರೀರಾಮ ಪಟ್ಟಾಭಿಷೇಕ	ತಿ. ಶ್ರೀನಿವಾಸ ಅಯ್ಯಂಗಾರ್	19. ಶ.	ನಾ	ಕ ನಂ. 3.5 (8)
845	ಶ್ರೀವಚನ ಭೂಷಣ	?	17. ಶ.	ಗ	III. 431
846	ಶ್ರೀವೈಷ್ಣವಾಹ್ನಿಕ	?	17. ಶ.	ಗ ?	III. 431
847	ಶ್ರೀಶೈಲ ಮಹಾತ್ಮೆ	?	?	ಭಾ. ಷ., 5.212	I K S. ಜಾನಪದ
848	ಶುಕಮುನಿ ಚಾರಿತ್ರ	?	?	ವಾ. ಷ., 23	K R I II. ಸಂ. 38

849	ಶೃಂಗಾರದ ಹಾಡುಗಳು	ಚಿಕುಪಾಧ್ಯಾಯ	1672	ಹಾ., 63	II. 489
850	ಶೃಂಗಾರ ಮಂಜರಿಯು ಟೀಕೆ	?	18. ಶ.	ಟೀ	III. 431
851	ಶೃಂಗಾರ ರತ್ನಾಕರ	ಕೃಷ್ಣವೀರ	?	ಹಾ	K A. 29
852	ಶೃಂಗಾರ ಶತಕದ ಸಾಂಗತ್ಯ	ಚಿಕುಪಾಧ್ಯಾಯ	1672	ಸಾಂ., 102	II. 485
853	ಶೃಂಗಾರ ಸ್ವಾಗರ	ಶಾಂತಕವಿ	1856-1920	?	III. 467
854	ಶೇಷ ಕಲಾನಿಧಿ	ತಿರುಮಲಾರ್ಯ ?	17. ಶ.	ಚಂ	III. 431
855	ಶೇಷಗರ್ವಾಪಹರಣ	ಹ. ರಾಮಭಟ್ಟ	19. ಶ.	ಯ	ಯ ಬ. 225
856	ಶೇಷಧರ್ಮ	ಚಿಕ್ಕದೇವರಾಜ	1672-1704	ಟೀ	II. 459
857	ಶೇಷಧರ್ಮ	ಚಿಕುಪಾಧ್ಯಾಯ	1672	ಟೀ., ಅ. 25	II. 483
858	ಸತ್ಯಭಾಮಾ ಕಲ್ಯಾಣ	?	18. ಶ.	?	III. 432
859	ಸತ್ಯಧರ್ಮ ಚರಿತ್ರೆ	ತಿ. ಶ್ರೀನಿವಾಸ ಅಯ್ಯಂಗಾರ್	19. ಶ.	ಸಾ	ಕ ಸಂ. 3.5 (8)
860	ಸದ್ವರ್ತನ	ಶಾಂತಕವಿ	1856-1920	?	III. 467
861	ಸನ್ಮಾರ್ಗವಾಕ್ಯ	?	1700	ಗ	III. 311
862	ಸಭಾಪರ್ವ	ಶೇಷದಾಸ	19. ಶ.	ಯ	III. 239
863	ಸಭಾಪರ್ವ	ಅಂ/ 'ವೆಂಕಟೇಶಂ'	?	ಯ	K A. 107/5
864	ಸಭಾಪರ್ವ	ಹಟ್ಟಿಯಂಗಡಿ ನಂಜಯ್ಯ	19. ಶ.	ಯ	III. 392
865	ಸಭಾ ಲಕ್ಷಣ	ಜಿನಕಯ್ಯ ಭಾಗವತ	19. ಶ.	ಯ	III. 393
866	ಸಭಾ ಲಕ್ಷಣ	ವೆಂಕಣ್ಣಕವಿ	1750	ಯ	ಯ ಬ. 224

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
867	ಸಮುದ್ರ ಮಥನ	ನಂಜುಂಡ ಭಾಗವತ	1847–1906	?	ಹ ರಿ. ಕ (ಪೀಠಿಕೆ)
868	ಸಮುದ್ರ ಮಥನ ಕಥೆ	ಶ್ರೀನಿವಾಸ	1881	ಯ	K A. 87/1
869	ಸರಜಾ ಹನುಮೇಂದ್ರ ಚರಿತೆ	ಕೃಷ್ಣಶರ್ಮ	1700	ಚಂ	II. 528-29
870	ಸರಸ್ವತೀ ವಿಲಾಸ	?	16. ಶ.	?	III. 432
871	ಸಂಕ್ಷಿಪ್ತ ರಾಮಾಯಣ	ಸಜೀಪ ರಾಮಕೃಷ್ಣಯ್ಯ	19. ಶ.	ಗ	ಸಿಗ್ರಂಚಕೋ. 117
872	ಸಂಕೀರ್ತನ ಮಾಲೆ	ಮೂಲಿಕೆ ರಾಮಕೃಷ್ಣ ಕವಿ	19. ಶ.	ಯಾ	ಸಿಗ್ರಂಚಕೋ. 116
873	ಸಂಕ್ಷೇಪ ಭಾಗವತ	ಹರಿದಾಸ	1750	ಭಾ. ಷ., 53	III. 103-04
874	ಸಂಕ್ಷೇಪ ಮುದ್ರಾರಾಕ್ಷಸ	ಕೆ. ರಾಮಸ್ವಾಮಿ ಅಯ್ಯಂಗಾರ್	19. ಶ.	?	III. 465
875	ಸಂಕ್ಷೇಪ ರಾಮಾಯಣ ಟೀಕೆ	?	19 ಶ.	ಟೀ	III. 432
876	ಸಂಕ್ಷೇಪ ರಾಮಾಯಣ (ವಾಲ್ಮೀಕಿ) ಸರ್ಗ 1.	?	?	ಟೀ	III. 464
877	ಸಂಕೋಚ ಭಾರತ	ಅ?/ 'ಮನೋಹರ'	?	ಷ	ಶಸಾ. 12.4 (176)
878	ಸಂಗೀತ ಕಲ್ಯಾಣ ಪಾರಿಜಾತ	ಕೆ. ರಾಮಸ್ವಾಮಿ ಅಯ್ಯಂಗಾರ್	19. ಶ.	ಯಾ	III. 465
879	ಸಂಗೀತದ ಕೃತಿಗಳು	ಜಯರಾಯಾಚಾರ್ಯ	19. ಶ.	ಯಾ	III. 466
880	ಸಂಧಾನ ಸೇನಾ ಪುರಾಣ ಟೀಕೆ	?	?	ಟೀ	III. 432

881	ಸಂಸಾರ ನಿರ್ವಹಕ್ರಮ ಮತ್ತು ಗೃಹಶಿಕ್ಷಣ	ಕೊ. ರಾಮಸ್ವಾಮಿ ಅಯ್ಯಂಗಾರ್	19. ಶ.	ಗ ?	III. 465
882	ಸ್ಯಮಂತಕ ಮಣಿ ಕಥೆ	?	17. ಶ.	ಸಾಂ	III. 432
883	ಸ್ಯಮಂತಕ ಮಣಿ ಚರಿತ	ಶಾಂತಕವಿ	1856-1920	?	III. 467
884	ಸ್ವಪ್ನಾಧ್ಯಾಯ ಟೀಕೆ ಶತಕ	ಶ್ರೀರಂಗಪಟ್ಟಣದ ರಂಗಶಾಸ್ತ್ರಿ	1738	ಟೀ	III. 432
885	ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ	ಚಿಕುಪಾಧ್ಯಾಯ	1672	ಚಂ., ಅ 9	II. 480-81
886	ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ	ಕಂ. ನರಸಿಂಹಶಾಸ್ತ್ರಿ	?	?	K B. 109
887	ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ	ರಂಗರಾಜ	1660	ಗ	II. 449-50
888	ಸಾಮುದ್ರಿಕ ಶಾಸ್ತ್ರಸಾರ ಸಂಗ್ರಹ	ರಾಮಸೂರಿ ?	?	ಟೀ	K. 446
889	ಸಾರಂಗಧರನ ಕಥೆ	ನಂಜುಂಡ ಭಾಗವತ	1847-1906	?	III 331
890	ಸಾರಂಗಧರನ ಕಥೆ	ರಂಗರಾಜೇಂದ್ರ	?	?	III. 432
891	ಸಾಲಗ್ರಾಮ ಮಾಹಾತ್ಮ್ಯ	?	19. ಶ.	?	III. 432
892	ಸಾಲಗ್ರಾಮ ಲಕ್ಷಣ ಟೀಕೆ	?	18. ಶ.	?	III. 432
893	ಸಾವಿತ್ರೀ ಚರಿತ್ರೆ	?	19. ಶ.	ಯ	III. 432
894	ಸಿರಿಯಾಳ ಚರಿತ್ರೆ	?	1830	?	III. 325
895	ಸಿರಿಯಾಳ ರಾಜ	ಜಯರಾಮಾಚಾರ್ಯ	19. ಶ.	?	III. 466
896	ಸಿರಿಯಾಳನ ಕಥೆ	ನಂಜುಂಡ ಭಾಗವತ	1847-1905	?	ಹ ರಿ ಕ (ಟೀಕೆ)
897	ಸೀತಾ ಕಲ್ಯಾಣ	ಹು. ರಾಮಣ್ಣ ವೆಂಕಟಸುಬ್ಬಯ್ಯ	19. ಶ.	ನಾ	ಸಿ ಗ್ರಂಥಕೋಶ. 121

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು,	ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
898	ಸೀತಾಕಲ್ಯಾಣ	ಹೆ. ಗಿರಿಯಮ್ಮ	1750	ಹಾ; 87		III. 69–71
899	ಸೀತಾದೇವಿಯ ಮೇಲೆ ಹಾಡು	?	17. ಶ.	ಹಾ		III. 433
900	ಸೀತಾ ವಿಯೋಗ	ಗೆ. ಶಾಂತಯ್ಯ	1830	ಯ		III. 188
901	ಸೀತಾ ಸ್ವಯಂವರ	ಶಾಂತಕವಿ	1856-1920	ನಾ		III. 467
902	ಸುಗ್ರೀವ ಸಖ್ಯ	ತಿ ಶ್ರೀನಿವಾಸಯ್ಯಂಗಾರ	19. ಶ.	?		ಕನಂ. 3.5 (8)
903	ಸುಧಾಮ ಕಥೆ	ವಾನ ಮಧುರೆ ದಾಸ	1780	?		III. 144
904	ಸುಧಾಮ ಚರಿತ್ರದ ಕಥೆ	?	?	ಗ		OUL ಸಂ. 283
905	ಸುಧಾಮ ಚರಿತೆ	ಸೂರಭಟ್ಟ	?	ಯ		ಯುಬ. 226
906	ಸುಧನ್ವ ಚರಿತ್ರೆ	ಗಿ ತಮ್ಮಯ್ಯ	19. ಶ.	ನಾ		III. 228
907	ಸುಧನ್ವ ಕಾಳಗ	ವಿಷ್ಣು ಸಭಾಹಿತ	19. ಶ.	ಯ		ಯಕ್ಷಗಾನ 1.1 (8)
908	ಸುಧನ್ವನ ಕಾಳಗ	ಗೇ. ಶಾಂತಯ್ಯ	1830	ಯ		III. 326
909	ಸುಧನ್ವನ ಕಾಳಗ	ಮೂಲಿಕೆ ರಾಮಕೃಷ್ಣ ಕವಿ	19. ಶ.	ಯ		ಯುಬ. 265
910	ಸುಧನ್ವನ ಕಾಳಗ	ಅಂ 'ಹೈಡಿಂಬಪುರ ಉರಗೇಯ	19. ಶ.	ಯ		ಯುಬ. 261
911	ಸುಧನ್ವ ವಧ	ಶಾಂತಕವಿ	1856-1920	ನಾ		III. 467
912	ಸುಧಾಮ ಚರಿತ್ರೆ	ಪುರಂದರದಾಸ	16. ಶ.	?		ಕನು. 2.16 (255)
913	ಸುಭದ್ರಾ ಕಲ್ಯಾಣ	ಗೇ. ಶಾಂತಯ	1830	ಯ		III. 188

914	ಸುಭದ್ರಾ ಕಲ್ಯಾಣ	ವೆಂಕಟ್	19. ಶ.	ಯ	III. 239
915	ಸುಭದ್ರಾ ಕಲ್ಯಾಣ	ಐ. ಭೀಮರಾಯ	1835-1915	ನಾ ?	ಜಯಂತಿ 19.7 (271-73)
916	ಸುಭದ್ರಾ, ರುಕ್ಮಿಣಿ, ಸತ್ಯಭಾಮೆಯರ ಮಯ್ಯದ ಹಾಡು	ಐ. ಭೀಮರಾಯ	1835-1925	ಹಾ	ಜಯಂತಿ 17.6 (271-73)
917	ಸುಯಜ್ಞೋಪಾಧ್ಯಾಯ	ಕೊ. ರಾಮಸ್ವಾಮಿ ಅಯ್ಯಂಗಾರ್	19. ಶ.	?	III. 466
918	ಸುಂಯೋಗ ಚಾರಿತ್ರ	ಗುರುಪ್ರಸಾದ	1650	ವಾ. ಷ; 11.775	II. 262
919	ಸುರಥ ಸುಧನ್ವರ ಕಾಳಗ	ಧಾ. ತಿಮ್ಮಪ್ಪದಾಸ	19. ಶ.	ಯ	III. 225
920	ಸುಲೋಚನೆ ಚರಿತ್ರೆ	ಹ. ರಾಮಭಟ್ಟ	19. ಶ.	ಯ	ಯಬ. 225
921	ಸುಂದರಾ ನಾಟಕ	ತುರಮುರಿ ಶೇಷಗಿರಿರಾವ್	1827-84	ನಾ	ಕಸ. 29.4 (8)
922	ಸೂರ್ಯ ಸಿದ್ಧಾಂತ ಭಾಷ್ಯ ಟೀಕೆ	?	17. ಶ.	ಟೀ	III. 433
923	ಸೇತು ಮಾಧವ	ಹ. ರಾಮಭಟ್ಟ	19. ಶ.	ಯ	ಯಬ. 225
924	ಸೇತು ಮಾಹಾತ್ಮ್ಯ	ವೈದ್ಯೇಶ್ವರ ಭಕ್ತ ?	1715	ಛಾ. ಷ; 41.1625	III. 4-5
925	ಸೈನ್ಯ ಭರತಿ	ಶಾಂತಕವಿ	1856-1920	?	?
926	ಸೋಮಶೇಖರ ಚಿತ್ರಶೇಖರ ಕಥೆ	ನಂಜುಂಡ ಭಾಗವತ	1847-1907	ಯ ?	III. 206-07
927	ಸೌಗಂಧಿಕಾ ಪರಿಣಯ	ವೆಂಕಟ	19. ಶ.	ಯ ?	III. 239
928	ಸೌಗಂಧಿಕಾ ಪರಿಣಯ	ಶಾಂತಕವಿ	1856-1930	?	ಸಿದ್ಧಂಚಕೋ. 96
929	ಸೌಭದ್ರ	ಶಾಂತಕವಿ	1856-1930	ನಾ	III. 467

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
930	ಸೌಂದರ್ಯ ಮೋಹನ ನಾಟಕ	ನಂಜುಂಡ ಭಾಗವತ	1847-1906	ನಾ	ಹರಿ. ಕ. (ಪೀಠಿಕೆ)
931	ಹನುಮದ್ವಿಜಯ	?	18. ಶ.	ಯ	III. 433
932	ಹನುಮದ್ವಿಲಾಸ	ವೆಂಕಾಮಾತ್ಯ	1770	ಷ	III. 129, 133
933	ಹನುಮದ್ವಿಲಾಸ	ವೆಂಕಟನರಸಯ್ಯ	19. ಶ.	?	III. 229
934	ಹರಕೆ ಸೋಬಾನೆ	?	1825	ಹಾ., 10	III 324
935	ಹರಗರ್ವ ಪರಿಹಾರ	ಶಾಂತಕವಿ	1856-1920	ನಾ	III. 467
936	ಹರಿಕಥಾಮೃತಸಾರ (ಜಗನ್ನಾಥದಾಸ)	ಕುಂಟೋಜಿದಾಸರ ಶಿಷ್ಯ	?	ಟೀ	ಹ ಕ ಸಾ. ಪೀಠಿಕೆ v, vi
937	ಹರಿಕಥಾಮೃತಸಾರ (ಜಗನ್ನಾಥದಾಸ)	ಮೋ., ಶೇಷದಾಸ	?	ಟೀ	ಹ ಕ ಸಾ. ಪೀಠಿಕೆ v, vi
938	ಹರಿಗೋಲು ಕಥೆ	ವ್ಯಾ. ವೆಂಕಟೇಶ	?	ಯ	K B. 174
939	ಹರಿ ಚಾರಿತ್ರ	ಪ್ರೋಲಾಳ್ವ ದಂಡನಾಥ	1224	ಷ.	I 399 [ಅಲಭ್ಯ]
940	ಹರಿಭಕ್ತಿ ರಸಾಯನ	ಚಿದಾನಂದ	1725	ಭಾ. ಷ., 5.301	III. 36-7
941	ಹರಿಮಿತ್ರೋಪಾಖ್ಯಾನ	ಶಾಂತಕವಿ	1856-1920	ಕೀರ್ತನೆ	III. 467
942	ಹರಿಲೀಲಾ ವಿಲಾಸ	ಶ್ರೀನಿವಾಸ?	1881	ಯ	K A. 87/7
943	ಹರಿಲೀಲೆ	ವರದಪ್ಪ	?	ಚಾ	GOML VI. ಸಂ. 1108
944	ಹರಿಲೀಲೆ	?	18. ಶ.	?	III. 433
945	ಹರಿನಾಮಾನುಕ್ರಮಣಿಕೆ	?	19. ಶ.	?	III. 433

946 ಹರಿವಿಲಾಸ	ತಿಮ್ಮ	?	ಸಾಂ	GOML VI. ಸಂ. 1109
947 ಹರಿಶ್ಚಂದ್ರ ಚರಿತ್ರೆ	?	?	ಗ	K B. 364
948 ಹರಿಶ್ಚಂದ್ರ ಚರಿತ್ರೆ	?	19. ಶ.	ಯ	III. 433
949 ಹರಿಶ್ಚಂದ್ರ ವಿಲಾಸ	ಶ್ರೀನಿವಾಸ ?	1881	ಯ	K A 87/5
950 ಹರಿಶ್ಚಂದ್ರ ಸತ್ಯಪರೀಕ್ಷೆ	ಶಾಂತಕವಿ	1856-1920	ಭಾಗ 1, 2	III. 467
951 ಹರಿಹರ ದೇವಸ್ಥಾನದ ಮಹಾತ್ಮ್ಯೆ	?	18. ಶ.	?	III. 433
952 ಹರಿಹರ ನಾಮಾಮೃತ ಸಂಗ್ರಹ	ಪಾಂಡುರಂಗಯ್ಯ	?	?	III. 232
953 ಹರಿಹರಾಂಕನ ಸ್ತೋತ್ರ	?	17. ಶ.	?	III. 433
954 ಹಸ್ತಿಗಿರಿ ಮಹಾತ್ಮ್ಯೆ	ಚಿಕುಪಾಧ್ಯಾಯ	1672	ಚಂ., 18-1172	II. 473-15
955 ಹಸ್ತಿಗಿರಿ ಮಹಾತ್ಮ್ಯೆ ಟೀಕೆ	?	18. ಶ.	ಟೀ	III. 433
956 ಹಾಡು	ಎ. ಅಣ್ಣಾಜಿರಾಯ	19. ಶ.	ಹಾ	III. 237
957 ಹಾಡು	ಅಪ್ಪಯ್ಯ	1705	ಹಾ	III. 1-2
958 ಹಾಡು	ಎಣ್ಣೆಮಡಿ ವೆಂಕಟರಮಣಯ್ಯ	19. ಶ.	ಹಾ	ಉ ಕ ಗ್ರಂ.
959 ಹಾಡು	ಗೇ. ವೆಂಕಟರಮಣಯ್ಯ	19. ಶ.	ಹಾ	III. 392
960 ಹಾಡು	ತಿಮ್ಮಪ್ಪದಾಸ	19. ಶ.	ಹಾ	ಜೀವನ. 29.6 (1)
961 ಹಾಡು	ನಾಡಕರ್ಣಿ ಅಣ್ಣಪ್ಪಯ್ಯ	19. ಶ.	ಹಾ	III. 232
962 ಹಾಡು	ಪತ್ರೆಯ್ಯ	1700	ಹಾ	II 552
963 ಹಾಡು	ನುಳಿಕೆ ರಾಮಕೃಷ್ಣ ಕವಿ	19. ಶ.	ಹಾ	III. 395

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
964	ಹಾಡು	ಮೂಲಿಕೆ ಲಕ್ಷ್ಮೀನಾರಣಪ್ಪಯ್ಯ	19. ಶ.	ಹಾ	III. 396
965	ಹಾಡು	ವೆಂಕಟಸುಬ್ಬಮ್ಮ	19. ಶ.	ಹಾ	III. 233
966	ಹಾಡು	ಹ. ಭೀಮಮ್ಮ	19. ಶ.	ಹಾ	ಕ ಕ. 301-04
967	ಹಾಡು	ಹ. ಮಂಜಯ್ಯ	19. ಶ.	ಹಾ	III. 392
968	ಹಾಡು	ಹ. ರಾಮಚಂದ್ರಯ್ಯ	19. ಶ.	ಹಾ	III. 393
969	ಹಾಡು	ಹಾಡಿನ ರಂಗಮ್ಮ	19. ಶ.	ಹಾ	III. 236
970	ಹರಿಶ್ಚಂದ್ರ	ತಿ. ಶ್ರೀನಿವಾಸಯ್ಯಂಗಾರ್	19. ಶ.	ನಾ	ಕ ಸಂ. 3.5 (8)
971	ಹಾಲಾಸ್ಯ ಮಾಹಾತ್ಮ್ಯ	ವೆಂಕಟೇಶ	1740	ಚಂ	III. 50-3
972	ಹಿಂದೂ ದೇಶದ ಚರಿತ್ರ ನಿರ್ವಚನ	ಶ್ರೀನಿವಾಸ ಕವಿ	19. ಶ.	ಪ	III. 237
		ಪದ್ಯ ಕಾವ್ಯ			
973	ಹೇಮರಾಜ ವಿಲಾಸ	ಎಂ. ಬಿ. ಶ್ರೀನಿವಾಸಯ್ಯಂಗಾರ್	19. ಶ.	ನಾ	III. 224
974	ಹೊಸಗನ್ನಡ ನುಡಿಗನ್ನಡಿ	ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ	1830	ಗ	III. 188
975	ಹೊಯ್ಸಳರ ಚರಿತ್ರೆ	ವಿಶ್ವೇಶ್ವರಾನಂದ ಸರಸ್ವತಿ	19. ಶ.	ಗ	III. 238
976	?	ಚಂದ್ರಭಟ	1099	?	I. ಅನುಬಂಧ I (ಪು. 11)

977	?	ದೇವರಾಚಾರ್ಯ	1650	?	II. 379
978	?	ರಾಮಕವಿ	1725	?	III. 27-8
979	?	ವೆಂಕಕವಿ	1875	?	III. 184
980	?	ಹ. ರಾಮಚಂದ್ರಯ್ಯ	19. ಶ.	ಯ	III. 393
981	?	'ಸರಸ ಕವೀಶ್ವರ'	1275	?	I. 455

(ಮುಗಿದುದು)

★ ಎಸ್. ಶಿವಣ್ಣ

ಒರೆಗಲ್ಲು

ಶಾಸನಗಳಲ್ಲಿ ಆದಿಗುಣವರ್ಮನ ಪದ್ಯ

ಪಂಪ ಪೂರ್ವಯುಗದ ಅಜ್ಞಾತ ಕವಿಗಳಲ್ಲಿ ಗುಣವರ್ಮನೂ ಒಬ್ಬ. ಶಬ್ದಸ್ಮೃತಿ, ಕಾವ್ಯಾವಲೋಕನ, ಕರ್ಣಾಟಕಭಾಷಾಭೂಷಣ, ಸೂಕ್ತಿಸುಧಾರ್ಣವ, [illegible] ಮಂಗರಾಜನ ಮತ್ತು ಕಾವ್ಯಸಾರಗಳಲ್ಲಿ ಈತನ ಕವಿತ್ವದ ಅವಶೇಷಗಳು ದೊರೆಯುತ್ತವೆ. ಇವುಗಳಲ್ಲಿ ಕಾವ್ಯಸಾರ ಸಂಕಲನದ ೨೦ ಪದ್ಯಗಳಿಗೆ ಕೇವಲ 'ಶೂದ್ರಕ' ಎಂದೂ, ಒಂದು ಸಲಮಾತ್ರ ಗುಣವರ್ಮನ ಶೂದ್ರಕ (ಕಾಸಾ ೧೩) ಎಂದೂ ಆಕರ ದೊರೆಯುತ್ತದೆ. ಒಂದು ಸಲವೇ ಇರುವ ಈ ಸೂಚನೆಯ ಆಧಾರವನ್ನು ಬಿಟ್ಟರೆ ಶೂದ್ರಕವು ಗುಣವರ್ಮನದೆಂದು ನಂಬುವುದೇ ಕಷ್ಟ. ಅವಲೋಕನ,-ಭೂಷಣ, ದರ್ಪಣ ಮತ್ತು ಸುಧಾರ್ಣವಗಳಲ್ಲಿ ಸೇರಿದಂತೆ ಕಾವ್ಯಸಾರದಲ್ಲಿಯೂ ಶೂದ್ರಕದ ಪದ್ಯಗಳು ಹೆಚ್ಚಾಗಿರುವುದರಿಂದ ಅಭಿನವವಾದಿ ವಿದ್ಯಾನಂದನು ಈ ಶಾಸ್ತ್ರ ಮತ್ತು ಸಂಕಲನ ಗ್ರಂಥಗಳಿಂದಲೇ ಶೂದ್ರಕದ ಪದ್ಯಗಳನ್ನು ಸ್ವೀಕರಿಸದೇ ಶೂದ್ರಕದ ಒಂದು ಹಸ್ತಪ್ರತಿಯಿಂದಲೇ ಕೈಮುಟ್ಟಿ ಆಯ್ದುಕೊಂಡಿರುವ ಸಾಧ್ಯತೆಯಿದೆ. ಹೀಗಾಗಿ ಆ 'ಒಂದು ಸಲದ ಹೇಳಿಕೆ' ಸತ್ಯವೆಂದು ಭಾವಿಸಿ 'ಶೂದ್ರಕ'ವು ಗುಣವರ್ಮನ ಕೃತಿಯೆಂದು ಒಪ್ಪಿಕೊಳ್ಳಬೇಕಾಗಿದೆ.

ಈತನನ್ನು ಹಾಗೂ ಈತನ ಕೃತಿಗಳನ್ನು ಕುರಿತು ಈ ವರೆಗೆ ಹಲವು ವಿದ್ವಾಂಸರು ವಿವೇಚಿಸಿರುವರು. ಇಲ್ಲಿಂದ ಒಂದು ಹೆಜ್ಜೆ ಮುಂದುವರಿದು ಶೂದ್ರಕದ ಸಮುದ್ರ ವರ್ಣನೆಯ ಒಂದು ಪದ್ಯವನ್ನು ಶಾಸನಗಳಿಂದ ಮಂಡಿಸಿ ಹೇಳುವುದು ಈ ಲೇಖನದ ಉದ್ದೇಶ.

ಕನ್ನಡ ಸಾಹಿತ್ಯ ಹಲವಾರು ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಳ್ಳುತ್ತ ಸಾಗಿ ಬಂದರೂ ಶಾಸನ ಮಾತ್ರ ಬಹುತೇಕ ಆರಂಭದಿಂದ ಕೊನೆಯವರೆಗೂ ಸಾಮಾನ್ಯವಾಗಿ ಚಂಪೂಪ್ರಕಾರವನ್ನೇ ಬಳಸಿಕೊಳ್ಳುತ್ತ ಬಂದಿತು. ಹೀಗಾಗಿ ಕನ್ನಡ ಶಾಸನ ಕರ್ತೃಗಳು ಆಗಾಗ ಚಂಪೂ ಕೃತಿಗಳಿಂದ ಸಂದರ್ಭೋಚಿತ ಪದ್ಯಗಳನ್ನು ಆಯ್ದು ಕೊಂಡಿರುವರು. ಅಂಥವುಗಳಲ್ಲಿ ಗುಣವರ್ಮನ ಅನುಪಲಬ್ಧ ಶೂದ್ರಕದ ಸಮುದ್ರ ವರ್ಣನೆಯ ಪದ್ಯವೂ ಒಂದು.

ಡಿ. ಆರ್. ನರಸಿಂಹಾಚಾರ್ ಅವರು ಕಾವ್ಯಾವಲೋಕನ (೧೯೦೩)ದ Introduction ದಲ್ಲಿ "Gunavarma's Verse describing the sea is quoted in Chanarayapattna 197" ಎಂದು ಹೇಳುತ್ತ, ಕಾವ್ಯಸಾರದಲ್ಲಿಯ 'ಗಂಭೀರಸ್ಫಾರ...' ಎಂಬ ಶೂದ್ರಕಕ್ಕೆ ಸಂಬಂಧಿಸಿದ ಸಮುದ್ರವರ್ಣನೆಯ ಪದ್ಯವನ್ನು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಬಿದರೆ ಗ್ರಾಮದ ಶಾಸನ (ಕ್ರಿ. ಶ. ೧೦೨೪) ದಲ್ಲಿ ಕಂಡು ಹೇಳಿದರು. ಈ ಪದ್ಯ ಬಳ್ಳಾರಿ ಜಿಲ್ಲೆಯ ಮಾಗಳ (ಮಾಗಳ) ಶಾಸನ (ಕ್ರಿ. ಶ. ೧೦೭೫) ದಲ್ಲಿಯೂ ಇದೆಯೆಂದು ಶ್ರೀ ಬಿ. ಬಿ. ದತ್ತ ಸೂಚಿಸಿದರು.

(Memoirs of the archeological Survey of India XIII. P. 3). ಈ ಪದ್ಯ ಕೂಡ್ಲಿಗಿ ತಾಲೂಕಿನ ಬೆಣ್ಣೆಕಲ್ಲು (ಕ್ರಿ. ಶ. ೧೨೨೬). ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಸೋಗಿ ಶಾಸನ (ಕ್ರಿ. ಶ. ?)ಗಳಲ್ಲಿಯೂ ಇದ್ದುದಾಗಿ ಇತ್ತೀಚೆ ನನ್ನ ಗಮನಕ್ಕೆ ಬಂದಿತು. ಈ ಶಾಸನಗಳಲ್ಲಿ ಮತ್ತು ಸೂಕ್ತಿ ಸುಧಾರ್ಣವ, ಕಾವ್ಯಸಾರಗಳಲ್ಲಿ ಬರುವ ಈ ಪದ್ಯವನ್ನು ಪಾಠದೃಷ್ಟಿಯಿಂದ ಜೊತೆ ಜೊತೆಯಾಗಿಟ್ಟು ನೋಡಬಹುದು.

ಒಂದನೆಯ ಚರಣ:

ಸೂಕ್ತಿ: ಗಂಭೀರಸ್ಫಾರ ಫೇಣಾ ಬಹಳ ಪರಿಪ್ರತೋಲ್ಲೋಲ ಕಲ್ಲೋಲ ಮಾಲಾ
ಕಾ. ಸಾ: ಗಂಭೀರಸ್ಫಾರ ಫೇಣಾ ಬಹಳ ಪರಿವೃತೋಲ್ಲೋಲ ಕಲ್ಲೋಲ ಮಾಲಾ
ಮಂಗಲ: ಗಂಭೀರಸ್ಫಾರ ಫೇಣಾ ಬಹಳ ಪರಿವೃಢೋಲ್ಲೋಲ ಕಲ್ಲೋಳ ಮಾಳಾ
ಶಿವರ: ಗಂಭೀರಸ್ಫಾರ ಫೇಣಾ ಬಹಳ ಪರಿವ್ರಿಡಲ್ಲೋಲ ಕಲ್ಲೋಲ ಮಾಲಾ
ಬೆಣ್ಣೆಕಲ್ಲು: ಗಂಭೀರ ಸ್ಫಾರ ಫೇಣಾ ಬಹಳ ಪರಿವ್ರಿಢಲ್ಲೋಲ ಕಲ್ಲೋಲಮಾಲಾ
ಸೋಗಿ: ×× ××× ×× ××× ×××××× ×××

ಎರಡನೆಯ ಚರಣ:

ಸೂಕ್ತಿ: ರಂಭ ಪ್ರೋದ್ಭಿನ್ನ ಫೇನ ಪ್ರಬಳ ಜಲಚರೋಲ್ಲುಂಠ ಪಾಠೀನ ಕುಂಭ
ಕಾಸಾ: ರಂಭ ಪ್ರೋದ್ಭಿನ್ನ ಫೇನ ಪ್ರಬಳ ಜಲ ಚರೋಲ್ಲೋಲ ಪಾಠೀನ ಕುಂಭ
ಮಂಗಲ: ರಂಭ ಪ್ರೋದ್ಭಿನ್ನ ಫೇನ ಪ್ರಬಳ ಜಳಚರಚರಲ್ಲೋಠ ಪಾಠೀನ ಕುಂಭ
ಶಿವರ: ರಂಭ ಪ್ರೋದ್ಭಿನ್ನ ಫೇನ ಪ್ರಬಳ ಜಳಚರಲ್ಲೋಠ ಪಾಠೀನ ಕುಂಭ
ಬೆಣ್ಣೆಕಲ್ಲು: ರಂಭ ಪ್ರೋದ್ಭಿನ್ನ ಫೇನ ಪ್ರಬಳ ಜಳಚರಲ್ಲೋಠ ಪಾಠೀನ ಕುಂಭ
ಸೋಗಿ: ×× ××× × ನ ಪ್ರಬಳ ×××××× ××× ಕುಂಭ

ಮೂರನೆಯ ಚರಣ:

ಸೂಕ್ತಿ: ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನ ಪ್ರಭಾಶೋ
ಕಾಸಾ: ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನ ಪ್ರಭಾಪ್ರೋ
ಮಂಗಲ: ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನ ಪ್ರಭಾಶೋ
ಶಿವರ: ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನ ಪ್ರಭಾಪ್ರೋ
ಬೆಣ್ಣೆಕಲ್ಲು: ತ್ಕುಂಭೀರಾಭೀಳ ನಕ್ರಪ್ರಕರ ಕಮಠ ನೀರೇಭ ರತ್ನ ಪ್ರಭಾಪ್ರೋ
ಸೋಗಿ: ತ್ಕುಂ ×××× ××× ××× ××× ×× ×××

ನಾಲ್ಕನೆಯ ಚರಣ:

ಸೂಕ್ತಿ: ಜ್ಜೃಂಭ ತ್ಪ್ರೋದ್ಯಾನಿ ಮೀನಃ ನಿಚಯ ಘನಘನಾರಾವ ರೌದ್ರಂ
ಸಮುದ್ರಂ

ಕಾಸಾ : ಜೃಂಭ ತ್ರೋದ್ಭಾಸಿ ವೀಚೀ ನಿಚಯ ಘನಘನಾರಾವ ರೌದ್ರಂ ಸಮುದ್ರಂ

ಮುಗಲ : ಜೃಂಬ ಪ್ರೋದ್ಭಾಸಿ ವೀಚೀ ನಿಚಯ ಘನಘನಧ್ವಾನ ರೌದ್ರಂ ಸಮುದ್ರಂ

ಶಿವರ : ಜೃಂಭ ಪ್ರೋದ್ಭಾಸಿ ವೀಚೀ ನಿಚಯ ಘನಘನಧ್ವಾನ ರೌದ್ರಂ ಸಮುದ್ರಂ

ಬೆಣ್ಣೆಕಲ್ಲು : ಜೃಂಭ ಪ್ರೋದ್ಭಾಸಿ ವೀಚೀ ನಿಚಯ ಘನಘನಧ್ವಾನ ರೌದ್ರಂ ಸಮುದ್ರಂ

ಸೋಗಿ : ×× ××× ×× ×× ಘನಘನಧ್ವಾನ ರೌದ್ರಂ ಸಮುದ್ರಂ

ಈ ವಿವರಣೆಗಳಿಂದ ಕೆಳಗಿನ ಅಭಿಪ್ರಾಯಗಳನ್ನು ಸಂಗ್ರಹಿಸಬಹುದು.

೧. ಕಾವ್ಯಸಾರ ಕ್ರಿ. ಶ. ೧೫೫೩. ಸೂಕ್ತಿಸುಧಾರ್ಣವ ಕ್ರಿ. ಶ. ೧೨೪೫, ಬೆಣ್ಣೆಕಲ್ಲು ಕ್ರಿ. ಶ. ೧೨೨೬. ಶಿವರ ಕ್ರಿ. ಶ. ೧೨೨೩. ಮುಗಲ ಕ್ರಿ. ಶ. ೧೨೧೪ ಸೋಗಿ (ಕ್ರಿ. ಶ. ?) ಎಂಬ ಅಂತರಗಳನ್ನು ಗಮನಿಸಿದೆ. ಈ ಶಾಸನಗಳು ಈಗಿನ ಮಟ್ಟಿಗೆ ಶೂದ್ರಕದ ಪದ್ಯವನ್ನೊಳಗೊಂಡ ಪ್ರಥಮ ಆಕರಗಳೆನ್ನಬಹುದು.

೨. ಸೂಕ್ತಿ ಸುಧಾರ್ಣವ ಮತ್ತು ಕಾವ್ಯಸಾರಗಳ ಪಾಠಕ್ಕಿಂತ ಈ ಶಾಸನಗಳ ಪಾಠ ಪ್ರಾಚೀನವಾಗಿದ್ದು ಸುಮಾರು ೭೫೦ ವರ್ಷಗಳ ಹಿಂದಿನ ರೂಪವನ್ನು ಉಳಿಸಿಕೊಂಡ ಅತ್ಯಂತ ಪ್ರಾಚೀನ ಪಾಠಗಳು.

೩. ಲಿಪಿಕಾರ ಮತ್ತು ರೂವಾರಿಗಳ ಪಠ್ಯದೋಷಗಳನ್ನು ಬಿಟ್ಟರೂ ಈ ಆರು ಆಕರಗಳಲ್ಲಿ ಪಾಠದೃಷ್ಟಿಯಿಂದ ಸಾಮಾನ್ಯವಾಗಿ ಕಾವ್ಯಗಳದೇ ಒಂದು ಗುಂಪು. ಶಾಸನಗಳದೇ ಒಂದು ಗುಂಪು. ಉದಾ :

ಅ. ಪರಿವೃತ್ತೋಲ್ಲೋಲ (ಸೂಕ್ತಿ. ಕಾಸಾ). ಪರಿವೃತ್ಥಲ್ಲೋಲ (ಶಾಸನಗಳು)

ಬ. ಘನಘನಾರಾವ ರೌದ್ರಂ (ಸೂಕ್ತಿ. ಕಾಸಾ). ಘನಘನಧ್ವಾನ ರೌದ್ರಂ (ಶಾಸನಗಳು)

ಇದರಿಂದ ಬಹುಮಟ್ಟಿಗೆ ಹೋಲಿಕೆಯಿಂದ ಕೂಡಿದ ಮತ್ತು ಪ್ರಾಚೀನವಾಗಿರುವ ಶಾಸನಪಾಠ ಮೂಲಕ್ಕೆ ಹೆಚ್ಚು ಸಮೀಪವೆನ್ನಬೇಕಾಗುತ್ತದೆ.

೪. ಬಳ್ಳಾರಿ ಜಿಲ್ಲೆಯ ಬೆಣ್ಣೆಕಲ್ಲು, ಮುಗಲಿ, ಸೋಗಿ ಗ್ರಾಮಗಳ ಶಾಸನ ಮತ್ತು ಹಾಸನ ಜಿಲ್ಲೆಯ ಶಿವರ ಗ್ರಾಮ ಶಾಸನಗಳಲ್ಲಿ ಈ ಪದ್ಯ ಸಿಗುವುದಕ್ಕೆ ಕವಿಗುಣವರ್ಮನ ಸ್ಥಳ ಸಂಪರ್ಕವೋ, ಶಾಸನ ಕವಿಯ ಶೂದ್ರಕ ಪ್ರೀತಿಯೋ ಕಾರಣವಾಗಿರಬಹುದು.

★ ಎಂ. ಎಂ. ಕಲಬುರ್ಗಿ

ಕನ್ನಡ ಲಾವಣಿ

ಲಾವಣಿ ಕನ್ನಡ ಜನಪದ ಗೀತಸಾಹಿತ್ಯದ ಒಂದು ಪ್ರಮುಖ ಪ್ರಕಾರ. ಜಾನಪದ ಜಿಜ್ಞಾಸುಗಳು ಈ ಸಾಹಿತ್ಯದ ಸಂಗ್ರಹ ಮತ್ತು ಅಭ್ಯಾಸದ ಕಡೆಗೆ ಉತ್ಸುಕತೆ ತೋರಿಸುತ್ತಿರುವುದು ಶುಭ ಸೂಚನೆ. ಆದರೆ ಉತ್ಸಾಹದ ಭರದಲ್ಲಿ ಕನ್ನಡ 'ಲಾವಣಿ'ಯ ಬಗೆಗೆ ಹೊರಬಂದ ಕೆಲವು ಅಭಿಪ್ರಾಯಗಳನ್ನು ಒಪ್ಪಲು ಸಾಧ್ಯವಿಲ್ಲ.

'ಜನಪದ ಕಾವ್ಯ ಕಥೆಗಳು' ಮತ್ತು 'ಲಾವಣಿಗಳು' ಎಂಬ ಗ್ರಂಥಗಳ ಸಂಪಾದಕರಾದ ಶ್ರೀ ಜೀ. ಶಂ. ಪರಮಶಿವಯ್ಯ ಮತ್ತು ಶ್ರೀ ಕೆ. ಮರುಳಸಿದ್ದಪ್ಪ ಅವರು ತಮ್ಮ ಗ್ರಂಥಗಳ ಪ್ರಸ್ತಾವನೆಯಲ್ಲಿ ಲಾವಣಿಯ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಒರೆಗೆ ಹಚ್ಚಬೇಕಾಗಿದೆ. '....ಜಾನಪದ ವಿಭಜನೆಯಲ್ಲಿ ಜನಪದ ಗದ್ಯಕಥನಗಳ ಅನಂತರ ಜನಪದ ಗೀತಸಾಹಿತ್ಯವನ್ನು ಪರಿಶೀಲಿಸಬೇಕಾಗುತ್ತದೆ. ಜನಪದ ಗೀತಸಾಹಿತ್ಯ ಕಥನಾತ್ಮಕ ಹಾಗೂ ಭಾವಗೀತಾತ್ಮಕವಾದುದು. **ಕಥನಾತ್ಮಕ ಗೀತೆಗಳನ್ನೆಲ್ಲ ಲಾವಣಿಗಳೆಂದು** ಕರೆಯಬಹುದು'[1] ಇದು ಶ್ರೀ ಜೀ.ಶಂ. ಪರಮಶಿವಯ್ಯನವರ ಅಭಿಪ್ರಾಯ. ಮುಂದುವರಿದು ಅಡಿಟಿಪ್ಪಣಿಯಲ್ಲಿ '.. ಲಾವಣಿಯಲ್ಲಿ ಭಾವಗೀತಾತ್ಮಕ ರಚನೆಗಳು ಅಲ್ಪಸ್ವಲ್ಪ ಕಂಡು ಬಂದರೂ ಕಥಾಸಾಹಿತ್ಯಕ್ಕೇ ಹೆಚ್ಚಾಗಿ ಜಾನಪದ ಪರಂಪರೆಯಲ್ಲಿ ಈ ಮಾತು ಪ್ರಯೋಗವಾಗುತ್ತ ಬಂದಿದೆ' ಎಂಬುದಾಗಿಯೂ ಶ್ರೀಯುತರು ಹೇಳುತ್ತಾರೆ. ಕೆ. ಮರುಳಸಿದ್ದಪ್ಪ ಅವರು '. .ಅತ್ಯಂತ ಸರಳವಾಗಿ ಹೇಳಬೇಕೆಂದರೆ, **ಕತೆಯನ್ನು ಹೇಳುವ ಜನಪದ ಗೀತೆಯನ್ನು ಲಾವಣಿ**ಯೆಂದು ಕರೆಯಬಹುದು. ಕೇವಲ ಒಂದು ಘಟನೆಯೂ ಕತೆಯಾಗಬಹುದು; ಅನೇಕ ಘಟನೆಗಳಿಂದ ಕೂಡಿದ ವಿಸ್ತಾರವಾದ ಕತೆಯೂ ಇರಬಹುದು'[2] ಎಂಬುದಾಗಿ ಬರೆಯುತ್ತಾರೆ. ಈ ವಿದ್ವಾಂಸರಿಬ್ಬರ ಅಭಿಪ್ರಾಯಗಳ ಪ್ರಕಾರ ಕಥೆಯನ್ನುಳ್ಳ ಗೀತಗಳೆಲ್ಲ ಕಡ್ಡಾಯವಾಗಿ ಲಾವಣಿಗಳು. ಇಂಗ್ಲೀಷಿನ Ballad ಎಂಬುದಕ್ಕೆ ಕನ್ನಡದ ಲಾವಣಿ ಎಂಬುದನ್ನು ಸಂವಾದಿ ಪದವೆಂದು ಭಾವಿಸಿದುದೇ ಇದಕ್ಕೆ ಕಾರಣವೆಂದು ಅವರ ವಿವರಣೆಯಿಂದ ತಿಳಿಯಬಹುದಾಗಿದೆ. ಕನ್ನಡ ಜನಪದದಲ್ಲಿ ಬಳಕೆಗೊಳ್ಳುವ ಲಾವಣಿ ಪದದ ಪ್ರಸಂಗವನ್ನು ವಿವರವಾಗಿ ಅರಿತರೆ ಶ್ರೀಯುತರ ಅಭಿಪ್ರಾಯಗಳು ಸರಿಯಲ್ಲವೆಂದು ಗೊತ್ತಾಗುವುದು. ಇಂಗ್ಲೀಷಿನ Ballad ಎಂಬುದು ಕನ್ನಡದ ಲಾವಣಿಯನ್ನು ಹೋಲಬಹುದೇ ಹೊರತು ಅದರದೂ ಇದರದೂ ಒಂದೇ ಆಗಲಾರದು. ಅದರಲ್ಲೂ ಬೇರೆ ಬೇರೆ

---

೧. ಜನಪದ ಕಾವ್ಯಕಥೆಗಳು: ಶ್ರೀ ಜೀ. ಶಂ. ಪರಮಶಿವಯ್ಯ (ಸುರುಚಿ ಪ್ರಕಾಶನ-ಮೈಸೂರು-೧೯೭೧) ಪ್ರಸ್ತಾವನೆ ಪುಟ ೧೩.

೨. ಲಾವಣಿಗಳು: ಶ್ರೀ ಕೆ. ಮರುಳಸಿದ್ದಪ್ಪ (ಬೆಂಗಳೂರ ವಿಶ್ವವಿದ್ಯಾಲಯ ಪ್ರಕಟನೆ-೧೯೭೩) ಪೀಠಿಕೆ ಪುಟ ix

ಪ್ರದೇಶ, ಅಲ್ಲಿಯ ಜನರ ಸಂಸ್ಕೃತಿ ಮತ್ತು ಅವುಗಳನ್ನು ಹಾಡುವ ಪ್ರಸಂಗ ಇತ್ಯಾದಿಗಳು ಬೇರೆಬೇರೆಯಾಗಿರುವಾಗ ಅವುಗಳನ್ನು ಒಂದುಗೂಡಿಸುವುದು ಉಚಿತವಾಗದು. 'ಲಾವಣಿ'ಯನ್ನು ಕನ್ನಡ ಜನಪದ (Folk) ಪರಂಪರೆಯಲ್ಲಿ ಅದು ಬಳಕೆಗೊಳ್ಳುವ ಹಿನ್ನೆಲೆಯಲ್ಲಿ ಅಭ್ಯಸಿಸುವುದು ಸೂಕ್ತ.

ಕನ್ನಡದಲ್ಲಿಯ ಜನಪದ ಗೀತಸಾಹಿತ್ಯವನ್ನೆಲ್ಲ ಅವಲೋಕಿಸಿದಾಗ ಕಥಾತ್ಮಕ ಗೀತಗಳ ಹಲವು ಪ್ರಕಾರಗಳು ಸಿಗುತ್ತವೆ. ಗಂಡಸರು ಹಾಡುವ ಡೊಳ್ಳಿನ ಹಾಡುಗಳು, ಅಲಾವಿ (ಕರಬಲ್ಲ) ಹಾಡುಗಳು, ಒಗ್ಗಯ್ಯಗಳ ಹಾಡುಗಳು; ಹೆಂಗಸರು ಹಾಡುವ ಗೌರಿ ಹಾಡುಗಳು, ಕೋಲಿನ ಹಾಡುಗಳು, ಜೋಗತಿಯರ ಹಾಡುಗಳು ಮುಂತಾದ ಅನೇಕ ಬಗೆಯ ಹಾಡುಗಳಲ್ಲಿ ಬಹುಪಾಲು ಹಾಡುಗಳು ಕಥಾತ್ಮಕವಾದರೂ ಕನ್ನಡ ಜನಪದ ಇವುಗಳನ್ನು ಲಾವಣಿ ಎಂಬುದಾಗಿ ಕರೆಯರೆಂಬುದನ್ನು ಜಾನಪದ ಕ್ಷೇತ್ರದಲ್ಲಿ ದುಡಿಯುವವರು ಅರಿಯಬೇಕಾಗಿದೆ. ಜನಪದ ಪರಂಪರೆಯ ಒಂದೊಂದು ಬಗೆಯ ಈ ಹಾಡುಗಳಿಗೂ ಒಂದೊಂದು ಸಾಮಾಜಿಕ, ಸಾಂಸ್ಕೃತಿಕ ಮತ್ತು ಹಾಡುಗಾರಿಕೆಯ ಸಂದರ್ಭ ಹಾಗೂ ರೀತಿಯ ವಿಶಿಷ್ಟ ಹಿನ್ನೆಲೆಯಿದೆ. ಇದೇ ಬಗೆಯ ಹಿನ್ನೆಲೆಯನ್ನು ಶ್ರೀ ಜೀ. ಶಂ. ಪರಮಶಿವಯ್ಯನವರು ಲಾವಣಿಕಾರರೆಂದು ಹೇಳುವ ದೇವರ ಗುಡ್ಡರು, ನೀಲಗಾರರು, ಜುಂಜಪ್ಪನವರು ಮತ್ತು ಕರಪಾಲದವರು ಮೊದಲಾದವರಲ್ಲಿಯೂ ಕಾಣಬಹುದಾಗಿದೆ. ಇವರೆಲ್ಲರೂ ಒಂದೊಂದು ವಿಶಿಷ್ಟ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವವರಾದ್ದರಿಂದ ಇವರ ಹಾಡುಗಳಲ್ಲಿಯ ವಿಷಯ ಮತ್ತು ಉದ್ದೇಶ ಆವರವರ ಪರಂಪರೆಗೆ ಅನುಸರಿಸಿಯೇ ಇರುವುದು ಸ್ವಾಭಾವಿಕ. ಹೀಗಾಗಿ ಇವರ ಹಾಡುಗಳು ಕಥಾತ್ಮಕವಾಗಿದ್ದರೂ ಲಾವಣಿಗಳಾಗವು.

ಕನ್ನಡ ಲಾವಣಿಯ ಪರಿ ಬೇರೆ. ಕರ್ನಾಟಕದಲ್ಲಿ ಲಾವಣಿ ಎಂದು ಹೇಳಿ ಹಾಡುವ ಹಾಡುಗಳನ್ನು ಕೇಳಿದರೆ ಅವುಗಳ ರಚನಾ ತಂತ್ರ ಮತ್ತು ಹಾಡುಗಾರಿಕೆಯ ರೀತಿ ವಿಶಿಷ್ಟವಾಗಿದೆಯೆಂಬುದನ್ನು ಗುರುತಿಸಬಹುದಾಗಿದೆ. ಲಾವಣಿ ಸಾಮಾನ್ಯವಾಗಿ ವೀರ ಮತ್ತು ಶೃಂಗಾರ ರಸಭರಿತವಾದುದು. ಕೇವಲ ಇಂಥವರು, ಇಂಥ ಸಂದರ್ಭದಲ್ಲಿ, ಇಂಥ ವಿಷಯದ ಹಾಡುಗಳನ್ನು ಮಾತ್ರ ಹಾಡಬೇಕೆಂಬ ವಿಶಿಷ್ಟ ಕಟ್ಟಳೆಯೇನೂ ಇದಕ್ಕಿಲ್ಲ. ಬಯಲು ಲಾವಣಿಗೆ ಕೈಬೆರಳಿನ ಚಿಟಿಕಿ, ಮೇಳಲಾವಣಿಗೆ ಡಪ್ಪು. ತುಂತುಣಿ ಮತ್ತು ತಾಳ ಇವಿಷ್ಟು ಹಾಡುಗಾರರ ವಾದ್ಯ ಪರಿಕರಗಳು. ಹಾಡುಗಳು ಕಥಾತ್ಮಕವಾಗಿದ್ದರೂ ಕೇವಲ ಕಥೆಯಿಂದಾಗಿ ಅವು ಲಾವಣಿಗಳಾಗವು. ಯಾವುದೊಂದು ಗೀತ ಲಾವಣಿಯಾಗಬೇಕಾದರೆ ವಿಶಿಷ್ಟ ರೀತಿಯ ಹಾಡುಗಾರಿಕೆಗೆ ಅನುಗುಣವಾದ ರಚನಾ ತಂತ್ರವನ್ನು ಅದು ಒಳಗೊಂಡಿರಬೇಕು. ಅದರಿಂದ ಶ್ರೀ ಜೀ. ಶಂ. ಪರಮಶಿವಯ್ಯ ಮತ್ತು ಶ್ರೀ ಕೆ. ಮರುಳಸಿದ್ದಪ್ಪ ಅವರು ಅಭಿಪ್ರಾಯ ಪಡುವಂತೆ ಕಥಾತ್ಮಕ ಜನಪದ ಗೀತಗಳನ್ನೆಲ್ಲ ಲಾವಣಿ ಎಂದು ಕರೆಯುವುದು ಸೂಕ್ತವಲ್ಲವೆಂದು ಹೇಳಬಹುದಲ್ಲವೇ ?

ಶ್ರೀಯುತರಿಬ್ಬರೂ ಎರಡು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಜಾನಪದವನ್ನು ಬೋಧಿಸುವ ಪ್ರಾಧ್ಯಾಪಕರು. ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅಧಿಕೃತವೆಂಬ ಭಾವನೆ ಜಾನಪದದ ಆರಂಭದ ಅಭ್ಯಾಸಿಗಳಲ್ಲಿ ಉಂಟಾಗುವುದು ಸಹಜ. ಹೆಚ್ಚು ಚಿಕಿತ್ಸಕತೆ ತೋರಿಸದೆ ಒಬ್ಬಿಬ್ಬರು ಈ ಅಭಿಪ್ರಾಯಗಳನ್ನು ಪ್ರಾಸಂಗಿಕವಾಗಿ ಉದ್ಧರಿಸಿದರೆ ಇವೇ ಸಿದ್ಧಾಂತಗಳಾಗುವ ಸಾಧ್ಯತೆಯೂ ಇದೆ. ಹಾಗಾಗುವ ಮುನ್ನ ವಿದ್ವಾಂಸರು 'ಕನ್ನಡ ಲಾವಣಿ'ಯ ನೈಜತ್ವ ಪರಿಶೀಲಿಸಬೇಕಾಗಿದೆ. ಆ ದಿಶೆಯಲ್ಲಿ ಆಲೋಚಿಸಲು ಈ ಲೇಖನ ಪ್ರಚೋದನೆ ನೀಡುವುದೆಂದು ನಂಬುವೆ.

★ ಜ್ಯೋತಿ ಹೊಸೂರ.

ಗ್ರಂಥಾವಲೋಕನ

ಒಂದು ಗಳಿಗೆ: ಲೇ: ಶ್ರೀಮತಿ ಶೈಲಜಾ; ಪ್ರ: ಶ್ರೀ ಟಿ. ಎ. ಉಡುಪ, 'ಚೇತನ' ೧-೪೭೨, ಹೊಸಬಾದ ಪ್ಲಾಟ್, ಗುಲ್ಬರ್ಗಾ.

ಶ್ರೀಮತಿ ಶೈಲಜಾ ಅವರೇ ಹೇಳಿಕೊಂಡಂತೆ ಇದು ಅವರು ಮನಸ್ ತೃಪ್ತಿಗಾಗಿ ಆಗಿಂದಾಗ ಬರೆದ ಕವಿತೆಗಳ ಪ್ರಥಮ ಸಂಕಲನ. ಇದರಲ್ಲಿ ಮೂವತ್ತು-ನಾಲ್ಕು ಕವಿತೆಗಳು, ಕೆಲವು ಚುಟುಕಗಳು ಇವೆ. ಇಲ್ಲಿಯ ಬಹುಪಾಲು ಕವಿತೆಗಳ ವಸ್ತು ಕವಯಿತ್ರಿಯರ ಬದುಕಿನ ಸುತ್ತ-ಮುತ್ತ ಹೆಣೆದುಕೊಂಡಂತಹದು. ಮಗು-ಮನೆ-ವ್ಯಕ್ತಿ-ಪ್ರಸಂಗ ಮುಂತಾದವುಗಳಿಗೆ ಸಂಬಂಧಿಸಿದ ವಿವಿಧ ಸನ್ನಿವೇಶಗಳು ಕವನ ಶಿಲ್ಪಗಳಾಗಿವೆ. ವ್ಯಕ್ತಿನಿಷ್ಠ ಅನುಭವವು ಇಲ್ಲಿ ಒಂದಿಷ್ಟು ಹೆಚ್ಚಾಗಿ ಕಂಡರೂ ಸಾರ್ವತ್ರಿಕವಾದ ಜೀವನ ಮೌಲ್ಯಗಳಿರುವುದರಿಂದ ಕವಿತೆಗಳು ಆಸ್ವಾದನೀಯವಾಗಿವೆ.

'ನೆನಪು' 'ಬರಡು ನೀಲಿಯ ಕಣ್ಣುಗಳು' ಶ್ರೀಮತಿ ಶೈಲಜಾ ಅವರ ತಾಯ್ತನದ ವಾತ್ಸಲ್ಯವನ್ನೂ. 'ಪ್ರೀತಿ' 'ನಾನಲ್ಲ' ಇವು ಅವರ ದಾಂಪತ್ಯದ ಸ್ನೇಹ ಭಾವವನ್ನು ವ್ಯಕ್ತಪಡಿಸುತ್ತವೆ. 'ಸವತಿ' 'ವರ್ಷ' ಇವು ದಾಂಪತ್ಯದ ಇನ್ನೊಂದು ಮಗ್ಗುಲನ್ನು ಚಿತ್ರಿಸುವ ಕವಿತೆಗಳು. ಈ ಎಲ್ಲ ಕವಿತೆಗಳಲ್ಲಿ ಕವಯಿತ್ರಿಯ ನಡೆದಂತೆ ನವೀನ ಪ್ರತಿಮಾ-ಸಂಕೇತಗಳು ಸೃಷ್ಟಿಗೊಂಡಿವೆ. 'ಪ್ರೀತಿ' ಕವಿತೆಯಲ್ಲಿ ಸಾಲುಗಟ್ಟಿ ಬರುವ ಋತು ಮಾಸಕ್ಕನುಗುಣವಾದ ಪ್ರಕೃತಿಯ ಪ್ರತಿಮೆಗಳು ಚಿತ್ತಾಕರ್ಷಕವಾಗಿವೆ. 'ಹೂವು-ಮುಳ್ಳು' ಮತ್ತು 'ಪ್ರೊ. ಡಿ. ಕೆ. ಯವರ ಸ್ಮರಣೆಯಲ್ಲಿ' ಇವು ಗಾಢಭಕ್ತಿಯ ಮೂಲ ಸಂವೇದನೆಯಿಂದ ರೂಪುಗೊಂಡವುಗಳು. 'ಹೂವು-ಮುಳ್ಳು' ಕವಿತೆ ಆಧ್ಯಾತ್ಮಿಕ ಭಾವನೆ (Metaphysical concept) ಇರುವ, ಅನನ್ಯವಾದ ಶ್ರದ್ಧೆಯನ್ನು ಅಭಿವ್ಯಕ್ತಗೊಳಿಸುವ ಕವನವಾದರೂ, ಬಳಸಿಕೊಂಡ ವ್ಯಂಜಕ ಸಾಮಗ್ರಿ ಕಾವ್ಯಾರ್ಥವನ್ನು ಹೆಚ್ಚಿಸಿವೆ. "ಪ್ರೊ. ಡಿ. ಕೆ. ಯವರ ಸ್ಮರಣೆಯಲ್ಲಿ" ಕವಿತೆಯು ಸಾಂದರ್ಭಿಕವಾಗಿದ್ದರಿಂದಲೋ ಏನೋ ಕವನದ ಚೌಕಟ್ಟಿನಲ್ಲಿ ಗದ್ಯದ ಪ್ರಶಂಸೆಗಳೂ ಸೇರಿಕೊಂಡಿವೆ. ಈ ಎಲ್ಲ ಕವಿತೆಗಳಲ್ಲಿ ಒಂದಿಲ್ಲೊಂದು ರೀತಿಯಿಂದ ಕವಯಿತ್ರಿಯರ ವ್ಯಕ್ತಿತ್ವ ಒಳಪಡುವ (Involving) ಅನಿವಾರ್ಯತೆ ಇರುವುದರಿಂದ, ಭಾವಾವೇಶಪೂರಿತ ವರ್ಣನೆಗಳಿರುವುದರಿಂದ ಇವು ಭಾವಗೀತೆಗಳ ಪರಿಣಾಮವನ್ನೀಯುತ್ತವೆ. ಕಾವ್ಯಬಂಧ ಮತ್ತು ಪ್ರತಿಮಾ ವಿಧಾನದಲ್ಲಿ ಮಾತ್ರ ನವ್ಯತೆ ಕಂಡುಬರುತ್ತದೆ.

ಜೀವನದ ಹೊರವಲಯಕ್ಕೆ ಸಂಬಂಧಿಸಿದ ಅಂದರೆ ಬಾಹ್ಯ ಪರಿಸರದ ಪ್ರೇರಣೆಯಿಂದ ಸ್ಫೂರ್ತಿಗೊಂಡ ಕವಿತೆಗಳೂ ಈ ಸಂಕಲನದಲ್ಲಿವೆ. ಕಲ್ಬುರ್ಗಿಯ ಬಿಸಿಲಿನ ಅನುಭವವನ್ನು ಚಿತ್ರಿಸುವ "ತಾಪ-ತಪ", ಕಾಲೇಜಿನ ಜೀವನದ ಅಂದಿನ ಅವೇಶನದಲ್ಲಿ ಹೀಚಾರವನ್ನು ಸೃಷ್ಟಿಸುವ ವಿಶ್ಲೇಷಣೆ ನಡೆದ "ಸಮಾನ ದಾರಿ". ಇವರೊಡನೆ

ಕವಿಸಮ್ಮೇಲನದಲ್ಲಿ ಭಾಗವಹಿಸುವಾಗ ಉಂಟಾದ ಆತ್ಮೀಯ ಸಂಭ್ರಮವನ್ನು "ಸಮ್ಮೇಲನ", ಇವುಗಳಲ್ಲಿ ಜೀವನದ ಕೆಲವು ಘಟನೆಗಳಿಗೆ ತೋರಿದ ಪ್ರತಿಕ್ರಿಯೆ ಇದೆ. ಇಲ್ಲಿ ಬಹುಮಟ್ಟಿಗೆ ಕವಯಿತ್ರಿಯರ ಸುಸಂಸ್ಕೃತ ಆದರ್ಶ ಮನೋಭಾವ ವ್ಯಕ್ತವಾಗಿದೆ. ಆದರಿಂದಾಗಿ "ಆದರ್ಶಗಳ ಕಟ್ಟೆ ಹಾಳಾಗುವದೇಕೆ ಈ ಜನ!" ಎಂದು ಒಂದು ಚುಟುಕಿನಲ್ಲಿ ಕೇಳಿಕೊಂಡಿದ್ದುದು. ಸ್ವಗತಕ್ಕೆ ಸಂಬಂಧಿಸಿದುದಲ್ಲ ಎನಿಸುತ್ತದೆ.

"ಪಾಪ" "ಒಂದು ಗಳಿಗೆ" "ನಮ್ಮ ಹಿಪ್ಪಿ" ಮತ್ತು "ನಾನು ಮನುಷ್ಯ" ಈ ಸಂಕಲನದಲ್ಲಿಯ ಮಹತ್ವದ ಕವಿತೆಗಳು. ಸಂಕೀರ್ಣತೆಯಿಂದ,ಸಮಕಾಲೀನ ಪ್ರಜ್ಞೆಯಿಂದ ಈ ಕವಿತೆಗಳು ಸತ್ವಪೂರ್ಣವಾಗಿವೆ. ಇಲ್ಲಿಯ ಪ್ರತಿಮಾ–ಸಂಕೇತಗಳೂ ಕೂಡ ಹೆಚ್ಚು ಅರ್ಥಪೂರ್ಣವಾಗಿವೆ, ಧ್ವನಿಯುಕ್ತವಾಗಿವೆ.

ನನ್ನ ಕರುಳುಗಳನೆಲ್ಲ ಕಲ್ಲಿಗೆ
ತೊಡಿಸಿರುವೆ
ನನ್ನ ಅನಿಸಿಕೆಗಳನೆಲ್ಲ ರವಕೆ
ಸಿಂಗರಿಸಿರುವ (ಪಾಪ)

ಎಂಬಲ್ಲಿ ಅಂತಃಕರಣದ ಕಠಿಣತೆ ಅಥವಾ ಕಠೋರತೆ. ಮತ್ತು ಅನಿಸಿಕೆಗಳ (Feelings) ನಿರ್ಜೀವತೆ ಅಥವಾ ಸತ್ವಹೀನತೆ ಸೂಚಿತವಾಗಿದೆ.

ಬತ್ತಲೆಯಾಗಿದ್ದ ಈ ಗಿಡಕ್ಕೆಷ್ಟು
ಬಡಿವಾರ?
ನೋಡು ನೋಡುತ್ತಲೇ ಹಸಿರು ಸಿಂಗರ ತೊಟ್ಟು
ಹೊನ್ನ ಹೊದಿಕೆಯನುಟ್ಟು
ನನ್ನ ಮುಂದೆಯೇ ಮಾಡುತ್ತಿದೆಯಲ್ಲ
ಮುರಕ. (ಒಂದು ಗಳಿಗೆ)

ವೃಕ್ಷದಲ್ಲಿ ಚೈತನ್ಯ ಬಂದಾಗಿನ ಅಥವಾ ಬರಡು ಬೆಸಲಾದಾಗಿನ ಭಾವವನ್ನು ಈ ಪ್ರತಿಮೆ ಯಥಾರ್ಥವಾಗಿ ಚಿತ್ರಿಸುತ್ತದೆ. 'ಬಡಿವಾರ' 'ಮುರಕ' ಈ ಅಚ್ಚ ದೇಸೀಯ ಪದಗಳು ಕವಿತೆಯ ನಾಟಕೀಯ ಭಾವಸ್ಪಂದನೆಗೆ ಹೆಚ್ಚು ಕಸುವನ್ನು ತಂದು ಕೊಡುತ್ತವೆ.

ಮೆದುಳಿಗಿಲ್ಲ ತಂಪು ನೀರು, ತಲೆತುಂಬ
ಜಿಡ್ಡು ಜಿಡ್ಡಿನ ಅಶಾಂತಿಯ ಬೇರು ನೂರಾರು (ನಮ್ಮ ಹಿಪ್ಪಿ)

ಹಿಪ್ಪಿಗಳಲ್ಲಿ ಕಂಡುಬರುವ ಪಾಶ್ವಿಕ ನಿಷ್ಕ್ರಿಯತೆ. ವೈಚಾರಿಕ ಅಸ್ತವ್ಯಸ್ತತೆಯನ್ನು ಇಲ್ಲಿಯ ಸಂಕೇತಗಳು ಸಾರ್ಥಕವಾಗಿ ಧ್ವನಿಸುತ್ತವೆ.

ಗುಂಪು ಗುಂಪುಗಳಲಿ
ಬಿಟ್ಟು ತಿರುಗಣಿಯಲಿ
ತುಳಿದು ನಡು ನೀರಿನಲಿ
ಕೈಯ ಬಿಡಬೇಡಿ (ನಾನು ಮನುಷ್ಯ)

ಸಾಮಾನ್ಯವಾಗಿ ಇಂದು ಎಲ್ಲ ಕ್ಷೇತ್ರಗಳಲ್ಲಿ ಕಂಡುಬರುವ ಗುಂಪುಗಾರಿಕೆಯ ಅಪಾಯ ಹಾಗೂ ಅನಾಹುತ ಇಲ್ಲಿಯ 'ತಿರುಗಣಿಯಲ್ಲಿ ತುಳಿದು. ನಡುನೀರಿನಲಿ ಕೈ ಬಿಡುವ' ಕ್ರಿಯೆಗಳಲ್ಲಿ ವ್ಯಕ್ತವಾಗಿದೆ.

ಹೀಗೆ ಪ್ರತೀಕಗಳಿಗೆ ಮರೆಮಾಡದೆ ಸಹಜವಾಗಿ ವಿವಿಧ ಸಂವೇದನೆಗಳನ್ನು ಕವನಿ-ಸುವ ಸಾಮರ್ಥ್ಯ ಶ್ರೀಮತಿ ಶೈಲಜಾ ಅವರಿಗಿರುವದನ್ನು ಗುರುತಿಸಬಹುದು. 'ನನ್ನ ಲೀಲೆ' 'ಮನ' 'ಗಂಗೆ' 'ಜೇನು ಮನ' 'ಭಾಷಣ' ಮುಂತಾದ ಕವಿತೆಗಳಲ್ಲಿಯ ಚಿತ್ರಕಶಕ್ತಿಯೂ ಗಮನಾರ್ಹವಾಗಿದೆ. ಕೆಲವು ಚುಟುಕುಗಳಲ್ಲಿ ನವಿರಾದ ಭಾವ ವಿದ್ದರೆ, ಇನ್ನು ಕೆಲವು ಚುಟುಕುಗಳಲ್ಲಿ ಚುರುಕಾದ ಅನುಭವವಿದೆ.

ಈ ಕವನ ಸಂಕಲನವನ್ನು ಇಡಿಯಾಗಿ ನೋಡಿದಾಗ ಕವನಾಭಿವ್ಯಕ್ತಿಯಲ್ಲಿ ವಿಲಕ್ಷಣತೆಗಳಿರುವುದು ಕಂಡು ಬರುತ್ತದೆ. ಬಾಲ್ಯದ ಮುಗ್ಧತೆ. ಪ್ರಬುದ್ಧ ಮನಸ್ಸಿನ ವೈಚಾರಿಕೆ ಇವು-ಗಳ ಸ್ಮೃತಿ ತರಂಗಗಳು ಇಲ್ಲಿವೆ. ಕವಯಿತ್ರಿಯರಿಗೆ "ಜೀವ ಬಾಳಿನ ಕನಸಿನೊಡನ ಸಂಗೀತ"ವೆನಿಸಿದ ಭಾವಗೀತೆಯಲ್ಲಿ ಒಲವಿರುವದರಿಂದ, "ರಮ್ಯದಿಂದ ನವ್ಯಕ್ಕೆ ಗಸ್ತಿನ ತಿರುಗಿ"ದ್ದುದು ಸಾಮಯಿಕ ನಿಲುವಾದ್ದರಿಂದ, ಕಾವ್ಯರಚನೆಯಲ್ಲಿ ಎರಡೂ ಮಾರ್ಗಗಳು ಮಿಳಿತವಾದಂತೆ ತೋರುತ್ತದೆ. ಆದರಿಂದಾಗಿ ನವೋದಯ ಸಂಪ್ರದಾಯದ ಕನಸುಗಾರಿಕೆ. ಸರಳತೆ. ಆದರ್ಶಪರತೆ. ಪ್ರಾಸಪ್ರಿಯತೆ ಈ ಮುಂತಾದ ಅವಶೇಷಗಳು ಅಲ್ಲಲ್ಲಿ ತಿಳಿದೋ ತಿಳಿಯದೆಯೋ ಸೇರಿಕೊಂಡು, ನವ್ಯ ಕಾವ್ಯದ ಬಿಗುವು. ಸಂಕೀರ್ಣತೆ. ತೀಕ್ಷ್ಣತೆ ಮತ್ತು ಸಾಂದ್ರತೆಗಳಿಗೆ ಅಡ್ಡಗಾಲು ಹೊಡುವದು ಕಂಡುಬರುತ್ತದೆ. ಶ್ರೀಮತಿ ಯವರು "ರಮ್ಯವಿರಲಿ, ನವ್ಯವಿರಲಿ" ಎಂಬ ಸಂಧಾನ ಮಾರ್ಗವನ್ನು ಅನುಸರಿಸಿದೆ. ಇಂದಿನ ಕಾವ್ಯದ ನಿರ್ದಿಷ್ಟ ಧೋರಣೆಯನ್ನು ತಳೆದಲ್ಲಿ ಇನ್ನೂ ಹೆಚ್ಚಿನ ಪ್ರಯೋಜನ ವಾಗಬಹುದು.

ಈ ಪ್ರಥಮ ಸಂಕಲನದಲ್ಲಿಯೇ ಕಾವ್ಯ ಬಂಧದಲ್ಲಿ ತೋರಿದ ನವೀನ ದೃಷ್ಟಿ. ಪ್ರತಿಮಾ-ಸಂಕೇತ ನಿರ್ಮಾಣದಲ್ಲಿ ವಹಿಸಿದ ಕಾಳಜಿ. ಆಡುನುಡಿಯನ್ನು ಅರ್ಥವತ್ತಾಗಿ ಬಳಸಿಕೊಳ್ಳುವ ಜಾಣ್ಮೆ. ಇವು ನಿಸ್ಸಂದೇಹವಾಗಿ ಶ್ರೀಮತಿ ಶೈಲಜಾ ಅವರ ಕವಿತ್ವ ಶಕ್ತಿಯಲ್ಲಿ ಭರವಸೆಯನ್ನು ಹುಟ್ಟಿಸುತ್ತವೆ.

★ ಗುರುಲಿಂಗ ಕಾಪಸೆ.

"ಹಾಲು ತೊರೆಯಿಂದ ಉಪ್ಪು ನೀರಿಗೆ" (ಕವನ ಸಂಕಲನ)

ಲೇ: ಪಾಟೀಲ ಶಿವಶರಣ ಜಾವಳಿ; ಶಿವಪ್ರಕಾಶನ, ಶರಣನಗರ, ಕಲಬುರ್ಗಿ-೨.
ಪುಟ: VI + ೪೫; ಬೆಲೆ – ರೂ. ೧–೨೫.

'ಹಾಲು ತೊರೆಯಿಂದ ಉಪ್ಪುನೀರಿಗೆ' ಪಾಟೀಲ ಶಿವಶರಣ ಜಾವಳಿಯವರ ಒಟ್ಟು ೨೫ ಕವನಗಳನ್ನೊಳಗೊಂಡ ಪ್ರಥಮ ಕವನ ಸಂಗ್ರಹ. ೧೯೫೭ ರಿಂದ ಪ್ರಾರಂಭಗೊಂಡ ಅವರ ನುಡಿಮೆ ೧೯೭೧ ರ ವರೆಗೆ ಬೆಳೆಯಿಸಿಕೊಂಡು ಬಂದ ಸತ್ವ, ಒಲವು, ಅನುಭವಗಳನ್ನು ಪ್ರತಿನಿಧಿಸುತ್ತದೆ. ಇದರಲ್ಲಿ ಸುಮಾರು ಅರ್ಧದಷ್ಟು ಕವನಗಳು ೧೯೭೧ ರಲ್ಲಿಯೇ ರಚಿತವಾದಂಥವುಗಳು; ಅಂದರೆ ಕವನ ಸಂಕಲನವನ್ನು ಹೊರತರುವ ಹುರುಪಿನಲ್ಲಿ ರಚಿಸಿದ ಅವಸರದ ಕವನಗಳೇನೋ ಎಂಬ ಕೊಂಕುಬುದ್ಧಿಯಿಂದ ಪರೀಕ್ಷಿಸಲು ಅವಕಾಶವಿಲ್ಲ. ನವೋದಯ ಪರಿಸರ ಪರಿಪಕ್ವಗೊಂಡಾಗ ಶ್ರೀಯುತರು ಕಾವ್ಯೋದ್ಯಮಕ್ಕೆ ತೊಡಗಿದ ಕಾರಣ ಅನಿವಾರ್ಯವಾಗಿ ಅವರ ಪ್ರಾರಂಭದ ಪದ್ಯಗಳು ಅದೇ ಜಾಡನ್ನು ಹಿಡಿದವುಗಳಾಗಿವೆ. ೧೯೬೧ ರ ವರೆಗೆ ಅವರ ಕವಿತ್ವದ ಬೆಳವಣಿಗೆಯ ಒಂದು ಘಟ್ಟವನ್ನು ಗುರುತಿಸಿದರೆ ೧೯೬೮ ರಿಂದ ೧೯೭೧ ರ ವರೆಗೆ ಬೇರೊಂದು ಘಟ್ಟವನ್ನು. ಅಂದರೆ ಅತ್ಯಂತ ಮಹತ್ವದ, ನವ್ಯಕಾಲದ ರಸವನ್ನುಂಡು ಕೊಬ್ಬಿನಿಂತ ಘಟ್ಟವನ್ನು ಗುರುತಿಸಬಹುದು. ಇದರ ನಡುವಿನದು ಬೆಳವಣಿಗೆಯ ಘಟ್ಟವೆನ್ನಬಹುದಾದರೂ ಒಂದೆರಡು ಕವನಗಳಲ್ಲಿ ಪ್ರಬುದ್ಧ ಪ್ರತಿಭೆಯ ದುಡುಮೆಯನ್ನು ನೋಡುತ್ತೇವೆ. ಅಂತೂ ಈ ೪-೫ ವರುಷಗಳಲ್ಲಿ ಹುಟ್ಟಿದ ಕವನಗಳು ಕವಿಯ ಬಗೆಗೆ ಹೆಚ್ಚಿನ ಭರವಸೆಯನ್ನು ಉಂಟುಮಾಡುತ್ತವೆ; ಏಕೆಂದರೆ ಇವುಗಳಲ್ಲಿ ಹೆಚ್ಚಿನ ಪಾಲು ನವ್ಯ ಕವನಗಳಾಗಿವೆಯೆಂದಲ್ಲ; ಕವಿತ್ವದ ಕಾವನ್ನು, ಒಗರನ್ನು ಅರಗಿಸಿಕೊಂಡಿವೆ ಎಂಬುದೇ ಮುಖ್ಯ ಕಾರಣವಾಗಿದೆ.

ಪ್ರತಿಮಾ ನಿರ್ಮಾಣವೊಂದೇ ಅಭಿವ್ಯಕ್ತಿಯ ಯಶಸ್ವೀ ಮಾಧ್ಯಮವೆಂಬ ಭ್ರಮೆ ಪಾಟೀಲರಲ್ಲಿ ಕಾಣುವದಿಲ್ಲ. ಅಂದಮಾತ್ರಕ್ಕೆ ಅದರಿಂದ ಅವರು ತೀರಮುಕ್ತರಾದವರೆಂದಾಗಲಿ ಇಲ್ಲವೆ ಪ್ರತೀಕಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ಸೋತಿದ್ದಾರೆಂದಾಗಲಿ ಅರ್ಥವಲ್ಲ. ಅನಿವಾರ್ಯವೆಂದು ಕಂಡುಬಂದಾಗೆಲ್ಲ ಅವರ ಪ್ರತಿಭೆ ಪ್ರತಿಮಾ ನಿರ್ಮಾಣದಲ್ಲಿಯೂ ತೊಡಗಿದೆ. ಅನುಭವ ಹಾಗೂ ಭಾವನೆಯ ಅಭಿವ್ಯಕ್ತಿಗಾಗಿ ಬಹಳಷ್ಟು ಸಲ ಭಾಷೆಗೆ ಧಾರಣಶಕ್ತಿಯನ್ನು ತಂದಿರುವದೇ ಪಾಟೀಲರ ಕವನಗಳ ವೈಶಿಷ್ಟ್ಯವೆನ್ನಬಹುದು. "ತೀರ ವೈಯಕ್ತಿಕವಾದ ಪ್ರತಿಮೆ, ಪ್ರತೀಕಗಳ ಬಳಕೆ ಕಡಿಮೆಯಾದಲ್ಲಿ ಈ ಪರಂಪರೆಯು ಇನ್ನೂ ಜನಪ್ರಿಯವಾಗಬಹುದೇನೋ. ಇಂದಿನ ಜನಾಂಗದ ಅಲ್ಪತೃಪ್ತ ಮನೋಭಾವವನ್ನು ನೋಡಿದರೆ ಇದನ್ನು ಎಷ್ಟುಕಾಲ ಇರಿಸಿಕೊಳ್ಳುತ್ತೇ–ವೆಂದು ಹೇಳಲು ಬರುವಂತಿಲ್ಲ." ಎನ್ನುವ ಅವರ ಮಾತುಗಳಲ್ಲಿಯೇ, ಇಂದಿನ ಕಾಲದ ಕಾವ್ಯದ ಬಗೆಗೆ ಅವರು ತಾಳಿರುವ ನಿಲುಮೆಯನ್ನು ಕಾಣಬಹುದಾಗಿದೆ: ಅವರ ಕವನಗಳಲ್ಲಿ ಅದನ್ನು ಅನುಭವಿಸಬಹುದಾಗಿದೆ.

ಕ್ಲಿಷ್ಟತೆ, ಅಸ್ಪಷ್ಟತೆಗಳಿಲ್ಲದ ನೇರವಾದ ಸರಳ ಪ್ರತೀಕಗಳನ್ನು ಅತ್ಯಂತ ಗಹನವಾದ ವೈಚಾರಿಕತೆ, ಹಾಗೂ ಸಮಸ್ಯೆಗಳ ಅಭಿವ್ಯಕ್ತಿಗಾಗಿ ಅಳವಡಿಸಿಕೊಳ್ಳಬಲ್ಲರು. ಅಂತೆಯೇ ಇವರ ಕವನಗಳಲ್ಲಿ ಗುಮ್ಮನ ಗುಸುಕುತನವಿಲ್ಲ. ಕೆಲವು ಕವನಗಳು ಅಪರಿಚಿತ ದೃಷ್ಟಿಯುಳ್ಳವರಿಗೆ ಆ ರೀತಿ ಕಂಡರೂ, ಇದ್ದ ಬುದ್ಧಿಯನ್ನೇ ಕೆದರಿ, ಊದಿ, ಆತ್ಮೀಯ ಸ್ನೇಹಬಯಸಿ ಹತ್ತಿರ ಹೋದರೆ ತಮ್ಮೆಲ್ಲವನ್ನೂ ತೆರೆದು ಪ್ರತಿಯೊಂದು ಪದರುಗಳನ್ನೂ ತೋರಿಸುತ್ತವೆ. ಬಳಕೆಯ ನುಡಿಗಳೊಡನೆ ನಿತ್ಯಜೀವನದ ಸಾಮಾನ್ಯ ಘಟನೆಗಳನ್ನೇ ಪ್ರತೀಕಗಳನ್ನಾಗಿ ಬಳಸಿಕೊಂಡ, ಮನುಕುಲದ ಪೀಳಿಗೆಯ ಮೂಲಭೂತ ಸಮಸ್ಯೆಯಾದ ಭವದಮೋಹದ ತೀಕ್ಷ್ಣತೆಯ ಅಭಿವ್ಯಕ್ತಿಯ ಪರಿಣಾಮಕಾರಿತ್ವವನ್ನು ಈ ಒಂದು ಪದ್ಯದಿಂದ ಅರಿಯಬಹುದು.

"ಮೈ ಹೊಲಸಾಗುತ್ತದೆ
ಬಾ ಮಗೂ, ಎಂದು
'ತಾಯಿ' ಕೂಗಿಯೇ ಕೂಗಿದಳು
....
ಕರೆಯನಾಲಿಸದೆಯೆ 'ಮಗು'
ತನ್ನಾಟದಲಿ ತೊಡಗಿ
ಮೈ ಮರೆತು ಕುಳಿತಿತ್ತು. ('ಭವದ ಮೋಹ')

'ತಾಯಿ' ಹಾಗೂ 'ಮಗು'ವಿನ ಪ್ರತೀಕಗಳ ಸಾರ್ಥಕತೆಯಿಂದಾಗಿ ಈ ಕವನ ಪ್ರಭಾವಕಾರಿಯಾದ ರೀತಿಯಲ್ಲಿ ತನ್ನ ಗುರಿಯನ್ನು ಸಾಧಿಸುತ್ತದೆ.

ಕನಸುಗಾರಿಕೆ, ಭಾವುಕತೆಗಿಂತ ತೀರವಿಪರ್ಯಾಸವಾದ ಅನುಭವದ ನೈಜತೆ. ವಕ್ರತೆ. ಹಾಗೂ ಬದುಕಿನ ರಾಡಿರಮರಾಡಿಯನ್ನು ಸಮರ್ಥ ಅಭಿವ್ಯಕ್ತಿಗಾಗಿ, ಭಾಷೆಯನ್ನು ಹುರಿಗೊಳಿಸಲು, ಸಂದಿಗೊಂದಿಯ ಶಬ್ದಗಳಿಗೆ ಮೊರೆಹೊಕ್ಕು ಅಸಂತೃಪ್ತತೆಯಿಂದ ಗುದ್ದಾಡಿ ಸೋಲನಪ್ಪುವ ಕೆಲವು ನವ್ಯ ಕವಿಗಳ ರೀತಿಯನ್ನು, ಇಂದಿನ ಎಷ್ಟೋ ತರುಣರ ಕವನಗಳಲ್ಲಿ ಕಾಣುತ್ತೇವೆ. ವೈಚಾರಿಕತೆ, ಹಾಗೂ ಸಂಕೀರ್ಣತೆಯನ್ನು ತರಲು ಬಳಕೆಯ ಶಬ್ದ ಹಾಗೂ ಆಡು ನುಡಿಗಳೊಡನೆ ಕನ್ನಡ ಪ್ರಾಚೀನ ಹಾಗೂ ಅರ್ವಾಚೀನ ಶಬ್ದ ಹಾಗೂ ನುಡಿಗಟ್ಟುಗಳನ್ನು ಇಂದಿನ ಭಾಷೆಯಲ್ಲಿ ಬೆರಸಿ ಹದಮಾಡಿಕೊಂಡರೆ ಅಭಿವ್ಯಕ್ತಿಗೆ ಹೆಚ್ಚಿನ ಕಸು, ಕೆಚ್ಚುತನ ಉಂಟಾಗಬಲ್ಲದು. ಅಂಥ ಯಶಸ್ವೀ ಪ್ರಯೋಗವನ್ನು ಇಲ್ಲಿ ಕಾಣಬಹುದು,—

"ಬಾಧಿಪ್ಪ ಕಲಿಯು ಎಂಥವನೆ ಇರಲಿ
ಆ 'ಕಲಿಗೆ ಕಲಿ'ಯು ನಾವು
ಒಳ್ಳೆದಗೆ ಒಲಿದು ಬಾಗುವೆವು ಮಣಿದು
ಸಾಧುವಿಗೆ ಸಾಧು ನಾವು" (—'ಸತ್ಯಮೇವ ಜಯತೆ')

ಎನ್ನುವ ಪದ್ಯದಲ್ಲಿ ಹಳಗನ್ನಡ ನುಡಿ ಪದಗೊಂಡು ಇಂದಿನ ಕನ್ನಡದಲ್ಲಿ ಚಿರತಂ ಭಾವಕ್ಕೆ ಪುಷ್ಟಿಯನ್ನು ತಂದಿದೆ. ಆದರೆ ಇಲ್ಲಿಯು ಕವನ ನವ್ಯಮಾರ್ಗದಿಂದ ನುಸುಳಿ ಕೊಂಡು ನವೋದಯ ಮಾರ್ಗವನ್ನು ಅನುಸರಿಸುವದೇ ಇಂಥ ಭಾಷಾ ಪ್ರಯೋಗದ ಯಶಸ್ಸಿಗೆ ಮುಖ್ಯ ಕಾರಣವೆಂದು ವಾದಿಸಬೇಕಿಲ್ಲ. 'ಹಾಲು ತೊರೆಯಿಂದ ಉಪ್ಪು ನೀರಿಗೆ' ಎಂಬ ಪದ್ಯ ಇಂಥ ದೂರನ್ನು ತಳ್ಳಿಹಾಕಬಲ್ಲದು.

"ಹಾಲು ತೊರೆಗೆ—
ಬೆಲ್ಲದ ಕೆಸರು, ಸಕ್ಕರೆಯ ಮಳಲು,
ತವರಾಜದ ನೊರೆತೆರೆ ಕೂಡಿತ್ತು
ಮನೆತುಂಬಿ ತುಳುಕಿತ್ತು"

ಎಂಬ ಗ್ರಂಥಸ್ಥ ಭಾಷೆಯೊಡನೆ—

'ಖದಲ್ ಬದಲ್ ಕಡಲೇ ಕಾಳ್
ಇವರು ಬಿಟ್ರು ಇವರ್‍ಯಾರು ಎಂದು
ಯಕ್ಷ ಪ್ರಶ್ನೆಯ ಹಾಕಿ
ಗರಗರ ತಿರುಗಿಸಿ ಬಿಟ್ಟರು'

ಎನ್ನುವ ಓಣಿಯೊಳಗಿನ ಆಟದ ಮಾತು ಭಾವಕ್ಕೆ ಸಹಜತೆಯನ್ನು ಉಂಟು ಮಾಡಿದೆ. ಭಾಷೆ. ಅಭಿವ್ಯಕ್ತಿಗೆ ತಕ್ಕದ್ದಾಗಬೇಕಾದರೆ ಅದು ತನ್ನ ಪ್ರಾಚೀನ ಸತ್ವವನ್ನು ಯಾವ ರೀತಿ ಅಳವಡಿಸಿಕೊಳ್ಳಬೇಕು ಎನ್ನುವುದಕ್ಕೆ ಸ್ಪಷ್ಟ ಉದಾಹರಣೆ ಇಲ್ಲಿ ದೊರಕುತ್ತವೆ. ಮುನ್ನುಡಿಯಲ್ಲಿ ಡಾ. ಕಲಬುರ್ಗಿಯವರು ಹೇಳಿದಂತೆ ಇಂಥ ಪ್ರಯೋಗಗಳು 'ಹಳೆಯ ಸಾಹಿತ್ಯಕ್ಕೆ ಮುಟ್ಟಿಸಿದ ಋಣವೂ ಹೌದು; ಹೊಸಸಾಹಿತ್ಯ ನೀಡಿದ ಧನವೂ ಹೌದು."

'ಬೆಳಗು ಬರೆದಿತ್ತು ಶೂನ್ಯ' ಎನ್ನುವ ಕವನ ಶ್ರೀಯುತರಿಗೆ ವಿಶೇಷ ಕೀರ್ತಿ. ಯನ್ನು ತರುವಂತಹದು. ವೀರಶೈವ ಶರಣರ ಕಾಲದ ಆವರಣ ಪ್ರಜ್ಞೆಯಿಂದ ಮೂಡಿದ ಚಿಂತನಾಂಶ ಬೆಲೆಯುಳ್ಳದ್ದಾಗಿದೆ.

"ಇದ್ದಕ್ಕಿದ್ದಂತೆ ಆರಿಹೋಯಿತಲ್ಲಾ 'ಜ್ಯೋತಿ'
ಕತ್ತಲೆಯಲ್ಲಿ ಕಾಣಿಸದೆ ಹೋದರಲ್ಲಾ ಅಸಂಖ್ಯಾತ ಶರಣರು
ಗಾಳಿ ಬೀಸಿ ಕಳೆದಿರಬೇಕೆ 'ಇದನು'
'ಇದು' ಬಿರುಗಾಳಿಯಲ್ಲಿಯೇ ಹೊತ್ತಿಕೊಂಡಿತ್ತಲ್ಲಾ
'ಆಚಾರವೆಂಬ ಬತ್ತಿ' ಕುಡಿಯ ಬಿಟ್ಟಿರಬೇಕೆ ?
ಆಚಾರವೆ ಸ್ವರ್ಗವಾಗಿ ಇಳೆಯ ತುಂಬಿತ್ತಲ್ಲಾ !
....
ಕಲ್ಯಾಣವೆಂಬ ಪ್ರಣತಿ ಒಡೆಯಿತ್ತೆ ?

ಚಿಂತನೆಯಲ್ಲಿ ತೊಡಗಿಪ ಪ್ರಾಚೀನ ಸಂಸ್ಕೃತಿಯ ಪ್ರಜ್ಞೆಯುಳ್ಳ ಚೇತನದಲ್ಲಿ ಉದ್ಭವಿಸುವ ತುಮುಲತೆ, ಖೇದ, ಆಶ್ಚರ್ಯ ತಾಕಲಾಟಗಳ ಸುಂದರ ಸೈಜ ಚಿತ್ರದಿಂದ ದುರಂತದ ತೀವ್ರಕಲ್ಪನೆಯನ್ನು ಮಾಡಿಕೊಡುತ್ತದೆ.

ಪಾಟೀಲರು ಬದುಕಿನ ರಾಜಬೀದಿಯಲ್ಲಾದ ಅನುಭವವನ್ನು ಮಾತ್ರವಲ್ಲ, ಸಂದಿ-ಗೊಂದಿ, ಕತ್ತಲು,-ಬೆಳಕಿನಲ್ಲಾದ ಶತಮುಖದ ಅನುಭವವನ್ನು ವ್ಯಕ್ತಗೊಳಿಸಲು ಹವಣಿಸಿದ್ದಾರೆ. ಶಿವರುದ್ರಪ್ಪನವರ ಪದ್ಯವೊಂದರ ಪ್ರೇರಣೆಯಿಂದ ಹುಟ್ಟಿಕೊಂಡ 'ಯಾರಿವನು' ಪದ್ಯ ಯಶಸ್ಸಿನ ಎತ್ತರಕ್ಕೆ ಏರಿದೆ, ಯೌವನದ ಕಾವು, ಕಾಮದ ದಾಹ, ಪರಿಣಾಮಕಾರಿಯಾದ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟಿದೆ.

"ಬ್ಲೌಜಿನಲ್ಲಿ ಅಡಗಿರುವ ಮೊಲೆಗಳನು
ಹುಡಿಕಿ ಹೊರದೆಗೆದು ಹಿಂಡಿ
ಹಾಲನುಕ್ಕಿಸುವ 'ಕಾಮಣ್ಣ'

'ಹಿಂಡಿ ಹಾಲನುಕ್ಕಿಸುವ ಕಾಮಣ್ಣ'—ಈ ಪ್ರಯೋಗ ನೈತಿಕ ಅಧಃಪತನವನ್ನು ಅತ್ಯಂತ ನಿಷ್ಠುರವಾಗಿ ಸಂಕೇತಿಸುತ್ತದೆ.

ಒಳಗಿದ್ದುಕೊಂಡು ಕೊಳೆತು ಅನಾರೋಗ್ಯಕ್ಕೆ ಎಡೆಮಾಡಿಕೊಡುವ ಕಸ-ಕೆಸರನ್ನು ನುಡಿಯ ಕೊಂಕಿನಿಂದ ಹೊರದೆಗೆದು ಗೊಬ್ಬರಗೊಳಿಸುವ ವಿಡಂಬನೆ ತೀಕ್ಷ್ಣವಾಗಿದೆ. ನೈತಿಕ ಮೌಲ್ಯ ಹಾಗೂ ಪ್ರಜ್ಞೆಯ ದ್ಯೋತಕವಾಗಿದೆ. ಮುಖ್ಯವಾಗಿ ಪ್ರತಿಮೆಗಳಿಗೇ ಜೀ ಎನ್ನದೆ ಹುರಿಕಟ್ಟಾದ ಭಾಷಾ ಪ್ರಯೋಗದಿಂದಲೇ ಅದನ್ನು ಸಾಧಿಸಿದ್ದು ಹೆಚ್ಚು ಗಮನಾರ್ಹ.

"ಈಶ್ವರ ಅಲ್ಲಾ ತೇರೆನಾಮ್"
ಎಂದು, ದಿನಾ ಹಾಡುತ್ತಿದ್ದೆಯಲ್ಲ
....
ನಿನ್ನದೆಲ್ಲಾ ತಪ್ಪೆಂದು
ನಮ್ಮ ಗೋಡ್ಸೆ ಹೇಗೆ ಗುಂಡಿಟ್ಟು ಹೊಡೆದ
'ಥಾಡ್, ಥಾಡ್ ಥಾಡ್' ಎಂದು

ಮನಕ್ಕೆ ನಾಟುವ ಇಂಥ ವಿಡಂಬನೆಯಲ್ಲೂ, ಹಬ್ಬಿಕೊಂಡಿರುವ ಪಶುತ್ವ ರಾಕ್ಷಸೀಯ ವಾತಾವರಣಕ್ಕೆ ಪ್ರತಿಯಾಗಿ ರೋಷ ಆವೇಷವಾಗಲಿ, ರೊಚ್ಚು ತಿರಸ್ಕಾರವಾಗಲಿ ಇಲ್ಲ; ಅದಕ್ಕೆ ಪ್ರತಿಯಾಗಿ ಅಜ್ಞಾನದ, ಹಾಗೂ ಮಾನವನ ಕಿಡಿಗೇಡಿತನದ ಬಗೆಗೆ ಇರುವ ಮರುಕವನ್ನು ಭಾಷಾ ಪ್ರಯೋಗ ವ್ಯಕ್ತಗೊಳಿಸುತ್ತದೆ. ವಿಡಂಬಕನಲ್ಲಿ ಇರಬೇಕಾದ ಮುಖ್ಯ ಅಂಶ ಹಾಗೂ ಮನೋಧರ್ಮವನ್ನು ಇಲ್ಲಿ ಗುರುತಿಸಬಹುದಾಗಿದೆ. ಅವರೆ ಭಾವಾತಿರೇಕತೆಯಿಂದ ಪಾರಾಗಿದ್ದರೂ ಕವನ ಉದ್ದುಗೊಂಡದ್ದರಿಂದ ಭಾವ ಸಾಂದ್ರತೆಯನ್ನು ತೆಳ್ಳಗೆ ಮಾಡಿದೆ. ಉದ್ದಾಗಿ ಹಾಸಿದ ಭಾಷೆಯಲ್ಲಿ ಭಾವವನ್ನು

ಹರಹಿದರ ಪರಿಣಾಮವಿದು! ಈ ಕವನದ ಮೊದಲಿನ ಆರು ಸಾಲು ಮತ್ತು ನಡುವೆ ಬೆಳೆದ ಕೆಲವು ನುಡಿಗಳು ಅನಿವಾರ್ಯವಾಗಿದ್ದವೆಂದು ಅನಿಸುವದಿಲ್ಲ.

ಈ ಕವನ ಸಂಕಲನದಲ್ಲಿ ಬಂದಿರುವ ಇನ್ನೂ ಕೆಲವು ಕೃತಕ ಇಲ್ಲವೆ ದುರ್ಬಲ ಪದ್ಯಗಳಿಗಾಗಿ ಮಾತೃ ದೇವೋಭವ, ಹೂವಿನ ಬದುಕು, ಬೆಂಗಳೂರಿನವಳು, ಇಂಥ ಕೆಲವನ್ನು ಉದಾಹರಿಸಬಹುದು. 'ಮಾತೃದೇವೋಭವ' ಕವನದಲ್ಲಿ ಮೊದಲಿನ ಎರಡು ನುಡಿಗಳೇ ಸಾಕಿದ್ದವು-ಕವಿಭಾವನೆಯ ಮರ್ಯಾದೆಯನ್ನು ಕಾಪಾಡಲು.

'ಬೆಳಗು ಬರೆದಿತ್ತು ಶೂನ್ಯ' 'ಹೋಟೆಲಿನಲ್ಲಿ' 'ಹೀಗೆ ಮಾಡಿದ್ದೇನೆ' 'ಭವದ ಮೋಹ'ಮೊದಲಾದ ೧೦-೧೨ ಕವನಗಳಲ್ಲಿ ದೊರೆಯುವ ಗಾಂಭೀರ್ಯ ಉಳಿದ ಕವನಗಳಿಗೆ ಸಾಲದಾದರೂ ಭವಿಷ್ಯದಲ್ಲಿ ಬೆಳಗಬಲ್ಲ ಕವಿಯ ಭರವಸೆಯನ್ನು ಖಂಡಿತವಾಗಿಯೂ ಈ ಕವನ ಸಂಕಲನ ಹುಟ್ಟಿಸುತ್ತದೆ. ಅಷ್ಟೇ ಅಲ್ಲ, ಕನ್ನಡ ಕಾವ್ಯಶ್ರೀ ನವೋದಯದ ಹೊಸಲನ್ನು ದಾಟಿ ನವ್ಯತೆಯ ಬಯಲಿಗೆ ಕಾಲಿಟ್ಟಾಗ 'ಹಾಲು ತೊರೆಯಿಂದ ಉಪ್ಪು ನೀರಿಗೆ' ನಡೆದಂತಾಯಿತೆಂದು ನಿರಾಸೆಗೊಂಡು ಹತಾಶರಾಗಿದ್ದ ಹಿರಿಯ ಸಂಪ್ರದಾಯದ ಜನತೆಗೂ ಈ ಕವನ ಸಂಕಲನ ಸಮಾಧಾನ ತಂದುಕೊಡಬಲ್ಲದಾಗಿದೆಯೆಂದು ಧಾರಾಳವಾಗಿ ಹೇಳಬಹುದು.

★ ಎಸ್. ಎಸ್. ಕೋಟಿನ

'ಅಜ್ಞಗಾನಲು' (ಕವನ ಸಂಕಲನ): ಲೇ. ಶಾಮಸುಂದರ ಬಿದರಕುಂದಿ; ಪ್ರಕಾಶಕರು: ಕೆ. ಎಸ್ ಶರ್ಮ, ಎಂ.ಎ., ಎಲ್.ಎಲ್.ಎಂ., ಕಾವ್ಯಧಾರಾ ಪ್ರಕಾಶನ, ಕಾಮನಕಟ್ಟಿ, ಧಾರವಾಡ-೧. ಪುಟಗಳು: ೪೦+xvi. ಬೆಲೆ–ಎರಡು ರೂಪಾಯಿ.

"ಅಜ್ಞಗಾವಲು" ಶಾಮಸುಂದರ ಬಿದರಕುಂದಿಯವರ ಕಲಾನಿಷ್ಠೆಯನ್ನು ಪ್ರದರ್ಶನಕ್ಕೆ ತರುವ ಪ್ರಥಮ ಕೃತಿ. ೧೯೬೬ ರಿಂದ ೧೭೭೧ರ ವರೆಗೆ ರಚಿತವಾದ ಒಟ್ಟು ೨೧ ಕವನಗಳನ್ನು ಒಳಗೊಂಡ ಈ ಕೃತಿಯನ್ನು ಕುರಿತು ಶಂ. ಮೊಕಾಶಿ ಪುಣೇಕರ ಅವರು "ಐದಾರು ವರ್ಷಗಳಲ್ಲಿ ತಮ್ಮ ವಿಚಾರ ಮತ್ತು ಅಭಿವ್ಯಕ್ತಿಯ ಹದಗಾರಿಕೆಯನ್ನು ಸಾಧಿಸಿದ ಬಿದರಕುಂದಿಯವರು ಕಾವ್ಯದ ಬಗ್ಗೆ ಹೊಸ ಆಶೋತ್ತರಗಳನ್ನು ನಿರ್ಮಿಸಿದ್ದಾರೆಂಬುದು ನಿಃಸಂದೇಹ" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ನವ್ಯಮಾರ್ಗ ತೀವ್ರತರವಾಗಿ ಬಿದರಕುಂದಿಯವರನ್ನು ಒಲಿಸಿಕೊಂಡಿದೆ ಮಾತ್ರವಲ್ಲ ತನ್ನ ಬದುಕಿಗೆ ಅವರ ವ್ಯಕ್ತಿತ್ವವನ್ನೂ ಪ್ರಭಾವಕಾರಿಯಾದ ರೀತಿಯಲ್ಲಿ ಹೊಂದಿಸಿಕೊಂಡು ಬಿಟ್ಟಿದೆ. ವೈಚಾರಿಕತೆ, ಬದುಕಿನ ಮೂಲಭೂತ ಅನುಭವ, ಪ್ರಾಮಾಣಿಕತೆ, ಸಮಸ್ಯೆಗಳ ತೀವ್ರತೆಯನ್ನು ಎದುರಿಸುವ ಧಾರ್ಡ್ಯ, ಹಾಗೂ ಬದುಕನ್ನು

ನೋಡುವ ತಮ್ಮದೇ ಆದ ದೃಷ್ಟಿಕೋನ ಇವೆಲ್ಲ ಸ್ಥಿರಾಸ್ತಿಯಾಗಿ ಇವರ ಕಾವ್ಯಕ್ಕೆ ತಾಕತ್ತನ್ನು ತಂದುಕೊಟ್ಟಿವೆ. ಇವರ ಕಾವ್ಯಪ್ರಜ್ಞೆ ಸಮ್ಯತೆಯನ್ನುಂಡು ಅರಗಿಸಿಕೊಂಡಿರುವದಕ್ಕೆ ಕಾವ್ಯಕ್ಕೆ ಪ್ರಾರಂಭದ 'ಆಭಾರ ಮನ್ನಣೆ'ಯಿಂದ ಮೊದಲುಗೊಂಡು ಕಟ್ಟಕಡೆಯ ಹೆಸರಿಲ್ಲದ ಕವನದ ವರೆಗೂ ಸಾಕ್ಷಿಯನ್ನೂ ಕೊಡುತ್ತ ಹೋಗಬಹುದು. ಹೆಸರಿಲ್ಲದ ಪದ್ಯದಿಂದ ಪ್ರಾರಂಭಿಸಿ ಹೆಸರಿಲ್ಲದ ಪದ್ಯದಿಂದಲೇ ಮುಕ್ತಾಯ ತಂದುಕೊಡುವ ರೀತಿಯಲ್ಲಿಯೇ ಅವರ ಪ್ರಯೋಗಶೀಲತೆಯ ಸೊಕ್ಕನ್ನು ಕಂಡನ್ನುಕೊಳ್ಳಬಹುದು. ಕೆಲವು ಕವನಗಳ ಭಾವಗ್ರಹಣ ವೈಯಕ್ತಿಕ ಪ್ರತೀಕಗಳಿಂದಾಗಿ ಹಾಗೂ ಅಭಿವ್ಯಕ್ತಿಯ ಗುಪ್ತವಿಧಾನದಿಂದಾಗಿ ಕ್ಲಿಷ್ಟವೆನಿಸಿದರೂ ಅಂಥ ವಿಧಾನ ಕಾವ್ಯದ ಬಗೆಗೆ ಕವಿ ತಾಳಿರುವ ಧೋರಣೆಯನ್ನು ಸ್ಪಷ್ಟವಾಗಿ ಕಲ್ಪನೆಗೆ ತಂದು ಕೊಡುತ್ತದೆ. ಕವಿ ಓದುಗರನು ಪ್ರಮಾಣವಾಗಿಟ್ಟುಕೊಂಡು ಕಾವ್ಯ ರಚಿಸುವದಿಲ್ಲ. ತನ್ನ ಅನುಭವ ಹಾಗೂ ಅಭಿವ್ಯಕ್ತಿಯ ಕಲೆಯನ್ನು ಪ್ರಮಾಣವಾಗಿಟ್ಟುಕೊಳ್ಳುತ್ತಾನೆ. ಕವಿಯ ಕೆಲಸ ಎದೆಯಲ್ಲಿ, ತಲೆಯಲ್ಲಿ ಚಿಗಿತದ್ದನ್ನು ಕಿತ್ತು ಮಾತಿನಲ್ಲಿ ಸಿಕ್ಕಿಸುವವನಲ್ಲ, ಓದುಗರ ಎದೆಯಲ್ಲಿ ಅದರ ಬೇರುಗೊಳಿಸುವದು ಎಂಬುದನ್ನು ಒಪ್ಪಿಕೊಂಡರೂ, ಕಾವ್ಯ ಪುಕ್ಕಟೆ ಬಂದ ವಸ್ತುವಲ್ಲ; ಪಡೆದು ಭೋಗಿಸಬೇಕೆನ್ನುವವನೂ ಎದೆಯ ಪರ್ಸತೆಗೆದು ಬೆಲೆತೆತ್ತಬೇಕಾಗುತ್ತದೆ. ಇಂಥ ಕಾವ್ಯ ಗರ್ಭದಲ್ಲಿಯ ದ್ರವ್ಯ ಪಡೆಯುವಲ್ಲಿ ಜಿಗುಟುಳ್ಳವನಿಗೆ ಮಾತ್ರ ಜಯ.

ಬದುಕಿನ ನೈಜಾನುಭವದ ಪ್ರಜ್ಞೆ ಕವಿಗಿದೆ. ಬದುಕಿನ ಸಫಲತೆ, ವಿಫಲತೆ, ಹೋರಾಟಗಳ, ಹಾಗೂ ಆಸೆ-ನಿರಾಶೆಗಳ ಅರಿವು ' ಹೆಜ್ಜೆ 'ಯಾಗಿ ರೂಪುಗೊಂಡಿದೆ. 'ವೈನುಗ್ಗನೆಷ್ಟನ್ನೂ ಲೆಕ್ಕಿಸದೆ ದಿಂಡುರುಳಿ ಸವಿಸೇನು ಹಾದಿ' ಎಂಬ ಉತ್ಸಾಹ, ಚೈತನ್ಯದ ಕಾವು ನುಡಿಯಿಂದ ನುಡಿಗೆ ತೆಳ್ಳಗಾಗುತ್ತ ಮುನ್ನಡೆಯುವದೇ ಬದುಕಿನ ಸೋಲನ್ನು ಸಂಕೇತಿಸುತ್ತದೆ. ಜೀವನದ ಪೈಪೋಟಿ, ಭರವಸೆಗಳ ನಿಷ್ಫಲತೆ ಅದರೊಡನೆಯೂ ಬದುಕಿನ ಒಟ್ಟು ಸಾರ್ಥಕತೆಯನ್ನು ಪ್ರದರ್ಶಿಸುವಲ್ಲಿ ಈ ಕವನದ ಅಚ್ಚುಕಟ್ಟುತನವಿದೆ.

ಭಾವವನ್ನು ಹೊರಗೆಡುವ ಪ್ರಸಂಗದಲ್ಲಿ ನುಡಿಯ ನಡಿಗೆ ಅನುಸರಿಸಿದ ಲಯ ಸಾರ್ಥಕಗೊಳ್ಳುತ್ತದೆ. 'ನಡದೇನು ನಡೆಸಿಯೇನು–ನಡೆದೇನು' ಎನ್ನುವಲ್ಲಿಯ ನುಡಿಯ ನಡಿಗೆ ' ನಡೆಸಿಯೇನು ' ಎನ್ನುವಲ್ಲಿ ಅಕ್ಕಳಿಸಿದೆ; ಈ ಅಕ್ಕಳಿಕೆಯೇ ಬದುಕಿನ ಉತ್ಸಾಹದ ಆಯಾಸವನ್ನು ಸ್ಪಷ್ಟವಾಗಿ ಸಂಕೇತಿಸುತ್ತದೆ. ಬದುಕಿನ ಬಗೆಗೆ ತಳೆದಿರುವ ಬಿದರಕುಂದಿಯವರ ನಿಷ್ಠುರ ದೃಷ್ಟಿಯನ್ನು ವ್ಯಕ್ತಗೊಳಿಸುತ್ತದೆ.

ವ್ಯಕ್ತಿಯ ಮೇಲೆ ಉಂಟಾಗುವ ಆವರಣದ ಸಾಂದ್ರತೆಯ ತೀವ್ರ ಪರಿಣಾಮದಿಂದುಟಾಗುವ ವ್ಯಕ್ತಿತ್ವದ ದುರಂತತೆಯ ಚಿತ್ರ "ಫಲಿತಾಂಶ"ದಲ್ಲಿ ನಾಟುವಂತಿದೆ. ಕವಿಯು ಅನುಭವದೊಡನೆ ಸಹಜವಾಗಿ ಹುಡುಗಾಟ ಹಾಕಬಲ್ಲ. ಅನುಭವದ ಭೀಕರತೆ, ಕರಾಳತೆಯ ಬಗೆಗೆ ಕ್ರಾಂತಿಕಾರ ಪ್ರವೃತ್ತಿಯ ಪ್ರಯತ್ನದ ಸೋಲನ್ನೆ ಅಪಹಾಸ್ಯಕ್ಕೀಡು ಮಾಡಿದ್ದಾನೆ.

ಪರಂಪರೆಯಿಂದ ಕೊಸರಿಕೊಂಡು ಪ್ರಗತಿಗಾಗಿ ಹಾತೊರೆವ ಹಂಬಲ, ನವ್ಯತೆಯ ನಿರೀಕ್ಷೆ "ನಿರೀಕ್ಷೆ"ಯಂಥ ಪದ್ಯಗಳಲ್ಲಿ ನೋಡುಬಹುದು. ಪ್ರಗತಿಯ ಅನಿವಾರ್ಯವನ್ನು ವ್ಯಕ್ತಗೊಳಿಸುವಲ್ಲಿ ಕವಿಯ ಬದುಕಿನ, ವ್ಯಕ್ತಿತ್ವದ ಹಾಗೂ ಕಾವ್ಯದ ಧೋರಣೆಯನ್ನು ಗುರುತಿಸಬಹುದಾಗಿದೆ.

" ಉಸುಕು ನೆಲದಲ್ಲಿ ಒಸರಿ
ತೋಡಿರುವ ತೆಗ್ಗು ತುಂಬಿ ಇದೇ
ಇದೇ ನೋಡು, ನಾ ಹೊರಗೆ ಹರಿಯುವ ರೀತಿ
ಹೀಗೆ ಹರಿಯಗೊಡು ನನ್ನ
ಏನೊಂದು ಆಣೆ-ಚೂರಿ ಹಾಕದಿರು
ಇಲ್ಲವಾದರೆ
ಇಲ್ಲೇ ನಿಂತು
ನೆಲಕ್ಕೆ ಹಾವಸೆ ಗಟ್ಟೇನು; ನನ್ನ ಕೊಳೆಯಿಸದಿರು
ಮತ್ತೆ ಮೂಗ ಮುಚ್ಚಿ ನೆವೆಯದಿರು.

ಉಸುಕು, ನೆಲ, ತೆಗ್ಗು, ಇವೆಲ್ಲ ಹದಗೊಂಡ ಪ್ರತೀಕಗಳಾಗಿ ಅರ್ಥವ್ಯಾಪ್ತಿಯನ್ನು ತಂದಿವೆ. ಪ್ರಗತಿಯ ಹಂಬಲ, ಅದಕ್ಕೆ ಉಂಟಾಗುವ ಆಘಾತ, ಆ ಅಡತಡೆಗೆ ಪ್ರತಿಕ್ರಿಯೆಯಾಗಿ ಕಾಣಿಸಿಕೊಳ್ಳಬಹುದಾದ ಅನಾರೋಗ್ಯದ ಅಪಾಯದ ಗಂಭೀರ ಅಭಿವ್ಯಕ್ತಿಯಿದೆ.

ಅಂದಮಾತ್ರಕ್ಕೆ ಪರಂಪರೆಯ ಮೌಲ್ಯದ ಅರಿವು ಬಿದರ ಕುಂದಿಯವರಲ್ಲಿ ಇಲ್ಲವೆಂದಲ್ಲ. ಪರಂಪರೆಯ ಮೌಲ್ಯ ನಿರ್ಣಯಕ್ಕೆ ತೊಡಗಿರುವುದನ್ನು ಹಲವು ಕವನಗಳಲ್ಲಿ ಗುರುತಿಸಲು ಅವಕಾಶವಿದೆ. ಹಳತು_ಹೊಸತುಗಳ ಅಸ್ತಿತ್ವದ ಹೋರಾಟ, ತುರುಸು, ಬಲಾಬಲಗಳ ನಿರ್ಣಯಕ್ಕೆ ತೊಡಗುವಲ್ಲಿ ಹೊಸದೃಷ್ಟಿಯಿದೆ. ಹಳೆಯ ಹೊಲವನ್ನು ಹದಗೊಳಿಸಿ ಹೊಸಬೆಳೆಯನ್ನು ಬೆಳೆಯುವ ಬದುಕಿನ ಧೋರಣೆಯ ಸಾಫಲ್ಯವನ್ನು ಕವಿ ತನ್ನ ಹಲವಾರು ಕವನಗಳಲ್ಲಿ ಪ್ರದರ್ಶಿಸಿದ್ದಾನೆ. ವ್ಯರ್ಥ ಸಂಪ್ರದಾಯವನ್ನು ಹರಿದೊಗೆದು ಅದನ್ನು ಬದುಕಿನ ಹೊಸಮೌಲ್ಯಗಳಿಗೆ ಅನುಗೊಳಿಸಿಕೊಳ್ಳುವಲ್ಲಿ ಬದುಕಿನ ಸಾರ್ಥಕತೆಯನ್ನು ಕವಿಕಂಡುಕೊಂಡಿದ್ದಾನೆ. ಬದಲಾವಣೆ ಕವನದಲ್ಲಿ ಇದನ್ನು ಗುರುತಿಸಬಹುದು.—

"ಡೊಂಕು ಮಾರಿಯ ನಳ ಛಟ್ಟನೇ
ಕಿತ್ತೊಗೆದೆ : ಬಾವಿ ಒಡಕನ್ನೆಲ್ಲ
ದುರಸ್ತಿಗೊಳಿಸಿ, ಕುಡಿನೀರ ಸೆಲೆ
ಒಡೆಸಿ, ಐದೂ ಕಡೆಗೈದೈದು ಗಡ
ಗಡೆ ಹಚ್ಚಿ, ತೇರೆಳವ ಹಗ್ಗ ತುಂಡರಿಸಿ
ಈಗ ನೀರು ಸೇದಿಕೊಳ್ಳಿರೋ ಮಕ್ಕಳಾ ಅಂತ"

ಹೀಗೆ ಬದುಕಿನ ಸಾರ್ವತ್ರಿಕ ಸಮಸ್ಯೆಯನ್ನು ಎದುರಿಸುವಲ್ಲಿ ದಕ್ಷತೆಯನ್ನು ತೋರಿಸಿದ್ದಾರೆ. ಆದರೆ ಕವಿ ತನ್ನ ವ್ಯಕ್ತಿತ್ವಕ್ಕೆ, ಅನುಭವಕ್ಕೆ ನಿಲುಕದ ವಸ್ತುವಿಗೆ ಕೈ ಹಾಕುವದಿಲ್ಲ. ಅನುಭವ, ಹಾಗೂ ವೈಚಾರಿಕತೆಗಳ ಪ್ರದರ್ಶನಕ್ಕೆ ತೊಡಗುವಲ್ಲಿ ಭಾಷೆಗೇ ವಿಶೇಷ ಸತ್ವವನ್ನು ತಂದುಕೊಳ್ಳಲಾಗಿದೆ: ಆದರೂ ಕೆಲವುಸಲ ಪ್ರತೀಕಗಳನ್ನು ಪ್ರೌಢಗೊಳಿಸಹೋದ ಕಾರಣ ಕ್ಲಿಷ್ಟವೆನಿಸಿದರೂ ಜಿಗುಟಾಗಿವೆ.

ಬಾಳಿನ ವಿಷಮತೆ, ಆತ್ಮವಂಚನೆ, ಅಸಂತೃಪ್ತಿಯನ್ನು ಪ್ರದರ್ಶಿಸುವ 'ಚಿನ್ನಿ ನಲ್ಲರಳಿದ್ದು ಮುಳ್ಳು', ಕವನ ಭಾಷಾಪ್ರಯೋಗದಲ್ಲಿ, ಅಭಿವ್ಯಕ್ತಿಯ ವಿಧಾನದಲ್ಲಿ ಹೊಸತನವನ್ನು ಹರಡಲು ಯತ್ನಿಸಿದೆ.

> " ಇಲ್ಲೆಲ್ಲೋ ಯಾರ ಮುಖವನ್ನೋ ಗುದ್ದಿ
> ನಾತ ತೇಲಿತು ಈಗ ಗಾಳಿಗುಂಟ
> ಮೂಸಿ ನೋಡುವ ಕಿವಿಗೆ ಸುದ್ದಿಗೂಟ "

ಹೀಗೆ ಬಿದರಕುಂದಿಯವರು ಭಾಷೆಯನ್ನು ಅನುಭವಾಭಿವ್ಯಕ್ತಿಗೆ ಯೋಗ್ಯವಾಗಿ ರೂಢಿಸಿಕೊಳ್ಳಬಲ್ಲರು. "ಹೊಸ ಕವಿ : ಒಂದು ಅನುಭವ" ಮೊದಲಾದ ಕೆಲವು ಕವನಗಳಲ್ಲಿ ವಿಡಂಬನೆಯ ಆಕರ್ಷಣವಿದೆ.

"ಹುಟ್ಟು ಬದುಕಿನ ಬೆಲೆಯನ್ನು ಕಟ್ಟಲು ಹೊರಟ ಪ್ರಯತ್ನದ ಫಲವಾಗಿ ಮೂಡಿಬಂದುದು. ನಿರ್ಮಿಸಿಕೊಂಡಿರುವ ಪ್ರತೀಕಗಳು ಅರ್ಥವಂತಿಕೆಯಿಂದ ಬಹಳಷ್ಟು ಫಲಕಾರಿಯಾದವುಗಳಾದರೂ ಮೂಲತಃ ಅನುಭವದಲ್ಲಿಯೇ ಸ್ವಂತಾನಿಕೆ ಹೊಸತನದ ಕೊರತೆ ಹೆಚ್ಚು. ಗತಾನುಗತಿಕವಾಗಿ ಬಂದ ಅನುಭವವೊಂದನ್ನು ನವ್ಯ ಮಾರ್ಗ ಮೆಚ್ಚುವಂತೆ ಕವನಿಸ ಹೊರಟಿರುವದೊಂದೇ ಇಲ್ಲಿ ಮೆಚ್ಚಬೇಕಾದ ಅಂಶ.

> " ದಟ್ಟಡವಿ ಕ್ರೂರ ಮೃಗಜಂತುಗಳರಮನೆಯಲ್ಲಿ
> ರಾಜಾತಿಥ್ಯಕ್ಕಾಗಮಿಸಿ ಬಂದಿವಾಸವನನುಭವಿಸುವವಗೆ "

ಎನ್ನುವ ಸಾಲುಗಳು ಅರ್ಥದ ವ್ಯಾಪ್ತಿ, ವಕ್ರತೆಯನ್ನು ಅವಗಾಹನೆಗೆ ತಂದುಕೊಟ್ಟರೂ ಭಾಷೆ ನಡುಗನ್ನಡ ಕಾವ್ಯದ ಓಟವನ್ನು ನೆನಪಿಗೆ ತರುತ್ತದೆ. ಆದರೆ ಜರೂರ ಉದ್ದೇಶವನ್ನು ಈಡೇರಿಸಲು ಮುದ್ದಾಂ ಬಳಕೆಯಾದ ಭಾಷೆಯೆನಿಸದು.

> " ಗಂಟಲಾರಿ, ಎದೆ ಬತ್ತಿ ನಾಲಗೆ ಮಂಕಾಗಿ
> ದನಿ ಇಲ್ಲವಾಗಿದೆ ಕೂಗಿ ಕರೆಯಲಿಕ್ಕೆ
> ಗಟ್ಟಿತನ–ಗಡಸುತನ ಎದೆ ಬಿಟ್ಟೋಡಿವೆ ಎಲ್ಲಿಗೋ "

ನವೋದಯದ ಕವಿಯಂತೆ ಭಾವುಕತೆಯ ಸುಳಿಯಲ್ಲಿ ಇಳಿಯದಿದ್ದರೂ ಭಾವನೆಯಿಂದ ಭಾಷೆ ವಂಚಿತವಾಗಬಾರದು. ಭಾವಾಭಿವ್ಯಕ್ತಿಗೆ

“ ಇ
ಳಿ
ಯು
ತ್ತಾ ”

ಎಂದು ವರ್ಣಗಳ ಮೆಟ್ಟಿಲುಗಳ ರಚನೆಯಲ್ಲಿ ತೊಡಗುವ ಕವಿ ಮೇಲಿನ ಮೂರು ಸಾಲುಗಳ ಓಟ ಪ್ರದರ್ಶಿಸಲ್ಪಡಬೇಕಾದ ಭಾವಕ್ಕೆ ವ್ಯತಿರಿಕ್ತವಾಗಿ ಪ್ರವಹಿಸುವಂತೆ ಮಾಡಿರುವ ಬದುಕಿನ ಅನುಭವವನ್ನು ಹತ್ತಿರದಿಂದ ನೋಡದೆ ದೂರದಿಂದ ನೋಡುವದೇ ಇದಕ್ಕೆ ಕಾರಣ; ಅದರೆ ಇದರಿಂದಾದ ಒಂದು ದಟ್ಟಪ್ರಯೋಜನವೆಂದರೆ, ವ್ಯರ್ಥ ಭಾವುಕತೆಯ ತೀವ್ರತೆಯಿಂದ ತಪ್ಪಿಸಿಕೊಂಡಿರುವುದು.

ಗ್ರಂಥಸ್ಥ ಭಾಷೆಯ ಪ್ರಭಾವ ವಿಶೇಷವಾಗಿದ್ದರೂ “ಬೂರ್ಜ್ವಾ ಒಬ್ಬನಿಗೆ” ಕವನದಲ್ಲಿಯ ಗಬ್ಬನಾತ, ಸೆಗಣಿ, ಹೊಯ್ಮಾಲಿ, “ಬದಲಾವಣೆಯಲ್ಲಿ” ಜಗಳಾ-ತಂಟೆ, ಲತ್ತ, ದರಕಾರ, ಸಂತೆನಕ, “ಹೊಸಕವಿ” ಒಂದು ಅನುಭವದಲ್ಲಿ ಕಟುಕ ಬಕ್ಕರಿ ಮೊದಲಾದ ಶಬ್ದಗಳಲ್ಲಿ ಸಹಜತೆಯ ದೇಶೀಯ ಸ್ವಾರಸ್ಯವಿದೆ.

ಈ ಒಟ್ಟು ೨೧ ಕವನಗಳಲ್ಲಿ ತೀರ ವೈಯಕ್ತಿಕ ಪ್ರತಿಮೆಗಳಿಂದಾಗಿ ಅರ್ಥಾನುಭವಕ್ಕೆ ತಿಣುಕಬೇಕಾದ ಕಾರಣ, ಸಾಮಾನ್ಯ ಓದುಗರ ಒಲವನ್ನು ಅವಸರವಾಗಿ ಪಡೆಯದಿದ್ದರೂ ಈ ಕವನ ಸಂಗ್ರಹ ಕನ್ನಡ ಸಾಹಿತ್ಯದ ನವ್ಯಮಾರ್ಗಕ್ಕೆ ಒಂದು ಸ್ವಾಗತಾರ್ಹವಾದ ತರುಣಕವಿಯ ಕಾಣಿಕೆಯೆಂದು ಒಪ್ಪಿಕೊಳ್ಳಬೇಕು; ಅಷ್ಟೇ ಅಲ್ಲ ಕನ್ನಡ ಪ್ರೌಢ ಸಹೃದಯರಲ್ಲಿ ಆಶೋತ್ತರಗಳನ್ನು ಹುಟ್ಟಿಸಬಲ್ಲ ಕೃತಿಯಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಶಾಮಸುಂದರ ಬಿದರಕುಂದಿಯವರಿಂದ ಸತ್ವಪೂರ್ಣವಾದ ಕೃತಿಗಳಿನ್ನೂ ಬರಲೆಂದು ನಮ್ಮ ಹಾರೈಕೆ.

★ **ಎಸ್. ಎಸ್. ಕೋಟನ**

ಸಾದರ ಸ್ವೀಕಾರ

೧. **ಪುಲಿಗೆರೆ:**

ಸಂ: ಶ್ರೀ ಸದಾನಂದ ಕನವಳ್ಳಿ ಮತ್ತು ಶ್ರೀ ಚನ್ನಪ್ಪ ಕೆರಿಮನಿ. ಪ್ರ: ಪಂಪ ಪ್ರಕಾಶನ, ಲಕ್ಷ್ಮೇಶ್ವರ, ಪು: ೧೧೬+iv; ಬೆಲೆ: ೫-೦೦, ೧೯೭೨.

೨. **ಗುಣದಮ್ಮನ ಕಥೆ** [ಜಾನಪದ ಕಥನಗೀತ]

ಸಂ: ಶ್ರೀಮತಿ ಸುಶೀಲಾ ಪಟ್ಟಣಶೆಟ್ಟಿ ಎಂ. ಎ; ಪ್ರ: ಸಮಾಜ ಪುಸ್ತಕಾಲಯ, ಧಾರವಾಡ, ಪು: ೧೨೪; ಬೆಲೆ: ೨-೭೫. ೧೯೭೨.

೩. **ಪ್ರೇಮಧಾರೆ** [ಪ್ರೇಮ ಗೀತೆಗಳು]:

ಲೇ: ಚಂದ್ರು; ಪ್ರ: ವಿಶ್ವಧರ್ಮ ಪ್ರಕಾಶನ, ಹರಿಹರ; ಪು: ೪೧+xv ಬೆಲೆ: ರೂ: ೨-೦೦;

೪. **ಹೂಬಳ್ಳಿ....ಅಲ್ಲ....ಜಲಬಳ್ಳಿ !** [ಕವನ ಸಂಗ್ರಹ]

ಲೇ: ಶ್ರೀ ಶಂಕರತನಯ ಪ್ರ: ಭಾರತಿ ಪ್ರಕಾಶನ, ನುಗಟಿಖಾನ ಹುಬ್ಬಳ್ಳಿ ಪುಟ: ೨೪+iv; ಬೆಲೆ: ಅರವತ್ತು ಪೈಸೆ ೧೯೭೨.

೫. **ಸಚೇತನ ಮೂರ್ತಿ ಶ್ರೀ ನಾ. ಚೆ:**

ಲೇ: ಶ್ರೀ- ವೀರಣ್ಣ ಬಳಿಗಾರ; ಪ್ರ: ಕನ್ನಡ ಸಿರಿ ಪ್ರಕಾಶನ, ಕನ್ನಡ ಬಳಗ, ರಾಯಚೂರು, ಪು: ೬೩+vi; ಬೆಲೆ: ರೂ. ೨-೦೦. ೧೯೭೨.

೬. **ತಿಗಣೆ:** (ಕವನ ಸಂಕಲನ)

ಲೇ: ಅ. ಮ. ಸಿ; ಪ್ರ: ಸ್ವಯಂಪ್ರಭಾ ಗ್ರಂಥಮಾಲೆ, ರಾಯಚೂರು. ಪು: ೬೨+iv; ಬೆಲೆ ರೂ. ೨-೦೦. ೧೯೭೨.

೭. **ಯೋಗ:**

ಲೇ: ಆನಂದ್; ಪ್ರ: ಶ್ರೀ ಅಚ್ಯುತಾಶ್ರಮ, ಬಳ್ಳಾರಿ; ಪು: ೪೪+iii ಬೆಲೆ ರೂ. ೧-೦೦ ೧೯೭೨.

೮. **ಹುಸಿ:** (ಕವನ ಸಂಗ್ರಹ)

ಲೇ; ಶ್ರೀ. ಬಿ. ಸಿ. ದೇಸಾಯಿ; ಪ್ರ: ಶ್ರೀ. ಕೆ. ವಿ. ವಿವೇಕ, ವಿವೇಕ ಪ್ರಕಾಶನ ೧೫೫೩, ಮಾರುತಿ ಗಲ್ಲಿ, ಬೆಳಗಾವಿ; ಪುಟ: ೬೨; ಬೆಲೆ ರೂ. ೩-೭೫; ೧೯೭೨.

ಸಂಪಾದಕೀಯ

ಕಂಬನಿ

ಪ್ರೊ. ಗ. ಸ. ಹಾಲಪ್ಪನವರು ಕರ್ನಾಟಕ ವಿಶ್ವವಿದ್ಯಾಲಯದ ಅಗ್ರ ಪಂಕ್ತಿಯ ಪ್ರಾಧ್ಯಾಪಕರಲ್ಲಿ ಒಬ್ಬರು. ವಿದ್ಯಾರ್ಥಿ ಜೀವನದಿಂದಲೂ ಕರ್ನಾಟಕ ಏಕೀಕರಣ, ಕನ್ನಡಿಗರ ಏಳ್ಗೆಗಾಗಿ ಹಲವಂದದಿಂದ ಶ್ರಮಿಸುತ್ತ ಬಂದವರು. ತಲೆತುಂಬ ವಿಚಾರ, ಕೈತುಂಬ ಕೆಲಸ–ಇದು ಶ್ರೀಯುತರ ಬದುಕಿನ ಸಾರ ಸರ್ವಸ್ವ. ೧೯೫೭ ರಂದು ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಕರ್ಣಧಾರತ್ವವನ್ನು ವಹಿಸಿಕೊಂಡು ಹಗಲಿರುಳು ದುಡಿದು ಅದಕ್ಕೆ ಗಣ್ಯಸ್ಥಾನವನ್ನು ಕಲ್ಪಿಸಿದವರು. ಎಚ್ಚೆತ್ತ ಭಾರತ ಎತ್ತ ಸಾಗಿದೆ? ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ, ದಿ ಹಿಸ್ಟರಿ ಆಫ್ ಫ್ರೀಡಮ್ ಮೂವ್ಮೆಂಟ್ ಇನ್ ಕರ್ನಾಟಕ–ಮೊದಲಾದ ಗ್ರಂಥಗಳನ್ನು ಬರೆದು ರಾಜ್ಯಶಾಸ್ತ್ರಕ್ಷೇತ್ರ, ಕನ್ನಡ ಸಾಹಿತ್ಯಕ್ಷೇತ್ರಗಳ ಕಣಜವನ್ನು ತುಂಬಿದವರು. ಅಳಿಯಲಾರದ ಹೆಜ್ಜೆಯನ್ನು, ಮರೆಯಲಾರದ ಹೆಸರನ್ನು ಬಿಟ್ಟುಹೋದ ಲಿಂಗೈಕ್ಯ ಪ್ರೊ. ಗ. ಸ. ಹಾಲಪ್ಪನವರ ಅಗಲಿಕೆಗೆ 'ಭಾರತಿ' ಕಂಬನಿಗಳನ್ನರ್ಪಿಸುತ್ತದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

ನಾಟಕರತ್ನ ಗುಬ್ಬಿ ವೀರಣ್ಣನವರು ಕೆಲವು ದಿನಗಳ ಹಿಂದೆ ಲಿಂಗೈಕ್ಯರಾದರು. ಪುರುಷ ಪ್ರಯತ್ನದ ಬಲದಿಂದ ಒಬ್ಬ ವ್ಯಕ್ತಿ ಏನನ್ನು ಸಾಧಿಸಬಲ್ಲನೆಂಬುದಕ್ಕೆ ಅವರ ಜೀವನವೊಂದು ಉದಾಹರಣೆ. ನಟರಾಗಿ, ನಾಟಕ ಕಂಪನಿಯ ಒಡೆಯರಾಗಿ, ನಟವರ್ಗಕ್ಕೆ ಮಾರ್ಗದರ್ಶಕರಾಗಿ, ಸಾಹಿತ್ಯ, ಸಮಾಜ ಮತ್ತು ಧರ್ಮಕಾರ್ಯಗಳಿಗೆ ಪ್ರೋತ್ಸಾಹದಾಯಕರಾಗಿ ಬಾಳಿದ ಶ್ರೀಯುತರು ಸಮಸ್ತ ಕನ್ನಡಿಗರ ಜನಪ್ರಿಯ ವ್ಯಕ್ತಿಗಳು. ಕನ್ನಡಿಗರಿಗೆ ರಂಗಭೂಮಿಯ ಹೊಸರುಚಿಯನ್ನು ಅಖಂಡವಾಗಿ ಒದಗಿಸಿಕೊಟ್ಟ ಅವರ ಸೇವೆಯನ್ನು ಮನ್ನಿಸಿ ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿತು. ರಾಜ್ಯಸರ್ಕಾರ ಗೌರವ ಪ್ರಶಸ್ತಿ ನೀಡಿತು. ಕೇಂದ್ರ ಸರ್ಕಾರ ಪದ್ಮಶ್ರೀ ಗೌರವ ಸಲ್ಲಿಸಿತು. ಇಂಥ ಉಜ್ವಲ ವ್ಯಕ್ತಿಯನ್ನು ಕಳೆದುಕೊಂಡ ಕನ್ನಡ ನಾಡು ಅದರಲ್ಲಿಯೂ ನಾಟಕ ಕ್ಷೇತ್ರ ನಿಜಕ್ಕೂ ಅಪಾರ ದುಃಖಕ್ಕೀಡಾಗಿದೆ. ದೇವರು ದಿವಂಗತರ ಆತ್ಮಕ್ಕೆ ಶಾಂತಿಯನ್ನೀಯಲಿ ಎಂದು "ಭಾರತಿ" ಹಾರೈಸುತ್ತದೆ.

ಕುಲಪತಿ ಪ್ರೊ. ಜವರೇಗೌಡರು.

ಕನ್ನಡಾಭಿಮಾನಿಗಳ ಶ್ರೇಣಿಯಲ್ಲಿ ಸ್ಥಿರವಾದ ಸ್ಥಾನವನ್ನು ಗಳಿಸಿದವರು ಪ್ರೊ. ದೇ. ಜವರೇಗೌಡರು. ಈ ಅಭಿಮಾನ ಅವರಿಗೆ ಅನೇಕ ಗೌರವಗಳನ್ನು

ಗಳಿಸಿಕೊಟ್ಟಿದೆ. ಅವುಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಸ್ಥಾನವೂ ಒಂದು. ಕಳೆದ ಮೂರು ವರುಷಗಳಿಂದಲೂ ಕುಲಪತಿಗಳಾಗಿ ಮೈಸೂರು ವಿಶ್ವವಿದ್ಯಾಲಯದ ಸರ್ವತೋಮುಖ ಏಳಿಗೆಗಾಗಿ ಕನ್ನಡದ ತೇಜಸ್ಸಿಗಾಗಿ ದುಡಿದ ಅವರ ಸೇವೆಯನ್ನು ನೆನೆದು ನಮ್ಮ ರಾಜ್ಯ ಸರಕಾರ ಇನ್ನೊಂದು ಅವಧಿಯ ವರೆಗೆ ಅವರನ್ನು ಕುಲಪತಿಗಳನ್ನಾಗಿ ನೇಮಿಸಿದೆ. ಇದು ನೈಷ್ಠಿಕ ಸೇವೆಗೆ, ಕನ್ನಡಾಭಿಮಾನಕ್ಕೆ, ಸಂದ ಯೋಗ್ಯ ಪುರಸ್ಕಾರ. ಈ ಸಮಯದಲ್ಲಿ ಕುಲಪತಿ ದೇ. ಜ. ಗೌ. ಅವರಿಗೆ ಅಭಿಮಾನದ ಅಭಿವಂದನೆಗಳನ್ನು ಸಲ್ಲಿಸಿ, ಶ್ರೀಯುತರಿಂದ ಕನ್ನಡದ ಘನತೆ ಇನ್ನೂ ಹೆಚ್ಚಲಿ ಎಂದು 'ಭಾರತಿ' ಹಾರೈಸುತ್ತದೆ.

ರಾಜ್ಯ ಪ್ರಶಸ್ತಿ ಗೌರವ.

ಹಲವು ಕ್ಷೇತ್ರಗಳಲ್ಲಿ ದುಡಿಯುವುದರ ಮೂಲಕ ಕರ್ನಾಟಕಕ್ಕೆ ಬೆಲೆಯುಳ್ಳ ಸೇವೆ ಸಲ್ಲಿಸಿದ ಮಹನೀಯರನ್ನು ರಾಜ್ಯೋತ್ಸವ ಪ್ರಸಂಗದಲ್ಲಿ ಗೌರವಿಸುವ ಶ್ರೀಸಂಪ್ರದಾಯವನ್ನು ಪಾಲಿಸುತ್ತಲಿದೆ ನಮ್ಮ ರಾಜ್ಯಸರಕಾರ. ಈ ವರುಷ ಇಂಥ ಗೌರವಕ್ಕೆ ಶ್ರೀಯುತರಾದ ಕೆ. ರಾಮ ಅಯ್ಯರ, ಡಾ. ಎಂ. ಸಿದ್ಧಲಿಂಗಯ್ಯ, ಟಿ. ಕೃಷ್ಣರಾಜ ಅಯ್ಯಂಗಾರ, ಎಸ್. ಶ್ರೀನಿವಾಸಮೂರ್ತಿ, ವೈ. ಸುಬ್ರಹ್ಮಣ್ಯ ರಾಜು, ಡಾ. ಎಚ್. ಟಿ. ಸಾಸನೂರ, ಡಾ. ಕೆ. ಎಸ್. ಷಡಕ್ಷರಪ್ಪ, ಕೆ. ಎಸ್. ನರಸಿಂಹಸ್ವಾಮಿ, ಜಿ. ನಾರಾಯಣ, ಶ್ರೀಮತಿ ಲಕ್ಷ್ಮೀ ಬಾಲಸುಬ್ರಹ್ಮಣ್ಯಂ, ಎಸ್. ಹೊನ್ನಯ್ಯ, ಟಿ. ಲಿಂಗನಗೌಡ, ಜಿ. ಕೆ. ಲಕ್ಷ್ಮೀನಾರಾಯಣ ಶೆಟ್ಟಿ, ಹಾಗೂ ರಘುನಾಥ ಇವರು ಪಾತ್ರರಾಗಿದ್ದಾರೆ. ಗೌರವಿಸಿದ ಸರಕಾರಕ್ಕೂ, ಗೌರವ ಗಳಿಸಿದ ಈ ಎಲ್ಲ ಮಹನೀಯರಿಗೂ "ಭಾರತಿ" ಅಭಿವಂದನೆಗಳನ್ನು ಅರ್ಪಿಸುತ್ತದೆ.

ಲೇಖಕರ ಪರಿಚಯ

೧. ಶ್ರೀ ಎಸ್. ಎಸ್. ಮಾಳವಾಡ
ಪ್ರಸಿದ್ಧ ವಿದ್ವಾಂಸರು, 'ಪ್ರಶಾಂತ', ಅತ್ತಿಕೊಳ್ಳ, ಧಾರವಾಡ.

೨. ಶ್ರೀ ಜಿ. ಎಸ್. ಅವಧಾನಿ
ಶಿಕ್ಷಕರು, ಎಸ್.ಕೆ.ಪಿ. ಹೈಸ್ಕೂಲ, ಕಟಗಾಲ, ಕುಮಟಾ (ಉ.ಕ.)

೩. ಶ್ರೀ ಜಿ. ಎಂ. ಉಮಾಪತಿಶಾಸ್ತ್ರಿ
ಹಿಂದಿ ಅಧ್ಯಾಪಕರು, ಶ್ರೀ ಬಸವೇಶ್ವರ ಕಾಲೇಜ್, ಬಾಗಿಲುಕೋಟೆ.

೪. ಶ್ರೀ ಲಿಂಗಣ್ಣ ಸತ್ಯಂಪೇಟೆ
ಶಿಕ್ಷಕರು, ಸುರಪುರ, ಗುಲ್ಬರ್ಗ ಜಿಲ್ಲೆ.

೫. ಡಾ. ಅ. ಸುಂದರ
ಅಧ್ಯಾಪಕರು, ಇತಿಹಾಸ ವಿಭಾಗ, ಕ.ವಿ.ವಿ. ಧಾರವಾಡ.

೬. ಶ್ರೀ ನಾ. ಡಿಸೋಜ
ಕಾರ್ಗಲ್, ಶಿವಮೊಗ್ಗ ಜಿಲ್ಲೆ.

೭. ಶ್ರೀ ಪಾಟೀಲ ಪುಟ್ಟಪ್ಪ
ಹೆಸರಾಂತ ಪತ್ರಿಕೋದ್ಯಮಿ, ಹುಬ್ಬಳ್ಳಿ.

೮. ಶ್ರೀ ಬಿ. ಕೆ. ತಿಮ್ಮಪ್ಪ
ಕನ್ನಡ ಅಧ್ಯಾಪಕರು, ಸರ್ಕಾರಿ ಕಾಲೇಜು, ಕಾಸರಗೋಡು.

೯. ಶ್ರೀ ಶ. ಗು. ಚನ್ನಹಳ್ಳಿ
ಮುಖ್ಯಾಧ್ಯಾಪಕರು, ಶ್ರೀ ಕೊಟ್ಟೂರೇಶ್ವರ ಪ್ರೌಢ ಶಾಲೆ, ಗಂಗಾವತಿ (ರಾಯಚೂರು ಜಿ.)

೧೦. ಡಾ. ಜಿ. ಎಸ್. ಕುಳ್ಳಿ
ರೀಡರ್, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ.

೧೧. ಶ್ರೀ ಎಸ್. ಶಿವಣ್ಣ
ಸಹಾಯಕ ಸಂಶೋಧಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿ.ವಿ. ಬೆಂಗಳೂರು.

೧೨. ಡಾ. ಎಂ. ಎಂ. ಕಲಬುರ್ಗಿ
ರೀಡರ್, ಕನ್ನಡ ಅಧ್ಯಯನ ಪೀಠ, ಕ.ವಿ.ವಿ. ಧಾರವಾಡ.

೧೩. ಶ್ರೀ ಜ್ಯೋತಿ ಹೊಸೂರ
ಪ್ರಿನ್ಸಿಪಾಲ, ಜ್ಯೂನಿಯರ ಕಾಲೇಜ, ರಾಯಬಾಗ (ಬೆಳಗಾವಿ ಜಿಲ್ಲೆ)

೧೪. ಶ್ರೀ ಗುರುಲಿಂಗ ಕಾಪಸೆ
ಕನ್ನಡ ಅಧ್ಯಾಪಕರು, ಕರ್ನಾಟಕ ಕಾಲೇಜು, ಧಾರವಾಡ.

೧೫. ಶ್ರೀ ಎಸ್. ಎಸ್. ಕೋಟೀನ
ಕನ್ನಡ ಅಧ್ಯಾಪಕರು, ಬಸವಪ್ರಭು ಕೋರೆ ಕಾಲೇಜು, ಚಿಕ್ಕೋಡಿ. (ಬೆಳಗಾವಿ ಜಿಲ್ಲೆ).

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ

ಇತ್ತೀಚಿನ ಪ್ರಕಟನೆಗಳು

ಉಪನ್ಯಾಸ ಗ್ರಂಥಮಾಲೆ : ಪ್ರತಿಯೊಂದರ ಬೆಲೆ ೨೫ ಪೈಸೆ

---

೧೨೧. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ್

೧೨೨. ಸಾಮಾಜಿಕ ಸಮಸ್ಯೆಗಳು — ಕೆ. ಜಿ. ಜೋಶಿ

೧೨೩. ಕರ್ನಾಟಕದಲ್ಲಿ ನವಶಿಲಾಯುಗ — ಬಾ. ರಾ. ಗೋಪಾಲ್

೧೨೪. ಜೀವಾವಶೇಷಗಳು — ಎಂ. ಎಸ್. ಮನ್ನಿಕೇರಿ

೧೨೫. ವಿಜಯನಗರ ಕಾಲದ ಧಾರ್ಮಿಕ ಜೀವನ — ಸದ್ಯೋಜಾತ ಸ್ವಾಮೀಜಿ

೧೨೬. ಡಾ. ಖೊರಾನಾ ಅವರ ಸಂಶೋಧನೆಗಳು — ಎಚ್. ಕೆ. ಮಲ್ಲಿಕಾರ್ಜುನಪ್ಪ

೧೨೭. ಸಂಸ್ಕೃತ ಸಾಹಿತ್ಯದಲ್ಲಿ ಹಾಸ್ಯ — ಎಲ್. ಜಿ. ಜೋಶಿ

೧೨೮. ಕಾರ್ಮಿಕ ಮತ್ತು ಯೋಜನೆ — ಟಿ. ಕೆ. ಮೇಟಿ

೧೨೯. ಭಾರತೀಯ ಹಬ್ಬಗಳು — ಸಿ. ವಿ. ಕೆರಿಮನಿ

೧೩೦. ಕುಷ್ಠರೋಗ ನಿವಾರಣೆ — ಎಸ್. ಜಿ. ನಾಗಲೋಟಿಮಠ

೧೩೧. ಶ್ರವಣಾತೀತ ಧ್ವನಿ — ಡಿ. ಆರ್. ಬಳೂರಗಿ

೧೩೨. ಸಿಮೆಂಟ್ ಕಾಂಕ್ರೀಟ್ — ಬಸವರಾಜ ಪುರಾಣಿಕ

೧೩೩. ಜನಪದ ಕಾವ್ಯ — ಗಿರಡ್ಡಿ ಗೋವಿಂದರಾಜ

೧೩೪. ಜಂತುರೋಗಗಳು — ಪಿ. ಎಸ್. ಶಂಕರ

೧೩೫. ಶ್ರೀ ಅರವಿಂದರ ಮಹಾಕಾವ್ಯ : 'ಸಾವಿತ್ರಿ' — ಪ್ರಹ್ಲಾದ ನರೇಗಲ್ಲ

೧೩೬. ಧರ್ಮ–ಸಂಸ್ಕೃತಿ–ಸಮಾಜ — ಎಸ್. ಕೆ. ಕಡೆತೋಟದ

೧೩೭. ನೈತಿಕ ಶಿಕ್ಷಣ — ಕೆ. ಶಾಂತಯ್ಯ

೧೩೮. ಬಸವಣ್ಣನವರು ಕಟ್ಟಬಯಸಿದ ಸಮಾಜ — ಸಂಗಣ್ಣ ಕುಪ್ಪಸ್ತ

೧೩೯. ಕುಮಾರವ್ಯಾಸನ ಭಾಗವತ ದೃಷ್ಟಿ — ಎ. ಆರ್. ಬುರ್ಲಿ

೧೪೦. ಹರಿಹರನ ಮೂರು ರಗಳೆಗಳು — ಎಂ. ಎಸ್. ಲಠ್ಠೆ

೧೪೧. ಪ್ರಾಚ್ಯವಸ್ತು ಸಂಶೋಧನೆ — ಅ. ಸುಂದರ

೧೪೨. ನವೋದಿತ ಬಂಗ್ಲಾದೇಶ —ಪಿ. ಎಂ. ರಾಜಶೇಖರಯ್ಯ

೧೪೩. ಕನ್ನಡದಲ್ಲಿ ಶತಕಸಾಹಿತ್ಯ —ಬಿ. ವ್ಹಿ. ಗುಂಜೆಟ್ಟಿ

೧೪೪. ಕನ್ನಡದಲ್ಲಿ ಲಲಿತ ಪ್ರಬಂಧಗಳು —ಪಿ. ಎಸ್. ಸಿಂಪಿ

೧೪೫. ಇಕ್ಕೇರಿ ಅರಸರು —ಕೆ. ಗುಂಡಾಜೋಯಿಸ

೧೪೬. ಭೂಕಂಪಗಳು ಹಾಗೂ ಜ್ವಾಲಾಮುಖಿಗಳು —ಎಂ. ಎಫ್. ಕರೆಣ್ಣವರ

೧೪೭. ಟೀಕಾಚಾರ್ಯರು —ಪಿ. ಎಂ. ಗಲಗಲಿ

೧೪೮. ಭಾರತದಲ್ಲಿ ಭೂ ಅಭಿವೃದ್ಧಿ ಬ್ಯಾಂಕುಗಳು —ಟಿ. ಎಂ. ಪಂಡಿತ

೧೪೯. ರವೀಂದ್ರರ ಶೈಕ್ಷಣಿಕ ತತ್ವಜ್ಞಾನ —ಅನಂತ ಕುಲಕರ್ಣಿ

೧೫೦. ಶೇಕ್ಸ್‌ಪಿಯರನ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ —ಪಿ. ಕೆ. ನವಲಗುಂದ

೧೫೧. ಗುಹ್ಯ ರೋಗಗಳು —ಎಸ್. ಜಿ. ನಾಗಲೋಟಿಮಠ

೧೫೨. ನಾರುಹುಣ್ಣು —ಎಸ್. ಎಸ್. ಸರಸಣಗಿ

ವಿಶೇಷ ವಾಙ್ಮಯ ಪ್ರಸಾರ ಪುಸ್ತಕ ಮಾಲೆ :

೯. ರೆವರೆಂಡ್ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು ೨-೫೦

೧೦. ಸಿದ್ಧರಾಮ ಸಾಹಿತ್ಯ ಸಮೀಕ್ಷೆ ೨-೫೦

೧೧. ಅರವಿಂದರ 'ಸುಪ್ರಮಾನಸ ದರ್ಶನ' ೨-೫೦

ವಿಶೇಷ ಉಪನ್ಯಾಸ ಗ್ರಂಥಮಾಲೆ :

೧. ತಿರುಮಲಾರ್ಯ ಮತ್ತು ಚಿಕ್ಕದೇವರಾಜ ಒಡೆಯರು { ಸಾದಾ ೪-೦೦; ಕೆಲಿಕೋ ೬-೦೦ }

—ಎಲ್. ಬಸವರಾಜು

ಜನಪದ ಕಾವ್ಯಮಾಲೆ :

೧. ಜೀವನ ಜೋಕಾಲಿ : ಚೌಪದನಗಳು ೪-೦೦

—ಸಂ. ಎಂ. ಎಸ್. ಸುಂಕಾಪುರ

೨. ಜೀವನ ಜೋಕಾಲಿ : ಸರಸ—ವಿರಸ ೪-೦೦

—ಸಂ. ಎಂ. ಎಸ್. ಸುಂಕಾಪುರ

೩. ಜೀವನ ಜೋಕಾಲಿ : ಗರತಿಯರ ಗರಿಮೆ ೫-೦೦

—ಸಂ. ಎಂ. ಎಸ್. ಸುಂಕಾಪುರ

೪. ಪರಮೇಶ್ವರಿಯ ಪದಗಳು ೫-೦೦

—ಸಂ. ಎಲ್. ಆರ್. ಹೆಗಡೆ

ಇತರ ಪ್ರಕಟನೆಗಳು :

೧. ಶೂನ್ಯಸಂಪಾದನೆ (ಶಿವಗಣ ಪ್ರಸಾದಿ ಮಹದೇವಯ್ಯ ವಿರಚಿತ) ೧೨-೦೦

—ಸಂ. ಆರ್. ಸಿ. ಹಿರೇಮಠ

೨. ವೀರಶೈವ ಚಿಂತಾಮಣಿ ೭-೦೦

—ಸಂ. ಆರ್. ಸಿ. ಹಿರೇಮಠ

೩. ಶಿಕ್ಷಣ: ಆಧಾರ ಮತ್ತು ಪ್ರಥಮ ತತ್ವಗಳು ೧೨-೦೦

—ಅನು. ವಿ. ಕೆ. ಜವಳಿ

೪. ವಿಶೇಷಾನುಭವ ಷಟ್‌ಸ್ಥಲ ೧೪-೦೦

—ಸಂ. ಆರ್. ಸಿ. ಹಿರೇಮಠ

೫. ಶೂನ್ಯಸಂಪಾದನೆ (ಗುಮ್ಮಳಾಪುರದ ಸಿದ್ಧಲಿಂಗದೇವರು) ೧೫-೦೦

—ಸಂ. ಆರ್. ಸಿ. ಹಿರೇಮಠ

ಕಮೀಶನ್ನಿನ ವಿವರ :

ವಿಶ್ವವಿದ್ಯಾಲಯದ ಪ್ರಕಟನೆಗಳನ್ನು ಕೊಳ್ಳುವವರಿಗೆ ಈ ಕೆಳಗಿನಂತೆ ಕಮೀಶನ್ ಕೊಡಲಾಗುತ್ತದೆ.

ಪಠ್ಯಪುಸ್ತಕಗಳು (ಪರೀಕ್ಷೆಗಳಿಗೆ ಗೊತ್ತುಪಡಿಸಿದವು ಮಾತ್ರ) :

೨೫ ಪ್ರತಿಗಳನ್ನು ಅಥವಾ ಅದಕ್ಕೂ ಹೆಚ್ಚಿಗೆ ಕೊಳ್ಳುವವರಿಗೆ :

೧೦೦ ಕ್ಕೆ ೧೫ ರಂತೆ

ಇತರ ಎಲ್ಲ ಪ್ರಕಟನೆಗಳು (ಪಠ್ಯಪುಸ್ತಕ ನಿರ್ದೇಶನಾಲಯದ ಪ್ರಕಟನೆಗಳು ಹಾಗೂ ನಿಯತಕಾಲಿಕೆಗಳನ್ನು ಒಳಗೊಂಡು) :

೧೦೦ ರೂ.ಗಳಿಂದ ೫,೦೦೦ ರೂ. ವರೆಗಿನ ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ:

೧೦೦ ಕ್ಕೆ ೨೫ ರಂತೆ

೫,೦೦೦ ರೂ.ಗಳಿಗೆ ಮೇಲ್ಪಟ್ಟು ಬೆಲೆಯ ಪುಸ್ತಕಗಳನ್ನು ಕೊಳ್ಳುವವರಿಗೆ :

೧೦೦ಕ್ಕೆ ೩೩⅓ ರಂತೆ

* * * * *

ವಿಜ್ಞಾನ ಭಾರತಿ

(ಷಾಣ್ಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ — ರೂ. ೪ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ — ರೂ. ೨-೫೦ (ಅಂಚೆ ವೆಚ್ಚ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾದರ ರೂ. ೨-೦೦ ಮಾತ್ರ)

ಕರ್ನಾಟಕ ಭಾರತಿ

(ಆಜೀವ ಸದಸ್ಯತ್ವ)

ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ೧೦೦ ರೂ. ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲಾ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

(ಹಣವನ್ನು ಮನಿಆರ್ಡರ ಅಥವಾ ಪೋಸ್ಟಲ್ ಆರ್ಡರ ಮೂಲಕ ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.)

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ

ಕನ್ನಡ ಅಧ್ಯಯನಪೀಠದ ಪ್ರಕಟನೆಗಳು

ಪ್ರಾಚೀನ ಕಾವ್ಯತರಂಗ

೧.	ರಾಜಶೇಖರ ವಿಳಾಸ ಸಂಗ್ರಹ	೨–೦೦
೨.	ಸೋಮನಾಥ ಚಾರಿತ್ರಂ	೫–೦೦
೩.	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ–೧	೬–೦೦
೪.	ರಾಜಶೇಖರ ವಿಳಾಸಂ	೧೦–೦೦
೫.	ತ್ರಿಷಷ್ಠಿ ಪುರಾತನ ಚಾರಿತ್ರಂ	೧೨–೦೦
೬.	ಆರು ರಗಳೆಗಳು	೩–೫೦
೭.	ಬಸವರಾಜ ವಿಜಯಂ	೨೦–೦೦
೮.	ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ–೨	೮–೦೦

ವಚನಸಾಹಿತ್ಯ ತರಂಗ

೧.	ಚನ್ನಬಸವಣ್ಣನವರ ವಚನಗಳು	೨೦–೦೦
೨.	ಸಿದ್ಧರಾಮೇಶ್ವರ ವಚನಗಳು	೨೦–೦೦
೩.	ಬಸವಣ್ಣನವರ ವಚನಗಳು	೨೦–೦೦
೪.	ಶಿವಶರಣೆಯರ ವಚನಗಳು	೨೦. ೦೦
೫.	ಮಹಾದೇವಿಯಕ್ಕನ ವಚನಗಳು	೭–೦೦
೬.	ನೀಲಮ್ಮನ ಮತ್ತು ಲಿಂಗಮ್ಮನ ವಚನಗಳು	೫–೦೦
೭.	ಇಪ್ಪತ್ತೇಳು ಶಿವಶರಣೆಯರ ವಚನಗಳು	೫–೦೦
೮.	ಅಮುಗಿರಾಯಮ್ಮನ ಮತ್ತು ಅಕ್ಕಮ್ಮನ ವಚನಗಳು	೫–೦೦
೯.	ವೀರಶೈವ ಚಿಂತಾಮಣಿ	೭–೦೦
೧೦.	ವಿಶೇಷಾನುಭವ ಷಟ್ಸ್ಥಲ	೧೪–೦೦
೧೧.	ಮುಕ್ತಿ ಕಂಠಾಭರಣ	೬–೦೦
೧೨.	ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ	೧೨–೦೦
೧೩.	ಗುಮ್ಮಳಾಪುರ ಸಿದ್ಧಲಿಂಗದೇವನ ಶೂನ್ಯಸಂಪಾದನೆ	೧೫–೦೦
೧೪.	ಸಕಲ ಪುರಾತನರ ವಚನಗಳು, ಭಾಗ–೧.	೧೮–೦೦

ವೀರಶೈವ ಸಾಹಿತ್ಯ ತರಂಗ

೧.	ಶೂನ್ಯ ಸಂಪಾದನೆ (ಇಂಗ್ಲಿಷ)	೧೨-೦೦
೨.	" "	೨೦-೦೦
೩.	" "	೨೦-೦೦
೪.	ಶೂನ್ಯ ಸಂಪಾದನೆ (ಇಂಗ್ಲಿಷ)	೨೦-೦೦
೫.	" "	೨೦-೦೦
೬.	ಪಟ್ಟಸ್ಥಲ ಪ್ರಭೆ	೧೦-೦೦

ಜೈನ ಸಾಹಿತ್ಯ ತರಂಗ

೧.	ನೇಮಿನಾಥ ಪುರಾಣಂ	೬-೦೦
೨.	ಜೀವಂಧರ ಚರಿತೆ	೭-೦೦

ಬ್ರಾಹ್ಮಣ ಸಾಹಿತ್ಯ ತರಂಗ

೧.	ಅಕ್ರೂರ ಚರಿತ್ರೆ	೪-೦೦
೨.	ಪೌಲೋಮ ಆಸ್ತೀಕ ಪರ್ವ	೮-೦೦

ಜನಪದ ಸಾಹಿತ್ಯ ತರಂಗ

೧.	ಜೀವನ ಜೋಕಾಲಿ ೧	೪-೦೦
೨.	" ೨	೪-೦೦
೩.	" ೩	೫-೦೦

ಶಾಸನ ಶಾಸ್ತ್ರ ತರಂಗ

೧.	ಶಾಸನ ಸಂಪದ	೨-೦೦

ಭಾಷಾಶಾಸ್ತ್ರ ತರಂಗ

೧.	Structure of Kannada	೫-೦೦

ಮಹಾಪ್ರಬಂಧ ತರಂಗ

೧.	ಕನ್ನಡ ಸಾಹಿತ್ಯದಲ್ಲಿ ಹಾಸ್ಯ	೮-೦೦
೨.	ನೇಮಿಚಂದ್ರ	೧೨-೦೦
೩.	The Havyaka dialect	೧೨-೦೦